ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮೇ 25, 2011 ಪುಟ 20 ರೂ. 12/-

ರಂಗಾಸಕ್ತಿ ಚಿಗುರಿಸುವ ಝುನ್ ಟೀಂ

ರಕ್ಷಿತಾ-ಪ್ರೇಮ್



ಡೈವೋರ್ಸ್?


ಶಿಕಾರಿಪುರ ಸ್ವಾಮಿಗಳ ಕೈಯಲ್ಲಿ ವಿಸ್ಕಿ-ಚಪ್ಪಲಿ!





ಸುಳ್ಯ: ಕುರುಂಜಿ ಸಾಮ್ರಾಜ್ಯದಲ್ಲಿ ಕೊಲೆ!

KAS ಹುದ್ದೆ ಹರಾಜ್
ACಗೆ 40 ಲಕ್ಷ
DYSPಗೆ 30 ಲಕ್ಷ



ಅಣ್ಣಿಗೇರಿ ಶಿವಭಕ್ತರ ಶಿರಚ್ಛೇದ

ನೋ ಕಾಮೆಂಟ್ಸ್

"ಅಮೆರಿಕದ ಮೇಲೆ ದಾಳಿ ಮಾಡಿದವರನ್ನು ಬೇಟೆಯಾಡಲು ಮತ್ತೊಂದು ದೇಶಕ್ಕೆ ಹೋಗಿ ಕಾರ್ಯಾಚರಣೆ ನಡೆಸುವುದು ಅಂತರರಾಷ್ಟ್ರೀಯ ಕಾನೂನುಗಳ ಪ್ರಕಾರ ತಪ್ಪಲ್ಲವೆಂದಾದಲ್ಲಿ, ನಾಳೆ ಇರಾಕಿಯರೂ ಸಹ ಅಮೆರಿಕದ ರಾಜಧಾನಿಗೆ ನುಗ್ಗಿ ಲಕ್ಷಾಂತರ ಅಮಾಯಕ ಇರಾಕಿಯರ ನರಹತ್ಯೆಗೆ ಕಾರಣವಾದ ಅಮೆರಿಕದ ಮಾಜಿ ಅಧ್ಯಕ್ಷ ಬುಷ್ ಅವರ ಮನೆಗೆ ನುಗ್ಗಿ ಅವರನ್ನು ಕೊಂದು ಅಟ್ಲಾಂಟಿಕ್ ಸಾಗರದಲ್ಲಿ ಬಿಸಾಕುವುದನ್ನೂ ತಪ್ಪು ಎಂದು ಹೇಳಲಾಗುವುದಿಲ್ಲ."

- ನೋಮ್ ಚಾಮ್‌ಸ್ಕಿ, ವಿಶ್ವವಿಖ್ಯಾತ ಚಿಂತಕ

"ನಿವೇಶನವನ್ನು ಮೂರು ವ್ಯಾಜ್ಯದಾರರಿಗೆ ಹಂಚಲು ಯಾವುದೇ ಅರ್ಜಿದಾರರು ಮನವಿ ಮಾಡದಿದ್ದರೂ, ಮೂರು ಭಾಗಗಳಾಗಿ ವಿಂಗಡಿಸಿ ಹೈಕೋರ್ಟ್ ತೀರ್ಪು ನೀಡಿರುವುದು ಆಶ್ಚರ್ಯಕರವಾಗಿದೆ. ಅದು ತನ್ನದೇ ಆದ ರೀತಿ ತೀರ್ಪು ಪ್ರಕಟಿಸಿದ್ದು ಇದನ್ನು ಜಾರಿಗೆ ತರುವುದು ಕಷ್ಟದ ಕೆಲಸ."

- ಸುಪ್ರೀಂ ಕೋರ್ಟ್

"ಪ್ರಾದೇಶಿಕ ರಂಗಭೂಮಿ ಸಬಲಗೊಳಿಸುವ ಸಲುವಾಗಿ ಹುಟ್ಟಿಕೊಂಡ ರಂಗಮಂಡಲಗಳು ರಮ್ ಮಂಡಲಗಳಾಗಿವೆ. ನೀನಾಸಂ ನಾನೀಸಂ ಆಗಿದೆ. ಒಂದು ಅಕಾಡೆಮಿಗೆ ಕೊಡುವಷ್ಟು ಹಣವನ್ನು ಸರ್ಕಾರವು ನೀನಾಸಂಗೆ ನೀಡುತ್ತಿದೆಯಾದರೂ ಮುಂಬೈ ಸಂಸ್ಥೆಯೊಂದರ ಜೊತೆ ಸೇರಿ ವಿದೇಶಿ ಸಂಸ್ಥೆಗಳಿಂದ ಹಣ ಎತ್ತುವಳಿ ಬಗ್ಗೆ ತಲೆ ಕೆಡಿಸಿಕೊಂಡಿದೆಯೇ ವಿನಃ ಸ್ಥಳೀಯ ರಂಗಭೂಮಿ ಸಬಲೀಕರಣ ಅದರ ಆದ್ಯತೆಯಾಗಿಲ್ಲ."

- ಹೆಚ್.ಎಸ್. ಶಿವಪ್ರಕಾಶ್

"ಈ ದೇಶದಲ್ಲಿ ಪ್ರತಿ ಸಾವಿರ ಮಕ್ಕಳಿಗೆ 74 ಮಕ್ಕಳಂತೆ ಪ್ರತಿವರ್ಷ 17.8 ಲಕ್ಷ ಮಕ್ಕಳು ಐದು ವರ್ಷ ತಲುಪುವ ಮುಂಚೆ ಸಾವನ್ನಪ್ಪುತ್ತಿವೆ. ಭಾರತದ ಸ್ಯಾಂಪಲ್ ಆರೋಗ್ಯ ಸಮೀಕ್ಷೆ ಹೇಳುವಂತೆ ಭಾರತದಲ್ಲಿ ಮಕ್ಕಳಲ್ಲಿನ ಅಪೌಷ್ಟಿಕತೆಯ ದರ ಶೇ.46ರಷ್ಟಿದೆ. ಹೀಗಾಗಿ ಕನಿಷ್ಠ ಪಕ್ಷ 8.8 ಲಕ್ಷ ಮಕ್ಕಳು ಪ್ರತಿವರ್ಷ ಅಪೌಷ್ಟಿಕತೆಯ ಕಾರಣದಿಂದಲೇ ಸಾವನ್ನಪ್ಪುತ್ತವೆ. ಇದರ ಅರ್ಥ ಈ ಸಂಪದ್ಭರಿತ ದೇಶದಲ್ಲಿ ಪ್ರತಿ ದಿನ 2500 ಮಕ್ಕಳು ಅಪೌಷ್ಟಿಕತೆಯಿಂದಲೇ ಸಾಯುತ್ತಿದ್ದಾರೆ ಎಂದಾಯಿತು."

- ಕೋಲಿನ್ ಗೊನ್ಸಾಲ್ವೆಜ್, ಮಾನವ ಹಕ್ಕು ಕಾರ್ಯಕರ್ತ

"ಯೋಜನಾ ಆಯೋಗವು ಸುಪ್ರೀಂಕೋರ್ಟಿಗೆ ಕೊಟ್ಟಿರುವ ಹೇಳಿಕೆಯ ಪ್ರಕಾರ ನಗರವಾಸಿಯೊಬ್ಬ ತಿಂಗಳಿಗೆ ರೂ. 578ಕ್ಕಿಂತ ಅಥವಾ ದಿನಕ್ಕೆ 20 ರೂ.ಗಿಂತ ಒಂದು ರೂಪಾಯಿ ಹೆಚ್ಚಿಗೆ ವ್ಯಯ ಮಾಡುತ್ತಿದ್ದರೂ, ಅದೇ ರೀತಿ ಗ್ರಾಮೀಣವಾಸಿ ದಿನಕ್ಕೆ ರೂ. 15ಕ್ಕಿಂತ ಜಾಸ್ತಿ ವ್ಯಯ ಮಾಡುತ್ತಿದ್ದರೂ ಅವರನ್ನು ಬಡತನ ರೇಖೆಗಿಂತ ಕೆಳಗಿರುವವರೆಂದು ಪರಿಗಣಿಸಲಾಗುವುದಿಲ್ಲ."

- ಪತ್ರಿಕಾ ವರದಿ

"ಸ್ತ್ರೀವಾದ ಎನ್ನುವುದು ಒಂದು ಬದುಕಿನ ಕ್ರಮ ಅಷ್ಟೆ. ಅದು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ್ದಲ್ಲ. ಆ ಬದುಕಿನ ಕ್ರಮವನ್ನು ಗಂಡು ಮತ್ತು ಹೆಣ್ಣು ಇಬ್ಬರೂ ಬಹಳ ಶ್ರಮ ಹಾಗೂ ಪ್ರೀತಿಯಲ್ಲಿ ಮಾತ್ರ ಕಟ್ಟಿಕೊಳ್ಳಲು ಆಗುತ್ತೆ."

- ಡಾ. ಎಂ.ಎಸ್. ಆಶಾದೇವಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಶ್ರೇಷ್ಠ ವಿಮರ್ಶಕರಾದವರು ಶ್ರೇಷ್ಠ ಸಂಶೋಧಕರೂ ಆಗಿರುತ್ತಾರೆ. ಅದರಂತೆ ಚಿದಾನಂದ ಮೂರ್ತಿಯವರು ಶ್ರೇಷ್ಠ ಸಂಶೋಧಕರು ಮಾತ್ರವಲ್ಲ ವಿಮರ್ಶಕರೂ ಹೌದು. ಸಂಶೋಧನೆ ಮತ್ತು ವಿಮರ್ಶೆಯ ನಡುವಿನ ವ್ಯತ್ಯಾಸವನ್ನು ಎತ್ತಿ ತೋರಿದ ಅವರು ಕನ್ನಡ ವಿದ್ವತ್ ಪರಂಪರೆಯ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ."

- ಡಾ. ಜಿ.ಎಸ್. ಶಿವರುದ್ರಪ್ಪ

"ರಾಜ್ಯದಲ್ಲಿ ನಿರಂತರವಾಗಿ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆಯನ್ನು ಯಶಸ್ವಿಯಾಗಿ ತಡೆದದ್ದೇ ನಮ್ಮ ಸರ್ಕಾರ."

- ಯಡಿಯೂರಪ್ಪ

ಇದು ಯಡ್ಡಿ ಸರ್ಕಾರದ ನಿಜ ಬಣ್ಣ

"ಶೇ.1ರ ಬಡ್ಡಿದರದ ಕೃಷಿಸಾಲಕ್ಕೆ ಸಂಬಂಧಿಸಿದಂತೆ ಹಣಕಾಸು ಇಲಾಖೆ ತಕರಾರು ಎತ್ತಿರುವುದರಿಂದ ಸಹಕಾರ ಇಲಾಖೆ ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ, ಆದರೂ ಮೂರು ಲಕ್ಷ ರೂಪಾಯಿವರೆಗೆ ಶೆ.1ರ ಬಡ್ಡಿದರದಲ್ಲಿ ಸಾಲ ನೀಡುವ ಸರ್ಕಾರದ ತೀರ್ಮಾನದಲ್ಲಿ ಬದಲಾವಣೆ ಇಲ್ಲ."

- ಲಕ್ಷ್ಮಣ್ ಸವದಿ, ಮಂತ್ರಿ

ತಾವು ಬಂದಿದ್ದು ಎಲ್ಲಿಂದ ರಾಮದೇವ?

"ಕೋಳಿಮೊಟ್ಟೆಯು ಕೋಳಿಯ ತ್ಯಾಜ್ಯ ದ್ವಾರದಿಂದ ಹೊರಬರುವುದರಿಂದ ಅದನ್ನು ಸೇವಿಸಬಾರದು."

- ಬಾಬಾ ರಾಮದೇವ್

ಈಗ ಗಲ್ಲಿಗಲ್ಲಿಗಳಲ್ಲಿ ಭ್ರಷ್ಟಾಚಾರ ವಿರೋಧೀ ಹೋರಾಟವೆಂಬ ಪ್ರಹಸನ!

ಭ್ರಷ್ಟಾಚಾರ ವಿರೋಧಿ ಹೋರಾಟವು ಅಣ್ಣಾ ಹಜಾರೆ ಅವರಿಗೆ ಮತ್ತವರ ಸಂಗಡಿಗರಿಗೆ ಸ್ಟಾರ್ ಇಮೇಜ್ ತಂದುಕೊಟ್ಟ ನಂತರ ದೇಶದೆಲ್ಲೆಡೆ ಭ್ರಷ್ಟಾಚಾರ ವಿರೋಧೀ ಹೋರಾಟಗಳು ಅಣಬೆಗಳಂತೆ ಹುಟ್ಟಿಕೊಳ್ಳುತ್ತಿವೆ. ಬಗೆಬಗೆಯ ಭ್ರಷ್ಟಾಚಾರಿಗಳೆಲ್ಲ ಕಂಡಕಂಡ ಕಡೆ 'ಭ್ರಷ್ಟಾಚಾರ ವಿರೋಧಿ ವೇದಿಕೆ'ಗಳನ್ನು ಕಟ್ಟಿಕೊಂಡು ಅಳಿದುಳಿದ ಸ್ಥಳೀಯ ಅಥವಾ ರಾಜ್ಯಮಟ್ಟದ ಪ್ರಾಮಾಣಿಕ ಗಾಂಧೀವಾದಿಗಳಿಗೆ ಗೌರವ ಅಧ್ಯಕ್ಷ ಸ್ಥಾನ ಕೊಟ್ಟು ಭ್ರಷ್ಟಾಚಾರ ವಿರೋಧೀ ಹೋರಾಟಕ್ಕೆ ಧುಮುಕಿಬಿಟ್ಟಿದ್ದಾರೆ.


ಇದರಲ್ಲಿ ಹಲವರು ಪ್ರಾಮಾಣಿಕರು. ಈ ನಾಡನ್ನು ಭ್ರಷ್ಟಾಚಾರ ಮುಕ್ತಗೊಳಿಸಬೇಕೆಂಬ ಪರಿಶುದ್ಧ ಕಾಳಜಿಯುಳ್ಳವರು. ಅದರಲ್ಲೂ ದೊರೆಸ್ವಾಮಿಯಂಥ ಹಿರಿಯ ಗಾಂಧೀವಾದಿಗಳು ಈ ನಾಡಿನಲ್ಲಿ ಹೇಗೋ ಒಂದು ಜನಾಂದೋಲನ ಸಂಭವಿಸಿ ಒಂದು ಬದಲಾವಣೆ ಬರಲಿ ಎಂಬ ಆಶಯವಿಟ್ಟುಕೊಂಡವರು. ಆದರೆ ಅವರನ್ನು ಆ ಕಡೆ ಈ ಕಡೆ ಯಾರು ಬೇಕಾದರು ಜನತೆಯ ಹೆಸರಲ್ಲಿ ಎಳೆದುಬಿಡುವಷ್ಟು ದೊರೆಸ್ವಾಮಿಗಳು ಹತಾಶರಾಗಿಬಿಟ್ಟಿದ್ದಾರೆ.



ಭ್ರಷ್ಟಾಚಾರ ವಿರೋಧಿ ಹೋರಾಟವನ್ನು ದೊಡ್ಡ ಮಟ್ಟದಲ್ಲಿ ನಡೆಸಲು ರಾಜ್ಯದಲ್ಲಿ ಹಲವು ಪ್ರಾಮಾಣಿಕ ವ್ಯಕ್ತಿಗಳು ಮತ್ತು ಹಲವು ಸಂಘಸಂಸ್ಥೆಗಳು ಪ್ರಯತ್ನ ಪಡುತ್ತಿರುವ ಜಾಡು ಹಿಡಿದ ಮಾನ್ಯ ದೇವೇಗೌಡರ ಚಾಣಾಕ್ಷ ರಾಜಕೀಯ ಬುದ್ಧಿ ಕೂಡಲೇ ಜೆಪಿ ಹೆಸರಿನಲ್ಲಿ ಒಂದು ರಾಜ್ಯಮಟ್ಟದ ಸಂಘಟನೆಯನ್ನು ಹುಟ್ಟುಹಾಕಿತು. ಆ ಮೂಲಕ ನಾಗರಿಕ ಸಮಾಜದಲ್ಲಿ ರಾಜಕಾರಣಿಗಳ ಬಗ್ಗೆ ಬೆಳೆಯುತ್ತಿದ್ದ ಪ್ರತಿರೋಧವು ತಮ್ಮ ವಿರುದ್ಧ ತಿರುಗದಂತೆ ದೇವೆಗೌಡರು ಭ್ರಷ್ಟಾಚಾರ ವಿರೋಧಿ ಹೋರಾಟಕ್ಕೆ ಪ್ರತಿಪಟ್ಟು ಹಾಕಿಬಿಟ್ಟರು. ಆದರೆ ಇಂದು ಕರ್ನಾಟಕದ ಚಳವಳಿಗಳ ಪರಿಸ್ಥಿತಿ ಎಂಥಾ ದಾರುಣವಾಗಿದೆಯೆಂದರೆ ಶಿವಮೊಗ್ಗದಲ್ಲಿ ಭ್ರಷ್ಟಚಾರ ವಿರೋಧಿ ಹೋರಾಟದ ಜ್ಯೋತಿಯನ್ನು ದೊರೆಸ್ವಾಮಿಯವರು ಕುಮಾರಸ್ವಾಮಿಯವರಿಗೆ ಹಸ್ತಾಂತರ ಮಾಡುವುದರೊಂದಿಗೆ ಕರ್ನಾಟಕದಲ್ಲಿ ಈ ಭ್ರಷ್ಟಾಚಾರ ವಿರೋಧಿ ಹೋರಾಟವೆಂಬುದು ದೊಡ್ಡ ಪ್ರಹಸನವಾಗಲಿದೆಯೆಂಬುದು ಸಾಬೀತಾಗಿಹೋಯಿತು.

ಈಗ ದೇವೇಗೌಡರ ಕುಟುಂಬ ಎಷ್ಟು ಭ್ರಷ್ಟಾಚಾರ ಮಾಡಿ ನಾಡಿನಲ್ಲಿ ಎಷ್ಟು ಕೋಟಿ ಆಸ್ತಿ ಮಾಡಿದೆ ಎಂಬುದು ಆಡುವ ಮಕ್ಕಳಿಗೂ ಗೊತ್ತಿರುವ ವಿಷಯ. ಅದೇರೀತಿ ಯಡಿಯೂರಪ್ಪನವರು ಇವರನ್ನು ಮೀರಿಸಿ ಅಧಿಕಾರ ಸಿಕ್ಕ ಎರಡೇ ವರ್ಷಗಳಲ್ಲಿ ಎಂಥಾ ಬ್ರಹ್ಮಾಂಡ ಲೂಟಿ ಮಾಡಿದ್ದಾರೆಂಬುದೂ ಸಹ ಗೊತ್ತಿರುವ ವಿಷಯವೇ. ಅದೇರೀತಿ ಕಾಂಗ್ರೆಸ್ಸಿಗರೂ ಸಹ ಮಾಡಿರುವ ಲೂಟಿಯನ್ನು ಸಂಖ್ಯೆಗಳಲ್ಲಿ ಹಿಡಿದಿಡಲೂ ಸಾಧ್ಯವಾಗುತ್ತಿಲ್ಲ ಎಂಬುದು ಒಂದಾದಮೇಲೊಂದರಂತೆ ಬಯಲಾಗುತ್ತಿರುವ ಹಗರಣಗಳೇ ಹೇಳುತ್ತಿವೆ. ಹೀಗೆ ಭ್ರಷ್ಟಾಚಾರ ಮಾಡುವಲ್ಲಿ ಅಧಿಕಾರಸ್ಥ ಪಕ್ಷಗಳಲ್ಲಿ ಪೈಪೋಟಿಯಿದೆಯೇ ವಿನಃ ಅದನ್ನು ತಡೆಯಬೇಕೆಂಬ ಯಾವುದೇ ಭಾವಶುದ್ಧ ಬದ್ಧತೆ ಇಲ್ಲ.

ಶಿವಸುಂದರ್ ಚಾರ್ವಾಕ



ಈಗ ಕೇಂದ್ರದಲ್ಲಿ ಕಾಂಗ್ರೆಸ್ ಹಗರಣಗಳು ಬಯಲಿಗೆ ಬಂದಿರುವುದರಿಂದ ಅದನ್ನು ತಮ್ಮ ರಾಜಕೀಯ ಪ್ರಯೋಜನಕ್ಕೆ ಬಳಸಿಕೊಳ್ಳಲು ಬಿಜೆಪಿ ಪಕ್ಷ ಪರೋಕ್ಷವಾಗಿ ಅಣ್ಣಾ ಹಜಾರೆಯವರನ್ನೂ ಬಳಸಿಕೊಂಡಿದ್ದು ಈಗ ಎಲ್ಲರೂ ಬಲ್ಲ ಸಂಗತಿಯೇ! ಈಗ ರಾಜ್ಯದಲ್ಲಿ ಪರಮ ಭ್ರಷ್ಟಾಚಾರಿ ಯಡಿಯೂರಪ್ಪನವರ ಸರ್ಕಾರ ಅಧಿಕಾರದಲ್ಲಿ ಇರದೇ ಇರುವುದರಿಂದ ಅಷ್ಟು ಭ್ರಷ್ಟಾಚಾರ ಮಾಡಲು ಸಾಧ್ಯವಾಗದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಭ್ರಷ್ಟಾಚಾರ ವಿರೋಧೀ ಆಂದೋಲನವನ್ನು ಪ್ರಾರಂಭಿಸಿವೆ.

ಇವೆಲ್ಲ ಸಕಲರಿಗೂ ಗೊತ್ತಿರುವ ವಿಷಯವೇ! ಆದರೆ ನಾಗರಿಕ ಸಮಾಜದಲ್ಲಿ ಮತ್ತು ಚಳವಳಿಗಳಲ್ಲಿ ಈ ಭ್ರಷ್ಟಾಚಾರ ವಿರೋಧೀ ಹೋರಾಟವೆನ್ನುವುದು ಯಾವುದೇ ಹೊಸ ಮೌಲ್ಯಗಳ ಅನ್ವೇಷಣೆಯಾಗದೇ ಕೆಲವು ತಿಂಗಳ ಕಾಲ ನಡೆಸಬಹುದಾದ ಮತ್ತೊಂದು ಜಂಟೀ ಸಂಘಟನೆ ಮತ್ತು ಕಾರ್ಯಕ್ರಮಗಳ ಸರಣಿಯಷ್ಟೇ ಆಗುತ್ತಿರುವುದು ದೊಡ್ಡ ಪ್ರಹಸನದಂತೆ ಕಾಣುತ್ತಿದೆ.

ವಾಸ್ತವವಾಗಿ ಈ ಭ್ರಷ್ಟಾಚಾರ ವಿರೋಧಿ ಹೋರಾಟವು ಈಗ ನಡೆಯುತ್ತಿರುವ ಮತ್ತು ಇನ್ನೂ ತೀವ್ರವಾಗಿ ನಡೆಯಬೇಕಾದ ಜನಪರ ಹೋರಾಟಗಳಿಗಿಂತ ಭಿನ್ನವಾಗಿ ಮತ್ತೊಂದು ಧಾರೆಯಾಗಿ ನಡೆಯಲು ಸಾಧ್ಯವೇ? ಈ ಅಂಕಣದಲ್ಲಿ ಹಲವು ಸಾರಿ ಬರೆದಂತೆ ಜನರ ಹೆಸರಿನಲ್ಲಿ ಮಂಜೂರಾಗುವ ಒಂದು ರುಪಾಯಿಯಲ್ಲಿ ಜನತೆಗೆ 1980ರಲ್ಲಿ 25 ಪೈಸೆ ತಲುಪುತ್ತಿದ್ದರೆ 2010ರಲ್ಲಿ ಅದರ ಪ್ರಮಾಣ ಕೇವಲ 6-10 ಪೈಸೆಗೆ ಇಳಿದಿದೆ ಎಂದು ಅಂದಾಜು ಮಾಡಲಾಗಿದೆ. ಹೀಗಾಗಿಯೇ ಇಂದು ಗ್ರಾಮೀಣ ಭಾರತದಲ್ಲಿ ಜನತೆಯ ಆಹಾರ ಬಳಕೆಯ ಪ್ರಮಾಣ 1950ರ ಪ್ರಮಾಣಕ್ಕಿಂತ ಕೆಳಗಿಳಿದಿದ್ದರೆ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು, ಆಡಳಿತಾರೂಢ ರಾಜಕಾರಣಿಗಳು ಮತ್ತು ದೊಡ್ಡ ಕಾರ್ಪೊರೇಟ್ ಅಧಿಪತಿಗಳ ಮೊತ್ತ ಬಿಲಿಯನ್ನುಗಳನ್ನು ದಾಟುತ್ತಿದೆ.

ಸಾರ್ವಜನಿಕ ಭ್ರಷ್ಟಾಚಾರ ಶುರುವಾಗುವುದೇ ಜನತೆಗೆ ದಕ್ಕಬೇಕಾದ ಪಾಲನ್ನು ಕಸಿದುಕೊಳ್ಳುವುದರಿಂದ. ಹೀಗಾಗಿಯೇ ಭ್ರಷ್ಟಾಚಾರ ಕೇವಲ ಒಂದು ರಾಜಕೀಯ ನೈತಿಕತೆಯ ವಿಷಯ ಮಾತ್ರವಲ್ಲ, ಅದು ಜನತೆಯ ದೈನಂದಿನ ಬದುಕನ್ನು ಹಾಡುಹಗಲೇ ದರೋಡೆ ಮಾಡುವ ಬಂಡವಾಳಶಾಹಿ ವ್ಯವಸ್ಥೆಯ ಮತ್ತೊಂದು ಹುನ್ನಾರವೇ ಆಗಿದೆ.

ಆದರೆ ಭ್ರಷ್ಟಾಚಾರದ ಬಗ್ಗೆ ನಮ್ಮಲ್ಲಿ ಒಂದು ಕಡೆ ಮಾಧ್ಯಮಗಳು ಮತ್ತು ರಾಜಕಾರಣಿಗಳು ಒಂದು ಬಗೆಯ ಸಂವೇದನಾಶೂನ್ಯತೆಯನ್ನು ಹುಟ್ಟುಹಾಕಿದ್ದರೆ, ಭ್ರಷ್ಟಾಚಾರ ನಿವಾರಣೆಗೆಂದು ಹುಟ್ಟುಹಾಕಲಾಗಿರುವ ಸಂಸ್ಥೆಗಳು ಸಜ್ಜನರ ಹಪಹಪಿಕೆಯಷ್ಟೇ ಅಸಹಾಯಕವಾಗಿವೆ. ಆದರೆ ಜಾಗತೀಕರಣ, ಉದಾರೀಕರಣದ ಪ್ರಕ್ರಿಯೆಯಲ್ಲಿ ಹಲವಾರು ಭ್ರಷ್ಟಾಚಾರಗಳು ಶಾಸನಬದ್ಧವೇ ಆಗಿಬಿಟ್ಟಿವೆ. ಉದಾಹರಣೆಗೆ ಈ ದೇಶದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದ್ದೇ 1991ರ ನಂತರದಲ್ಲಿ ಉದಾರೀಕರಣ ಮತ್ತು ಖಾಸಗೀಕರಣದ ಹೆಸರಲ್ಲಿ ಸಾರ್ವಜನಿಕ ವಲಯದ ಆರ್ಥಿಕತೆಯಲ್ಲಿ ಖಾಸಗಿ ಲಾಭಕೋರರನ್ನು ಶಾಸನ ಬದ್ಧವಾಗಿ ಬಿಟ್ಟುಕೊಂಡಿದ್ದರಿಂದ. ಈಗ ಸರ್ಕಾರದ ಯಾವುದೇ ಯೋಜನೆಯಲ್ಲಿ ಕಡ್ಡಾಯವಾಗಿ ಲಾಭಕೋರ ಕಾರ್ಪೊರೇಟ್‌ಗಳು ಭಾಗವಹಿಸಬೇಕೆಂಬುದು ಶಾಸನ. ಇದು ಭಾರತದಲ್ಲಿ ರೂಪುಗೊಳ್ಳುತ್ತಿರುವ ಬಂಡವಾಳ ಶಾಹಿಯ ಸ್ವರೂಪ. ಇದೇ ಭ್ರಷ್ಟಾಚಾರದ ಗಂಗೋತ್ರಿ.

ಉದಾರೀಕರಣ-ಜಾಗತೀಕರಣ ಪೂರ್ವ ಕಾಲಘಟ್ಟದಲ್ಲಿ ಖಾಸಗಿ ವ್ಯಕ್ತಿಗೆ ಸರ್ಕಾರಿ ಅಧಿಕಾರಿ ಕಾನೂನುಬಾಹಿರವಾಗಿ ಮಾಡಿಕೊಡುತ್ತಿದ್ದ ಅನುಕೂಲಗಳು ಮತ್ತು ಜನರ ಸಂಕ್ಷೇಮಕ್ಕೆ ನಿಗದಿಯಾಗಿದ್ದ ಹಣವನ್ನು ಗುಳುಂ ಮಾಡುವುದು ಇವುಗಳನ್ನೇ ಭ್ರಷ್ಟಾಚಾರವೆಂದು ಕರೆಯಲಾಗುತ್ತಿತ್ತು. ಭಾರತದ ಭ್ರಷ್ಟಾಚಾರದ ಇತಿಹಾಸವನ್ನು ನೋಡಿದರೆ ಈ ಬಗೆಯ ಭ್ರಷ್ಟಾಚಾರದ ಗಾತ್ರ 1991ರವರೆಗೆ ಹಲವು ಕೋಟಿ ರೂಪಾಯಿಗಳ ಗಡಿಯನ್ನು ದಾಟಿರಲಿಲ್ಲ. ಆದರೆ 1991ರ ನಂತರ ನಡೆದಿರುವ ಹಗರಣಗಳನ್ನು ನೊಡಿ. ಹರ್ಷದ್ ಮೆಹ್ತಾ 5000 ಕೋಟಿ, ಟೆಲಿಕಾಂ ಹಗರಣ 10-12,000 ಕೋಟಿ, ಈಗ ಕಾಮನ್‌ವೆಲ್ತ್ ಹಗರಣ 60,000 ಕೋಟಿ, 2 ಜಿ ಸ್ಪೆಕ್ಟ್ರಂ ಹಗರಣ 2.5 ಲಕ್ಷ ಕೋಟಿಗಳಾದದ್ದೇ ಸರ್ಕಾರ ಮಾಡಬೇಕಾದ ಕೆಲಸವನ್ನೆಲ್ಲಾ ಕಡ್ಡಾಯವಾಗಿ ಲಾಭಕೋರ ಖಾಸಗೀ ಕಂಪನಿಗಳಿಗೆ ವಹಿಸಬೇಕೆಂಬ ನೀತಿ ಜಾರಿಗೆ ಬಂದದ್ದರಿಂದ. ಅಂದರೆ ಸಾರ್ವಜನಿಕ ಸಂಪನ್ಮೂಲಗಳನ್ನು ಶಾಸನಬದ್ಧವಾಗಿ ಲಾಭಕೋರ ಖಾಸಗಿ ಕಂಪನಿಗಳ ಪಾಲು ಮಾಡುವ Public-Private Participation (PPP- ಸಾರ್ವಜನಿಕ-ಖಾಸಗಿ ಸಹಭಾಗಿತ್ವ) ಎಂಬ ನೀತಿ ಜಾರಿಗೆ ಬಂದಿರುವುದರಿಂದ. ಈ ನೀತಿಯೇ ಭ್ರಷ್ಟಾಚಾರದ ಗಂಗೋತ್ರಿ. ಹೀಗಾಗಿ ಇಂದು ಈ ದೇಶದಲ್ಲಿ ಬಡವರು ಬಡವರಾಗುತ್ತಾ ದೊಡ್ಡ ದೊಡ್ಡ ಬಿಲಿಯನಾಧೀಶ್ವರರಾಗುತ್ತಿರುವುದಕ್ಕೆ ಅಭಿವೃದ್ಧಿ ಎಂಬ ಹೆಸರಿನ ಅತಿ ದೊಡ್ಡ ಶಾಸನಬದ್ಧ ಭ್ರಷ್ಟಾಚಾರವೇ ಕಾರಣ.


ಎಲ್ಲಿಯತನಕ ಭ್ರಷ್ಟಾಚಾರದ ಮೂಲಗಳನ್ನು ವ್ಯವಸ್ಥೆಯಲ್ಲಿ ಹುಡುಕದೇ ವ್ಯಕ್ತಿಗಳಲ್ಲಿ ಮಾತ್ರ ಹುಡುಕುತ್ತಿರುತ್ತೇವೆಯೋ ಅಲ್ಲಿಯತನಕ ಸಾವಿರ ಕದ್ದ ಕಳ್ಳ ಸಿಗುತ್ತಾನೆ. ದರೋಡೆಕೋರ ಮತ್ತು ಲೂಟಿಕೋರ ಮಾತ್ರ ಮಂತ್ರಿಯಾಗಿ, ಕಾರ್ಪೊರೇಟ್ ಅಧಿಪತಿಯಾಗಿ ನಮ್ಮೆದುರೇ ಮೆರೆಯುತ್ತಿರುತ್ತಾನೆ. ರಾಜಕೀಯ ಪಕ್ಷಗಳು ಜನರಿಗೆ ಈ ಹುನ್ನಾರಗಳನ್ನು ಬಿಡಿಸಿ ಹೇಳುವುದಿಲ್ಲ. ಆದರೆ ಈ ಹುನ್ನಾರವನ್ನು ಅರ್ಥಮಾಡಿಕೊಂಡು ಪರ್ಯಾಯ ರಾಜಕಾರಣ ಮಾಡಬೇಕಾದ ಚಳವಳಿಗಳು ಸಹ ಪ್ರವಾಹದ ದಿಕ್ಕಿನಲ್ಲಿ ಕೊಚ್ಚಿಹೋಗುತ್ತಿರುವುದು ಏಕೆ? ಇದು ಕೇವಲ ಗ್ರಹಿಕೆಯ ಕೊರತೆಯೋ? ಬದ್ಧತೆಯ ಕೊರತೆಯೋ? ಹೋರಾಟ ರಾಜಕಾರಣದಲ್ಲಿ ಆಳುವ ಪಕ್ಷಗಳಲ್ಲಿ ಇರುವ ವ್ಯತ್ಯಾಸ ಕೇವಲ ಅಧಿಕಾರ ಪಡೆಯುವ ತನಕ ಮಾತ್ರ ಜೀವಂತವಾಗಿರುತ್ತದೆ ಎಂದು ಅರ್ಥಮಾಡಿಕೊಳ್ಳದೇ ಹೋದರೆ ರಾಜಕೀಯ ಪಕ್ಷಗಳು ಜನರ ಜೊತೆ ಇರುವ ಸಂಘಟನೆಗಳನ್ನು ತಮ್ಮ ಕುದುರೆಯನ್ನಾಗಿಯಷ್ಟೆ ಮಾಡಿಕೊಳ್ಳುತ್ತವೆ. ಆದರೆ ಕೆಲವು ಚಳವಳಿಗಳು ಜನರಿಂದ ಕಸುವು ಪಡೆಯದೇ ನಾಯಕರಿಂದ ಮತ್ತು ಆಳುವ ಪಕ್ಷಗಳಲ್ಲಿ ಇರುವ ಗುಂಪುಗಳಿಂದ ಕಸುವು ಪಡೆಯುವ ನೈಚ್ಯಾನುಸಂಧಾನಕ್ಕೆ ಇಳಿದಿರುವುದರಿಂದಲೇ ರಾಜಕೀಯ ಪಕ್ಷಗಳು ಚಳವಳಿಗಳ ಮೇಲೆ ಸವಾರಿ ಮಾಡಿ ಅವರ ನಿರ್ದೇಶಿಸುವ ಅಜೆಂಡಾಗಳಿಗೆ ತಕ್ಕಂತೆ ಚಳವಳಿಗಳನ್ನು ಬಳಸಿಕೊಳುತ್ತಿವೆ.

ದುರಂತವೆಂದರೆ ಭ್ರಷ್ಟಾಚಾರ ವಿರೋಧಿ ಹೋರಾಟ ಇದೇ ರೀತಿ ರಾಜಕೀಯ ಪಕ್ಷಗಳು ಜನಪರರನ್ನು, ಜನಚಳವಳಿಗಳನ್ನು ತಮ್ಮ ಅಜೆಂಡಾಗಳಿಗೆ ತಕ್ಕಂತೆ ಬಳಸಿಕೊಳ್ಳುವ ವೇದಿಕೆಯಾಗಿಬಿಡುತ್ತಿರುವುದು. ಇದು ಸಿನಿಕತೆಯಲ್ಲ, ಒಳಗಣ್ಣು ಇದ್ದ ಎಲ್ಲರೂ ಕಾಣಬಲ್ಲ ವಾಸ್ತವ. ●

ಲಂಕೇಶ್ ಪ್ರಕಾಶನದ ಹೊಸ ಪುಸ್ತಕ ಬಿಡುಗಡೆ

ಚಾರ್ವಾಕ

(ಶಿವಸುಂದರ್ ಅವರ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಲೇಖನಗಳ ಸಂಗ್ರಹ)



ಪ್ರಸ್ತಾವನೆ : ಪ್ರೊ. ವಿ.ಎಸ್. ಶ್ರೀಧರ್

ಪ್ರೊ. ಚಂದ್ರಶೇಖರ ಪಾಟೀಲ್ ಅವರಿಂದ ಪುಸ್ತಕ ಬಿಡುಗಡೆ

ಪುಸ್ತಕ ಕುರಿತು: ಪಾರ್ವತೀಶ, ಪತ್ರಕರ್ತ

ಅಧ್ಯಕ್ಷತೆ : ಗೌರಿ ಲಂಕೇಶ್

ದಿನಾಂಕ: ಮೇ 14, ಶನಿವಾರ
ಸಮಯ: ಸಂಜೆ 5.30ಕ್ಕೆ
ಸ್ಥಳ: ಎಸ್.ಸಿ.ಎಮ್ ಹೌಸ್, ಸಿಎಸ್‌ಐ ಕಾಂಪೌಂಡ್, ಮಿಷನ್ ರೋಡ್, ಬೆಂಗಳೂರು. (ಕಾರ್ಪೊರೇಷನ್ ಬಳಿ)

ಎಲ್ಲರಿಗೂ ಸ್ವಾಗತ

ಪಾತಕ ಲೋಕದಲ್ಲಿ ಮೆರೆದ ಸ್ತ್ರೀಯರು...

ಜಗತ್ತಿನಾದ್ಯಂತ ಭೂಗತಲೋಕದ ಪಾತಕಿಗಳಲ್ಲಿ ಹೆಚ್ಚಿನವರು ಪುರುಷರೇ. ಆದರೆ ಹಲವೊಮ್ಮೆ ಈ ಕ್ರಿಮಿನಲ್ ಲೋಕದಲ್ಲಿ ಮಹಿಳೆಯರೂ ಕುಖ್ಯಾತಿ ಪಡೆದು ಮೆರೆಯಾಗಿದ್ದಾರೆ. ಉದಾಹರಣೆಗೆ, ಅಮೆರಿಕದಲ್ಲಿ 30ರ ದಶಕದಲ್ಲಿ ಹಲವಾರು ಬ್ಯಾಂಕ್‌ಗಳನ್ನು ದರೋಡೆ ಮಾಡಿದ್ದ, ಹತ್ತಾರು ಜನರನ್ನು ಕೊಂದಿದ್ದ, ಅಲ್ಲಿನ ಪೊಲೀಸರಿಗೆ ಬಲಿಯಾಗುವ ಮುನ್ನ ದಂತಕತೆಯಾಗಿದ್ದ ಬೊನಿ ಮತ್ತು ಕ್ಲೈಡ್ ಎಂಬ ಪಾತಕಿ ಜೋಡಿಯಲ್ಲಿ ಬೊನಿ ಪಾರ್ಕರ್ ಓರ್ವ ಮಹಿಳೆ. ಇನ್ನು ಬೆಂಗಳೂರಿನ ಪಾತಕ ಜಗತ್ತಿನಲ್ಲಿ ಮಾರಿಮುತ್ತು ತರಹದವರ ಪಾತ್ರದ ಬಗ್ಗೆ ಎಲ್ಲರಿಗೂ ಗೊತ್ತಿದೆ.

ಇತ್ತೀಚೆಗೆ ಮುಂಬೈ ಪತ್ರಕರ್ತ ಹುಸೈನ್ ಜೈದಿ ಎಂಬುವವರು ಬರೆದಿರುವ 'ಮಾಫಿಯಾ ಕ್ವೀನ್ಸ್ ಆಫ್ ಮುಂಬೈ' ಎಂಬ ವಿಭಿನ್ನ ಪುಸ್ತಕ ಓದಿದೆ. ಸ್ಮಗ್ಲಿಂಗ್, ರಿಯಲ್ ಎಸ್ಟೇಟ್, ಗಾಂಜಾ ಮಾರಾಟ, ನಕಲಿ ಸಾರಾಯಿ, ಕೊಲೆ, ಸುಲಿಗೆ, ಇತ್ಯಾದಿ ಭೂಗತ ಲೋಕದ ಅಕ್ರಮಗಳಲ್ಲಿ ಭಾಗಿಯಾಗಿದ್ದ ಹತ್ತಾರು ಮಹಿಳೆಯರ ಚಿತ್ರಣವನ್ನು ಆ ಪುಸ್ತಕ ನೀಡುತ್ತದೆ.



ಗಂಗುಬಾಯಿ

ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿ ಮುಂಬೈ ಭೂಗತಜಗತ್ತನ್ನೇ ತನ್ನ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿದ್ದ ಹಾಜಿಮಸ್ತಾನ್ ಮತ್ತು ಆಗ ತಾನೆ ಮಸ್ತಾನನ ವಿರುದ್ಧ ಬೆಳೆಯುತ್ತಿದ್ದ ಕುಖ್ಯಾತ ಕ್ರಿಮಿನಲ್ ದಾವೂದ್ ಇಬ್ರಾಹಿಂ ನಡುವೆ ಶಾಂತಿ ಒಪ್ಪಂದವನ್ನು ಸಾಧ್ಯವಾಗಿಸಿದ್ದ ಜೆನಾಬಾಯಿ ಎಂಬ ಕಳ್ಳಭಟ್ಟಿ ರಾಣಿ...

ತನ್ನ ಪ್ರೀತಿಯ ಪತಿ ಮೆಹಮೂದ್‌ನನ್ನು ಕೊಂದಿದ್ದ ದಾವೂದ್ ಇಬ್ರಾಹಿಂ ವಿರುದ್ಧ ಸೇಡು ತೀರಿಸಿಕೊಳ್ಳಬೇಕೆಂಬ ಉದ್ದೇಶದಿಂದ ತನ್ನ ಬುರ್ಖಾವನ್ನು ತೊರೆದು ಜೀನ್ಸ್ ಪ್ಯಾಂಟ್ ತೊಟ್ಟು, ಬಂದೂಕನ್ನು ಶೂಟ್ ಮಾಡಲು ಕಲಿತು, ಭೂತನ ಜಗತ್ತನ್ನು ಪ್ರವೇಶಿಸಿ ದಾವೂದನ ಗ್ಯಾಂಗಿನ ಬಗ್ಗೆ ಪಡೆದ ಮಾಹಿತಿಗಳನ್ನು ಪೊಲೀಸರಿಗೆ ನೀಡುವ ಮೂಲಕ ಆತನಿಗೆ ಅಪಾರ ನಷ್ಟವಾಗುವಂತೆ ಮಾಡಿದ್ದ ಅಪೂರ್ವ ಸುಂದರಿ ಅಶ್ರಫ್ ಅಲಿಯಾಸ್ ಸಪ್ನ... ದಾವೂದನಂತಹ ದಾವೂದನಿಗೆ ಓರ್ವ ಯಕಶ್ಚಿತ್ ಮಹಿಳೆ ಸೆಡ್ಡು ಹೊಡೆಯುವುದೆಂದರೇನು ಎಂದು ಕೊನೆಗೆ ಅದೇ ದಾವೂದನ ಸಹಚರರಿಗೆ ಕ್ರೂರವಾಗಿ ಬಲಿಯಾದ ಸಪ್ನಾಳ ಕತೆ...

ಮುಂಬೈಯಿಯ ಗಾಂಜಾ ವ್ಯವಹಾರದ ಮೇಲೆ ಹಿಡಿತ ಹೊಂದಿದ್ದ ತಮಿಳುನಾಡು ಮೂಲದ ಚಾಣಾಕ್ಷ ಮುದುಕಿ ಮಹಾಲಕ್ಷ್ಮಿ ಪಾಪಮಣಿಯ ವೃತ್ತಾಂತ... ಬಾಲಿವುಡ್‌ನಲ್ಲಿ ಅವಕಾಶ ಮತ್ತು ವೈಯಕ್ತಿಕ ಬದುಕಿನಲ್ಲಿ ಸಂತೋಷವನ್ನು ಅರಸಿ ಹೊರಟಿದ್ದ ನಟಿ ಮೋನಿಕಾಬೇಡಿ ಪಾತಕಿ ಅಬು ಸಲೀಂನ ತೆಕ್ಕೆಗೆ ಬಿದ್ದು ಜೈಲು ಕಂಡಿದ್ದು... ತನ್ನ ಇಂಜಿನಿಯರ್ ಗಂಡ ಅಶ್ವಿನ್ ನಾಯ್ಕ್ ಭೂಗತ ಲೋಕವನ್ನು ಪ್ರವೇಶಿಸುವಂತೆ ಒತ್ತಾಯಮಾಡಿದ್ದ ನೀತಾ ನಾಯ್ಕ್ ಕೊನೆಗೆ ತನ್ನ ಗಂಡನ ಗುಮಾನಿಗೆ ತುತ್ತಾಗಿ ಆತನಿಂದಲೇ ಕೊಲೆಯಾಗಿದ್ದು...

ಇವರೆಲ್ಲರ ಕತೆಯನ್ನು ಜೈದಿ ರೋಚಕವಾಗಿ ಬಣ್ಣಿಸಿದ್ದಾರೆ. ಅದರಲ್ಲೂ ಕಾಮಾಟಿಪುರವನ್ನು ಹಿಂದೊಮ್ಮೆ ಆಳಿದ್ದ ಗಂಗೂಬಾಯಿಯನ್ನು ಕುರಿತ ಅಧ್ಯಾಯ ಮನಮುಟ್ಟುವಂತಿದೆ.

ಗುಜರಾತಿನ ಕಥಿಯಾವಾಡದ ರಾಜವಂಶಸ್ಥರ ಸಂಬಂಧಿ ಕುಟುಂಬದಲ್ಲಿ ಜನಸಿದಾಕೆ ಗಂಗಾ. ಆಕೆಯ ವಂಶಸ್ಥರು ಪ್ರಮುಖ ವಕೀಲರು, ಶಿಕ್ಷಕರೂ ಆಗಿದ್ದರು. ದೊಡ್ಡ ಆಸ್ತಿವಂತರು. ಆದರೆ ಗಂಗಾಗೆ ಸಿನಿಮಾಗಳೆಂದರೆ ಅದೆಂತಹದ್ದೋ ವ್ಯಾಮೋಹ. ತಾನು ನಟಿಯಾಗಿ ಬೆಳ್ಳಿಪರದೆ ಮೇಲೆ ಮಿಂಚಬೇಕೆಂಬ ಆಶೆ ಆಕೆಗೆ. ಆದರೆ ತನ್ನ ಸಂಪ್ರದಾಯಸ್ಥ ಕುಟುಂಬ ಎಂದೂ ತಾನು ನಟಿಯಾಗುವುದನ್ನು ಒಪ್ಪುವುದಿಲ್ಲ ಎಂದು ಆಕೆಗೆ ಗೊತ್ತಿತ್ತು. ಆಗ ಆಕೆಯ ತಂದೆಯ ಆಫೀಸಿನಲ್ಲಿ ಗುಮಾಸ್ತನಾಗಿ ಬಂದವನೇ ರಾಮ್ನಿಕ್. ಆತನೊಂದಿಗೆ ಗಂಗಾ ತನ್ನ ಕನಸುಗಳನ್ನು ಹಂಚಿಕೊಂಡಳು, ಆತ ತನ್ನ ಆಶೆಗಳನ್ನು ನನಸಾಗಿಸುತ್ತಾನೆಂದು ನಂಬಿ ಆತನ ಪ್ರೇಮಪಾಶಕ್ಕೆ ಬಿದ್ದಳು.

ಬಹಳಷ್ಟು ಯುವತಿಯರು ಮಾಡುವಂತೆ ಗಂಗಾ ಕೂಡ ರಾಮ್ನಿಕ್‌ನನ್ನು ನಂಬಿ ಒಂದು ದಿನ ಕಾಸು, ಬಟ್ಟೆ ಕಟ್ಟಿಕೊಂಡು ಆತನೊಂದಿಗೆ ಮುಂಬೈಗೆ ಓಡಿಹೋದಳು. ಗಂಗಾಳ ಸಹವಾಸವನ್ನು ಕೆಲ ದಿನ ಅನುಭವಿಸಿದ ರಾಮ್ನಿಕ್ ಒಂದು ದಿನ ತಾವಿದ್ದ ಹೋಟೆಲ್ ಬದಲಾಗಿ ಮನೆ ಹುಡುಕುವ ನೆಪ ನೀಡಿ ಅವಳನ್ನು ಅಪರಿಚಿತ ಮಹಿಳೆಯೊಂದಿಗೆ ಕಳುಹಿಸಿದ. ಆ ಮಹಿಳೆ ಓರ್ವ ಘರ್‌ವಾಲಿ (ವೇಶ್ಯಾವಾಟಿಕೆ ನಡೆಸುವವಳು) ಎಂದು ಗೊತ್ತಾಗಿ ಗಂಗಾ ತಬ್ಬಿಬ್ಬಾದಳು. ಏನಾಗಿತ್ತೆಂದರೆ ರಾಮ್ನಿಕ್ ಗಂಗಾಳನ್ನು ಐನೂರು ರೂಪಾಯಿಗಳಿಗೆ ವೇಶ್ಯಾವಾಟಿಕೆಗೆ ಮಾರಿ ಪರಾರಿಯಾಗಿದ್ದ.

ಗಂಗಾಳ ಬದುಕು ಛಿದ್ರಗೊಂಡಿತ್ತು, ಕಥಿಯಾವಾಡದ ತನ್ನ ತಂದೆ ತಾಯಿಯ ಮನೆಗೆ ಹಿಂತಿರುಗುವಂತಿಲ್ಲ, ತಾನು ನಂಬಿದ್ದ ಪುರುಷ ತನಗೆ ಮೋಸ ಮಾಡಿದ್ದಾನೆ. ಅಪರಿಚಿತ ನಗರ. ಒಬ್ಬರೂ ಗೊತ್ತಿಲ್ಲ... ವಿಧಿ ಕಾಣದೆ ಗಂಗಾ ಗಂಗು ಆಗಿ ವೇಶ್ಯಾವಾಟಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡಳು.

ಅಷ್ಟು ಮಾತ್ರವಾಗಿದ್ದರೆ ಆಕೆಯ ಕತೆ ಇತರೆ ವೇಶ್ಯೆಯರ ಕತೆಯಂತೇ ಮುಗಿಯುತ್ತಿತ್ತು, ಆದರೆ ಗಂಗು ದಿಟ್ಟ ಮಹಿಳೆ. ತಾನು ವೇಶ್ಯೆಯಾಗಿದ್ದರೂ ತನಗೂ ಹಕ್ಕುಗಳಿವೆ ಎಂದು ನಂಬಿದ್ದವಳು.

ಒಮ್ಮೆ ಆಕೆ ಇದ್ದ ಮನೆಗೆ ದಾಳಿ ಇಟ್ಟ ಪಠಾಣ್ ಒಬ್ಬ ಆಕೆಯನ್ನು ತನ್ನ ಕಾಮತೃಷೆಗೆ ಬಳಸಿಕೊಂಡನಲ್ಲದೆ, ಆಕೆಯನ್ನು ಚೆನ್ನಾಗಿ ಥಳಿಸಿದ. ಮಾತ್ರವಲ್ಲ, ಹೋಗುವಾಗ ಆಕೆಗೆ ಸಂಭಾವನೆಯನ್ನೂ ನೀಡದೆ ಹೋಗಿದ್ದ. ಅವತ್ತು ತನ್ನ ರಕ್ಷಣೆಗೆ ಯಾರೂ ಇಲ್ಲವೆಂದು ಗಂಗು ಕಣ್ಣೀರಿಟ್ಟಿದ್ದಳು. ಇದಾದ ಕೆಲ ದಿನಗಳ ನಂತರ ಮತ್ತೆ ದಾಳಿ ಇಟ್ಟ ಅದೇ ಪಠಾಣ್ ಮತ್ತೆ ತನ್ನ ಕ್ರೌರ್ಯವನ್ನು ಮೆರೆದ. ಈ ಬಾರಿ ಗಂಗು ಹಲವು ವಾರಗಳ ಕಾಲ ಆಸ್ಪತ್ರೆಯಲ್ಲಿ ಕಳೆಯುವಂತೆ ಆಕೆಯ ಮೈಮೂಳೆಗಳನ್ನು ಮುರಿದ.



ಆತನ ವಿರುದ್ಧ ಸೇಡು ತೀರಿಸಿಕೊಳ್ಳಲು ಗಂಗು ನಿರ್ಧರಿಸಿದಳು. ಆತ ಕುಖ್ಯಾತ ರೌಡಿ ಕರೀಂ ಲಾಲಾನ ಗ್ಯಾಂಗಿನ ಸದಸ್ಯ ಎಂದು ಬೇರೆಯವರಿಂದ ತಿಳಿದುಕೊಂಡಳು. ಒಂದು ದಿನ ಮಸೀದಿಯಲ್ಲಿ ಪ್ರಾರ್ಥನೆ ಮುಗಿಸಿ ಕರೀಂ ಲಾಲಾ ತನ್ನ ಮನೆಗೆ ಹಿಂದಿರುಗುತ್ತಿದ್ದಾಗ ರಸ್ತೆ ಮಧ್ಯದಲ್ಲೇ ಗಂಗು ಆತನಿಗೆ ಅಡ್ಡ ನಿಂತಳು. ಗಂಗುಳ ವೇಷಭೂಷಣಗಳನ್ನು ನೋಡುತ್ತಿದ್ದಂತೆ ಆಕೆ ಕಾಮಾಟಿಪುರದವಳು ಎಂದರಿತ ಕರೀಂ ಲಾಲಾನಿಗೆ ಆಕೆಯೊಂದಿಗೆ ರಸ್ತೆಯಲ್ಲಿ ನಿಂತು ಮಾತನಾಡುವುದು ಚೆನ್ನಾಗಿ ಕಾಣಿಸಲಿಲ್ಲ. ಆಕೆಯನ್ನು ತನ್ನ ಮನೆಗೆ ಕರೆದುಕೊಂಡು ಹೋದ. ಆದರೆ ತನ್ನ ಮನೆಯೊಳಗೆ ಆಕೆಯನ್ನು ಕರೆಯುವ ಬದಲಾಗಿ ಮನೆಯ ತಾರಸಿ ಮೇಲೆ ತನಗೆ ಕಾಯುವಂತೆ ಹೇಳಿದ. ಆತ ತನ್ನ ಬಟ್ಟೆಗಳನ್ನು ಬದಲಾಯಿಸುತ್ತಿದ್ದಾಗ ಆಕೆಗೆಂದು ಟೀ ಮತ್ತು ತಿನಿಸುಗಳನ್ನು ಕಳುಹಿಸಿದ.

ತಾರಸಿಗೆ ಬಂದು ಕರೀಂ ಲಾಲಾ ನೋಡುತ್ತಾನೆ ಆಕೆ ಯಾವುದನ್ನೂ ಮುಟ್ಟದೆ ಹಾಗೆ ನಿಂತಿದ್ದಾಳೆ. "ಯಾಕೆ ಏನನ್ನೂ ತಿಂದಿಲ್ಲ?" ಎಂದು ಲಾಲಾ ಕೇಳಿದ.

"ನನ್ನಂತಹ ಮಹಿಳೆ ನಿಮ್ಮ ಮನೆಯನ್ನು ಪ್ರವೇಶಿಸಿ ಅದನ್ನು ಅಸ್ಪೃಶ್ಯಗೊಳಿಸಬಾರದೆಂದಿದ್ದರೆ ನಿಮ್ಮ ಅಡುಗೆ ಮನೆಯ ವಸ್ತುಗಳನ್ನು ನಾನು ಮುಟ್ಟಿ ಅಸ್ಪೃಶ್ಯಗೊಳಿಸುವುದು ತಪ್ಪಲ್ಲವೇ?" ಎಂದು ಗಂಗು ಮರುಪ್ರಶ್ನೆ ಹಾಕಿದಾಗ ಲಾಲಾ ದಂಗಾದ.

"ನಿನ್ನ ಹೇಸರೇನು?" ಎಂದು ಲಾಲಾ ಕೊನೆಗೂ ಕೇಳಿದ.

"ಗಂಗು.. ನಾನು ಕಾಮಟಿಪುರದಲ್ಲಿ ಕೆಲಸ ಮಾಡುತ್ತೇನೆ."

"ನನ್ನಿಂದ ಏನಾಗಬೇಕು?"

"ಭಾಯ್, ನಿಮ್ಮ ಹುಡುಗನೊಬ್ಬ ನನಗೆ ತುಂಬಾ ಕಷ್ಟ ಕೊಡುತ್ತಿದ್ದಾನೆ. ಆತನಿಗೆ ನೀವು ಶಿಕ್ಷೆ ಕೊಟ್ಟರೆ ನನ್ನ ಜೀವನಪರ್ಯಂತ ನಿಮ್ಮವಳಾಗಿರುತ್ತೇನೆ."

ಇದನ್ನು ಕೇಳಿ ಲಾಲಾನಿಗೆ ಕೋಪ ಬಂತು. "ನೋಡು ನಾನು ಗೃಹಸ್ಥ, ನನ್ನ ಮುಂದೆ ಇಂತಹ ಮಾತನ್ನು ಆಡಬೇಡ. ನನ್ನ ಹುಡುಗರು ತಪ್ಪು ಮಾಡಿದ್ದರೆ ನಾನು ಅವರನ್ನು ಸರಿ ಮಾಡುತ್ತೇನೆ. ಯಾರು ಅವನು?"

"ಶೌಖತ್ ಖಾನ್. ಆತ ನನ್ನನ್ನು ಎರಡು ಬಾರಿ ರೇಪ್ ಮಾಡಿದ. ಅಷ್ಟೇ ಅಲ್ಲ, ಆತ ನನಗೆ ದುಡ್ಡನ್ನೂ ಕೊಡಲಿಲ್ಲ. ನಾನು ಸೂಳೆ ಆಗಿರಬಹುದು. ಅಂದ ಮಾತ್ರಕ್ಕೆ ಯಾರು ಬೇಕಾದರೂ ನನ್ನೊಂದಿಗೆ ಹೇಗೆ ಬೇಕಾದರೂ ನಡೆದುಕೊಳ್ಳಬಾರದು. ಆತನಿಂದಾಗಿ ನಾನು ಆಸ್ಪತ್ರೆ ಸೇರುವಂತಾಯಿತು" ಎಂದು ಹೇಳಿದ ಗಂಗು ತನ್ನ ಕೈಮೇಲಿದ್ದ ಬಾಸುಂಡೆಗಳನ್ನು ಲಾಲಾನಿಗೆ ತೋರಿಸಿದಳು.

ಅವು ಎಷ್ಟು ಕಠೋರವಾಗಿದ್ದವೆಂದರೆ ಲಾಲಾ ಅವನ್ನು ನೋಡಲಾಗದೆ ತನ್ನ ತಲೆ ತಗ್ಗಿಸಿದ. ಆಕೆಯ ಮೇಲಾಗಿದ್ದ ಕ್ರೌರ್ಯವನ್ನು ಕಂಡು ದಂಗಾದ.

"ಗಂಗು, ಆತ ಮತ್ತೆ ಬಂದಾಗ ನನಗೆ ಸುದ್ದಿ ಕಳುಹಿಸು. ನಾನು ಬರುವ ತನಕ ಆತನನ್ನು ಬ್ಯುಸಿ ಆಗಿ ಇಡು. ನಾನೇ ಬಂದು ಆತನನ್ನು ನೋಡಿಕೊಳ್ಳುತ್ತೇನೆ. ಈಗ ಹೊರಡು."

ಇದನ್ನು ಕೇಳಿ ಸಂತೋಷಗೊಂಡ ಗಂಗು ತನ್ನ ಪರ್ಸ್‌ನಿಂದ ಒಂದು ದಾರವನ್ನು ಹೊರತೆಗೆದು "ಕರೀಂ ಭಾಯ್, ನಾನು ಇಲ್ಲಿಗೆ ಬಂದು ಹಲವಾರು ವರ್ಷಗಳಾಗಿವೆ. ಇಲ್ಲಿಯತನಕ ಯಾವ ಪುರುಷನೊಂದಿಗೂ ನಾನು ಸುರಕ್ಷಿತಳಾಗಿದ್ದೇನೆ ಎನಿಸಿರಲಿಲ್ಲವಾದ್ದರಿಂದ ಯಾರಿಗೂ ನಾನು ರಾಖಿಯನ್ನು ಕಟ್ಟಿರಲಿಲ್ಲ. ಆದರೆ ಇವತ್ತು ನೀನು ನನಗೆ ರಕ್ಷಣೆ ನೀಡುತ್ತೇನೆಂದು ಹೇಳಿದ್ದೀಯ. ಮತ್ತೆ ಸಹೋದರತ್ವದಲ್ಲಿ ನಂಬಿಕೆ ಹುಟ್ಟಿಸಿದ್ದೀಯಾ" ಎಂದಳು.

ಕರೀಂಲಾಲಾ ಮುಗುಳ್ನಕ್ಕು ತನ್ನ ಅಂಗೈಯನ್ನು ಎತ್ತಿಹಿಡಿದು "ನಿನಗೆ ನನ್ನ ಮಾತುಕೊಟ್ಟಿದ್ದೇನೆ. ಇನ್ನು ಮುಂದೆ ನೀನು ನನ್ನ ತಂಗಿ" ಎಂದ. ರಾಖಿಯನ್ನು ಕಟ್ಟಿಸಿಕೊಂಡ ನಂತರ ಪ್ಲೇಟಿನಲ್ಲಿದ್ದ ಒಂದು ಸಿಹಿಯನ್ನು ಆಕೆಯ ಬಾಯಿಗೆ ಇಟ್ಟು "ಈಗ ನಿನ್ನ ಅಭ್ಯಂತರವಿಲ್ಲ ಎಂದು ಭಾವಿಸುತ್ತೇನೆ" ಎಂದ. ಗಂಗು ಹರ್ಷಭರಿತಳಾದಳು.

ಆನಂತರ ಒಂದು ದಿನ ಆ ಪಠಾಣ್ ಮತ್ತೆ ಗಂಗು ಮನೆಗೆ ಬಂದಾಗ ಸ್ವತಃ ಕರೀಂಲಾಲಾ ಹಾಜರಾಗಿ ಆತನ ಹಲವಾರು ಮೈಮೂಳೆಗಳು ಮುರಿದುಹೋಗುವಂತೆ ಬಾರಿಸಿದ. ಅಷ್ಟೇ ಅಲ್ಲ, "ನನ್ನ ತಂಗಿ ಗಂಗುಗೆ ಯಾರಾದರೂ ತೊಂದರೆ ಕೊಟ್ಟರೆ ಹುಷಾರ್" ಎಂಬ ಎಚ್ಚರಿಕೆಯನ್ನೂ ನೀಡಿದ.

ಹೀಗೆ ಕರೀಂಲಾಲಾನಂತಹ ದಾದಾನ ಆಶ್ರಯ ಪಡೆದ ಗಂಗು ಆ ನಂತರದ ದಿನಗಳಲ್ಲಿ ಕಾಮಾಪುರದ ನಾಯಕಿಯಾಗಿ ಹೊಮ್ಮಿದಳು. ಕಾಮಾಟಿಪುರದಲ್ಲಿ ವಾಸವಿದ್ದ ಅದೆಷ್ಟೋ ಮಹಿಳೆಯರಿಗೆ ರಕ್ಷಣೆ ನೀಡಿದಳು, ಅವರ ಹಕ್ಕುಗಳಿಗಾಗಿ ಹೋರಾಡಿದಳು. ಆಕೆಯ ಬಗ್ಗೆ ಇವತ್ತಿಗೂ ಅಲ್ಲಿನ ಜನರಲ್ಲಿ ಎಷ್ಟು ಅಭಿಮಾನವೆಂದರೆ ಹಲವರು ಆಕೆಯ ಪ್ರತಿಮೆಯನ್ನೋ, ಫೋಟೋವನ್ನು ಇಟ್ಟುಕೊಂಡು ದಿನನಿತ್ಯ ಅದಕ್ಕೆ ಪೂಜೆ ಮಾಡುತ್ತಾರೆ.



• ಗೌರಿ ಲಂಕೇಶ್

editorlankesh@gmail.com

ಕಂಡಹಾಗೆ

ಗಂಗು ಎಂದೂ ಮದುವೆಯಾಗಲಿಲ್ಲ, ಆದರೆ ತನ್ನ ಮನೆಯಲ್ಲಿ ಅನೇಕ ಅನಾಥ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಳು. ಕಾಮಟಿಪುರವನ್ನು ತನ್ನ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ಆಳಿದ್ದ ಗಂಗು ಅಪಾರ ಒಡವೆಗಳನ್ನೂ ಸಂಗ್ರಹಿಸಿದ್ದಳು. ಆಕೆಯ ಕನ್ನಡಕದ ಫ್ರೇಮ್ ಕೂಡ ಚಿನ್ನದ್ದೇ ಆಗಿತ್ತು.

ಗಂಗುಬಾಯಿ ಸುತ್ತ ಹಲವಾರು ದಂತಕತೆಗಳು ಹುಟ್ಟಿಕೊಂಡಿದ್ದವು. ಅವುಗಳಲ್ಲಿ ಒಂದು ಭಾರತದ ಪ್ರಥಮ ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರು ಅವರನ್ನು ಕುರಿತದ್ದು. ತನ್ನ ರಾಜಕೀಯ ಸಂಪರ್ಕಗಳ ಮೂಲಕ ಒಮ್ಮೆ ಗಂಗು ಬಾಯಿ ನೆಹರು ಅವರನ್ನು ಭೇಟಿ ಆದರಂತೆ. ಈಕೆಯ ಬುದ್ಧಿವಂತಿಕೆ, ಚಾಣಾಕ್ಷತೆಯನ್ನು ಕಂಡು ಬೆರಗಾದ ನೆಹರು "ನೀನು ಒಂದು ಒಳ್ಳೆ ಕೆಲಸವನ್ನೋ, ಒಳ್ಳೆ ಗಂಡನನ್ನೋ ಹುಡುಕಿಕೊಂಡು ಜೀವನ ಸಾಗಿಸುವ ಬದಲು ಈ ದಂಧೆಯನ್ನು ಯಾಕೆ ಸೇರಿದೆ" ಎಂದು ಕೇಳಿದರಂತೆ.

ಅದಕ್ಕೆ ಗಂಗು "ಇನ್ನೂ ಸಮಯ ಮೀರಿಲ್ಲ, ನೀವು ಹೂಂ ಅಂದರೆ ನನ್ನ ದಂಧೆಯನ್ನು ಬಿಟ್ಟು ನಿಮ್ಮ ಮಡದಿಯಾಗಿರಲು ನಾನು ಸಿದ್ಧ" ಎಂದಳಂತೆ. ಅದನ್ನು ಕೇಳಿ ನೆಹರೂಗೆ ಸಿಟ್ಟು ಬಂತಂತೆ. "ನನ್ನೊಂದಿಗೆ ಹೀಗೆ ಮಾತನಾಡುತ್ತೀಯಲ್ಲಾ, ನಿನಗೆಷ್ಟು ಧಿಮಾಕು?" ಎಂದರಂತೆ.

ಆಗ ಗಂಗು "ಕೋಪ ಮಾಡಿಕೊಳ್ಳಬೇಡಿ ಪ್ರಧಾನ ಮಂತ್ರಿಗಳೇ. ಯಾವಾಗಲೂ ಉಪದೇಶ ಮಾಡುವುದು ಸುಲಭ, ಆದರೆ ಉಪದೇಶಿಸಿದಂತೆ ನಡೆದುಕೊಳ್ಳುವುದು ಕಷ್ಟ ಅಂತ ತೋರಿಸಲು ಹಾಗಂದೆ" ಎಂದಳಂತೆ!!

ಈಗಾಗಲೇ ಪಾತಕ ಲೋಕದ ಬಗ್ಗೆ ಹಲವಾರು ಪುಸ್ತಕಗಳು ಬೇರೆಬೇರೆ ಭಾಷೆಗಳಲ್ಲಿ ಪ್ರಕಟಗೊಂಡಿವೆ. ಆದರೆ ಜೈದಿ ಅವರಂತೆ ಹಲವು ವರ್ಷಗಳ ಕಾಲ ಸಂಶೋಧನೆ ನಡೆಸಿ, ಭೂಗತಲೋಕದಲ್ಲಿ ಕ್ಷಣಕಾಲ ಮೆರೆದ ಹಲವು ಮಹಿಳೆಯರ ಬದುಕನ್ನು ವಸ್ತುನಿಷ್ಠವಾಗಿಯೂ, ಮನಮುಟ್ಟುವಂತೆಯೂ ಕೊಟ್ಟಿರುವವರು ಕಡಿಮೆ. ಆ ಕಾರಣಕ್ಕೆ ಈ ಪುಸ್ತಕ ಮುಖ್ಯವಾಗುತ್ತದೆ. •

ಲಂಕೇಶ್ ವಾರ್ಷಿಕ ಚಂದಾ ವಿವರ

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ....

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ : 700 ರೂ.

ಎರಡು ವರ್ಷಕ್ಕೆ : 1400 ರೂ.

ಮೂರು ವರ್ಷಕ್ಕೆ : 2000 ರೂ.

ಡಿಡಿ/ಎಂಓಗಳನ್ನು 'ಲಂಕೇಶ್' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.


ನಂ. 9 ಇ.ಎ.ಟಿ. ರಸ್ತೆ ಬಸವನಗುಡಿ ಬೆಂಗಳೂರು -4

ಇನ್ನು ಮುಂದೆ ಲಂಕೇಶ್‌ಗೆ 2 ರೂ ಹೆಚ್ಚಿಗೆ ನೀಡಿ


ನಿಮ್ಮೆಲ್ಲರಿಗೂ ಗೊತ್ತಿರುವಂತೆ ಕಳೆದ ಮೂರೂವರೆ ವರ್ಷಗಳಲ್ಲಿ ವಿಪರೀತ ಬೆಲೆ ಏರಿಕೆಯಾಗಿದ್ದರೂ ನಿಮ್ಮ ಈ ಪತ್ರಿಕೆಯ ಬೆಲೆಯನ್ನು ನಾವು ಏರಿಸಿರಲಿಲ್ಲ.

ಆದರೀಗ ಅನಿವಾರ್ಯವಾಗಿ ಮುಂದಿನ ವಾರದಿಂದ ಪತ್ರಿಕೆಯ ಬೆಲೆಯನ್ನು ಎರಡು ರೂಪಾಯಿ ಹೆಚ್ಚಿಸುತ್ತಿದ್ದೇವೆ. ಓದುಗರು, ಏಜೆಂಟರು ಸಹಕರಿಸಬೇಕೆಂದು ವಿನಂತಿ. ನಿಮ್ಮ ಸಹಕಾರ, ಬೆಂಬಲ ಹೀಗೆ ಮುಂದುವರೆಯುತ್ತದೆಂದು ಆಶಿಸುತ್ತೇವೆ. ಮುಂದಿನ ಸಂಚಿಕೆಯಿಂದ ಲಂಕೇಶ್ 14 ರೂ. ಆಗಲಿದೆ.

–ಸಂ


ಕುರುಂಜಿ ವೆಂಕಟರಮಣ ಗೌಡ


ಡಾ.ಕೆ.ವಿ. ಚಿದಾನಂದ


ಡಾ.ಕೆ.ವಿ.ರೇಣುಕಾ ಪ್ರಸಾದ್

ಕ್ಯಾಪಿಟೇಷನ್ ಕಿಂಗ್ ಕುರುಂಜಿ ಸಾಮ್ರಾಜ್ಯದಲ್ಲೊಂದು ಕೊಲೆ!!

ಅನಾಯಾಸವಾಗಿ ಅಕ್ರಮ ಹಣ ಹರಿದುಬರುವಲ್ಲಿ ಆಗಬಾರದ ಅನಾಹುತ-ಘಾತಕವೇ ಆಗುತ್ತದೆ! ಹಣಬಲ ದುಡ್ಡಿನ ದರ್ಬಾರಿನಲ್ಲಿ ಮನುಷ್ಯತ್ವ-ಕರುಳುಬಳ್ಳಿ ಸಂಬಂಧಕ್ಕೆಲ್ಲ ಯಾವ ಅರ್ಥವೂ ಇರದು. ಈ 'ಘಾತಕ ನಿಯಮ' ಸುಳ್ಯದ ಕುರುಂಜಿ ವೆಂಕಟರಮಣಗೌಡ ಎಂಬ ಡೊನೇಷನ್ ಶಿಕ್ಷಣ ದೊರೆಯ ಸಾಮ್ರಾಜ್ಯದಲ್ಲಿ ಅಕ್ಷರಶಃ ಪಾಲನೆಯಾಗಿದೆ!! ರಾಜ್ಯದ ಪ್ರತಿಷ್ಠಿತ ಶಿಕ್ಷಣ ವ್ಯಾಪಾರ ಕೇಂದ್ರಗಳಲ್ಲಿ ಒಂದಾದ ಕುರುಂಜಿ ವೆಂಕಟರಮಣ ಗೌಡ (ಕೆವಿಜಿ) ಶಿಕ್ಷಣ ಸಮೂಹದೊಳಗಿನ 'ಆಸ್ತಿ ಕಾಳಗ' ಕೊಲೆಯಲ್ಲಿ ಪರ್ಯಾವಸಾನ ಕಂಡಿದೆ!!

ಅಪಾರ ಚರ-ಸ್ಥಿರ ಆಸ್ತಿಯ ಕೆವಿಜಿ ಶಿಕ್ಷಣ ಸಂಸ್ಥಾನವನ್ನು ವಶಪಡಿಸಿಕೊಳ್ಳಲು ಕುರುಂಜಿ ಗೌಡರ ಹಿರಿಯ ಮಗ ಡಾ. ಚಿದಾನಂದ್ ಮತ್ತು ಕಿರಿಯ ಕುಪುತ್ರ ಡಾ.ರೇಣುಕಾ ಪ್ರಸಾದ್ ಕಳೆದ ನಾಲ್ಕೈದು ವರ್ಷದಿಂದ ನಡೆಸುತ್ತ ಬಂದ ಶೀತಲಸಮರಕ್ಕಿಂತ ವಿರಾಟ್ ರಕ್ತದ ರಂಗೇರಿಬಿಟ್ಟಿದೆ! ಆಧುನಿಕ ಸುಳ್ಯದ ಶಿಲ್ಪಿ ಎಂಬ 'ಆರೋಪ'ಕ್ಕೆ ತುತ್ತಾಗಿರುವ ಕುರುಂಜಿ ಗೌಡರ ಕ್ರಿಮಿನಲ್ ಮಗ ರೇಣುಕಾ ಪ್ರಸಾದ್ ಅಣ್ಣ ಚಿದಾನಂದನ ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿಯಾಗಿದ್ದ ಕೆ.ಎಸ್.ರಾಮಕೃಷ್ಣನೆಂಬ ಶಕುನಿ ಮಾಮನನ್ನು ಸುಪಾರಿ ಕೊಟ್ಟು ಖತಂ ಮಾಡಿಸಿದ್ದಾನೆ! ಅಲ್ಲಿಗೆ ಕುರುಂಜಿ ಗೌಡರು 'ಕಷ್ಟಪಟ್ಟು' ಬೆಳೆಸಿದ ಶಿಕ್ಷಣದಂಗಡಿಗಳ ಖದರು, ದುಡ್ಡಿನ ದೊಡ್ಡಸ್ತಿಕೆ ಮತ್ತು ಫ್ಯೂಡಲ್ ಪ್ರತಿಷ್ಠೆಗಳೆಲ್ಲ ಒಂದೇಟಿಗೆ ಮಣ್ಣು ಪಾಲಾಗಿಹೋಗಿದೆ!


ಕುರುಂಜಿ ಕತೆ

ರಾಜ್ಯದ ಶೈಕ್ಷಣಿಕ ಮಾರುಕಟ್ಟೆಯಲ್ಲಿ ಸುಳ್ಯದ ಕುರುಂಜಿ ವೆಂಕಟರಮಣ ಗೌಡರಿಗೆ ದೊಡ್ಡ ನೇಮ್ ಅಂಡ್ ಫೇಮ್ ಇದೆ. ಅರೆಭಾಷೆ ಗೌಡ ಸಮುದಾಯಕ್ಕೆ ಸೇರಿದ ಕುರುಂಜಿ ಗೌಡರು ಡೊನೇಷನ್-ಕ್ಯಾಪಿಟೇಷನ್ ಎಜುಕೇಷನ್ ಲಾಬಿಯಲ್ಲಿ ಕೆವಿಜಿ ಎಂದೇ ಕುಪ್ರಸಿದ್ಧರು. ಈಗ ಪಾರ್ಕಿನ್‌ಸನ್ ಕಾಯಿಲೆಯಿಂದ ನಿತ್ರಾಣರಾಗಿರುವ ಕೆವಿಜಿ ಒಂಥರಾ ಊಳಿಗಮಾನ್ಯದ ಪಳೆಯುಳಿಕೆಯಂತೆ ಕಾಣಿಸುತ್ತಾರೆ. ಕೆವಿಜಿಯ ಶಿಕ್ಷಣ ಬಿಸಿನೆಸ್, ಶೋಷಣೆ, ದಗಲ್ಬಾಜಿ ದಂಧೆ, ಗೌಡಿಕೆ-ಗತ್ತುಗಳನ್ನು ಒತ್ತಟ್ಟಿಗಿಟ್ಟು ನೋಡಿದರೆ ಆತನೆಂದೂ ಸುಳ್ಯದ ಪಾಲಿಗೆ ಪೀಡಕನಾಗಿದ್ದಿಲ್ಲ, ಉಳ್ಳವರಿಗೆ, ಜಾತಿ ಬಂಧುಗಳಿಗೆ ತನ್ನ ಶಿಕ್ಷಣ ಸಂಸ್ಥೆಗಳಲ್ಲಿ ಅವಕಾಶ ಹೆಚ್ಚು ಕೊಟ್ಟರೂ ತೀರಾ ಹಿಂದುಳಿದ ಗುಡ್ಡಗಾಡು ಪ್ರದೇಶವಾದ ಸುಳ್ಯದಲ್ಲಿ ಶೈಕ್ಷಣಿಕ 'ಕ್ರಾಂತಿ' ಮಾಡಿದ ಹೆಚ್ಚುಗಾರಿಕೆ ಕೆವಿಜಿಯದು.

ಸುಮಾರು 25 ಎಕರೆಯಷ್ಟು ಸಮೃದ್ಧ ಅಡಿಕೆ ತೋಟದ ಒಡೆಯನಾದ ಕೆವಿಜಿ ಜವಳಿ ವ್ಯಾಪಾರವೂ ಮಾಡಿಕೊಂಡಿದ್ದರು. ಶ್ರೀಮಂತರಾಗಿದ್ದ ಕೆವಿಜಿ ಒಮ್ಮೆ ಸುಳ್ಯ ಮುನ್ಸಿಪಾಲ್ಟಿ ಅಧ್ಯಕ್ಷರೂ ಆಗಿದ್ದರು. ಆಗಾತ ಕಾಂಗ್ರೆಸ್ಸಿಗರಾಗಿದ್ದರು. 1970ರ ದಶಕದಲ್ಲಿ ಸುಳ್ಯದಲ್ಲೊಂದು ಕಾಲೇಜು ಸ್ಥಾಪಿಸಿದ ಗೌಡರು ಅನಂತರ ತಿರುಗಿ ನೋಡಿದ್ದೇ ಇಲ್ಲ, ಒಂದರಹಿಂದೊಂದರಂತೆ ಹದಿನಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟುತ್ತಾ ಹೋದರು. ಸಕಲ ಪಕ್ಷದ ಅಧಿಕಾರಸ್ಥರು, ರಾಜ್ಯ ಒಕ್ಕಲಿಗ ಸಂಘದ ಘಟಾನುಘಟಿಗಳ ಸಖ್ಯ ಬೆಳೆಸಿಕೊಂಡರು. ಶಿಕ್ಷಣ ವ್ಯಾಪಾರವೂ ಜೋರಾಯ್ತು, ಎಷ್ಟು ಮಜಬೂತಾಗಿ ವಿದ್ಯೆ ಮಾರಾಟ ದಂಧೆ ನಡೆಯಿತೆಂದರೆ, ಎಲ್ಲ ಪಾರ್ಟಿ ಪುಢಾರಿಗಳಿಗೂ ಫಂಡ್ ಧಾರಾಳವಾಗಿ ಕೊಡುವಷ್ಟು! ಹೀಗಾಗಿ ಆದಿಚುಂಚನಗಿರಿ ಸ್ವಾಮೀಜಿಯಿಂದ ಹಿಡಿದು ದೇವೇಗೌಡ, ಎಸ್ಸೆಂ ಕೃಷ್ಣ ಡಿ.ವಿ.ಸದಾನಂದಗೌಡ, ಶೋಭಾ ಕರಂದ್ಲಾಜೆ ತನಕದ ಪವರ್‌ಫುಲ್ ಪಾಲಿಟಿಕಲ್ ಬ್ರೋಕರ್‌ಗಳೆಲ್ಲ ಕೆವಿಜಿಗೆ ಆತ್ಮೀಯರಾಗಿದ್ದರು!


ಆತ ರಾಮಕೃಷ್ಣ

ಬರೋಬ್ಬರಿ 16 ತರಹೇವಾರಿ ಶಿಕ್ಷಣ ಅಂಗಡಿ ತೆರೆದಿದ್ದ ಕೆವಿಜಿ ಈ 'ಸಂಕೀರ್ಣ'ಕ್ಕೆ 'ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್' ಎಂದು ಹೆಸರಿಟ್ಟಿದ್ದರು. ಹೇರಳ ಹಣ ತರುತ್ತಿದ್ದ ಈ


ಕುರುಂಜಿ ಶಿಕ್ಷಣ ದಂಧೆಯ ಅಡ್ಡೆ

ಮೆಡಿಕಲ್, ಡೆಂಟಲ್, ಆಯುರ್ವೇದಿಕ್, ಇಂಜಿನಿಯರಿಂಗ್, ಪಾಲಿಟೆಕ್ನಿಕ್, ಐಟಿಐ, ಲಾ, ನರ್ಸಿಂಗ್.... ಮುಂತಾದ ಶಿಕ್ಷಣ ವ್ಯಾಪಾರ ಕೇಂದ್ರಗಳೇ ಮುಂದೊಂದು ದಿನ ತನ್ನ ನೆಮ್ಮದಿ ಕೆಡಿಸಿ ಹಾಸಿಗೆ ಹಿಡಿಸಬಹುದೆಂದು ಕೆವಿಜಿ ಕನಸು-ಮನಸಲ್ಲೂ ಎಣಿಸಿರಲಿಕ್ಕಿಲ್ಲ, ಆದರೆ ಯಾವಾಗ ಕೆವಿಜಿಗೆ ವಯೋಸಹಜ ದೌರ್ಬಲ್ಯ-ಮರೆವು ಕಾಣಿಸಿಕೊಂಡಿತೋ ಆಗಾತನ ಕಿರಿಯ ಮಗ ರೇಣುಕಾ ಪ್ರಸಾದ್‌ಗೆ ಅಪ್ಪನ ಉತ್ತರಾಧಿಕಾರಿಯಾಗುವ ಹಠ ಶುರುವಾಯಿತು. ಐದಾರು ವರ್ಷದ ಹಿಂದೆ ಆತನನ್ನು ಅಕಾಡೆಮಿ ಆಫ್ ಕೆವಿಜಿಯ ಜನರಲ್ ಸೆಕ್ರೆಟರಿಯಾಗಿ ಮಾಡಲಾಯ್ತು.


ರಾಮಕೃಷ್ಣ


ರಾಮಕೃಷ್ಣ ಕೊಲೆಯಾದ ಸ್ಥಳ..

ಅಧಿಕಾರ-ಆಸ್ತಿಯ ಹಪಾಹಪಿ ಹುಂಬ ರೇಣುಕಾಗಿತ್ತೇ ವಿನಃ ಆ ದೊಡ್ಡ ಸಂಸ್ಥೆಯನ್ನು ಸಮರ್ಥವಾಗಿ ನಿಭಾಯಿಸುವ ಚಾಕಚಕ್ಯತೆ ಇರಲಿಲ್ಲ, ಇಡೀ ಕೆವಿಜಿ ಸಮೂಹ ಸಂಸ್ಥೆಗಳ ಅಂತರಂಗ-ಬಹಿರಂಗ ರಾಮಕೃಷ್ಣ ಎಂಬ ಬ್ರಾಹ್ಮಣನೊಬ್ಬನಿಗೆ ಗೊತ್ತಿತ್ತು, ಕುರುಂಜಿ ಗೌಡರ ಆತ್ಮೀಯನಾಗಿದ್ದ ಈ ವಟುವನ್ನು ಆತ ಸಂಸ್ಥೆಯ ಆಡಳಿತಾಧಿಕಾರಿಯಾಗಿ ನೇಮಿಸಿದ್ದರು. ಮೊದಲು ಪಾಲಿಟೆಕ್ನಿಕ್ ಕಾಲೇಜಿನ ಮಾಸ್ತರನಾಗಿ ಕೆವಿಜಿ ಗ್ಯಾಂಗ್ ಸೇರಿದ್ದ ರಾಮಕೃಷ್ಣ ಸುಳ್ಯದವರೇ ಆಗಿದ್ದರು. ಈತನ ತಾಯಿ-ತಂದೆ ಕೂಡಾ ಕುರುಂಜಿ ಗೌಡರಿಗೆ ಧಾರ್ಮಿಕ-ವೈದಿಕ ಮಾರ್ಗದರ್ಶಕರೂ ಆಗಿದ್ದರು. ಕ್ರಮೇಣ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲಿಕೆಗೆ ಏರಿದ್ದ ರಾಮಕೃಷ್ಣ ತಂತ್ರ-ಮಂತ್ರಗಳಿಗೆ ಮರುಳಾಗಿದ್ದ ಕೆವಿಜಿ ಆತನನ್ನು ತನ್ನ ನಂಬಿಗಸ್ಥ ಬಂಟನಾಗಿ ಮಾಡಿಕೊಂಡಿದ್ದರು.

ಕೆವಿಜಿಯ ಉಚ್ಛ್ರಾಯ ಸ್ಥಿತಿಯಲ್ಲೇ ಆತನ ಕಪ್ಪು-ಬಿಳುಪು ವ್ಯವಹಾರ ಸಂಪೂರ್ಣ ಅರಿತಿದ್ದ ರಾಮಕೃಷ್ಣ ಸಂಸ್ಥೆಯನ್ನು ನಿಭಾಯಿಸುವ (ಕು)ತಂತ್ರಗಾರಿಕೆಯನ್ನು ಕರಗತ ಮಾಡಿಕೊಂಡಿದ್ದರು. ಈಗ 85ರ ಅಂಚಿನಲ್ಲಿರುವ ಕುರುಂಜಿ ಗೌಡರು ಐದಾರು ವರ್ಷದ ಹಿಂದೆ ಸಂಸ್ಥೆಯ ಮೇಲಿನ ಹಿಡಿತ ಸಂಪೂರ್ಣ ಕಳೆದುಕೊಂಡು ಬಿಟ್ಟಿದ್ದರು. ಅಷ್ಟೊತ್ತಿಗೆ ರಾಮಕೃಷ್ಣರ ಆಡಳಿತ ಆರ್ಭಟ ಜೋರಾಗಿ ಹೋಗಿತ್ತು, ಜನರಲ್ ಸೆಕ್ರೆಟರಿ ರೇಣುಕಾ ಪ್ರಸಾದರನ್ನು ಓವರ್‌ಟೇಕ್ ಮಾಡಿ ಆತ ಅಕಾಡೆಮಿಯ ಪಾರುಪತ್ಯ ನಡೆಸತೊಡಗಿದ್ದ, ಹೊಸ ಸಂಸ್ಥೆಗಳ ಸ್ಥಾಪನೆ, ಮೆಡಿಕಲ್ ಕೌನ್ಸಿಲ್ ಜತೆ ವ್ಯವಹಾರ, ಖರೀದಿ, ನೇಮಕಾತಿಗಳೆಲ್ಲ ರಾಮಕೃಷ್ಣ ಆಡಿದ್ದೇ ಆಟವಾಯ್ತು, ರೇಣುಕಾ ಪ್ರಸಾದ್ ಒಂದು ಹಂತದಲ್ಲಿ ಅಸಹಾಯಕನಾಗಿ ರಾಮಕೃಷ್ಣರನ್ನೇ ಅವಲಂಬಿಸಬೇಕಾದ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡುಬಿಟ್ಟಿದ್ದ.

ಈ ಚಾಲಾಕಿ ಬ್ರಾಹ್ಮಣ ರಾಮಕೃಷ್ಣ ಸಂಸ್ಥೆಯ ಆಯಕಟ್ಟಿನ ಸ್ಥಾನದಲ್ಲಿದ್ದರೆ ತಾನು ಡಮ್ಮಿಯಾಗಿ ದುಮ್ಮಿ ಹೊಡೆಯುವುದೊಂದೇ ಗತಿ ಎಂದು ಭಾವಿಸಿದ ರೇಣುಕಾ ಸಮಯ ಸಿಕ್ಕಾಗಲೆಲ್ಲ ಆತನ ಹಣಿದು ಹೊರಹಾಕಲು ಹವಣಿಸತೊಡಗಿದ. ಆದರೆ ಅಪ್ಪ ಕುರುಂಜಿ ಗೌಡರ ವಿಶ್ವಾಸ ಗಳಿಸಿದ್ದ ರಾಮಕೃಷ್ಣನನ್ನು ಅಷ್ಟು ಸುಲಭವಾಗಿ ರೇಣುಕಾನಿಂದ ಓಡಿಸಲಾಗಲಿಲ್ಲ, ರೇಣುಕಾನಿಂದ ರಾಮಕೃಷ್ಣ -ರೇಣುಕಾರ ಮೇಲಾಟ-ಮಸಲತ್ತು ನಿತ್ಯ ನೂತನವಾಗಿ ನಡೆಯುತ್ತಲೇ ಇತ್ತು . ಕಂಡ ಕಂಡಲ್ಲಿ ರೇಣುಕಾ ಆಡಳಿತಾಧಿಕಾರಿ ರಾಮಕೃಷ್ಣರನ್ನು ಅವಮಾನಿಸುವುದು, ಮೂದಲಿಸುವುದೂ ಮಾಡುತ್ತಿದ್ದರು. ನಾಲ್ಕು ವರ್ಷಗಳ ಹಿಂದೆ ತಂದೆ ಕುರುಂಜಿ ಗೌಡರಿಗೆ ಕನ್‌ವಿನ್ಸ್ ಮಾಡಲು ಯಶಸ್ವಿಯಾದ ರೇಣುಕಾ ಅನಾಮತ್ತಾಗಿ ಸಂಸ್ಥೆಯಿಂದ ರಾಮಕೃಷ್ಣನ ಹೊರಗೆತ್ತಿ ಬಿಸಾಕಿಬಿಟ್ಟಿದ್ದ! ಆ ಹೊತ್ತಿಗೆ ರಾಮಕೃಷ್ಣರೂ ಕುರುಂಜಿ ಗೌಡರಿಗೆ ರೇಣುಕಾ ಸಂಸ್ಥೆ ನಡೆಸಲು ಬಾರದ ಹೇತ್ಲಾಂಡಿ ಎಂದು ಚಾಡಿ ಚುಚ್ಚಿ ಆಗಿತ್ತು.

ಹಿಂಸೆ ಹಿಕಮತ್ತು!

ಸಂಸ್ಥೆಯಿಂದ ಹೊರಹೋದರೂ ರಾಮಕೃಷ್ಣ ಕೆವಿಜಿ ಅಕಾಡೆಮಿ ಮತ್ತು ಕೆವಿಜಿ ಫ್ಯಾಮಿಲಿ ಎರಡರಲ್ಲೂ ಕಿತಾಪತಿ ಮಾಡುವುದು ನಿಲ್ಲಿಸಿರಲಿಲ್ಲ. ಕೆವಿಜಿ ಸಂಸ್ಥೆಯ ಪಾಲುದಾರಿಕೆಗಾಗಿ ಕರುಂಜಿ ಗೌಡರ ಮಕ್ಕಳಾದ ಚಿದಾನಂದ ಮತ್ತು ರೇಣುಕಾ ಪ್ರಸಾದ್ ಮಧ್ಯೆ ಎದ್ದಿದ್ದ ವ್ಯಾಜ್ಯವನ್ನು



ಕಿಡಿಗೇಡಿ ರಾಮಕೃಷ್ಣ ತನ್ನ ಸೇಡು ತೀರಿಸಿಕೊಳ್ಳಲು ಸಮರ್ಥವಾಗಿ ಬಳಸಿಕೊಂಡುಬಿಟ್ಟ! ಆಸ್ತಿ ಹಿಸೆ ಮಾಡುವಾಗ ಕುರುಂಜಿ ಗೌಡರೂ ಈ ಪುರಾತನ ಪರಿಚಾರಕನ ಮಾತಿಗೆ ಮಹತ್ವ ಕೊಟ್ಟರು. ಹದಿನಾರು ವಿದ್ಯಾ ಸಂಸ್ಥೆಗಳಲ್ಲಿ 5 ಚಿದಾನಂದನಿಗೂ 11 ರೇಣುಕಾನಿಗೂ ಕುರುಂಜಿ ಗೌಡರು ಹಂಚಿದರು.

ಇದರಲ್ಲಿ ಭರ್ಜರಿ ಹಣ ಹಡೆವ ಮೆಡಿಕಲ್, ನರ್ಸಿಂಗ್, ಲಾ ಕಾಲೇಜುಗಳು ಚಿದಾನಂದನ ಪಾಲಿಗೆ ಹೋಗುವಂತೆ ರಾಮಕೃಷ್ಣ ಚಿತಾವಣೆ ಯಶಸ್ವಿಯಾಗಿ ಮಾಡಿಮುಗಿಸಿದ್ದ. ಇದು ಮಹತ್ವಾಕಾಂಕ್ಷಿ ರೇಣುಕಾಪ್ರಸಾದ್‌ನ ಕೆರಳಿಸಿತ್ತು! ಅಷ್ಟೇ ಅಲ್ಲ, ಆಸ್ತಿ ಹಂಚಿಕೆ ನಂತರ ಚಿದಾನಂದ ತನ್ನ ಪಾಲಿಗೆ ಬಂದಿದ್ದ ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿಯಾಗಿ ರಾಮಕೃಷ್ಣರನ್ನೇ ನೇಮಿಸಿಕೊಂಡಿದ್ದು ರೇಣುಕಾನ ಹೊಟ್ಟೆಯುರಿಯನ್ನು ಮತ್ತಷ್ಟು ಹೆಚ್ಚಿಸಿತ್ತು! ಕುರುಂಜಿ ಗೌಡರ ಕೃಪಾಕಟಾಕ್ಷದಿಂದ ದಿಲ್ಲಿಯ ಮೆಡಿಕಲ್ ಕೌನ್ಸಿಲ್‌ನಿಂದ ರಾಜ್ಯದ ಅಧಿಕಾರಸ್ಥ ರಾಜಕಾರಣಿಗಳ ನಂಟು ಬೆಳೆಸಿಕೊಂಡಿದ್ದ ರಾಮಕೃಷ್ಣ ಮೆಡಿಕಲ್ ಕಾಲೇಜನ್ನು ರೇಣುಕಾನ ಕಣ್ಣು ಕುಕ್ಕುವಂತೆ ಅಭಿವೃದ್ಧಿಯೂ ಪಡಿಸಿದ್ದ.

ರಾಮಕೃಷ್ಣ ಕೆವಿಜಿ ಸಂಸ್ಥೆಯ ನೌಕರನಾದರೂ ಆತನ ನಡೆ-ನುಡಿ-ಆಟ-ಆರ್ಭಟಗಳೆಲ್ಲ ಕುರುಂಜಿ ಗೌಡರ ಸಂಸ್ಥಾನದ ಯುವರಾಜ ರೇಣುಕಾಪ್ರಸಾದ್‌ಗೆ ಸೆಡ್ಡು ಹೊಡೆವ-ಕಿಚಾಯಿಸುವ ಹಾಗೆ ಇತ್ತು! ರೇಣುಕಾಪ್ರಸಾದ್‌ನ ಕಾರಿನಷ್ಟೇ ಐಷಾರಾಮು ವಾಹನದಲ್ಲಿ ರಾಮಕೃಷ್ಣ ಓಡಾಡುತ್ತಿದ್ದ; ಸಂಸ್ಥೆಯ ಹಣಕಾಸಿನ ವ್ಯವಹಾರ ಲಾಗಾಯ್ತಿನಿಂದ ನಿಭಾಯಿಸುತ್ತಿದ್ದ ಈತ ಭರ್ಜರಿ ಬಂಗಲೆ-ತೋಟ ಮಾಡಿಕೊಂಡಿದ್ದ. ಇದೆಲ್ಲ ಸಹಜವಾಗೇ ರೇಣುಕಾ ಪ್ರಸಾದ ಕಣ್ಣು ಕೆಂಪಗೆ ಮಾಡಿತ್ತು! ಅಕಟಕಟಾ!! ನೌಕರ ಸಾಹುಕಾರನನ್ನೇ ಮೀರಿ ಬೆಳೆಯುವುದೆಂದರೇನು? ಸುಮ್ಮನೇ ಮಾತಾ? ರೇಣುಕಾಪ್ರಸಾದ್ ಹತಾಶೆ-ಸೇಡು-ಈರ್ಷ್ಯೆಯಿಂದ ಬುಸುಗುಡುತ್ತಲೇ ಇದ್ದ...

ದ್ವೇಷಾಸೂಯೆ

ಡಾ. ಚಿದಾನಂದರ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿಯಾಗಿ ರಾಮಕೃಷ್ಣ ಬರುತ್ತಿದ್ದಂತೆಯೇ ಆತನ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಿತ್ತು, ಪಾಲು-ಪಟ್ಟಿಯಾದ ಕೆಲವೇ ದಿನದಲ್ಲಿ ಚಿದಾನಂದರ ಆರೋಗ್ಯ ಕೈಕೊಟ್ಟಿತ್ತು. ಕ್ಯಾನ್ಸರ್‌ನಿಂದ ಬಾಧಿತರಾದ ಆತ ದಿಲ್ಲಿಯಲ್ಲೇ ಹಲವು ತಿಂಗಳು ಅಡ್ಮಿಟ್ ಆಗಿ ವಿದೇಶಿ ವೈದ್ಯರಿಂದ ಟ್ರೀಟ್‌ಮೆಂಟ್ ಪಡೆಯುವ ಹಾಗಾಯ್ತು, ಇತ್ತ ರಾಮಕೃಷ್ಣ ಚಿದಾನಂದರ ಐದು ಶಿಕ್ಷಣ ಸಂಸ್ಥೆಗಳಿಗೆ ಏಕಚಕ್ರಾಧಿಪತಿಯಾಗಿ ಹೋದ. ಚಿದಾನಂದರ ಮಡದಿ ಶೋಭಾ ಆಗಾಗ ಸಂಸ್ಥೆಗೆ ಬರುತ್ತಿದ್ದರಾದರೂ ಈ ಕುಟಿಲ ಕಾರಸ್ಥಾನಿ ರಾಮಕೃಷ್ಣರದೇ ಅಂತಿಮವಾಣಿಯಾಗಿತ್ತು.

ಕುರುಂಜಿ ಗೌಡರ ಕಂಟ್ರೋಲ್‌ನಲ್ಲಿ ಕೆವಿಜಿ ಶಿಕ್ಷಣ ಸಂಸ್ಥೆಗಳು ಇದ್ದಾಗಲೂ ಅಷ್ಟೇ. ಆಡಳಿತದತ್ತ ಎಂದೂ ಡಾ.ಚಿದಾನಂದ ತಲೆಹಾಕುತ್ತಿರಲಿಲ್ಲ. ರೋಗಿಗಳಿಗೆ ಸೇವೆ ಕೊಡುವುದರಲ್ಲೇ ಈ ಸಜ್ಜನ ವೈದ್ಯ ಸಾರ್ಥಕ್ಯ ಕಂಡಿದ್ದರು. ಮೃದು ಸ್ವಭಾವದ ಚಿದಾನಂದ ಮೆಡಿಕಲ್ ಆಫೀಸರ್

ಪಾತಕಿಗಳ ಪಾತ್ರ ಪರಿಚಯ

ಕುರುಂಜಿ ವೆಂಕರಮಣ ಗೌಡರ ಕೋಟ್ಯಂತರ ರೂಪಾಯಿ ವಿದ್ಯಾ ಸಾಮ್ರಾಜ್ಯದ ಮೇಲೆ ಹಿಡಿತ ಸಾಧಿಸುವ ಆತನ ದುರಾಸೆಯ ಮಕ್ಕಳ ಕ್ರೌರ್ಯದ ಕಾಳಗ ದೊಡ್ಡ ರಕ್ತ ಚರಿತ್ರೆಯನ್ನೇ ಬರೆದುಬಿಟ್ಟಿದೆ. ಅಣ್ಣ ಡಾ. ಚಿದಾನಂದನ ಆಪ್ತ ರಾಮಕೃಷ್ಣರ ಕೊಲೆ ಸಂಚಿನ ನಂಬರ್ ವನ್ ಆರೋಪಿ ತಮ್ಮ ರೇಣುಕಾ ಪ್ರಸಾದ್. ಅಣ್ಣ-ತಮ್ಮ ಇಬ್ಬರೂ ಸುಶಿಕ್ಷಿತರು. ಜೀವ ಉಳಿಸುವ ವೈದ್ಯರು. ಆದರೆ ರೇಣುಕಾ ಪ್ರಸಾದ್ ಡಾಕ್ಟರ್ ವೇಷದ ಡಾಕು! ಅಣ್ಣ ಸಜ್ಜನ, ಪಕ್ಕಾ ಸೇವಾ ಮನೋಭಾವದ ವೈದ್ಯ.


ಈ ಘಾತಕ ಪುರಾಣದ ಎರಡನೇ ಪಾತ್ರಧಾರಿ ಮನೋಜ್ ರೈ. ಈತ ರೇಣುಕಾರ ಬಲಗೈ ಬಂಟ. ಆತನ ಕಾಮಗಾರಿಗಳ ಉಸ್ತುವಾರಿ ನೋಡಿಕೊಳ್ಳುವ ಈತ ವಿದ್ಯಾಸಂಸ್ಥೆಯಲ್ಲಿ ಸಣ್ಣ ಸ್ಕೈಲಿನ ನೌಕರ. ಸುಳ್ಯದ ಅರಂತೋಡಿ ಬಾರೊಂದರಲ್ಲಿ ಸಪ್ಲೆಯರ್ ಆಗಿದ್ದ ಈತ ಕೆಂಪು ಕಲ್ಲಿನ ಗಣಿ ದಣಿ ಬೇರೆ; ಮತ್ತೊಬ್ಬ ಬಂಧಿತ ಆರೋಪಿ ನಾಗೇಶ್ ರೇಣುಕಾ ಪ್ರಸಾದರ ತೀರಾ ಆತ್ಮೀಯ ಸರ್ವೆಂಟ್. ರೇಣುಕಾರ ರಬ್ಬರ್ ತೋಟದ ರೈಟರ್ ಈತ. ಈ ನಾಗೇಶನೇ ಮಂಗಳೂರಿನ ಪ್ರೊಫೆಷನಲ್ ಕಿಲ್ಲರ್‌ಗಳ ಕರೆತಂದು ಬಾಸ್‌ಗೆ ಪರಿಚಯಿಸಿದಾತ! ರೇಣುಕಾನ ಕಾಲೇಜೊಂದರಲ್ಲಿ ಸಿಬ್ಬಂದಿಯಾದ ವಾಮನ ಕೊಲೆ ಸಂಚಿನಲ್ಲಿದ್ದಾನೆ. ಈತ ಸದ್ಯ ತಲೆಮರೆಸಿಕೊಂಡಿದ್ದಾನೆ.



ಮನೋಜ್, ನಾಗೇಶ್ ಹಾಗೂ ರೇಣುಕಾಪ್ರಸಾದ್

ರಾಮಕೃಷ್ಣರ ಕೊಂದೆಸೆದ ಮಂಗಳೂರಿನ ಭವಾನಿ ಶಂಕರ್‌ಗೆ ಕೊಲೆ ಮಾಡುವುದೇ ಕಸುಬು. ಡಿವೈಎಫ್‌ಐ ಲೀಡರ್ ಶ್ರೀನಿವಾಸ್ ಕೊಲೆ ಮಾಡಿರುವ ಈ ಶಂಕರ್ ಮೇಲೆ ಬರೋಬ್ಬರಿ ಅರ್ಧ ಡಜನ್ ಕೇಸುಗಳಿವೆ! ಶರಣ್ ಎಂಬ ಮತ್ತೊಬ್ಬ ಸುಪಾರಿ ಕಿಲ್ಲರ್ ಘಾತಕ ಫೀಲ್ಡಿಗೆ ಹೊಸ ಎಂಟ್ರಿ!

ಒಟ್ಟಿನಲ್ಲಿ ವಾಣಿಜ್ಯೀಕರಣ ಆಗಿರುವ ಶಿಕ್ಷಣ ಕ್ಷೇತ್ರ ಈಗ ಘಾತಕೀಕರಣಗೊಳ್ಳುತ್ತಿರುವುದಕ್ಕೆ ಸುಳ್ಯದ ಕುರುಂಜಿ ಗೌಡರ ಶಿಕ್ಷಣ ಸಾಮ್ರಾಜ್ಯದಲ್ಲಾಗಿರುವ ಬರ್ಬರ-ಭಯಾನಕ-ಹೇಯ ಹತ್ಯೆ ಸಂಕೇತದಂತಿದೆ!



ಕಲ್ಲಡ್ಕ ಭಟ್ರು ಎಂಟ್ರಿ

ಸುಳ್ಯದ ಎಜುಕೇಷನ್ ಡಾನ್ ಕುರುಂಜಿ ವೆಂಕಟರಮಣ ಗೌಡರ ವಿದ್ಯಾ ಮಸಾಹತಿನಲ್ಲಾದ ಕಗ್ಗೊಲೆಗೆ ಜಾತಿ ಆಯಾಮ ಬಂದುಬಿಟ್ಟಿದೆ. ಕೊಲೆಗೀಡಾದ ಕೆವಿಜಿ ಮೆಡಿಕಲ್ ಕಾಲೇಜಿನ ಆಡಳಿತಗಾರ ರಾಮಕೃಷ್ಣ ಪಕ್ಕಾ ಶಿವಳ್ಳಿ ಬ್ರಾಹ್ಮಣ. ಈತ ಮರ್ಡರ್ ಆಗುತ್ತಲೇ ಆರೆಸ್ಸೆಸ್ ಡಾನ್-ಯಡ್ಡಿ ಸರ್ಕಾರದ ಸೂತ್ರಧಾರ ಡಾ.ಕಲ್ಲಡ್ಕ ಪ್ರಭಾಕರ್ ಭಟ್ಟ ತನ್ನ ಅಸಲೀ ಬ್ರಾಹ್ಮಣ ಬುದ್ಧಿ ಪ್ರಯೋಗಿಸಿಬಿಟ್ಟಿದ್ದಾನೆ. ನೇರ ರಾಮಕೃಷ್ಣರ ಮನೆಗೆ ಹೋಗಿದ್ದಾನೆ. ಹೊರಬಂದವನೇ ಸಂಘಪರಿವಾರದ ಒಂದಿಷ್ಟು ಹವ್ಯಕರ ರಹಸ್ಯ ಸಭೆ ನಡೆಸಿದ್ದಾನೆ. ಈ ವಿಪ್ರರೆಲ್ಲ ಒಂದು ವಾರದಲ್ಲಿ ಕೊಲೆಗಡುಕರ ಹಿಡಿಯದಿದ್ದರೆ 'ಭಾನ್ಗಡಿ' ಮಾಡುವ ಬೆದರಿಕೆ ಹಾಕಿದ್ದಾರೆ.

ಚಡ್ಡಿ ಭಟ್ಟರು ಪೊಲೀಸರ ಮೇಲೆ-ಸರ್ಕಾರದ ಮೇಲೆ ಒತ್ತಡ ಹಾಕಿದ್ದಾರೆ. ಇದರ ಫಲವಾಗಿ ಬ್ರಾಹ್ಮಣರು ಕೊಟ್ಟ ಗಡುವಿನೊಳಗೇ ಪಾತಕಿಗಳ ಬಂಧನವಾಗಿದೆ. ಪ್ರಮುಖ ಆರೋಪಿ ರೇಣುಕಾಪ್ರಸಾದ್‌ನ ಧನಬಲದಿಂದ ಆತನ ಬಂಧನವಾಗಲಿಕ್ಕಿಲ್ಲವೆಂದೇ ಸುಳ್ಯ ಸುತ್ತಲಿನ ಜನ ಭಾವಿಸಿದ್ದರು. ಆದರೆ ಭಟ್ಟರ ಚಡ್ಡಿ ಚಮತ್ಕಾರದ ಮುಂದೆ ರೇಣುಕಾಪ್ರಸಾದನ ದುಡ್ಡಿನ ಆಟ ನಡೆಯಲಿಲ್ಲ. ಈಗ ಒಕ್ಕಲಿಗ ಲಾಬಿ ಕ್ರಿಯಾಶೀಲವಾಗಿದೆ. ಕೊಲೆ ಮಾಡಿಸಿರುವ ರೇಣುಕಾ ಒಕ್ಕಲಿಗರ ಕುಲತಿಲಕ. ಈ ಒಕ್ಕಲಿಗ ಲಾಬಿ ಆರೆಸ್ಸೆಸ್ ಹಿಂದೆ ಇರುವ ಚಡ್ಡಿ ಚತುರರನ್ನೇ ಬುಕ್ ಮಾಡಲು ಹವಣಿಸುತ್ತಿದೆ. ದುಡ್ಡು ಸಿಕ್ಕರೆ ಕಲ್ಲಡ್ಕ ಭಟ್ರು ಸಂಘಪರಿವಾರ ಏನು ಮಾಡಲಿಕ್ಕೂ ರೆಡಿ!

ಈ 'ಚರಿತ್ರೆ' ನೋಡಿದರೆ ಕೇಸ್ ಠುಸ್ ಆಗುವ ಸಾಧ್ಯತೆಯೇ ಹೆಚ್ಚು ಎಂದು ಯಾವ ಗಾಂಪನಿಗಾದರೂ ಅನ್ನಿಸುತ್ತದೆ!

ಎಂದು ನೇಮಕವಾಗಿದ್ದರು. ಒಳ್ಳೆಯ ವೈದ್ಯರೆಂದೇ ಸುಳ್ಯದ ಬಡಜನರ ನಡುವೆ ಖ್ಯಾತರಾಗಿದ್ದರು. ಇದಕ್ಕೆ ತದ್ವಿರುದ್ಧ ವ್ಯಕ್ತಿತ್ವ ರೇಣುಕಾರದು. ಆತನೂ ಕಲಿಕೆಯಿಂದ ಡಾಕ್ಟರನಾದರೂ ಎಂದೂ ವೈದ್ಯಕೀಯತೆ ಮಾಡಿದಾತನಲ್ಲ; ಆಡಳಿತದಲ್ಲೇ ಆತನಿಗೆ ಆಸಕ್ತಿ ಹೆಚ್ಚಿತ್ತು. ಹಾಗಾಗಿಯೇ ಒರಟು ಸ್ವಭಾವ-ಉದ್ವೇಗ-ವಿಕ್ಷಿಪ್ತ ಸ್ವಭಾವದ ರೇಣುಕಾನನ್ನು ಕುರುಂಜಿ ಗೌಡರು ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್‌ಗೆ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಿದ್ದರು.

ಚಿದಾನಂದ ತನ್ನ ಪಾಲಿನ ಶಿಕ್ಷಣ ಸಂಸ್ಥೆಗಳ ಉಸ್ತುವಾರಿ ರಾಮಕೃಷ್ಣರಿಗೆ ವಹಿಸಿದ್ದರು. ಕುರುಂಜಿ ಗೌಡರ ಬ್ರೈನ್ ಆಗಿದ್ದ ರಾಮಕೃಷ್ಣ ಚಿದಾನಂದರ ಮಾಸ್ಟರ್ ಮೈಂಡ್ ಆಗಿಬಿಟ್ಟಿದ್ದರು. ಚಿದಾನಂದರ ಪರವಾಗಿ ಈತ ಕುರುಂಜಿ ಗೌಡರ ಆರ್ಥಿಕ ವಹಿವಾಟಿನಲ್ಲೂ 'ಆಟ' ಆಡುತ್ತಿದ್ದರು. ಸಂಸ್ಥೆಗಳು ಪಾಲಾಗಿದ್ದರೂ ಒಂದಿಷ್ಟು ಕೊಡು-ಕೊಳ್ಳುವ ಪ್ರಕ್ರಿಯೆ ಹಾಗೇ ಇತ್ತು. ಚಿದಾನಂದ ತನ್ನ ಮೆಡಿಕಲ್



ಕೇಸನ್ನು ಬೇಧಿಸಿದ ಪೊಲೀಸ್ ತಂಡ...

ಕಾಲೇಜು ಕಟ್ಟಡವನ್ನು ರೇಣುಕಾಗೇ ಆತನ ಇಂಜಿನಿಯರಿಂಗ್ ಕಾಲೇಜಿಗೆಂದು ಬಿಟ್ಟುಕೊಡಲು ಒಪ್ಪಂದವಾಗಿತ್ತು. ಆದರೆ ಆ ನಂತರ 20 ಕೋಟಿ ಕೊಟ್ಟು ಚಿದಾನಂದ ಕಟ್ಟಡ ಖರೀದಿಗೆ ಮುಂದಾಗಿದ್ದರು. ಇದರಲ್ಲಿ 4 ಕೋಟಿ ಬಾಕಿಯಿತ್ತು. ಅತ್ತ ಸುಳ್ಯದಿಂದ ಒಂದು ಕಿ.ಮೀ. ದೂರದಲ್ಲಿ ಪರಿವಾರಕನ ಎಂಬಲ್ಲಿ ರೇಣುಕಾ ಹೊಸ ಇಂಜಿನಿಯರಿಂಗ್ ಕಾಲೇಜು ಕಟ್ಟಡ ಕಟ್ಟಿಸುತ್ತಿದ್ದಾರೆ. ಈ ವ್ಯವಹಾರದಲ್ಲಿ ರಾಮಕೃಷ್ಣ ಕರಾಮತ್ತು ನಡೆಸಿದ್ದಾರೆಂಬ ಸಿಟ್ಟು ರೇಣುಕಾರಿಗಿತ್ತು. ಅಲ್ಲದೆ ಕೆಲ ದಿನಗಳ ಹಿಂದೆ ನಡೆದ ಕೆವಿಜಿ ಸಮೂಹ ಸಂಸ್ಥೆ ಪದಾಧಿಕಾರಿಗಳ ಸಭೆಯಲ್ಲಿ ರಾಮಕೃಷ್ಣ ಮತ್ತು ರೇಣುಕಾರಿಗೆ ಜಗಳವೂ ಆಗಿತ್ತು. ಆಗ ಕ್ಷುದ್ರರಾದ ರೇಣುಕಾ "ನೀನು ನಮ್ಮ ಕುಟುಂಬ ಒಡೆದು ಹಾಕಿದ್ದೀಯಾ... ನಿನ್ನ ಆಟ ಇನ್ನೂ ಹೆಚ್ಚು ದಿನ ನಡೆಯುವುದಿಲ್ಲ... ನಿನ್ನ ನೋಡಿಕೊಳ್ತೇನೆ..." ಎಂದಬ್ಬರಿಸಿದ್ದರು.


ಸುಪಾರಿ ಕೊಟ್ಟ ರೇಣುಕಾ

ಅಪ್ಪ ಮಾಡಿಟ್ಟಿದ್ದ ಕೋಟ್ಯಂತರ ರೂ. ಆಸ್ತಿಯಿಂದ ರೇಣುಕಾ ಪ್ರಸಾದ್ ಹುಚ್ಚನಂತಾಗಿ ಹೋಗಿದ್ದರು. ಆಸ್ತಿ ಭಾಗ ಮಾಡುವಾಗ ತನಗೆ ಅನ್ಯಾಯವಾಗಲು ಸಂಸ್ಥೆಯ ಪ್ರಾಕರ ರಾಮಕೃಷ್ಣನ ಕರಾಮತ್ತೇ ಕಾರಣವೆಂದು ಸಿಡುಕುಹೋಗಿದ್ದರು. ಆತನ ಗಾಯಕ್ಕೆ ಆಗಾಗ ಉಪ್ಪು ಸುರಿವ ಕಿತಾಪತಿ ರಾಮಕೃಷ್ಣ ಮಾಡುತ್ತಲೇ ಇದ್ದ. ಇದರಿಂದ ಪಿಶಾಚನಾಗಿ ಹೋಗಿದ್ದ ರೇಣುಕಾ ರಾಮಕೃಷ್ಣನ ತಲೆ ತೆಗೆವ ಪಾತಕ ನಿರ್ಧಾರಕ್ಕೆ ಬಂದುಬಿಟ್ಟಿದ್ದ. ತನ್ನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಖತರ್‌ನಾಕ್‌ಗಳ ಒಂದು ಗ್ಯಾಂಗ್ ಕಟ್ಟಿಕೊಂಡಿದ್ದ ರೇಣುಕಾ ಕ್ರಿಮಿನಲ್ ಕಾರ್ಯಾಚರಣೆಗೆ ಇಳಿದುಬಿಟ್ಟ. ರೇಣುಕಾನ ಕಾಲೇಜಿನಲ್ಲಿ ಚಾಕರಿ ಮಾಡುವ ಮನೋಜ್ ರೈ, ನಾಗೇಶ್ ಮತ್ತು ವಾಮನ ಸೇರಿ ಬಾಸ್ ಸೂಚಿಸಿದ್ದಂತೆ ರಾಮಕೃಷ್ಣನ ಕೊಲೆಗೆ ಸ್ಕೆಚ್ ಹಾಕಿದರು.

ತನ್ನ ತೋಟದ ಮನೆಯ ಕೆಲಸಗಾರ ನಾಗೇಶ್ ಮೂಲಕ ಮಂಗಳೂರಿನ ಕೊಲೆಗಡುಕ ವೃತ್ತಿಯ ಭವಾನಿ ಶಂಕರ್ ಮತ್ತು ಶರಣ್ ಎಂಬವರ ಸಂಪರ್ಕ ಸಾಧಿಸಿದ ರೇಣುಕಾ. ರಾಮಕೃಷ್ಣ ಪ್ರತಿದಿನ ಸಂಜೆ-ರಾತ್ರಿ ವಾಕ್ ಹೋಗುವಾಗ ಫಿನಿಶ್ ಮಾಡಿದರೆ 15 ಲಕ್ಷ ಕೊಡುವುದಾಗಿ ಹೇಳಿದ. ಈ ಸುಪಾರಿ ಪಡೆದ ಭವಾನಿ ಶಂಕರ್ ಮತ್ತು ಶರಣ್ ಏಪ್ರಿಲ್ 20ರಂದು ಸುಳ್ಯಕ್ಕೆ ಬಂದರು. ರಾಮಕೃಷ್ಣ ಯಾವ ದಾರಿಗುಂಟ ವಾಕ್ ಮಾಡುತ್ತಾನೆಂಬುದನ್ನು ಈ ಹಂತಕರು ಕರಾರುವಾಕ್ಕಾಗಿ ಗಮನಿಸಿದರು.

ಆದರೆ ಆ ವೇಳೆ ರಾಮಕೃಷ್ಣ ದಿಲ್ಲಿಗೆ ಮೆಡಿಕಲ್ ಕಾಲೇಜಿನ ಕೆಲಸಕ್ಕೆಂದು ಹೋಗಿದ್ದರಿಂದ ಬೇಟೆ ಸಾಧ್ಯವಾಗಿರಲಿಲ್ಲ. ಮೂರ್‍ನಾಲ್ಕು ದಿನ ಸುಪಾರಿ ಕಿಲ್ಲರ್ಸ್ ಸುಳ್ಯದಲ್ಲೇ ಬೀಡುಬಿಟ್ಟಿದ್ದರು. ಆದರೆ ರಾಮಕೃಷ್ಣ ಸದ್ಯಕ್ಕೆ ಬರಲಾರನೆಂದು ಮಂಗಳೂರಿಗೆ ವಾಪಸಾದರು. ರಾಮಕೃಷ್ಣ ದಿಲ್ಲಿಯಿಂದ ಬಂದಾಗ ಮನೋಜ್ ರೈ ಕೊಲೆಗಡುಕರಿಗೆ ತಿಳಿಸಿದ. ತಕ್ಷಣ ಸುಳ್ಯಕ್ಕೆ ಆಗಮಿಸಿದ ಸುಪಾರಿ ಪಾಪಿಗಳು 28-4-11ರ ಸಂಜೆ 7-30ರ ನಸುಗತ್ತಲಲ್ಲಿ ರಾಮಕೃಷ್ಣ ತನ್ನ ಮಗ ವಲ್ಲೀಶನೊಂದಿಗೆ ವಾಕ್ ಹೋಗಿದ್ದಾಗ ಅಂಬೆತ್ತಡ್ಕ ಎಂಬಲ್ಲಿ ಮಚ್ಚಿನಿಂದ ಕೊಚ್ಚಿಹಾಕಿದರು. ಜೀಪು-ಬೈಕಲ್ಲಿ ಬಂದಿದ್ದ ಹಂತಕರು ಮರ್ಡರ್ ಮುಗಿಸಿ ಕತ್ತಲಲ್ಲಿ ಕರಗಿಹೋದರು.

ರಾಮಕೃಷ್ಣರ ಹೆಣ ನಡುರಸ್ತೆಯಲ್ಲಿ ಬೀಳುತ್ತಿದ್ದಂತೆ ಇಡೀ ಸುಳ್ಯ ಇದು ಕುರುಂಜಿ ಗೌಡರ ಮಕ್ಕಳ ಆಸ್ತಿ ಆಟಕ್ಕಾದ ಬಲಿ ಎಂದು ಅಭಿಪ್ರಾಯಪಟ್ಟಿತ್ತು. ರೇಣುಕಾ ಪ್ರಸಾದನೇ ಕೊಲೆಯ ಸೂತ್ರಧಾರನೆಂಬುದು ಎಲ್ಲರಿಗೂ ಖಾತ್ರಿಯಾಗಿತ್ತು. ಆದರೆ ಸುಳ್ಯದ ಮಟ್ಟಿಗೆ ದೊಡ್ಡ ಮನುಷ್ಯನಾದ, ವಿದ್ಯಾಸಂಸ್ಥೆಗಳನ್ನು ನಡೆಸುವ ಕೋಟ್ಯಾಧಿಪತಿಯಾದ ರೇಣುಕಾನ ಬಂಧನವಾದೀತಾ ಎಂಬ ಸಂಶಯ ಕಾಡುತ್ತಿತ್ತು. ಆದರೆ ಕೊಲೆ ನಡೆದ ಹತ್ತೇ ದಿನದಲ್ಲಿ ಮಂಗಳೂರಿನ ಪೊಲೀಸರು ಕೊಲೆ ಮಾಡಿದವರನ್ನಷ್ಟೇ




ಕೊಲೆಗಡುಕರಿಂದ ವಶಪಡಿಸಿಕೊಂಡ ಸುಪಾರಿ ಹಣ ಮತ್ತು ಮೊಬೈಲ್..

ಅಲ್ಲ ಸುಪಾರಿ ಕೊಟ್ಟಿದ್ದ ಸುಬಗ ರೇಣುಕಾ ಪ್ರಸಾದರನ್ನೂ ಬಂಧಿಸಿದ್ದಾರೆ!

ಶಿಕ್ಷಣವನ್ನು ಬಂಡವಾಳ ಮಾಡಿಕೊಂಡು ಅಡ್ಡದಾರಿಯಿಂದ ಮಾಡಿದ ದುಡ್ಡಿನ ಮಹಿಮೆಯಿದು! ಸುಳ್ಯದ ಶಿಕ್ಷಣ ವ್ಯಾಪಾರಿ ಕರುಂಜಿ ಗೌಡರ ವಸಾಹತಿನಲ್ಲಿ ಆಗಿರುವ ಈ ರಕ್ತದೋಕುಳಿ ಕ್ಯಾಪಿಟೇಷನ್ ಲಾಬಿಯನ್ನು ಬೆಚ್ಚಿ ಬೀಳಿಸಿದೆ. ಇಡೀ ದಕ್ಷಿಣ ಕನ್ನಡ ಪ್ರತಿಷ್ಠಿತರ ಕ್ರೌರ್ಯ-ರಕ್ತದಾಹ-ಧನದಾಹಕ್ಕೆ ಕಂಗಾಲಾಗಿದೆ. ಪಾಪದ ಹಣದ ಮದ ರೇಣುಕಾ ಪ್ರಸಾದ್‌ನ ಜೈಲಿಗಟ್ಟಿದೆ ನಿಜ. ಆದರೆ ಅದೇ ಹಣ ಆತನನ್ನು ಬಚಾವಾಗಿಸುವ ಸಾಧ್ಯತೆಯೂ ಇದೆ. ಕೇಸ್ ಬ್ರಾಹ್ಮಣ ಲಾಬಿ-ಒಕ್ಕಲಿಗ ಲಾಬಿಯ ನ್ಯಾಯಾನುಸಾರ ಸಂವಿಧಾನದಿಂದ ಹಳ್ಳ ಹಿಡಿದರೂ ಕುರುಂಜಿ ಗೌಡರ ವಿದ್ಯಾ ಸಂಸ್ಥಾನಕ್ಕೆ ಅಂಟಿಕೊಂಡಿರುವ ನೆತ್ತರಿನ ಕಡು ಕೆಂಪು ಬಣ್ಣ ಮಾತ್ರ ಮಾಸಲಾರದು!

• ನಹುಶ

ಬಳ್ಳಾರಿ ರೆಡ್ಡಿ ಚೇಲಾ ಮುತ್ತಯ್ಯ ಅಂತೂ ತೊಲಗಿದ!



ಸಕಲ ನಿಯತ್ತುಗಳನ್ನೂ ರೆಡ್ಡಿ ಪಡೆಯ ಪಾದಕ್ಕೆ ಬಸಿದು ಕೂತಿದ್ದ ಮುತ್ತಯ್ಯ ಅಂತೂ ತೊಲಗಿದ್ದಾನೆ. ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಬಳ್ಳಾರಿಗೆ ವಕ್ಕರಿಸಿದ್ದ ಈತ ಅಧಿಕಾರಾವಧಿಯನ್ನೆಲ್ಲಾ ರೆಡ್ಡಿಯ ಗಣಿ ಅಕ್ರಮಗಳ ರಕ್ಷಣೆಗೇ ಮುಡಿಪಾಗಿಟ್ಟಿದ್ದ. ಈ ತಗಡು ನಿಷ್ಠೆಯ ಫಲವೆಂಬಂತೆ ಇತ್ತೀಚೆಗೆ ಜಿಪಂ ಸಿಇಓ ಆಗಿ ಅವತರಿಸಿದ್ದ ಮುತ್ತಯ್ಯ ಇದೀಗ ಅಲ್ಲಿಂದಲೂ ಎಗರಿ ಬಿದ್ದಿದ್ದಾನೆ. ಬಳ್ಳಾರಿಯ ಪಾಲಿಗಿದು ರಣಬಿಸಿಲ ನಡುವೆ ಬಿರುಮಳೆ ಹೊಡೆದಂಥ ಆಹ್ಲಾದಕರ ಸುದ್ದಿ!

ಇವತ್ತು ರೆಡ್ಡಿ ಪಡೆ ಬಳ್ಳಾರಿಯ ನೆಲವನ್ನು ಮನಬಂದಂತೆ ಬಗೆದು ಇಕ್ಕಟ್ಟಿಗೆ ಸಿಲುಕಿದೆಯಲ್ಲಾ? ಸಾವಿರಾರು ಕೋಟಿ ತೂಗುವ ಈ ದಂಧೆಗೆ ಸಂಪೂರ್ಣವಾಗಿ ಸಹಕರಿಸಿದವನು ಆಗ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಎಸ್. ಮುತ್ತಯ್ಯ. ತಾನೊಬ್ಬ ಸರ್ಕಾರಿ ಅಧಿಕಾರಿ, ಜನರ ಕೆಲಸ ಮಾಡಬೇಕು ಮುಂತಾದ ಯಾವುದೇ ಖಬರಿಲ್ಲದ ಈತ ಅತ್ಯಂತ ಹೀನಾಯವಾಗಿ ಕಳ್ಳರ ಸೇವೆಯಲ್ಲಿ ಬ್ಯುಸಿಯಾಗಿದ್ದ. ಇದೆಲ್ಲದರ ಫಲವೆಂಬಂತೆ ಗಣಿ ಅಕ್ರಮದ ಬಗ್ಗೆ ತನಿಖೆ ನಡೆಸಿದ ಸಿಇಸಿ ತನ್ನ ಅಂತಿಮ ವರದಿಯಲ್ಲಿ ಮುತ್ತಯ್ಯನ ಹೆಸರು ನಮೂದಿಸಿದೆ.

ವಾಲ್ಮೀಕಿ ಜನಾಂಗದ ಮುತ್ತಯ್ಯ ಸಿಗಬಹುದಾದ ಎಲ್ಲಾ ಮೀಸಲಾತಿ ಸೌಲಭ್ಯ ಬಳಸಿಕೊಂಡೇ ಬಳ್ಳಾರಿ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ. ತಳಮಟ್ಟದ ಸಮುದಾಯದಿಂದ ಬಂದು ತಾನೇ ಕಂಡುಂಡ ಕಷ್ಟಗಳನ್ನು ಮರೆತ ಆತ ಪಕ್ಕಾ ಸುಲಭದ ಹಾದಿ ಹಿಡಿದ. ಅದು ಅಧಿಕಾರಶಾಹಿಯ ಮರ್ಜಿಗೆ ಬಿದ್ದು ಕೆಲಸ ಮಾಡುವ ನಾಜೂಕುತನ. ತಾನು ವಾಲ್ಮೀಕಿ ಜನಾಂಗದವನೆಂಬ ಕಾರಣಕ್ಕೇ ಶ್ರೀರಾಮುಲುನಿಗೆ ಹತ್ತಿರಾದ ಮುತ್ತಯ್ಯ ರೆಡ್ಡಿ ಸಹೋದರರ ಸಂಪರ್ಕಕ್ಕೂ ಬಂದ. ಇಂಥ ಲಿಂಕುಗಳ ಮೂಲಕ 2003 ಮೇ 22 ರಂದು ಬಳ್ಳಾರಿಗೆ ಶನಿಯಂತೆ ವಕ್ಕರಿಸಿ 2005 ರ ಜೂನ್ ತಿಂಗಳವರೆಗೂ ಮುಂದುವರೆದ. ಆ ಬಳಿಕ ಮೂರು ವರ್ಷ ಕೊಪ್ಪಳದಲ್ಲಿ ಕೆಲಸ ಮಾಡಿ 2008 ರಲ್ಲಿ ಮತ್ತೆ ಬಳ್ಳಾರಿಗೆ ಅಟಕಾಯಿಸಿಕೊಂಡ. ಅದಾಗಿ ಒಂದು ವರ್ಷದ ಬಳಿಕ ಚಾಮರಾಜನಗರಕ್ಕೆ ಎತ್ತಂಗಡಿಯಾಗಿದ್ದ ಈತನನ್ನು ರೆಡ್ಡಿ ಪಡೆ ಒಂದೇ ತಿಂಗಳಲ್ಲಿ ವಾಪಾಸು ಕರೆದುಕೊಂಡಿತ್ತು.

ಮುತ್ತಯ್ಯ ಬಳ್ಳಾರಿಯಲ್ಲಿ ಅರಣ್ಯಾಸಂರಕ್ಷಣಾಧಿಕಾರಿಯಾಗಿದ್ದಾಗ ನಡೆಸಿದ ಅವ್ಯವಹಾರಗಳನ್ನೊಮ್ಮೆ ಮೆಲುಕು ಹಾಕಿದರೆ ಆತ ಗಣಿಗಳ್ಳತನದಲ್ಲಿ ರೆಡ್ಡಿ ಪಡೆಯಷ್ಟೇ ತೂಗುವ ಆರೋಪಿಯೆಂಬುದು ಸ್ಪಷ್ಟವಾಗುತ್ತದೆ. ಈತ ಅಧಿಕಾರ ವಹಿಸಿಕೊಂಡ ಅವಧಿ ಬಳ್ಳಾರಿಯ ನೆಲದಲ್ಲಿ ಗಣಿ ಅಕ್ರಮಗಳ ಪಾಲಿಗೆ ಸುಗ್ಗಿ ಕಾಲ. ರೆಡ್ಡಿ ನಡೆಸಿರುವ ಗಣಿಗಳ್ಳತನದ ವಿರಾಟ್ ರೂಪ ಗಮನಿಸಿದವರಿಗೆಲ್ಲಾ 'ಆತ ಅಷ್ಟೊಂದು ಲೂಟಿ ಹೊಡೆಯೋದು ಹೇಗೆ ಸಾಧ್ಯವಾಯಿತು' ಅಂತೊಂದು ಪ್ರಶ್ನೆ ಕಾಡುವುದು ಸಹಜ. ಅದಕ್ಕೆ ಮುತ್ತಯ್ಯನ ಚೇಲಾಗಿರಿಯೇ ಉತ್ತರವಾಗಿ ಎದುರುಗೊಳ್ಳುತ್ತದೆ.

ರೆಡ್ಡಿಯ ಪದತಲದಲ್ಲೇ ಕಾಯಂ ಠಾವು ಕಂಡುಕೊಂಡಿದ್ದ ಮುತ್ತಯ್ಯ ಎಲ್ಲವನ್ನೂ ಆತನಿಗೆ ಅನುಕೂಲವಾಗುವಂತೆಯೇ ನಡೆಸಹತ್ತಿದ. ರೆಡ್ಡಿ ಗ್ಯಾಂಗು ಅರಣ್ಯ ಜಾಗದಲ್ಲಿ ನೆಲ ಬಗೆದರೂ, ಗಡಿಕಲ್ಲನ್ನೇ ಮೀರಿ ಮುಂದುವರೆದರೂ, ಆಸುಪಾಸಿನ ಗಣಿ ಮಾಲೀಕರಿಂದ ಹಫ್ತಾ ವಸೂಲಿ ಮಾಡಿದರೂ ಈತ ಕಂಡೂಕಾಣದಂತೆ ತೆಪ್ಪಗಿದ್ದ. ಗಣಿ ಕಂಪೆನಿಗಳ ಮಾಲೀಕರನೇಕರನ್ನು ಅದಿರು ಸಾಗಿಸುವ ಪರವಾನಗಿ ವಿಚಾರದಲ್ಲಿ ಯಾವ ರೀತಿ ಆಟಾಡಿಸುತ್ತಿದ್ದನೆಂದರೆ, ಹಲವರಿಗೆ ಈ ಸಹವಾಸವೇ ಬೇಡವೆನ್ನಿಸಿದ್ದು ಸುಳ್ಳಲ್ಲ. ದೊಡ್ಡದೊಡ್ಡ ಡೀಲುಗಳು ಬಂದರೆ 'ನೀವು ರೆಡ್ಡಿಯವರ ಹತ್ತಿರ ಹೋಗಿ ಪರ್ಸೆಂಟೇಜ್ ಮಾತಾಡ್ಕೊಳ್ಳಿ. ಅವರೇ ನಮಗೆ ಫೋನ್ ಮಾಡಿ ಪರ್ಮಿಟ್ ಕೊಡೋ ವಿಚಾರ ತಿಳಿಸ್ತಾರೆ' ಅಂತ ರೆಡ್ಡಿ ಬಳಿ ಸಾಗ ಹಾಕುತ್ತಿದ್ದ. ರೆಡ್ಡಿಯ ಆಣತಿ ಮೀರಿ ಯಾವೊಂದು ಕಂಪೆನಿಗೂ ಅದಿರು ಸಾಗಾಟ ಪರವಾನಗಿ ನೀಡುತ್ತಿರಲಿಲ್ಲ. ಚಾಲಾಕಿ ರೆಡ್ಡಿ ತನ್ನ ಅಕ್ರಮಗಳ ಬಗ್ಗೆ ಸೊಲ್ಲೆತ್ತಕೂಡದೆಂಬ ತಣ್ಣಗಿನ ಬೆದರಿಕೆಯ ಮೂಲಕವೇ ಪರವಾನಗಿ ಅಸ್ತು ಅನ್ನುತ್ತಿದ್ದ.

ಇನ್ನು ಕೆಲ ಸಂದರ್ಭಗಳಲ್ಲಿ ಮುತ್ತಯ್ಯನೇ ಮಧ್ಯಸ್ಥಿಕೆ ವಹಿಸಿ ಹಣ ಹೊಡೆದುಕೊಂಡದ್ದೂ ಇದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಈತ ಅರಣ್ಯ ಸಂರಕ್ಷಣೆಯ ಹೆಸರಲ್ಲಿ ರೆಡ್ಡಿ ಪಡೆಗೆ ಪಿಂಪ್ ಆಗಿ ಕೆಲಸ ಮಾಡಿ ಕೃತಾರ್ಥನಾಗಿದ್ದ.

ಈತನ ಅವಧಿಯಲ್ಲಿ ಗಣಿ ಅಕ್ರಮಗಳು ಗರಿಬಿಚ್ಚಿದ ಜೊತೆಜೊತೆಗೇ ಒಂದಿಡೀ ವ್ಯವಸ್ಥೆ ಎಕ್ಕುಟ್ಟಿ ಹೋಗಿತ್ತು. ಅರಣ್ಯ ಇಲಾಖೆಯ ಹಲವಾರು ನಿಷ್ಠಾವಂತ ಅಧಿಕಾರಿಗಳು ಮಾತಾಡಲಾರದೆ ಕಂಗಾಲಾಗಿದ್ದರು. ಪ್ರತಿಯೊಂದನ್ನು ರೆಡ್ಡಿ ಬಣದ ಹಿತಾಸಕ್ತಿಗೆ ಅನುಗುಣವಾಗಿಯೇ ಮಾಡುತ್ತಾ ಅವರ ಎಂಜಲಲ್ಲೇ ಉಳ್ಳಾಡುತ್ತಿದ್ದ ಮುತ್ತಯ್ಯನ ಬಗ್ಗೆ ಅಸಹ್ಯವೂ ಉಂಟಾಗಿತ್ತು. ಈತ ಇಲಾಖೆಯನ್ನು ದಿಕ್ಕೆಡಿಸುತ್ತಿದ್ದರೂ, ಸಚಿವನ ಚೇಲಾನಂತೆ ವರ್ತಿಸುತ್ತಿದ್ದರೂ ಯಾವೊಬ್ಬ ಅಧಿಕಾರಿಯೂ ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ಆದರೆ ಸಿಇಸಿ ವರದಿಯಲ್ಲಿ ಈತನ ಹೆಸರು ಬರುತ್ತಲೇ ಅಸಹನೆಗಳು ಕಟ್ಟೆಯೊಡೆಯಲಾರಂಭಿಸಿವೆ.

ಇಂಥವನನ್ನು ಹೇಗಾದರೂ ತೊಲಗಿಸುವ ಸಲುವಾಗಿ ಇಲಾಖೆಯ ಹಿರಿಯ ಅಧಿಕಾರಿಗಳು ಹಲವಾರು ಸಲ ವರ್ಗಾವಣೆ ಮಾಡಿಸಿದ್ದರು. ಆದರೆ ರೆಡ್ಡಿ ಪಡೆಯ ಕೃಪಾಕಟಾಕ್ಷದಿಂದ ಮತ್ತೆ ವಕ್ಕರಿಸುತ್ತಿದ್ದ. ರೆಡ್ಡಿ ಪಡೆಯ ಈ ಕೆಲಸದ ವಿರುದ್ಧ ಅಸಹನೆಗಳೆದ್ದಾಗ ಭ್ರಷ್ಟ ಮುತ್ತಯ್ಯನನ್ನು ಇತ್ತೀಚೆಗೆ ಗ್ರಾಮ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯಾಗಿ ಮಾಡಲಾಗಿತ್ತು. ಕಾನೂನುಗಳ ಪ್ರಕಾರ ಮುತ್ತಯ್ಯ ಆ ಹುದ್ದೆಗೆ ಅರ್ಹನಲ್ಲ. ಆದರೆ ರೆಡ್ಡಿ ಪಡೆಯ ಪಾಳೇಗಾರಿಕೆ ಎಲ್ಲವನ್ನೂ ಸಾಧ್ಯವಾಗಿಸಿತ್ತು.

ಯಡಿಯೂರಪ್ಪ ಟೀಮು ತನಗೆ ಮಗ್ಗುಲ ಮುಳ್ಳಾಗಿರುವ ರೆಡ್ಡಿ ಪಡೆಯ ಬಲ ಉಡುಗಿಸಲು ಅವನ ನೆಚ್ಚಿನ ಅಧಿಕಾರಿಗಳನ್ನು ಎತ್ತಂಗಡಿ ಮಾಡೋ ಕಸರತ್ತು ನಡೆಸುತ್ತಿತ್ತಲ್ಲಾ? ಅದರನ್ವಯ ಈಗ್ಗೆ ಒಂದು ತಿಂಗಳ ಹಿಂದೆಯೇ ಮುತ್ತಯ್ಯನನ್ನು ಧಾರವಾಡ ಅರಣ್ಯ ಸಂಶೋಧನಾ ಇಲಾಖೆಗೆ ವರ್ಗಾವಣೆ ಮಾಡಿತ್ತು. ಆದರೆ ಮುತ್ತಯ್ಯ ಜನಾರ್ದನ ರೆಡ್ಡಿ ಹಾಗೂ ಶ್ರೀ ರಾಮುಲು ಹೆಸರು ಹೇಳಿಕೊಂಡು ಜಿಲ್ಲಾಧಿಕಾರಿ ಆದಿತ್ಯ ಆಮ್ಲಾನ್ ಬಿಸ್ವಾಸ್‌ಗೇ ಸೆಡ್ಡು ಹೊಡೆದು ಮುಂದುವರೆಯುತ್ತಿದ್ದ. ಮೊನ್ನೆ ಮಂಗಳವಾರ ರಾಜ್ಯ ಮುಖ್ಯ ಕಾರ್ಯದರ್ಶಿ ಕಚೇರಿಯಿಂದ ಮುತ್ತಯ್ಯನಿಗೆ ಕರೆಯೊಂದು ಬಂದು 'ಕೂಡಲೆ ಡಿಸಿಗೆ ಚಾರ್ಜ್ ಕೊಡಿ, ಇಲ್ಲವಾದರೆ ಸಸ್ಪೆಂಡಾಗಲು ರೆಡಿಯಾಗಿ' ಅಂತ ಸ್ಪಷ್ಟ ಆದೇಶ ರವಾನಿಸಿತು. ಇದರಿಂದ ಬೆದರಿ ಹೋದ ಭ್ರಷ್ಟ ಮುತ್ತಯ್ಯ ಅಂತೂ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಬಿಟ್ಟುಕೊಟ್ಟಿದ್ದಾನೆ. ಇದರಿಂದಾಗಿ ಸದ್ಯದ ಮಟ್ಟಿಗೆ ಬಹುಕಾಲದಿಂದ ತನಗಂಟಿದ್ದ ಶನಿಯೊಂದನ್ನು ಬಳ್ಳಾರಿ ಕೊಡವಿಕೊಂಡಂತಾಗಿದೆ! ●

ಯಡ್ಡಿಗೇ ಸೆಡ್ಡು ಹೊಡೆದಿದ್ದ!

ಕೈತುಂಬಾ ಹಡಬೆ ಕಾಸು, ಬೆಂಬಲಕ್ಕೆ ಬಳ್ಳಾರಿಯನ್ನೇ ಆಳುವ ರೆಡ್ಡಿಯ ದುಷ್ಟಕೂಟ... ಇದೆಲ್ಲದರಿಂದಾಗಿ ಮುತ್ತಯ್ಯ ಅಹಂಕಾರ ಹೊದ್ದು ಮೆರೆದಾಡಲಾರಂಭಿಸಿದ್ದ. ಈತನ ರೆಡ್ಡಿ ನಿಷ್ಠೆ ಮತ್ತು ಅದಕ್ಕಾಗಿ ನಡೆಸುವ ಹುಂಬತನ ಎಂಥಾದ್ದಿತ್ತೆಂಬುದಕ್ಕೆ ಸಾಕ್ಷಾತ್ತು ಸಿಎಂ ಯಡ್ಡಿಗೇ ಸೆಡ್ಡು ಹೊಡೆದ ಘಟನೆ ಸ್ಪಷ್ಟ ಉದಾಹರಣೆಯಂತಿದೆ.

ಕಳೆದ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಜಗಳೂರು ಕ್ಷೇತ್ರ ಯಡ್ಡಿ-ರೆಡ್ಡಿ ಬಣಗಳ ಆಂತರಿಕ ಬಡಿದಾಟಕ್ಕೆ ವೇದಿಕೆಯಾಗಿತ್ತು. ಟಿಕೆಟ್ ಹಂಚಿಕೆ ವಿಚಾರದಲ್ಲಿ ಬೇಕಂತಲೇ ರೆಡ್ಡಿ ಪಡೆಯನ್ನು ದೂರವಿಟ್ಟಿದ್ದ ಯಡಿಯೂರಪ್ಪ ಮತ್ತು ಈಶ್ವರಪ್ಪ ತಾವೇ ಟಿಕೆಟ್ ಪಟ್ಟಿ ಅಂತಿಮಗೊಳಿಸಿ ಜಗಳೂರಿನಲ್ಲಿ ತಮ್ಮ ಪಾಳೆಯದ ಉಮೇಶನನ್ನು ಕಣಕ್ಕಿಳಿಸಿದ್ದರು. ರೆಡ್ಡಿ ಬಳಗ ಮಾತ್ರ ತನ್ನ ಪಾಳೆಯದ ಅಶ್ವತ್ಥ್‌ಗೆ ಟಿಕೆಟ್ ತಪ್ಪಿದ ನೆಪದಲ್ಲಿ ಕುದ್ದುಹೋಗಿ ಬೇರೆಯದೇ ತಂತ್ರಗಾರಿಕೆಗೆ ಸಿದ್ಧವಾಗಿತ್ತು. ಅದಕ್ಕೆ ಆರಿಸಿಕೊಂಡಿದ್ದು ಮುತ್ತಯ್ಯನನ್ನು! ಮುತ್ತಯ್ಯ ತನ್ನ ಅಬ್ಬೇಪಾರಿ ಅಳಿಯನನ್ನೇ ಕಣಕ್ಕಿಳಿಸಿ ಆತನ ಪರ ಪ್ರಚಾರ ನಡೆಸಿದ್ದ. ರೆಡ್ಡಿಗಳು ಬೇಕಾಬಿಟ್ಟಿ ಹಣ ಸುರಿದಿದ್ದರು.

ಈ ವಿಚಾರ ತಿಳಿದದ್ದೇ ಖುದ್ದು ಯಡ್ಡಿ ಮತ್ತು ಈಶ್ವರಪ್ಪ ಮುತ್ತಯ್ಯನಿಗೆ ಫೋನಾಯಿಸಿ ಬಂಡಾಯ ಅಭ್ಯರ್ಥಿಯನ್ನು ವಾಪಾಸು ಕರೆಸಿಕೊಳ್ಳುವಂತೆ ತಾಕೀತು ಮಾಡಿದ್ದರು. ಆದರೀತ 'ನನಗೂ ಅದಕ್ಕೂ ಸಂಬಂಧವಿಲ್ಲ' ಅಂತ ಮುಖಕ್ಕೆ ಹೊಡೆದಂತೆ ಹೇಳಿ ರೆಡ್ಡಿ ನಿಷ್ಠೆ ಮೆರೆದಿದ್ದ!

ಯಡ್ಡಿ ಪಡೆ ಇಂಥ ಅನೇಕ ಆಕ್ರೋಶಗಳನ್ನು ಈ ಸಾರಿ ಸರಿಯಾಗಿ ತೋರಿಸಿದೆ. ಮುತ್ತಯ್ಯ ಮಿಸುಕ್ ಧಾರವಾಡದ ಅರಣ್ಯ ಸಂಶೋಧನಾ ಸಂಸ್ಥೆಯತ್ತ ಹ್ಯಾಪು ಮೊರೆ ಹಾಕಿ ಹುರುವಿಟ್ಟಿದ್ದಾನೆ!

ಅಣ್ಣಿಗೇರಿ ತಲೆ ಬುರುಡೆ

ಶಿವಭಕ್ತರ ಶಿರಚ್ಛೇದ!



ಧಾರವಾಡದ ತೆಕ್ಕೆಯಲ್ಲಿರುವ ಅಣ್ಣಿಗೇರಿ ಗ್ರಾಮ ಇತಿಹಾಸಕಾರರ ಚಿತ್ತವನ್ನೆಲ್ಲ ಸೆಳೆದಿರುವುದು ಹೊಸ ವಿಷಯವೇನಲ್ಲ. 2010ನೇ ಆಗಸ್ಟ್‌ನಲ್ಲಿ ಚರಂಡಿ ಕಾಮಗಾರಿಗಾಗಿ ನೆಲವನ್ನು ಅಗೆದಾಗ ಒಂದೇ ಹಳ್ಳದಲ್ಲಿ ಹತ್ತಾರು ತಲೆಬುರುಡೆಗಳು ದೊರಕಿದ್ದವು. ಅನುಮಾನವನ್ನು ಮೇಲೆಳೆದುಕೊಂಡು ಅಲ್ಲಿ ಸುದೀರ್ಘ ಉತ್ಖನನವನ್ನು ನಡೆಸಿದಾಗ ಬರೋಬ್ಬರಿ 471 ತಲೆಬುರುಡೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದು ಬೆಳಕಿಗೆ ಬಂದಿತ್ತು. ಅಲ್ಲಿಂದೀಚೆಗೆ ಆ ಬುರುಡೆಗಳ ಕುರಿತಾಗಿ ದಿನಕ್ಕೊಂದು ಹೊಸ ಹೊಸ ಅಚ್ಚರಿಯ ವಿಷಯಗಳು ಹೊರಬರುತ್ತಿವೆ. ಅದರಲ್ಲಿ ಕೆಲವೊಂದು ಸತ್ಯಕ್ಕೆ ಸಮಾಧಿ ಕಟ್ಟುವ ಹುನ್ನಾರದ ಪ್ರಯತ್ನಗಳಾಗಿದ್ದರೆ, ಮತ್ತೆ ಕೆಲವು ಸತ್ಯವನ್ನು ಬಡಿದೆಬ್ಬಿಸುವ ಪ್ರಯತ್ನಗಳಾಗಿದ್ದವು. ಈ ಹಿನ್ನೆಲೆಯಲ್ಲಿ ತಲೆಬುರುಡೆಗಳ ನಿಜವಾದ ಕಾಲಘಟ್ಟವನ್ನು ತಿಳಿಯಲು ಜಿಲ್ಲಾಡಳಿತವು ಅವುಗಳನ್ನು ಕಾರ್ಬನ್-14 ಡೇಟಿಂಗ್‌ಗೆ ಒಳಪಡಿಸಲು ಭುವನೇಶ್ವರದ ಭೌತಶಾಸ್ತ್ರ ಸಂಸ್ಥೆಗೆ ಒಪ್ಪಿಸಿತ್ತು. ಮಾದರಿ ಪರೀಕ್ಷೆಯ ನಂತರ ಪ್ರೊ.ಡಿ.ಪಿ ಮಹಾಪಾತ್ರರವರು ಅವುಗಳು ಸುಮಾರು 638 ವರ್ಷಗಳಷ್ಟು ಹಿಂದಿನವು ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತಾಗಿ ಸಂಶೋಧನಕಾರ, ವಿಶ್ರಾಂತ ಕುಲಪತಿ ಡಾ.ಎಂ.ಎಂ.ಕಲಬುರ್ಗಿ ಅವರು "ಇವು ಉಗ್ರ ಶಿವ ಭಕ್ತ ಪಂಥದವರ ಆತ್ಮಾಹುತಿ ತಲೆಬುರುಡೆಗಳು" ಎಂದು ಅಭಿಪ್ರಾಯಪಟ್ಟಿದ್ದರು. ಇದರ ಸತ್ಯಾಸತ್ಯತೆಯ ತಿಳಿಯಲು ಪತ್ರಿಕೆ ಅವರ ಸಂದರ್ಶನ ನಡೆಸಿದಾಗ ಹಲವಾರು ಆಧಾರಗಳ ಸಮೇತ ತಮ್ಮ ಅಭಿಪ್ರಾಯವನ್ನು ದೃಢಪಡಿಸಿದರು.

ಲಂಕೇಶ್: ಅಣ್ಣಿಗೇರಿ ತಲೆಬುರುಡೆ ಕುರಿತಾಗಿ ತಾವು ಪ್ರತಿಪಾದಿಸುತ್ತಿರುವ ಉಗ್ರ ಶಿವ ಪಂಥದವರ ಹಿನ್ನೆಲೆ ಏನು?

ಎಂ.ಎಂ.: ಇವರು ಮೂಲತಃ ಕಾಶ್ಮೀರಿ ಆಚಾರ್ಯರು. ಶಿವ ಇವರ ಆರಾಧ್ಯ ದೈವ. ತಮ್ಮ ಅಸ್ತಿತ್ವಕ್ಕಾಗಿ ಅನೇಕ ರಾಜರ ಆಶ್ರಯವನ್ನು ಬಯಸುತ್ತಿದ್ದ ಇವರು ಕಾಶ್ಮೀರದಿಂದ ಮಧ್ಯ ಪ್ರದೇಶಕ್ಕೆ ವಲಸೆ ಬಂದ್ರು. ತಮಿಳುನಾಡಿನ ಚೋಳರು ಮಧ್ಯಪ್ರದೇಶದ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಅವರ ಮೂಲಕ ಈ ಉಗ್ರಪಂಥದ ಶೈವಾಚಾರ್ಯರು ದಕ್ಷಿಣ ಭಾರತವನ್ನು ಪ್ರವೇಶಿಸಿದರು. ಅಲ್ಲಿ ದೇಶೀಯ ಬೇಡರ ಕಣ್ಣಪ್ಪನ ಪಂಥದವರ ಮೇಲೆ ಆಕ್ರಮಣ ಮಾಡಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು. ಚೋಳರ ಪತನದ ನಂತರ ಅವರು ಆಶ್ರಯಕ್ಕಾಗಿ ಆಂಧ್ರದ ಕಾಕತಿ ಅರಸರ ರಾಜ್ಯಕ್ಕೆ ಬಂದರು. ಇಲ್ಲಿಯೂ ಸಹ ತಮ್ಮ ಆಕ್ರಮಣಶೀಲತೆಯನ್ನು ಪ್ರದರ್ಶಿಸಿ, ಶ್ರೀಶೈಲ ಚೆನ್ನಮಲ್ಲಿಕಾರ್ಜುನನ ಪೂಜೆ ಮಾಡ್ತಿದ್ದ ಸಿದ್ಧ ಪಂಥದವರ ಮೇಲೆ ಸವಾರಿ ಮಾಡಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು. ತಮ್ಮ ಆಗಮನಕ್ಕೂ ಮುಂಚೆ ಇದ್ದ ಬಹುಪಾಲು ಎಲ್ಲ ಶಾಸನಗಳನ್ನು ನಾಶಮಾಡಿ ತಮ್ಮದೇ ಅಸ್ತಿತ್ವವನ್ನು ಸ್ಥಾಪಿಸಿದರು. ಕಾಲಾನಂತರ ಕಾಕತಿ ಅರಸರ ಅವನತಿಯಾದ ಮೇಲೆ ಆಶ್ರಯವನ್ನರಸಿ ವಿಜಯನಗರ ಸಾಮ್ರಾಜ್ಯಕ್ಕೆ ಬರುವ ಮೂಲಕ ಕರ್ನಾಟಕವನ್ನು ಪ್ರವೇಶಿಸಿದ್ದರು.

ಲಂ: ಇವರನ್ನು 'ಉಗ್ರ ಪಂಥ' ಎಂದು ಕರೆಯಲು ಕಾರಣವೇನು?

ಎಂ.ಎಂ. : ಅವರ ನಂಬಿಕೆ ಮತ್ತು ಆಚರಣೆಗಳು ಸಾಮಾನ್ಯರ ಮನಸ್ಸಿನಲ್ಲಿ 'ಉಗ್ರ' ಎನಿಸುವಷ್ಟು ಅಸಹಜವಾಗಿರುವುದೇ ಇದಕ್ಕೆ ಕಾರಣವಾಗುತ್ತದೆ. ಆದಾಗಲೇ ತಿಳಿಸಿರುವಂತೆ ಇವರು ಆಕ್ರಮಣಶೀಲತೆಯನ್ನು ಹೊಂದಿದಂತಹ ಪಂಥದವರು. ತಾವು ಹೋದ ಕಡೆ ದೇಸಿಯ ಪಂಥದವರ ಮೇಲೆ ಪ್ರಭುತ್ವವನ್ನು ಸಾಧಿಸುವ ಹಿನ್ನೆಲೆಯನ್ನು ಹೊಂದಿರುವಂತವರು. ಅದಲ್ಲದೆ ಇವರ ಆರಾಧನೆಯೂ ಸಹ ಉಗ್ರ ರೀತಿಯಲ್ಲಿ ಇರುತ್ತಿತ್ತು. ತಮ್ಮ ಇಷ್ಟದೈವವಾದ 'ಶಿವ'ನ ಸಂತೃಪ್ತಿಗಾಗಿ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದುದಕ್ಕೆ ಹಲವಾರು ಕಾರಣಗಳಿವೆ. ತಮ್ಮ ರಕ್ತದ ಮೂಲಕ ದೇವರಿಗೆ ನೈವೇದ್ಯ ಮಾಡಿರುವ ಬಗ್ಗೆಯೂ ಉಲ್ಲೇಖವಿದೆ.



ಇದಿಷ್ಟು ಮಾತ್ರವಲ್ಲದೆ ಇವರು ಅನ್ಯ ಧರ್ಮೀಯರ ಹಾಗೂ ಅನ್ಯದೇವಾಲಯದ ಮೇಲೆ ಆಕ್ರಮಣ ಮಾಡುವ ಮನೋಭಾವವನ್ನೂ ಹೊಂದಿದ್ದರು ಎಂಬುದಕ್ಕೆ ಹಲವಾರು ಶಾಸನಗಳಿವೆ. ಅವುಗಳನ್ನು ನಂತರದಲ್ಲಿ ವಿವರಿಸುತ್ತೇನೆ.

ಲಂ: ಅವತ್ತಿನ ಆ ಉಗ್ರ ಶಿವಭಕ್ತರ ಪಂಥದ ರೂಪಾಂತರ ಮತ್ತು ಇವತ್ತಿನ ಈ ಪಂಥದ ಅಸ್ತಿತ್ವದ ಬಗ್ಗೆ ತಿಳಿಸಿಕೊಡುತ್ತೀರಾ?


ಎಂ.ಎಂ. : ಈ ಉಗ್ರ ಪಂಥದ ಶೈವಾಚಾರ್ಯರು ತಮಿಳುನಾಡಿಗೆ ಬಂದಾಗ ರಾಮಾನುಜಾಚಾರ್ಯರ ಶ್ರೀ ವೈಷ್ಣವ ಪಂಥ ಅಸ್ತಿತ್ವಕ್ಕೆ ಬಂದಿತ್ತು, ಬಹುಸಾಮಾನ್ಯವಾಗಿಯೇ ಈ ಎರಡೂ ಪಂಥಗಳ ನಡುವೆ ಸಂಘರ್ಷವೇರ್ಪಟ್ಟಿತು. ಆಗ ವೈಷ್ಣವ ಪಂಥದವರು 'ವೀರ ವೈಷ್ಣವ ಸಂಘ'ವನ್ನು ಸ್ಥಾಪಿಸಿಕೊಂಡರೆ ಅದಕ್ಕೆ ಪರ್ಯಾಯವಾಗಿ ಈ ಶೈವಾಚಾರ್ಯರು 'ವೀರ ಮಾಹೇಶ್ವರ' ಸಂಘವನ್ನು ಕಟ್ಟಿಕೊಂಡರು.

ಉಗ್ರ ಪಂಥದ ಶೈವಾಚಾರ್ಯರು ಕರ್ನಾಟಕಕ್ಕೆ ಬಂದ ತದನಂತರದಲ್ಲಿ ಆ ಪಂಥದವರದೇ ಒಂದು ಭಾಗವಾದ 'ವೀರ ಮಾಹೇಶ್ವರ' ಸಂಘದವರು 'ವೀರಭದ್ರ'ನನ್ನು ತಮ್ಮ ಆರಾಧ್ಯ ದೈವವನ್ನಾಗಿ ಸ್ವೀಕರಿಸಿ ಆರಾಧಿಸಲು ಪ್ರಾರಂಭಿಸಿದರು. ಆ ನಿರ್ದಿಷ್ಟ ಪಂಗಡ ಕಾಲಕ್ರಮೇಣ ರೂಪಾಂತರಗೊಂಡು ಇವತ್ತಿನ 'ವೀರಶೈವ' ಸಮುದಾಯವಾಗಿದೆ.

ಲಂ: ಉಗ್ರ ಪಂಥದ 'ವೀರ ಮಾಹೇಶ್ವರ' ಪಂಗಡವೇ ಇಂದಿನ 'ವೀರಶೈವ' ಸಮುದಾಯವಾಗಿದೆ ಎಂಬುದಕ್ಕೆ ನಿರ್ದಿಷ್ಟ ಕಾರಣಗಳೇನಾದರೂ ಇವೆಯೇ?

ಎಂ.ಎಂ.: ಖಂಡಿತ ಇದೆ. ಇವತ್ತಿನ ವೀರಶೈವದ ಒಂದು ಪಂಗಡವಾದ ತುರುವಂಕರು ಅಂದರೆ ವೀರಗಾಸೆಯವರ ವೀರಭದ್ರನ ಆರಾಧನೆಯ ಪದ್ಧತಿಯೂ, ಉಗ್ರ ಶೈವಾಚಾರ್ಯರ ಆರಾಧನೆಯ ಪದ್ಧತಿಯೂ ಬಹಳಷ್ಟು ಸಾಮ್ಯತೆಯನ್ನು ಹೊಂದಿರುವುದನ್ನು ನೀವೇ ಗಮನಿಸಬಹುದು. ಅಂದಿನ ಆ ಪಂಥ ದೈವದ ಸಂತೃಪ್ತಿಗಾಗಿ ತಮ್ಮ ಅಂಗಗಳನ್ನು, ಶಿರಗಳನ್ನು ಕಡಿದುಕೊಂಡು ಆತ್ಮಾರ್ಪಣೆ ಮಾಡುತ್ತಿದ್ದರು. ಇವತ್ತಿನ ವೀರಗಾಸೆಯವರನ್ನು ಗಮನಿಸಿದಾಗಲು ಸಹ ನಾಲಿಗೆಗೆ, ಕೆನ್ನೆಗೆ, ಹೊಟ್ಟೆಗೆ ಉದ್ದುದ್ದನೆಯ ಸೂಜಿಗಳನ್ನು ಚುಚ್ಚಿಕೊಳ್ಳುವುದು, ಕೊಯ್ದುಕೊಳ್ಳುವುದು ಇಂತವೆಲ್ಲ ಪರಿವರ್ತನೆಯಾಗಿ ಆಚರಣೆಯಲ್ಲಿರುವುದು ಕಂಡುಬರುತ್ತದೆ. ಆದ್ದರಿಂದ ಅಂದಿನ ವೀರ ಮಾಹೇಶ್ವರ ಪಂಗಡವೆ ಇಂದಿನ 'ವೀರಶೈವ' ಎಂಬುದಕ್ಕೆ ಪುಷ್ಠಿ ದೊರೆತಂತಾಗುತ್ತದೆ.

ಇಲ್ಲಿ ಇನ್ನೊಂದು ಅಂಶವನ್ನು ಸ್ಪಷ್ಟಪಡಿಸುತ್ತೇನೆ. ನನ್ನ ಇತಿಹಾಸ ಸಂಶೋಧನೆಯ ಪ್ರಕಾರ 'ಲಿಂಗಾಯತ' ಮತ್ತು 'ವೀರಶೈವ' ಎರಡೂ ಸಹ ಬೇರೆ ಬೇರೆ ಪಂಗಡಗಳು. ಲಿಂಗಾಯತ ಸಮುದಾಯ 12ನೇ ಶತಮಾನದಲ್ಲಿಯೇ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟಿದ್ದರೆ 'ವೀರಶೈವ' ಈ ಉಗ್ರ ಶೈವಾಚಾರ್ಯ ಪಂಥದ 'ವೀರ ಮಾಹೇಶ್ವರ ಸಂಘ'ದ ರೂಪಾಂತರ, ಇದರ ಅಸ್ತಿತ್ವ ಸುಮಾರು 13 ನೇ ಶತಮಾನ. ಹೋದ ಕಡೆಯಲ್ಲೆಲ್ಲ ದೇಸೀಯ ಪಂಥದವರ ಮೇಲೆ ಆಕ್ರಮಣ ನಡೆಸುತ್ತಾ ಬಂದಿದ್ದ ಈ ಪಂಥ (ತಮಿಳುನಾಡಿನಲ್ಲಿ ಕಣ್ಣಪ್ಪನ ಪಂಥ, ಆಂಧ್ರದಲ್ಲಿ ಸಿದ್ಧಪಂಥ) ಇಲ್ಲಿನ ಲಿಂಗಾಯತರ ಮೇಲೆಯೂ ಸವಾರಿ ಮಾಡಿದರು. ಶಿವ ಆರಾಧನೆಯ ಸಾಮಾನ್ಯ ಗುಣದಿಂದಾಗಿ ಲಿಂಗಾಯತ ಮತ್ತು ವೀರ ಮಾಹೇಶ್ವರ ಸಂಘ ಸರಿಸುಮಾರು ಒಂದೇ ಎಂಬಂತಾಗಿ, ಇವತ್ತು ಲಿಂಗಾಯತ ಮತ್ತು ವೀರಶೈವ ಎಂಬುವವು ಪ್ರತ್ಯೇಕವಲ್ಲ, ಬದಲಾಗಿ ಒಂದೇ ಪಂಗಡದ ಪರ್ಯಾಯ ಹೆಸರುಗಳೂ ಎಂಬಂತಾಗಿದೆ.



ಇತಿಹಾಸಕಾರ

ಡಾ.ಎಂ.ಎಂ. ಕಲಬುರ್ಗಿ

ಸಂದರ್ಶನ

ಲಂ: ಈ ಉಗ್ರ ಪಂಥದ ಶಿವಭಕ್ತರು ತಮ್ಮ ಆತ್ಮಾರ್ಪಣೆಯನ್ನು ಏಕೆ ಮಾಡಿಕೊಳ್ಳುತ್ತಿದ್ದರು?

ಎಂ.ಎಂ.: ತಮ್ಮ ಆರಾಧ್ಯ ದೈವದ ಸಂತೃಪ್ತತೆಗಾಗಿ ಅವರು ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದರು. ಅನ್ಯಧರ್ಮ ಅಥವಾ ಅನ್ಯಪಂಥದವರ ಮೇಲೆ ಆಕ್ರಮಣ ಮಾಡಿ ತಮ್ಮ ಅಧಿಪತ್ಯವನ್ನು ಸ್ಥಾಪಿಸುವುದು ಅವರ ಉದ್ದೇಶವಾಗಿತ್ತು, ಈ ರೀತಿ ಒಂದು ಅಧಿಪತ್ಯವನ್ನು ಸ್ಥಾಪಿಸಿದ ಸಾರ್ಥಕತೆ ತಮಗೆ ಲಭಿಸಿದ ಸಂದರ್ಭಗಳಲ್ಲಿ ಅವರು ಈ ತರ ತಮ್ಮ ಶಿರಗಳನ್ನು ತಾವೇ ಕತ್ತರಿಸಿಕೊಂಡು, ಅದೂ ಸಾಮೂಹಿಕವಾಗಿ ತಮ್ಮ ಸಂತೃಪ್ತತೆಯಲ್ಲಿ ದೇವರಿಗೂ ನೀಡುವ ಆಚರಣೆ ಇದ್ದುದರಿಂದ ಅವರು ಹಾಗೆ ಮಾಡಿಕೊಳ್ಳುತ್ತಿದ್ದರು.

ಲಂ: ಅವರು ಅನ್ಯಧರ್ಮ ಅಥವಾ ಪಂಥದ ಮೇಲೆ ಆಕ್ರಮಣಶೀಲರಾಗಿದ್ದರು ಎಂಬುದಕ್ಕೆ ಸೂಕ್ತ ಆಧಾರವೇನಾದರು ಇದೆಯೇ?

ಎಂ.ಎಂ.: ಅವಾಗ್ಲೇ ನಾನು ಹೇಳಿದಂಗೆ ಅವರು ತಮಿಳುನಾಡಿನಲ್ಲಿ ಮತ್ತು ಆಂಧ್ರದಲ್ಲಿ ಅಲ್ಲಿನ ದೇಸೀಯ ಪಂಥದವರ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದು ಸಾಬೀತಾಗಿದೆ. ಇಲ್ಲಿ ಲಿಂಗಾಯತ ಸಮುದಾಯದ ಮೇಲೂ ಅಧಿಪತ್ಯ ಸ್ಥಾಪಿಸಿ ಮುಂದೆ ಎರಡೂ ಒಂದೇ ಎಂಬಂತಾಗಿದೆ. ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದ್ರೆ ಇದೇ ಅಣ್ಣಿಗೇರಿಯ ವೀರಭದ್ರನ ಗುಡಿಯಲ್ಲಿ ವೀರ ಗೊಗ್ಗಿದೇವನ ಶಾಸನದಲ್ಲಿ ಆತ ತನ್ನನ್ನು ತಾನು 'ಜೈನ ಮೃಗ ಬೇಟೆಕಾರ", "ಜೈನಾಮ ಧೂಮಕೇತು (ಜೈನ ಧರ್ಮಕ್ಕೆ ಅನಿಷ್ಟಕಾರಕ), "ಜೈನ ಕುಠಾರ" (ಜೈನ ಧರ್ಮಕ್ಕೆ ಕೊಡಲಿ), "ಜೈನಫಣಿ ಮೈಲತೇಯ" (ಜೈನ ಎಂಬ ಹಾವಿಗೆ ಗರುಡ) ಅಂತ ಕರೆದುಕೊಂಡಿದಾನೆ. ಈ ವೀರ ಗೊಗ್ಗಿದೇವ ಅಣ್ಣಿಗೇರಿ ಗ್ರಾಮದಲ್ಲಿದ್ದ 'ವೀರ ಮಾಹೇಶ್ವರ ಸಂಘ' ಪಂಗಡದ ನಾಯಕ. ಮತ್ತು ಹದಿಮೂರನೇ ಶತಮಾನದ ವೇಳೆಗಾಗಲೇ ಜೈನ ಧರ್ಮ ಅಸ್ತಿತ್ವದಲ್ಲಿತ್ತು ಎಂಬುದನ್ನು ನಾವಿಲ್ಲಿ ಗಮನಿಸಬೇಕು.

ಲಂ: ನಿರ್ದಿಷ್ಟವಾಗಿ ಈ ಅಣ್ಣಿಗೇರಿ ತಲೆ ಬುರುಡೆಯ ಬಗ್ಗೆ ನಿಮ್ಮ ಅಭಿಪ್ರಾಯ?

ಎಂ.ಎಂ. : ನೋಡ್ರಿ, ನನ್ನ ಸಂಶೋಧನಾ ಮತ್ತು ನನ್ನತ್ರ ಇರೋ ಆಧಾರಗಳ ಮೇಲೆ ಹೇಳೋದಾದರೆ ಇದೂ ಸಹಾ ಆ 'ವೀರ ಮಾಹೇಶ್ವರ ಸಂಘ'ದ ಆತ್ಮಾಹುತಿ ಕುರುಹು. ಅವಾಗ್ಲೆ ನಾನು ಹೇಳಿದಂತೆ ವೀರಗೊಗ್ಗಿದೇವನ ನಾಯಕತ್ವದಲ್ಲಿ ನೂರಾರು ಸಂಖ್ಯೆಯ ಆರಾಧಕರು ತಮ್ಮ ಶಿರ ಕಡ್ಕೊಂಡು ದೈವ ಸಂತೃಪ್ತಿ ಮಾಡಿದ ದೇಹಗಳ ಛೇದಿತಶಿರಗಳೇ ಇಂದು ತಲೆ ಬುರುಡೆಗಳಾಗಿ ಲಭಿಸಿವೆ.

ಲಂ: ಅಷ್ಟು ನಿಖರವಾಗಿ ಇದು ಆತ್ಮಾಹುತಿಯ ಕುರುಹು ಎಂದು ಹೇಗೆ ಪ್ರತಿಪಾದಿಸುತ್ತೀರಿ?

ಎಂ.ಎಂ.: ಎರಡು ಆಧಾರದ ಮೇಲೆ ನಾನು ಹೇಳ್ತೀನಿ. ಮೊದಲ್ನೆಯದಾಗಿ ಶ್ರೀ ಶೈಲ ಚೆನ್ನಮಲ್ಲಿಕಾರ್ಜುನ ದೇವಸ್ಥಾನದ ಆವರಣದ ಗೋಡೆಯಲ್ಲಿ ಶಿವಲಿಂಗದ ಮುಂದೆ ಶಿರಚ್ಛೇದನ ಮಾಡಿಕೊಳ್ಳುತ್ತಿರೋ ಕೆತ್ತನೆ ಇದೆ. ಅದು ಆ ಪಂಥದವರ ಆಚರಣೇನ ದೃಢಪಡಿಸುತ್ತೆ, ಅದೇ ಕೆತ್ತನೆಯ ಮುಂದಿನ ಭಾಗದಲ್ಲಿ ಛೇದಿತ ಶಿರಗಳನ್ನು ಸಾಲಾಗಿ, ಒಂದರಮೇಲೊಂದರಂತೆ ಒಟ್ಟಿರುವುದನ್ನು ಬಿಂಬಿಸಲಾಗಿದೆ. ನಮ್ಮ ಈ ಅಣ್ಣಿಗೇರಿಯಲ್ಲಿ ತಲೆ ಬರುಡೆಗಳು ಸಿಕ್ಕಾಗ ಅವು ಸಹ ಇದೇ ರೀತಿ ಸಾಲಾಗಿ ಜೋಡಿಸಿಟ್ಟ ಸ್ಥಿತಿಯಲ್ಲಿದ್ದವು ಎಂಬುದು ಗೊತ್ತಿರೋ ವಿಷಯವೆ.

ಇನ್ನು ಎರಡನೇ ಆಧಾರ ಅಂದ್ರೆ, ಹರಿಹರನ 'ಕೋವೂರ ಬ್ರಹ್ಮಯ್ಯನ ರಗಳೆ.' ಸುಮಾರು ಎರಡು ಪುಟ ಇರೋ ಇದರ ವಿವರಣೇನ ಓದಿದ್ರೆ ಅಚ್ಚರಿ ಅನ್ನುತ್ತೆ. ಅದರಲ್ಲೊಂದು ಕಡೆ ಶಿವನ ಮುಂದೆ ನಿಂತ ಭಕ್ತರ ಕೈಯಲ್ಲಿ ಖಡ್ಗ, ಕೊಡಲಿ, ಗರಗಸ, ಶಸ್ತ್ರಗಳಿದ್ದವು. ಭಕ್ತಿಯ ಪರಾಕಾಷ್ಠೆಯಲ್ಲಿ ಕುಣಿಯುತ್ತಾ ಬಂದು, ಗರಗಸದಿಂದ ಕೈಯನ್ನು ಕೊಯ್ದುಕೊಂಡು, ಕೊಡಲಿಯಿಂದ ಕಾಲನ್ನು ಕಡಿದುಕೊಂಡು, ಹರಿವ ರಕ್ತವನ್ನು ಬೊಗಸೆಯಲ್ಲಿ ದೈವಕ್ಕೆ ನೈವೇದ್ಯವ ಮಾಡಿ, ಶಿರವ ಕಡಿದುಕೊಂಡು ಆತ್ಮಾರ್ಪಣೆ ಮಾಡಿದವರ ವಿವರಣೆ ಇದೆ. ಈ ಕೋವೂರು ಈಗ ಎಲ್ಲಿದೆಯೋ ಗೊತ್ತಿಲ್ಲ, ಅದರ ಸುಳಿವೇನಾದ್ರು ಸಿಕ್ರೆ ಮತ್ತಷ್ಟು ಸತ್ಯ ಹೊರಬರಬಹುದು.

ಇತ್ತೀಚೆಗೆ ನಡೆದ ಈ ಬುರುಡೆಗಳ ಕಾರ್ಬನ್ ಡೇಟಿಂಗ್ ಕೂಡ ನನ್ನ ಅಭಿಪ್ರಾಯವನ್ನು ಸಮರ್ಥಿಸುತ್ತೆ, ಅವರ ಪ್ರಕಾರ ಅವೆಲ್ಲ 638 ವರ್ಷಗಳ ಹಿಂದಿನವು. ಈ ಗೊಗ್ಗಿದೇವನ ಕಾಲವು ಸಹ 13 ನೇ ಶತಮಾನ, ಅದು ಆತನ ಶಾಸನದಲ್ಲೇ ಉಲ್ಲೇಖವಾಗಿದೆ. ಆದ್ದರಿಂದ ಇವೆರಡೂ ಕಾಲಾವಧಿ ಪರಸ್ಪರ ಹೋಲಿಕೊಳ್ತವೆ. ಆದ್ರಿಂದ ಇದು ಆತ್ಮಾರ್ಪಣ ಘಟನೆಯ ಕುರುಹು ಅಂತ ಹೇಳ್ತೀನಿ.

ಲಂ: ಈ ಉಗ್ರ ಪಂಥದ ಶಿವಭಕ್ತರ ಕುರಿತಾಗಿ ಅಣ್ಣಿಗೇರಿಯಲ್ಲದೆ ಬೇರೆ ಕಡೆ ಉಲ್ಲೇಖ ಇದೆಯಾ?

ಎಂ.ಎಂ.: ಇವ್ರು ಎಲ್ಲ ಕಡೆ ಹಂಚಿಹೋಗಿದ್ರು. ಅಣ್ಣಿಗೇರಿಯ ಗೊಗ್ಗಿದೇವನ ಶಾಸನದಲ್ಲಿ ಇವರನ್ನು 'ಅಸಂಖ್ಯಾತರ ಸಂಪ್ರದಾಯದವ' ಅಂತ ಕರೆದುಕೊಂಡಿದ್ದಾನೆ. ಅದೇ ಪದದ ಉಲ್ಲೇಖ ಗುಲ್ಬರ್ಗಾ ಜಿಲ್ಲೆಯ 'ಇಂಗಳಗಿ' ಶಾಸನದಲ್ಲಿ, ಬಳ್ಳಾರಿಯ ಕುಡುತಿನಿಯ ಎರಡು ಶಾಸನದಲ್ಲಿ, ಬಿಜಾಪುರದ ತಾಳಿಕೋಟೆಯ ಶಾಸನದಲ್ಲಿ ಉಲ್ಲೇಖವಾಗಿದೆ. ತಾಳಿಕೋಟೆಯ ಶಾಸನದಲ್ಲಂತು ಪರಿಯಳಿಗೆ, ಉಣಕಲ್ಲು, ಸಂಪಗಾವೆ, ಮಾರುಡಿಗೆ, ಹಬ್ಬಲೂರು ಮುಂತಾದ ಹತ್ತು ಸ್ಥಳಗಳನ್ನು ಹೆಸರಿಸಿರೋದ್ರಿಂದ ಈ ಪಂಥದವರು ಎಲ್ಲ ಕಡೆ ಹಂಚಿಹೋಗಿದ್ರು ಅನ್ನೋದಕ್ಕೆ ಪುಷ್ಠಿ ಸಿಗುತ್ತೆ.

ಲಂ: ಇವರ ಆತ್ಮಾಹುತಿಯ ಮಾರ್ಗ ಹೇಗಿರುತ್ತಿತ್ತು?

ಎಂ.ಎಂ.: ಇವ್ರು ತಮ್ಮ ಶಿರವನ್ನು ತಾವೇ ಕಡಿದುಕೊಳ್ಳಲು 'ಗಂಡುಗತ್ತರಿ' ಅಂತ ವಿಶೇಷ ಆಯುಧವನ್ನು ಬಳಸ್ತಿದ್ರು. ಇದಕ್ಕೆ ಜೋಡಿಸಿದ ಹಗ್ಗದ ತುದಿಗಳನ್ನು ಕಾಲಿನ ಹೆಬ್ಬೆರಳುಗಳಿಗೆ ಕಟ್ಟಿಕೊಂಡು ಹರಿತವಾದ ಭಾಗ ಕತ್ತಿನ ಹಿಂಭಾಗಕ್ಕೆ ಬರುವಂತೆ ಬಾಗಿ ನಿಂತು ಒಮ್ಮಿಂದೊಮ್ಮೆಲೇ ಎದ್ದು ನಿಂತುಬಿಟ್ಟರೆ ಶಿರ ಕತ್ತರಿಸಿ ಹೋಗುತ್ತಿತ್ತು, ಒಮ್ಮೊಮ್ಮೆ ಶಿರಚ್ಛೇದನಕ್ಕಾಗಿಯೇ ಒಬ್ಬ ವ್ಯಕ್ತಿಯನ್ನು ನೇಮಿಸಿಕೊಳ್ಳುತ್ತಿದ್ದರಾ ಎಂಬ ಶಂಕೆಯೂ ಇದೆ. ಒಟ್ಟಿನಲ್ಲಿ ಆ ಪಂಥದೋರು ಸಾಮೂಹಿಕ ಶಿರಚ್ಛೇದನ ಮಾಡಿಕೊಳ್ಳುತ್ತಿದ್ರು, ಮತ್ತು ಅಣ್ಣಿಗೇರಿಯ ತಲೆಬುರುಡೆಗಳು ಅಂತದೇ ಶಿರಚ್ಛೇದನದ ಪ್ರತೀಕ.

ಲಂ: ಅವು ಬೇರೆ ಯುದ್ಧದಲ್ಲೋ, ಹತ್ಯಾಕಾಂಡದಲ್ಲೋ ಹತರಾದವರ ತಲೆಬುರುಡೆಗಳಿರಬಹುದಲ್ಲಾ? ಕೆಲ ಇತಿಹಾಸಕಾರರು ಆ ಸ್ಥಳದಲ್ಲಿ ಆದಿಲ್ ಶಾಹಿ, ಕಲ್ಯಾಣಚಾಲುಕ್ಯರ ಮತ್ತು ವಿಜಯನಗರ ಅರಸರ ಯುದ್ಧಗಳನ್ನು ಉಲ್ಲೇಖಿಸುತ್ತಾರೆ, ಅವೂ ಸಹಾ ಆಗಿರಬಹುದಲ್ಲವ್ವೆ?

ಎಂ.ಎಂ.: ಯುದ್ಧ ಅಥವಾ ದಂಗೆಗಳಲ್ಲಿ ಹತರಾದವರ ಶಿರಗಳು ಚೆಲ್ಲಾಡಿ ಹೋಗಿರುತ್ವೆ. ವೈರಿ ಪಡೆಯಾದುದರಿಂದ ಅವಕ್ಕೊಂದಿಷ್ಟು ಸಂಸ್ಕಾರ ಮಾಡುವ ರೂಢಿ ಅಪರೂಪ. ಹಾಗೊಂದು ವೇಳೆ ವಿರೋಧಿ ಸಂಸ್ಕಾರವಂತನಾಗಿದ್ರು, ಒಂದು ಹಳ್ಳವನ್ನು ತೆಗೆಸಿ ಅದರೊಳಗೆ ಸುರಿದು ಮುಚ್ಚಬಿಡುವ ಸಾಧ್ಯತೆ ಇರುತ್ತಿತ್ತು. ಆದರೆ ಇಲ್ಲಿ ಉಳಿದ ದೇಹವನ್ನು ಹೊರತುಪಡಿಸಿ ಶಿರಗಳನ್ನು ಮಾತ್ರ ವ್ಯವಸ್ಥಿತವಾಗಿ ಜೋಡಿಸಿಡಲಾಗಿತ್ತು, ಮತ್ತು ಶ್ರೀ ಶೈಲ ಚೆನ್ನಮಲ್ಲಿಕಾರ್ಜುನನ ದೇವಸ್ಥಾನ ಕೆತ್ತನೆಯಲ್ಲಿರುವ ಶಿವಭಕ್ತರ ಆತ್ಮಾರ್ಪಣೆಯ ಕೆತ್ತನೆಯಲ್ಲು ಇದೇ ರೀತಿ ತಲೆಬುರುಡೆಗಳನ್ನು ಜೋಡಿಸಿಟ್ಟುರುವುದನ್ನು ಕಾಣಬಹುದು. ಆದ್ದರಿಂದ ಇದು ಅದೇ ಪಂಥದ ಗೊಗ್ಗಿದೇವನ ಮುಂದಾಳತ್ವದಲ್ಲಾದ ಶಿರಚ್ಛೇದನದ ಆತ್ಮಾರ್ಪಣೆ!


-ಶ್ರೀ ಎಂ.ಎಂ. ಕಲ್ಬುರ್ಗಿಯವರು ಕರ್ನಾಟಕದ ಹೆಸರಾಂತ ಇತಿಹಾಸ ಸಂಶೋಧಕರಾಗಿದ್ದು, ವಿಶ್ರಾಂತ ಕುಲಪತಿಗಳೂ ಆಗಿದ್ದಾರೆ. ಇತಿಹಾಸದ ನೈಜ ಚಿತ್ರಣವನ್ನು ಅರಿಯುವಲ್ಲಿ ಸದಾ ಉತ್ಸುಕರಾಗಿರುವ ಇವರು "ಇತಿಹಾಸದ ಎಲ್ಲಾ ಆಯಾಮಗಳನ್ನು ಒಳ್ಳೆಯದಿರಲಿ ಅಥವಾ ಕೆಟ್ಟದಿರಲಿ ಮುಕ್ತವಾಗಿ ತೆರೆದಿಟ್ಟಾಗಲೇ ನೈಜತೆಯ ಪರಿಚಯವಾಗುತ್ತದೆ. ಕೆಲವರು ಒಳ್ಳೆಯದನ್ನು ಮಾತ್ರವೇ ತಿಳಿಸುತ್ತಾರೆ. ಇಲ್ಲವೇ ತಮ್ಮ ನಂಬುಗೆಯನ್ನೇ ಇತಿಹಾಸವೆಂದು ಚಿತ್ರಿಸುತ್ತಾರೆ. ಅಂಥವರ ಕಾರಣದಿಂದಾಗಿಯೇ ಈ ಉಗ್ರ ಪಂಥದ ಶಿವಭಕ್ತರ ಬಗ್ಗೆ ಹೆಚ್ಚಿಗೆ ಯಾರಿಗೂ ತಿಳಿದಿಲ್ಲ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಹರಿಹರ ಕವಿ ಪ್ರಸ್ತಾಪಿಸಿರುವ 'ಕೋವೂರು' ಸ್ಥಳದ ಬಗ್ಗೆ ಯಾರಾದರೂ ತಮಗೆ ತಿಳಿಸಿದರೆ, ಅಲ್ಲಿ ಮತ್ತಷ್ಟು ಅಧ್ಯಯನ ಕೈಗೊಂಡು ಸತ್ಯದ ಶೋಧನೆಗೆ ಮುಂದಾಗುತ್ತೇನೆ ಎಂಬ ಬಯಕೆಯನ್ನು ಅವರು ಪತ್ರಿಕೆಯೊಂದಿಗೆ ಹಂಚಿಕೊಂಡರು. ಈ 'ಬುರುಡೆ ರಹಸ್ಯ'ದ ಅಚ್ಚರಿಯ ಅನಾವರಣದ ಸಂದರ್ಶನಕ್ಕಾಗಿ ಪತ್ರಿಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ.

-ಗಿರೀಶ್ ತಾಳೀಕಟ್ಟೆ

KAS ಹುದ್ದೆ ಹರಾಜ್

ACಗೆ -40 ಲಕ್ಷ, DYSPಗೆ -30 ಲಕ್ಷ


ಕರ್ನಾಟಕದ ಅತ್ಯಂತ ಭ್ರಷ್ಟ ಸಂಸ್ಥೆ ಯಾವುದೆಂದು ಕೇಳಿದರೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಮೊದಲ ಸ್ಥಾನ.


ಗೋನಾಳ್ ಭೀಮಪ್ಪ


ಒಬ್ಬ ಅಧ್ಯಕ್ಷ, ಒಬ್ಬ ಸೆಕ್ರೆಟರಿ ಹಾಗೂ ಹತ್ತು ಜನ ಮೆಂಬರ್‌ಗಳಿರುವ ಕೆಪಿಎಸ್‌ಸಿ ಈಗ ಹಾಡುಹಗಲೇ ಸರ್ಕಾರಿ ಹುದ್ದೆಗಳನ್ನು ರಾಜಾರೋಷವಾಗಿ ಹರಾಜಾಕುತ್ತಾ ಕೋಟಿಗಟ್ಟಲೇ ರೂಪಾಯಿಗಳ ದಂಧೆ ನಡೆಸುವ ಕೇಂದ್ರವಾಗಿ ಬದಲಾಗಿ ಹೋಗಿದೆ.

ಜಾತಿವಾರು, ಪ್ರದೇಶವಾರು ಹಾಗೂ ವಿವಿಧ ರಾಜಕೀಯ ಪಕ್ಷವಾರು ಹಂಚಿಹೋಗಿರುವ ಮೆಂಬರ್‌ಗಳು ಡಜನ್‌ಗಟ್ಟಲೇ ಏಜೆಂಟರನ್ನು ಇಟ್ಟುಕೊಂಡು ರಾಜಾರೋಷವಾಗಿ ಡೀಲ್‌ಗಳನ್ನು ಕುದುರಿಸುತ್ತಿದ್ದಾರೆ.

ಈ ಬಾರಿಯ ಕೆಎಎಸ್ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆಯು ಈ ಮೆಂಬರ್‌ಗಳ ಪಾಲಿಗೆ ಬಂಪರ್ ಲಾಭ ತರುತ್ತಿದೆ. 2010ರಲ್ಲಿ ನೋಟಿಫೈ ಆಗಿದ್ದ ಗೆಜೆಟೆಡ್ ಪ್ರೊಬೆಷನರಿ ಆಫೀಸರ್ಸ್ ಹುದ್ದೆಗಳ ನೇಮಕ ಪ್ರಕ್ರಿಯೆ ಈಗ ಇಂಟರ್‌ವ್ಯೂ ಎಂಬ ಅಂತಿಮ ನಿರ್ಣಾಯಕ ಹಂತಕ್ಕೆ ಬಂದಿದೆ. ಈ ಇಂಟರ್‌ವ್ಯೂಗಳು ನಡೆಯುವ ಮುನ್ನವೇ ಕೆಲ ಅಭ್ಯರ್ಥಿಗಳು ಯಾರಾದರೂ ಮೆಂಬರ್‌ಗಳನ್ನು ಹಿಡಿದು ದುಡ್ಡು ಕೊಟ್ಟು ತಮಗೆ ಬೇಕಾದ ಹುದ್ದೆ ಗಿಟ್ಟಿಸಲು ಲಾಬಿ ನಡೆಸುತ್ತಿರುತ್ತಾರೆ.


ಕನಿರಾಂ

ಈ ಹುದ್ದೆಗಳ ಈಗಿನ ಮಾರ್ಕೆಟ್ ರೇಟ್ ಎಷ್ಟಿದೆ ಗೊತ್ತೇ? ನೀವು ಅಸಿಸ್ಟೆಂಟ್ ಕಮಿಷನರ್ ಆಗಬೇಕೆಂದ್ರೆ 40 ಲಕ್ಷ! ಡಿವೈಎಸ್ಪಿ ಆಗಬೇಕೆಂದರೆ 30 ಲಕ್ಷ!! ಕಮರ್ಶಿಯಲ್ ಟ್ಯಾಕ್ಸ್, ತಹಶೀಲ್ದಾರ್ ಅಥವಾ ಟ್ರೆಜರಿ ಆಫೀಸರ್ ಹುದ್ದೆ ಬೇಕೆಂದರೆ 20 ಲಕ್ಷ ಪೀಕಬೇಕು!!!


ಚಂದ್ರಶೇಖರಪ್ಪ

ಈ ದೇಶದಲ್ಲಿ ಎಲ್ಲಾ ವಸ್ತುಗಳ ಬೆಲೆ ಏರುತ್ತಿರುವುದರ ಜೊತೆಗೆ ಭ್ರಷ್ಟಾಚಾರದ ಬೆಲೆಯೂ ಏರುತ್ತಿರುವುದೂ ಒಂದು ವಿಶೇಷ. ಏಕೆಂದರೆ 2009ರ ನೇಮಕಾತಿ ಸಮಯದಲ್ಲಿ ಡಿವೈಎಸ್ಪಿ ಎಸಿ ಇತ್ಯಾದಿ ಹುದ್ದೆಗಳ ಹರಾಜಿನ ರೇಟು ಕೇವಲ 15 ಲಕ್ಷ ರೂಪಾಯಿ ಇತ್ತು, ಈಗ ಅದೇ ಹುದ್ದೆಗಳ ರೇಟು ಅದಕ್ಕೆ ಎರಡರಷ್ಟು ಜಾಸ್ತಿಯಾಗಿದೆ.

ಇದಕ್ಕೆ ಕಾರಣವಿಷ್ಟೇ.


ನಾಗರಾಜ್

ಹಾಲಿ ಕೆಪಿಎಸ್‌ಸಿ ಮೆಂಬರ್‌ಗಳ ಪೈಕಿ ಮೂವರ ಅಧಿಕಾರಾವಧಿ ಮುಂದಿನ ವರ್ಷ ಮುಗಿದುಹೋಗುತ್ತಿದೆ. ಅವರಿಗೆಲ್ಲಾ ಹಾಲಿ ಅಧಿಕಾರ ಇದ್ದಾಗಲೇ ಸಾಕಷ್ಟು ದುಡ್ಡು ಗೆಬರಿಕೊಂಡು ಹೋಗಬೇಕೆಂಬ ಹಸಿವು. ಇನ್ನುಳಿದವರ ಪೈಕಿ ಇತ್ತೀಚೆಗೆ ಮೆಂಬರ್‌ಶಿಪ್ ಖರೀದಿಸಿರುವ ಹಲವರಿದ್ದಾರೆ. ಇವರೆಲ್ಲಾ ಸೀನಿಯರ್ ಮೆಂಬರ್‌ಗಳಿಗಿಂತ ಜಾಸ್ತಿ ದುಡ್ಡು ತೆತ್ತು ಮೆಂಬರ್‌ಶಿಪ್ ಖರೀದಿಸಿರುವವರು. ಈ ರೇಟು ಈಗ ಸರಾಸರಿ ಮೂರರಿಂದ ಐದುಕೋಟಿ ರೂಪಾಯಿಗಳಷ್ಟಿದೆ. ಹಾಗಾಗಿ ಹೊಸ ಮೆಂಬರ್‌ಗಳಿಗೆ ಆದಷ್ಟು ಬೇಗನೆ ತಾವು ಹಾಕಿರುವ ಬಂಡವಾಳ ಎತ್ತಿಕೊಂಡು ಅಧಿಕಾರ ಪೂರೈಸುವುದರೊಳಗಾಗಿ ಲಾಭಗಳಿಸುವ ಪ್ಲಾನ್ ಇದೆ.

ಹೀಗಾಗಿ ಈ ಬಾರಿಯ ಕೆಎಎಸ್ ನೇಮಕಾತಿಯ ಹುದ್ದೆಗಳ ರೇಟು 100% ಏರಿಕೆಯಾಗಿ ಹೋಗಿದೆ.

ಈ ಏರಿಕೆಯ ಭ್ರಷ್ಟಾಚಾರದ ಬಿಸಿ ತಟ್ಟುತ್ತಿರುವುದು ಯಾರಿಗೆ ನೋಡಿ: ಪ್ರತಿಭಾವಂತರು, ಚೆನ್ನಾಗಿ ಮಾರ್ಕ್ಸ್ ಗಳಿಸಿದ್ದರೂ ಹಣ ಕೊಡಲಾಗದವರು ಕೊರಗುತ್ತಾ ಸಂಕಟ ಅನುಭವಿಸುತ್ತಿದ್ದಾರೆ.

ಬರೀ ಅವ್ಯವಸ್ಥೆ-ಅರಾಜಕತೆ


2010ರ ಕೆಎಎಸ್ ನೇಮಕಾತಿಯಲ್ಲೂ ಅನೇಕ ಗೊಂದಲ ಗೋಜಲುಗಳಿವೆ. ಕೆಎಎಸ್ ನೇಮಕಾತಿಯಲ್ಲಿ ಮೊದಲಿನಿಂದಲೂ ಕನ್ನಡ ಸಾಹಿತ್ಯದ ವಿಚಾರ ಆಯ್ಕೆ ಮಾಡಿಕೊಳ್ಳುವವರಿಗೆ ಹೆಚ್ಚು ಮಾರ್ಕ್ಸ್ ಸಿಗುತ್ತಿದೆಯೆಂಬ ಆಕ್ಷೇಪಣೆ ಇದ್ದೇ ಇತ್ತು, ಇದು ಸ್ವಲ್ಪಮಟ್ಟಿಗೆ ನಿಜವೇ ಆಗಿದ್ದರೂ ಕನ್ನಡವಿರಲಿ ಅಥವಾ ಇತರ ಸಬ್ಜೆಕ್ಟ್ ಆರಿಸಿಕೊಂಡು ಲಿಖಿತ ಪರೀಕ್ಷೆ ಬರೆಯುವ ಅಭ್ಯರ್ಥಿಗಳ ಸಿದ್ಧತೆ ಹಾಗೂ ಪ್ರತಿಭೆಯೇ ಅಳತೆಗೋಲಾಗಿರುತ್ತಿತ್ತು. ಹೀಗೆ ಪೂರ್ವಭಾವಿ ಪರೀಕ್ಷೆ ನಂತರ ಮುಖ್ಯ ಪರೀಕ್ಷೆ ಬರೆದು ಪಾಸಾಗುವವರು ಇಂಟರ್‌ವ್ಯೂ ಎದುರಿಸಬೇಕು. ಅಲ್ಲೇ ಕೆಪಿಎಸ್‌ಸಿ ಮೆಂಬರ್‌ಗಳ ಜೊತೆ ಡೀಲ್ ಕುದುರುವುದು.

2010ರಲ್ಲಿ 268 ಕೆಎಎಸ್ ಹುದ್ದೆಗಳಿಗಾಗಿ ನೋಟಿಫೈ ಮಾಡಲಾಗಿತ್ತು, ಲಕ್ಷಾಂತರ ಮಂದಿ ಪೂರ್ವಭಾವಿ ಪರೀಕ್ಷೆ ಬರೆದರಾದರೂ 1:20 ಸರಾಸರಿಯಲ್ಲಿ ಒಟ್ಟು 5360 ಮಂದಿ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯಬೇಕಾಗಿತ್ತು, ಆದರೆ ಅದೇಕೋ ಏನೋ ಕೆಪಿಎಸ್‌ಸಿಯು 5360ಕ್ಕೆ ಬದಲಾಗಿ ಕೇವಲ 5172 ಮಂದಿಗೆ ಮಾತ್ರ ಮುಖ್ಯ ಪರೀಕ್ಷೆಗೆ ಅರ್ಹರೆಂದು ಘೋಷಿಸಿತ್ತು.

ಇದು ನೇಮಕಾತಿ ನಿಯಮದ 1:20 ಸರಾಸರಿಯಷ್ಟಿಲ್ಲ, ಜೊತೆಗೆ ಪರೀಕ್ಷಾ ಹಾಲ್ ಟಿಕೆಟ್ ನೀಡುವಾಗ ಕನಿಷ್ಠ ಒಂದು ನೂರು ಅಭ್ಯರ್ಥಿಗಳ ಹಾಲ್ ಟಿಕೆಟ್ ವಿತರಣೆಯಲ್ಲಿ ಅವ್ಯವಹಾರ ನಡೆದಿರುವ ಶಂಕೆ ಉದ್ಭವಿಸಿದೆ. ಏಕೆಂದರೆ ಪರೀಕ್ಷೆಗೂ ಮುನ್ನ ಪ್ರಕಟಿಸಿರುವ ಅಭ್ಯರ್ಥಿಗಳ ಹಾಲ್ ಟಿಕೆಟಿನ ಸೀರಿಯಲ್ ನಂಬರ್‌ನಲ್ಲಿ 6592 ಆದ ಮೇಲೆ ನೂರರಿಂದ ನೂರೈವತ್ತು ಸಂಖ್ಯೆಯ ನಂಬರ್‌ಗಳನ್ನು ಮೊದಲು ಪ್ರಕಟಿಸಿರಲೇ ಇಲ್ಲ, ನಂತರ ನೋಡಿದರೆ ಪೂರ್ವಭಾವಿ ಪರೀಕ್ಷಾ ಫಲಿತಾಂಶದ ಪಟ್ಟಿಯಲ್ಲಿ ಆ ಮಿಸ್ಸಿಂಗ್ ನಂಬರ್‌ಗಳೂ ಮತ್ತದರ ಅಭ್ಯರ್ಥಿಗಳೂ ಏಕಾಏಕಿ ಪ್ರತ್ಯಕ್ಷರಾಗಿದ್ದಾರೆ. ಇವರೆಲ್ಲ ಯಾರು? ಯಾವ ಸೆಂಟರ್‌ನಲ್ಲಿ ಪರೀಕ್ಷೆ ಬರೆದರೆಂಬ ವಿಚಾರ ಬಹಿರಂಗಗೊಳ್ಳಬೇಕಿದೆ.

ಇಲ್ಲಿ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆಯೂ ಅವ್ಯವಸ್ಥೆ-ಅರಾಜಕತೆ ನಡೆದಿದೆ. ನಿಯಮದ ಪ್ರಕಾರ ಆಯಾ ಸಬ್ಜೆಕ್ಟ್‌ಗಳಲ್ಲಿ ಎಂಟು ವರ್ಷ ಕಾಲ ಪಾಠ ಹೇಳಿರುವ ಪ್ರೊಫೆಸರ್ ಲೆವೆಲ್‌ನವರು ಕೆಎಎಸ್ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಬೇಕು. ಆದರೆ ಕೆಪಿಎಸ್‌ಸಿ ಈ ಬಾರಿ ಅನನುಭವಿ ಪಿಯುಸಿ ಉಪನ್ಯಾಸಕರಿಂದಲೂ ಮೌಲ್ಯಮಾಪನ ಮಾಡಿಸಿರುವ ಬಗ್ಗೆ ಕೆಲ ಅಭ್ಯರ್ಥಿಗಳು ಆಕ್ಷೇಪವೆತ್ತಿದ್ದಾರೆ. ಮಾಹಿತಿ ಹಕ್ಕಿನಡಿ ಸಿಕ್ಕಿರುವ ಮಾಹಿತಿ ಪ್ರಕಾರ ಮಲ್ಲೇಶ್ವರದ ಸರ್ಕಾರಿ ಪಿಯುಸಿ ಕಾಲೇಜಿನ ಸೀತಾದೇವಿ, ಯಶೋಧ ಮುಂತಾದವರನ್ನು ಕೆಪಿಎಸ್‌ಸಿ ಮೌಲ್ಯಮಾಪನಕ್ಕೆ ಬಳಸಿದೆ ಎನ್ನಲಾಗಿದೆ.


ಈ ಬಾರಿಯ ಅಸಲಿ ಸಮಸ್ಯೆ ಕನ್ನಡ ಸಬ್ಜೆಕ್ಟ್ ಆರಿಸಿಕೊಂಡಿರುವ ಅಭ್ಯರ್ಥಿಗಳದ್ದು. ಕೆಎಎಸ್ ಕನ್ನಡ ಸಬ್ಜೆಕ್ಟ್ ಆರಿಸಿಕೊಳ್ಳುವವರಿಗೆ ಹೆಚ್ಚು ಮಾರ್ಕ್ಸ್ ಸಿಗುವ ಹಾಗೂ ಆಯ್ಕೆಯಲ್ಲೂ ಆದ್ಯತೆ ಸಿಗುವಂತಹ ಒಂದು ರೀತಿಯ ಅಘೋಷಿತ ವಾತಾವರಣ ಕೆಪಿಎಸ್‌ಸಿಯಲ್ಲಿತ್ತು, ಇದರಲ್ಲಿ ತಪ್ಪೇನೂ ಇರಲಿಲ್ಲವಾದರೂ ಉಳಿದ ಸಬ್ಜೆಕ್ಟ್ ಆರಿಸಿಕೊಂಡ ಅಭ್ಯರ್ಥಿಗಳು ಇದನ್ನು ಆಕ್ಷೇಪಿಸುತ್ತಿದ್ದರು. ಇದಕ್ಕಿದ್ದ ಪರಿಹಾರ ಏನೆಂದರೆ ಸ್ಕೇಲಿಂಗ್ ವಿಧಾನ ಅಳವಡಿಸಿಕೊಳ್ಳುವುದಾಗಿತ್ತು, ಅದರಂತೆ 1998ರವರೆಗೂ ಇರದಿದ್ದ ಸ್ಕೇಲಿಂಗ್ ವಿಧಾನವನ್ನೂ 1999ರ ಬ್ಯಾಚ್‌ಗೆ ಅನ್ವಯಿಸಲಾಗಿತ್ತು ಆ ನಂತರ ಯಾವುದೇ ಕಾರಣ ಕೊಡದೆ 2005-06ರಿಂದ ಸ್ಕೇಲಿಂಗ್ ಪದ್ಧತಿ ಕೈಬಿಡಲಾಗಿತ್ತು, ಈಗ ನೋಡಿದರೆ 2010ರ ಬ್ಯಾಚ್‌ಗೆ ಪೂರ್ವಭಾವಿ ಪರೀಕ್ಷೆಗೆ ಸ್ಕೇಲಿಂಗ್ ಅಳವಡಿಸದೆ ಮುಖ್ಯ ಪರೀಕ್ಷೆಯಲ್ಲಿ ಅಘೋಷಿತ ಸ್ಕೇಲಿಂಗ್ ಪದ್ಧತಿ ಜಾರಿಮಾಡಿದಂತೆ ಕಾಣುತ್ತಿದೆ.


ವಿಶ್ವನಾಥ್

ಹಾಗಾಗಿ ಇದಕ್ಕೆ ಬಲಿಯಾಗಿರುವುದು ಕನ್ನಡ ವಿಷಯ ಆರಿಸಿಕೊಂಡಿರುವ ಅಭ್ಯರ್ಥಿಗಳು.

ಒಂದು ಅಂಕಿಅಂಶದ ಮೂಲಕ ವಿವರಿಸಬೇಕೆಂದರೆ 2010ರ ಬ್ಯಾಚ್‌ನವರ ಪೈಕಿ ಪ್ರಿಲಿಮಿನರಿಯಿಂದ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದ 5172 ಮಂದಿಯ ಪೈಕಿ 2564 ಮಂದಿ ಕನ್ನಡ ಸಬ್ಜೆಕ್ಟ್‌ನವರೇ ಇದ್ದರು. ಆದರೂ ಇವರಲ್ಲಿ ಬಹುತೇಕರಿಗೆ 900ಕ್ಕೂ ಹೆಚ್ಚಿನ ಮಾರ್ಕ್ಸ್ ಸಿಗದಂತೆ ನೋಡಿಕೊಳ್ಳಲಾಗಿದೆ. ಒಟ್ಟು 174 ಮಂದಿ 900ಕ್ಕಿಂತ ಜಾಸ್ತಿ ಮಾರ್ಕ್ಸ್ ಪಡೆದಿದ್ದರೆ ಅವರಲ್ಲಿ ಕನ್ನಡದವರ ಸಂಖ್ಯೆ ಕೇವಲ 62 ಇದೆ ಎಂಬುದೇ ಅವಕಾಶ ವಂಚಿತರ ದೂರು.

ಇದಕ್ಕಿರುವ ಕಾರಣ ಏನೆಂದರೆ ಈ ಸ್ಕೇಲಿಂಗ್ ಇತ್ಯಾದಿ ವಿಚಾರಗಳು ಈಗ ಹೈಕೋರ್ಟ್‌ನಲ್ಲಿದೆ. ಕನ್ನಡ ಹಾಗೂ ಇತರ ಸಬ್ಜೆಕ್ಟ್‌ನ ಅಭ್ಯರ್ಥಿಗಳ ನಡುವಿನ ಆಯ್ಕೆ ಪ್ರಮಾಣದ ಅಂತರ ಸರಿದೂಗಿಸಲು ಕೆಪಿಎಸ್‌ಸಿಯೇ ಹೀಗೆ ಕನ್ನಡದವರ ಶಿರಚ್ಛೇದ ಮಾಡಿಸಿದೆ ಎನ್ನಲಾಗಿದೆ; ಇದು ಎಷ್ಟು ಅತಿರೇಕಕ್ಕೆ ಹೋಗಿದೆಯೆಂದರೆ ಕೆಲ ಅಭ್ಯರ್ಥಿಗಳಿಗೆ ಒಂದು, ಐದು, ಇಪ್ಪತ್ತೈದು... ಹೀಗೆ ಮನಸ್ಸಿಗೆ ಬಂದಂತೆ ಮಾರ್ಕ್ಸ್ ಕೊಡಲಾಗಿದೆ. ಕೆಎಎಸ್ ಪ್ರಿಲಿಮಿನರಿ ಪಾಸಾಗಿ ಮುಖ್ಯ ಪರೀಕ್ಷೆ ಬರೆಯುವ ಅಭ್ಯರ್ಥಿ ಕನ್ನಡದಲ್ಲಿ ಒಂದು ಅಂಕ ಪಡೆದಿದ್ದಾನೆಂದು ಹೇಳಿದರೆ ನಮಗೆ ಕೆಪಿಎಸ್‌ಸಿ ಬಗ್ಗೆಯೇ ಅನುಮಾನ ಬರಬೇಕು ತಾನೇ?


ರಾಮಕೃಷ್ಣ


ರುದ್ರೇಗೌಡ

ಇದೆಲ್ಲ ಸರಿಹೋಗುವುದು ಯಾವಾಗ? ಕೆಪಿಎಸ್‌ಸಿಯ ಅಧ್ವಾನಗಳು ಒಂದೆರಡಲ್ಲ, ಇತ್ತೀಚಿನ ಘಟನೆಗಳನ್ನೇ ಹೇಳಬೇಕೆಂದರೆ ತೋಟಗಾರಿಕಾ ಸಹಾಯಕರ ನೇಮಕಾತಿ ಸಂದರ್ಶನ ನಡೆದಾಗಲೂ ಅಭ್ಯರ್ಥಿಗಳಿಂದ ತಲಾ 2-3 ಲಕ್ಷ ವಸೂಲಿ ಮಾಡಿದ್ದಾರೆಂಬ ಸುದ್ದಿ ಇದೆ.


ಪಾರ್ಶ್ವನಾಥ್

ಮುಂದೆ ನಡೆಯಲಿರುವ FDA, SDA, PDO ಪರೀಕ್ಷೆಗಳಲ್ಲೂ ಏನೇನು ಅವ್ಯವಸ್ಥೆಯಾಗಲಿದೆಯೋ ಏನೋ?

ಈಗ ನೋಡಿದರೆ ಕೆಎಎಸ್ ಇಂಟರ್‌ವ್ಯೂ ಆರಂಭವಾಗಬೇಕಾದ ಸಮಯದಲ್ಲೇ ಹುದ್ದೆಗಳ ಬಹಿರಂಗ ಹರಾಜು ಶುರುವಾಗಿದೆ.

ಮೂವತ್ತು ಲಕ್ಷ ಲಂಚಕೊಟ್ಟು ಡಿವೈಎಸ್ಪಿ ಆಗುವ ವ್ಯಕ್ತಿ ನ್ಯಾಯ ನಿಷ್ಠೆಯಿಂದ ಕೆಲಸ ಮಾಡಲು ಸಾಧ್ಯವೇ?

ನಲವತ್ತು ಲಕ್ಷ ಕೊಟ್ಟು ಎಸಿ ಹುದ್ದೆ ಖರೀದಿಸುವವ ಲಂಚ ತಿನ್ನದೆ ಸುಮ್ಮನಿರುತ್ತಾನಾ? ಇದೇ ಅಭ್ಯರ್ಥಿಗಳು ಹತ್ತಿಪ್ಪತ್ತು ಲಕ್ಷ ಲಂಚ ಕೊಟ್ಟು ತಹಶೀಲ್ದಾರ್, ಪುರಸಭೆ ಚೀಫ್ ಆಫೀಸರ್, ಟ್ರೆಜರಿ ಆಫೀಸರ್, ಸಮಾಜ ಕಲ್ಯಾಣಾಧಿಕಾರಿಯಾಗಿ ನೇಮಕಗೊಂಡರೆ ಯಾವ ಇಲಾಖೆ ತಾನೆ ಉದ್ಧಾರವಾಗಲು ಸಾಧ್ಯ?

ಕೆಪಿಎಸ್‌ಸಿ ಮೆಂಬರ್‌ಗಳು ಈ ಪ್ರಶ್ನೆಗೆ ಉತ್ತರ ಕೊಡಲಿ?

• ವರದಿಗಾರ

ನಿವೃತ್ತ IAS-KASಗಳೇ KPSC ಸದಸ್ಯರು!

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಒಬ್ಬ ಅಧ್ಯಕ್ಷ, ಇನ್ನೊಬ್ಬ ಕಾರ್ಯದರ್ಶಿ ಬಿಟ್ಟು ಉಳಿದಂತೆ ಒಟ್ಟು ಒಂಬತ್ತು ಮಂದಿ ಸದಸ್ಯರಿದ್ದಾರೆ. ಈ ಸದಸ್ಯರ ನೇಮಕವೆಲ್ಲಾ ಒಂದೋ ರಾಜಕೀಯ ಪ್ರೇರಿತ ಅಥವಾ ಜಾತಿ ಆಧಾರಿತ.

ಆದರೆ ಇವರು ಯಾವುದೇ ಕ್ಯಾಟಗರಿಗೆ ಸೇರಿದ್ದರೂ ಪೇಮೆಂಟ್ ಗಿರಾಕಿಗಳೇ. ಅಂದರೆ ದೊಡ್ಡ ಹಣದ ಗಂಟನ್ನು ಕೊಟ್ಟು ಮೆಂಬರ್‌ಶಿಪ್ ಖರೀದಿಸುತ್ತಾರೆ. ಹಾಗಾಗಿ ಪ್ರತಿಭಾವಂತರು, ಅನುಭವಿಗಳು, ಆಡಳಿತದಲ್ಲಿ ದಕ್ಷತೆ, ಪ್ರಾಮಾಣಿಕತೆ ಇರುವವರನ್ನು ಕೆಎಎಸ್ ಅಧಿಕಾರಿಗಳಾಗಿ ಆಯ್ಕೆ ಮಾಡಬೇಕೆಂಬ ಮಾನದಂಡ ಈ ಸದಸ್ಯರಲ್ಲಿ ಕಾಣಸಿಗುವುದಿಲ್ಲ.



ರಂಗಮೂರ್ತಿ

ಕೆಪಿಎಸ್‌ಸಿಯ ಈಗಿನ ಇನ್ನೊಂದು ಅಪಾಯಕಾರಿ ಬೆಳವಣಿಗೆ ಏನೆಂದರೆ ನಿವೃತ್ತ ಐಎಎಸ್ ಹಾಗೂ ಕೆಎಎಸ್ ಅಧಿಕಾರಿಗಳೇ ಈಗ ಹೆಚ್ಚಿನ ಸಂಖ್ಯೆಯಲ್ಲಿ ಮೆಂಬರ್‌ಗಳಾಗಿ ಬಂದು ಕುಳಿತಿರುವುದು.

ದೊಡ್ಡಬಳ್ಳಾಪುರದ ಎನ್.ರಾಮಕೃಷ್ಣ ನಿವೃತ್ತ ಕೆಎಎಸ್ ಆಫೀಸರ್. ಈತ 2007ರ ಮೇನಲ್ಲಿ ಕೆಪಿಎಸ್‌ಸಿ ಮೆಂಬರ್ ಆದರು. ಜಲಸಂಪನ್ಮೂಲ ಇಲಾಖೆಯಲ್ಲಿ ಆಫೀಸರ್ ಆಗಿ ನಿವೃತ್ತರಾಗಿರುವ ಹಾನಗಲ್‌ನ ಜೆ.ಬಿ. ಚಂದ್ರಶೇಖರಪ್ಪನೂ ಈಗ ಕೆಪಿಎಸ್‌ಸಿ ಮೆಂಬರ್. ಟಿ.ನರಸೀಪುರದ ಡಾ.ಎಂ.ನಾಗರಾಜು ಕೂಡ ಇಂಜಿನಿಯರ್ ಆಗಿದ್ದಾತನೆ.


ಕೃಷ್ಣಪ್ರಸಾದ್

ಇನ್ನು ಬಿ.ಎಸ್. ಕೃಷ್ಣಪ್ರಸಾದ್ ದಶಕಗಳ ಕಾಲ ತಹಶೀಲ್ದಾರ್ etc... ಹುದ್ದೆಯಲ್ಲಿದ್ದ ಕೆಎಎಸ್ ಅಧಿಕಾರಿ. ಐಎಎಸ್ ಅಧಿಕಾರಿಗಳಾಗಿದ್ದ ಡಾ.ಹೆಚ್.ವಿ.ಪಾರ್ಶ್ವನಾಥ್ ಹಾಗೂ ಬಿ.ಪಿ.ಕನಿರಾಂ ಈಗ ಕೆಪಿಎಸ್‌ಸಿ ಸದಸ್ಯರಾಗಿದ್ದಾರೆ. ಇನ್ನೊಬ್ಬ ಮೆಂಬರ್ ಡಾ.ಎಂ.ಮಹದೇವ್ ಕೆಪಿಎಸ್‌ಸಿ ಮೆಂಬರ್ ಆಗುವ ಮೊದಲು ಐಎಸ್‌ಇಸಿ ಸಂಸ್ಥೆಯಲ್ಲಿ ಸಂಶೋಧನಾಧಿಕಾರಿಯಾಗಿದ್ದರು. ಹಾಲಿ ಮೆಂಬರ್‌ಗಳ ಪೈಕಿ ದಕ್ಷಿಣ ಕನ್ನಡದ ಅಡಿಕೆ ಬೆಳೆಗಾರ ಎಸ್.ಆರ್.ರಂಗಮೂರ್ತಿ ಹಾಗೂ ಶಿವಮೊಗ್ಗದ ಬ್ಯುಸಿನೆಸ್‌ಮೆನ್ ಎಸ್.ರುದ್ರೇಗೌಡ ಬಿಜೆಪಿ ಕೋಟಾದಲ್ಲಿ ಮೆಂಬರ್‌ಶಿಪ್ ಲಪಟಾಯಿಸಿದ್ದಾರೆ. ಮಾಜಿ ಅಧಿಕಾರಿಗಳಲ್ಲದವರೆಂದರೆ ಇವರಿಬ್ಬರೆ.


ಮಹದೇವ


ಸ್ವತಃ ಕೆಪಿಎಸ್‌ಸಿಯ ಚೇರ್ಮನ್ ಗೋನಾಳ ಭೀಮಪ್ಪನವರೇ ಮಾಜಿ ಐಎಎಸ್ ಆಫೀಸರ್!

ಈ ಮೊದಲೆಲ್ಲಾ ಸಾಮಾನ್ಯವಾಗಿ ಸಾಮಾಜಿಕ ಮಾನ್ಯತೆ ಪಡೆದ ಗಣ್ಯರು, ಘನತೆಯುಳ್ಳವರು ಕೆಪಿಎಸ್‌ಸಿ ಮೆಂಬರ್‌ಗಳಾಗಿ ನೇಮಕಗೊಳ್ಳುತ್ತಿದ್ದರು. ಆ ನಂತರ ಜಾತಿವಾರು ಕೋಟಾ ಪದ್ಧತಿ ಶುರುವಾಯಿತು. ಅಧಿಕಾರದಲ್ಲಿರುವ ರಾಜಕೀಯ ಪಕ್ಷದವರು ತಮಗೆ ಬೇಕಾದವರನ್ನು ಕೆಪಿಎಸ್‌ಸಿ ಮೆಂಬರ್‌ಗಳಾಗಿ ತಂದು ತುಂಬಲು ಶುರುಮಾಡಿದರು. ಈಗ ನೋಡಿದರೆ ಅತ್ತ ಸಾಮಾಜಿಕ ಸ್ಥಾನಮಾನ ಹಿರಿತನ ಇರುವವರೂ ಅಲ್ಲದ, ಕಡೇಪಕ್ಷ ಆಯಾ ಸಮುದಾಯದ ಘನತೆಯುಳ್ಳವರೂ ಆಗಿರದ ಮಾಜಿ ಐಎಎಸ್-ಕೆಎಎಸ್ ಆಫೀಸರ್‌ಗಳೇ ಕೆಪಿಎಸ್‌ಸಿಯಲ್ಲಿ ಜಮೆಯಾಗಿದ್ದಾರೆ.

ಇವರೆಲ್ಲ ಕೋಟಿಗಟ್ಟಲೇ ಹಣ ಕೊಟ್ಟು ಈ ಮೆಂಬರ್‌ಶಿಪ್ ಖರೀದಿಸಿದ್ದಾರೆ. ತಮ್ಮ ಅಧಿಕಾರಾವಧಿ ಮುಗಿಯುವುದರೊಳಗಾಗಿ ಹಾಕಿರುವ ಬಂಡವಾಳವನ್ನು ಲಾಭದ ಜೊತೆಗೆ ಎತ್ತಿಕೊಳ್ಳುವ ಧಾವಂತ ಇವರಿಗೆ. ಕೆಪಿಎಸ್‌ಸಿಯು ಭ್ರಷ್ಟಾಚಾರದ ಗಂಗೋತ್ರಿಯಾಗಿರುವುದು ಇವರಿಂದಲೇ.

ಸರ್ಕಾರ ಈಗಲಾದರೂ ಕೆಪಿಎಸ್‌ಸಿಯು ನಿವೃತ್ತ ಅಧಿಕಾರಿಗಳ ದಂಧೆ ನಡೆಸುವ ಕೇಂದ್ರವಾಗದಂತೆ ತಡೆಗಟ್ಟಬೇಕಿದೆ. •

ಮಂಡ್ಯ: ಆರ್. ಅಶೋಕ್ ಮೂಲಕ ಪಾತಕಿ ಜಫ್ರುಲ್ಲಾನ ರೀಎಂಟ್ರಿ!



ಅಕ್ಕಿ ವ್ಯಾಪಾರಿ ರಫಿವುಲ್ಲಾ ಕೊಲೆ ಕೇಸಿನಲ್ಲಿ ಆರೋಪಿ ನಂಬರ್ ಒನ್ ಆಗಿರುವ ಜಫ್ರುಲ್ಲಾ ಖಾನ್ ಕಳೆದ ವಾರ ಸಚಿವ ಆರ್.ಅಶೋಕ್‌ಗೆ ದುಬೈನಲ್ಲಿ ಸನ್ಮಾನ ಮಾಡಿದ್ದಾನೆ. ಹಲವಾರು ಪ್ರಕರಣಗಳಲ್ಲಿ ಆರೋಪಿಯಾಗಿರುವ ಈತ ತನ್ನ ಹೆಸರಿಗೆ ಮೆತ್ತಿಕೊಂಡಿರುವ ಕಳಂಕವನ್ನ ಮರೆ ಮಾಚಲು ಸರ್ಕಸ್ಸು ನಡೆಸುತ್ತಾ ಮಂಡ್ಯಕ್ಕೆ ಮತ್ತೊಮ್ಮೆ ದೊಡ್ಡ ಮಟ್ಟದಲ್ಲಿ ರೀ ಎಂಟ್ರಿ ಪಡೆಯಲು ತವಕಿಸುತ್ತಿದ್ದಾನೆ!

ಮಂಡ್ಯದ ಪುಂಡ ಹೈಕಳಿಗೆ ಪುಡಿಕಾಸು ಎರಚಿ ಜೈ ಅನ್ನಿಸಿಕೊಳ್ಳುತ್ತಲೇ ಎಲ್ಲಾ ರಾಜಕೀಯ ಪಕ್ಷಗಳಿಗೂ ಡಾರ್ಲಿಂಗ್ ಆಗಿದ್ದ ಜಫ್ರುಲ್ಲಾ ಅಂತಿಂಥಾ ಆಸಾಮಿಯಲ್ಲ. ಅಧಿಕಾರದಲ್ಲಿರುವ ಪ್ರಭಾವಿಗಳನ್ನು ದುಬೈಗೆ ಕರೆಸಿಕೊಂಡು ಅವರಿಗೆ ಸನ್ಮಾನ ಮಾಡಿ, ಸಕಲವನ್ನೂ ಪೂರೈಸುತ್ತಿರುವವನು ಈತ. ತನ್ನ ಸುತ್ತಲಿನವರಿಗೆ ಚಿಲ್ಲರೆ ಹಣಕೊಟ್ಟು ತಾನು ಸಮಾಜ ಸೇವಕ ಎಂದು ಕರೆಸಿಕೊಳ್ಳುವ ಪಾಕಡಾ. ಇಂತಹ ಜಫ್ರುಲ್ಲಾ ಈಗ ತನ್ನ ಮೇಲಿರುವ ಕೊಲೆ ಆರೋಪದಿಂದ ಹೇಗಾದರೂ ಬಚಾವ್ ಆಗಿ ತಾನು ಸಾಚಾ ಎನಿಸಿಕೊಳ್ಳಲು ಪ್ರಯತ್ನಪಡುತ್ತಿದ್ದಾನೆ. ಆದ್ದರಿಂದಲೇ ಅತ್ತ ಗೃಹ ಸಚಿವ ಆರ್.ಅಶೋಕ್‌ಗೆ ದುಬೈಯಲ್ಲಿ ಸಣ್ಣದೊಂದು ಸನ್ಮಾನ ಮಾಡಿ, ಇತ್ತ ಮಂಡ್ಯದ ತುಂಬೆಲ್ಲಾ ತನ್ನ ಕೆಲ ಚೇಲಾಗಳಿಂದ ಫ್ಲೆಕ್ಸ್, ಕಟೌಟ್‌ನನ್ನು ಹಾಕಿಸಿಕೊಂಡು ಮೆರೆಯುತ್ತಿದ್ದಾನೆ.

ಜಫ್ರುಲ್ಲಾ ತನ್ನ ಚೇಲಾ ನಗರಸಭೆ ಸದಸ್ಯ ಅಫ್ರೋಜ್‌ನನ್ನು ಎತ್ತಿಕಟ್ಟಿ ತನ್ನ ಹಡಿಬಿಟ್ಟಿ ಕೆಲಸಗಳಿಗೆ ತೊಡಕಾಗಿದ್ದ ರಫಿವುಲ್ಲಾ ಎಂಬ ಅಕ್ಕಿ ವ್ಯಾಪಾರಿಯನ್ನು 18 ಜನವರಿ 2010ರಂದು ಮಂಡ್ಯದ ಅಂಬೇಡ್ಕರ್ ವೃತ್ತದ ಬಳಿ ಹಾಡುಹಗಲೇ ಕೊಲೆ ಮಾಡಿಸಿದ ಆರೋಪ ಹೊತ್ತಿದ್ದಾನೆ.

ಹೀಗೆ ರೌಡಿಗಳ ಕೊಲೆ ಆರೋಪದಲ್ಲಿ ಜಫ್ರುಲ್ಲಾನ ಹೆಸರು ಕೇಳಿಬಂದದ್ದು ಇದೇ ಮೊದಲಲ್ಲ. ರೌಡಿ ಜಡೇಜಾ ರವಿಯ ಕೊಲೆಯಾದಾಗಲೂ ಜಫ್ರುಲ್ಲಾನ ಹೆಸರು ಕೇಳಿಬಂದಿತ್ತಾದರೂ ಅದು ದಾಖಲಾಗಿರಲಿಲ್ಲ. ಆದರೆ ರಫಿವುಲ್ಲಾ ಕೊಲೆ ಕೇಸಿನಲ್ಲಿ ಆತನಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮೊದಲೇ ಜಫ್ರುಲ್ಲಾ ಕುಟುಂಬಕ್ಕೂ ರಫೀ ಕುಟುಂಬಕ್ಕೂ ವೈರತ್ವವಿತ್ತು. ಜೊತೆಗೆ ಜಫ್ರುಲ್ಲಾನ ಪಕ್ಕಾ ಶಿಷ್ಯಂದಿರೇ ರಫಿಯನ್ನು ಕೊಲೆ ಮಾಡಿದ್ದರಿಂದ ರಫಿಯ ಇಡೀ ಫ್ಯಾಮಿಲಿ ಮುಂದೆ ನಿಂತು ಜಫ್ರುಲ್ಲಾನನ್ನು ಮೊದಲ ಆರೋಪಿಯನ್ನಾಗಿ ಹೆಸರಿಸಿತ್ತು. ಇದರಿಂದ ಜಫ್ರುಲ್ಲಾ ಬರೋಬರಿ ಒಂದು ವರ್ಷ ಒಂದು ತಿಂಗಳು ಮಂಡ್ಯ ಕಡೆ ಮುಖ ಸಹಿತ ತೋರಿಸದೆ ನಾಪತ್ತೆಯಾಗಿದ್ದ.

ಜಫ್ರುಲ್ಲಾನ ಇತಿಹಾಸ ರೋಚಕವಾಗಿದೆ. ಇಪ್ಪತ್ತು ವರ್ಷಗಳ ಹಿಂದೆ ಇದೇ ಜಫ್ರುಲ್ಲಾ ಮಂಡ್ಯದ ಗಾಂಧಿ ನಗರದಲ್ಲಿ ವಾಸವಿದ್ದುಕೊಂಡು ಆಟೋ ಗ್ಯಾರೇಜೊಂದರಲ್ಲಿ ಕೆಲಸ ಮಾಡುತ್ತಿದ್ದ. ಆದರೀಗ ತಾನು ದುಬೈಯಲ್ಲಿ ದೊಡ್ಡ ಉದ್ಯಮಿ ಆಗಿದ್ದೇನೆ, ಅಲ್ಲಿ ನೂರಾರು ಹೋಟೆಲ್ ವ್ಯವಹಾರ ಮಾಡುತ್ತಿದ್ದೇನೆ, ಹತ್ತಾರು ಕೈಗಾರಿಕೆಗಳಿವೆ, ಸಾವಿರಾರು ಕೋಟಿ ರೂ.ಗಳ ಒಡೆಯ ತಾನು ಎಂದೆಲ್ಲ ಹೇಳಿಕೊಳ್ಳುತ್ತಾನೆ. ಅದೂ ಸಾಲದೆಂಬಂತೆ ತಾನು ದುಬೈ ಕನ್ನಡ ಸಂಘದ ಅಧ್ಯಕ್ಷ ಎಂತಲೂ ಬೋಂಗು ಬಿಡುತ್ತಾನೆ. ಜನ ಕೂಡ ಇದನ್ನೆಲ್ಲ ಪ್ರಶ್ನಿಸದೆ ನಂಬಿದ್ದಾನೆ.

ಆದರೆ ವಾಸ್ತವವಾಗಿ ಈತನ ದುಡ್ಡಿನ ಮೂಲದ ಬಗ್ಗೆ ಹಲವಾರು ಗುಮಾನಿಗಳಿವೆ. ಈತ ಯಾವ ಕೈಗಾರಿಕೆಗಳನ್ನು, ಉದ್ದಿಮೆಗಳನ್ನು ನಡೆಸುತ್ತಾನೆ ಎಂಬುದು ಯಾರಿಗೂ ನಿಖರವಾಗಿ ಗೊತ್ತಿಲ್ಲ. ಹಾಗೆಯೇ ಕನ್ನಡ ಸಂಘದ ಕತೆ ಕೂಡ. ದುಬೈಯಲ್ಲಿ ಹಲವಾರು ಕನ್ನಡ ಸಂಘಗಳಿದ್ದು ಅಂತಹುಗಳ ಒಂದು ತುಂಡಿನ ಮುಖ್ಯಸ್ಥ ಈತನಾಗಿರಬಹುದಷ್ಟೇ.

ಇಂತಹ ಬಂಡಲ್ ರಾಜ, ಕೊಲೆ ಆರೋಪಿ ಜಫ್ರುಲ್ಲಾನಿಂದ ದುಬೈಗೆ ಹೋಗಿ ಸನ್ಮಾನ ಮಾಡಿಸಿಕೊಂಡು ಬರುವ ಅದ್ಯಾವ ತೆವಲು ಸಚಿವ ಆರ್.ಅಶೋಕ್‌ಗೆ ಅಮರಿಕೊಂಡಿತ್ತೋ ಆ ಭಗವಂತನೇ ಬಲ್ಲ. ಆದರೆ ಜಫ್ರುಲ್ಲಾ ಮಾತ್ರ ಈ ಮೂಲಕ ಲಾಭ ಮಾಡಿಕೊಳ್ಳುತ್ತಿರುವುದು ಸುಳ್ಳಲ್ಲ. ಅಂದಹಾಗೆ, ಪ್ರಭಾವಿಗಳಿಗೆ ಹೀಗೆ ಸನ್ಮಾನ ಮಾಡುವುದನ್ನೇ ಜಫ್ರುಲ್ಲಾ ಒಂದು ವೃತ್ತಿಯನ್ನಾಗಿ ಮಾಡಿಕೊಂಡಿದ್ದಾನೆ. ಆ ಮೂಲಕ ತನ್ನೆಲ್ಲಾ ಕೆಲಸಗಳನ್ನೂ ಮಾಡಿಸಿಕೊಳ್ಳುತ್ತಾನೆ.

ಜಫ್ರುಲ್ಲಾ ಯಾವತ್ತೂ ಒಂದು ರಾಜಕೀಯ ಪಕ್ಷದೊಂದಿಗೆ ನಿಯತ್ತಿನಿಂದ ಇದ್ದವನಲ್ಲ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಅಂಬರೀಷ್ ತರಹದವರನ್ನ, ಜೆಡಿಎಸ್ ಅಧಿಕಾರದಲ್ಲಿದ್ದಾಗ ಕುಮಾರಸ್ವಾಮಿ, ಚಲುವರಾಯಸ್ವಾಮಿ ಮತ್ತು ಶಾಸಕ ಎಂ.ಶ್ರೀನಿವಾಸ್ ತರಹದವರನ್ನೂ ಉಪಯೋಗಿಸಿಕೊಂಡು ತನ್ನ ಬೇಳೆ ಬೇಯಿಸಿಕೊಂಡಿದ್ದ. ಈಗ ಚೆಡ್ಡಿ ಬಿಜೆಪಿಗಳ ಮತ್ತು ಪೆದ್ದು ಶಿಖಾಮಣಿ ಅಶೋಕ್ ನಂತಹವರ ಸರದಿ ಅಷ್ಟೇ!

ಇದೇ ಜಫ್ರುಲ್ಲಾ ಹಿಂದೊಮ್ಮೆ ಮೂಡಾದ ಮಾಜಿ ಅಧ್ಯಕ್ಷ ಅಸಾದುಲ್ಲಾ ಖಾನ್ ಮತ್ತವನ ಸಹೋದರರೊಂದಿಗೆ ಸೇರಿ ಶ್ರೀರಂಗಪಟ್ಟಣದಲ್ಲಿ ಕೈಗಾರಿಕೆ ಮಾಡುತ್ತೇವೆಂದು ಬೊಗಳೆ ಬಿಟ್ಟು ಬರೋಬ್ಬರಿ ಎಂಟು ಕೋಟಿ ರೂ.ಗಳನ್ನ ಯಾವ ಗ್ಯಾರಂಟಿಯೂ ನೀಡದೆ ಸಾಲ ಪಡೆದು ಬ್ಯಾಂಕ್‌ಗೇ ದೋಖಾ ಮಾಡಿದ್ದರು. ಆಗ ಮ್ಯಾನೇಜರ್ ಆಗಿದ್ದ ಸ್ವಾಮಿ ಎಂಬಾತ ಬ್ಯಾಂಕಿನಲ್ಲಿನ ತನ್ನ ಕೆಲಸ ಕಳೆದುಕೊಂಡು ಈಗ ಬೆಂಗಳೂರಿನಲ್ಲಿ ಹುಚ್ಚನಾಗಿ ಅಲೆಯುತ್ತಿದ್ದಾನೆ. ಇದು ದುಬೈ ಕೈಗಾರಿಕೋದ್ಯಮಿ ಜಫ್ರುಲ್ಲಾನ ಕರಾಮತ್ತು!

ಈತನ (ಅ)ವ್ಯವಹಾರ ಇಷ್ಟಕ್ಕೆ ನಿಲ್ಲುವುದಿಲ್ಲ. ಹಿಂದೊಮ್ಮೆ ಈತ ಮಂಡ್ಯದ ಐವರು ಪೊಲೀಸರಿಗೂ ದುಬೈ ಟೂರ್ ಕರುಣಿಸಿದ್ದ. ಕಾರಣ ಅಷ್ಟೊತ್ತಿಗಾಗಲೇ ಜಫ್ರುಲ್ಲಾನ 420 ಕೃತ್ಯಗಳ ಬಗ್ಗೆ ಪೊಲೀಸರಿಗೆ ದಟ್ಟ ವಾಸನೆ ಬಡಿದಿತ್ತು. ಆಗ ಪೊಲೀಸರನ್ನೇ ಪುಸಲಾಯಿಸಲು ಪಶ್ಚಿಮ ಠಾಣೆಯ ನಟರಾಜ, ಕ್ರೈಂ ಬ್ರಾಂಚಿನ ಲಿಂಗರಾಜ, ರೂರಲ್ ಠಾಣೆಯ ದೇವರಾಜ, ಎಸ್ಪಿ ಆಫೀಸಿನ ಕ್ಯಾಮರಾಮನ್ ಕೇಶವ, ಡಿವೈಎಸ್‌ಪಿ ಆಫೀಸಿನ ಶಂಕರ್ ಎಂಬ ಪೊಲೀಸ್ ಗಿರಾಕಿಗಳನ್ನ ದುಬೈಗೆ ಕರೆಸಿಕೊಂಡು ಅವರ ಎಲ್ಲ 'ಅಗತ್ಯ'ಗಳನ್ನ ಈಡೇರಿಸಿದ್ದ. ಇಂತಹ ಪೋಲಿಸಪ್ಪಗಳ ನೆರವಿನಿಂದಲೇ ಈತ ಸದಾ ಬಚಾವಾಗುತ್ತಾ ಬಂದಿದ್ದಾನೆ ಎನ್ನುವವರೂ ಇದ್ದಾರೆ.



ಇಂತಹ ಹಿನ್ನೆಲೆಯ ಜಫ್ರುಲ್ಲಾ ಈಗ ಮತ್ತೊಮ್ಮೆ ಮಂಡ್ಯದ ಜನರನ್ನು ದಿಕ್ಕು ತಪ್ಪಿಸಿ ತನ್ನ ಮೇಲಿರುವ ಆರೋಪಗಳಿಂದ ಬಚಾವಾಗುವ ಉದ್ದೇಶದಿಂದ ತರಥರದ ನಾಟಕವಾಡುತ್ತಿದ್ದಾನೆ. ಇತ್ತೀಚೆಗೆ ಬೇಬಿಯ ದುರ್ದಂಡೆ ಎಂಬ ಕಪಟ ಸ್ವಾಮಿಯ ಮೂಲಕ ಶ್ರೀರಂಗಪಟ್ಟಣದ ಚಂದ್ರವನದಲ್ಲಿ 'ಗುರುರಕ್ಷೆ' ಸನ್ಮಾನವನ್ನು ಸಿಎಂ ಯಡಿಯೂರಪ್ಪನ ಮೂಲಕ ಮಾಡಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಅಲ್ಲಾ ಜಫ್ರುಲ್ಲಾ ಮಂಡ್ಯಕ್ಕೆ ಮಾಡಿರುವ ಕೊಡುಗೆಯಾದರೂ ಏನು? ಹತ್ತಾರು ಜನಕ್ಕೆ ಉದ್ಯೋಗ ನೀಡಿದ್ದಾನೆಯೇ? ಅಥವಾ ಬಡವರಿಗೆ ಸಹಾಯ ಮಾಡಿದ್ದಾನೆಯೇ? ಹೋಗಲಿ ತನ್ನ ಮುಸ್ಲಿಂ ಸಮುದಾಯದ ಬಡವರಿಗಾದರೂ ನೆರವು ನೀಡಿದ್ದಾನೆಯೇ?


ಇಲ್ಲವೇ ಇಲ್ಲ. ಬದಲಾಗಿ ಜಫ್ರುಲ್ಲಾನನ್ನು ಕಂಡರೆ ಮಂಡ್ಯದ ಮುಸ್ಲಿಂ ಸಮುದಾಯ ನೆಟಿಕೆ ಮುರಿಯುತ್ತೆ. ಇಂತಹ ಕುಖ್ಯಾತರಿಗೆ ಸನ್ಮಾನ ಮಾಡುವ, ಹಬ್ಬ ವಗೈರೆಗಳಿಗೆ ಕಟೌಟ್ ಹಾಕಿಸುವ ಆತನ ನೀಚ ಹಿಂಬಾಲಕರಿಗೆ ಏನನ್ನಬೇಕು?

ಸದ್ಯ ಜಫ್ರುಲ್ಲಾ ಅಬ್ಬರದ ಪ್ರಚಾರಕ್ಕಿಳಿದಿದ್ದಾನೆ. ಮಂಡ್ಯದಲ್ಲಿ ಪುಂಡರನ್ನ ಬೆಳೆಸಿ ಜನಸಾಮಾನ್ಯರ ನೆಮ್ಮದಿಯನ್ನ ಹಾಳು ಮಾಡಲು ರೆಡಿಯಾಗಿದ್ದಾನೆ.


ಮಂಡ್ಯ ಜನರಿಗೆ ಯಾವ ದುರ್ಗತಿ ಕಾದಿದೆಯೋ?

- ಲಕ್ಷ್ಮಣ್ ಚೀರನಹಳ್ಳಿ





PDO ಪರೀಕ್ಷಾ ಕೈಪಿಡಿ ಬೆಲೆ 30/-



PDO ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕ ಬೆಲೆ 350/-



ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕಗಳು

ಗೈಡ್ ಪ್ರಕಾಶನದ ಪುಸ್ತಕಗಳು ಭರದಿಂದ ಮಾರಾಟವಾಗುತ್ತಿವೆ ಎಲ್ಲೆಡೆ ಲಭ್ಯ


ಪ್ರತಿಗಳಾಗಿ ಸಂಪರ್ಕಿಸಿ
ವ್ಯವಸ್ಥಾಪಕರು
ಗೈಡ್ ಪ್ರಕಾಶನ
ನಂ. 9. ಇ.ಎ.ಟಿ. ರಸ್ತೆ
ಬಸವನಗುಡಿ, ಬೆಂಗಳೂರು 4
ಫೋನ್: 9880302817



ಶಿಕಾರಿಪುರ ಸ್ವಾಮಿಯ ಕೈಲಿ ವಿಸ್ಕಿ-ಚಪ್ಪಲಿ!

ಈ ಆಸಾಮಿ ಬಾಯ್ಬಿಟ್ಟರೆ ಎದುರಿರುವ ಮಂದಿ ಕೊಳಚೆಯ ಅಭ್ಯಂಗವಾದಂತೆ ಮುಖ ಕಿವುಚಿಕೊಳ್ಳುತ್ತಾರೆ. ಈತನ ಇಡೀ ವ್ಯಕ್ತಿತ್ವವನ್ನು ಸೂಕ್ಷ್ಮದರ್ಶಕದಲ್ಲಿ ತಡಕಾಡಿದರೂ ಭಕ್ತಿ-ಅಧ್ಯಾತ್ಮದ ಸಣ್ಣದೊಂದು ಕುರುಹೂ ಗೋಚರಿಸುವುದಿಲ್ಲ. ಒಂದು ಕೋನದಿಂದ ಹೈಟೆಕ್ ಪದ್ದೆಯಂತೆಯೂ, ಇನ್ನೊಂದು ಕೋನದಿಂದ ಫ್ಯಾಶನ್ನಿಗೆ ಕಾವಿ ಸುತ್ತಿಕೊಂಡ ರೌಡಿಯಂತೆಯೂ ಕಾಣುವ ಆಕೃತಿಯ ಹೆಸರು ಗುರುಲಿಂಗ ಜಂಗಮ ಶಿವಾಚಾರ್ಯ ಸ್ವಾಮೀಜಿ. ದುರಂತವೆಂದರೆ ಈತ ಸಂಪನ್ನ ಐತಿಹ್ಯವಿರುವ ಸಾಲೂರು ಹಿರೇಮಠದ ಪೀಠಾಧಿಪತಿ!

ಸಾಮಾನ್ಯರ ಸಣ್ಣತನ, ಆಸೆ-ಆಕಾಂಕ್ಷೆಗಳನ್ನೆಲ್ಲ ಮೀರಿಕೊಂಡವ ಕಾವಿಯುಟ್ಟು ಸನ್ಯಾಸಿಯಾಗಲು ಅರ್ಹನೆಂಬುದು ಲೋಕರೂಢಿಯ ವಿಚಾರ. ಆದರೆ ಸದರಿ ಸ್ವಾಮಿ ಗುರುಲಿಂಗ ಜಗತ್ತಿನ ಸಕಲ ತೀಟೆ-ತೆವಲುಗಳಿಗೆ ಕಾವಿ ಬಣ್ಣ ಬಳಿದು ಸುತ್ತಿಕೊಂಡಿರುವವನು. ಬಳಿ ಬಂದ ಭಕ್ತರಿಗೆ 'ಲೋಕಲ್' ಸಂಸ್ಕೃತದಲ್ಲಿ ಆಟಕಾಯಿಸಿಕೊಳ್ಳುವ, ಹೆಂಗಸರನ್ನು ಕಂಡರೆ ಗದ್ದಿಗೆಯನ್ನೇ ಮಂಚವಾಗಿಸಿಕೊಳ್ಳಬಲ್ಲ ಲಂಪಟತನವಿರುವ ಈತ ಮೊನ್ನೆ ಬಡಪಾಯಿ ಪುರೋಹಿತರುಗಳ ಮೇಲೆ



ಗುರುಲಿಂಗ ಎಸೆದ ಚಪ್ಪಲಿ...

ಚಪ್ಪಲಿ ಎಸೆದು ಹೊಸ ಯಡವಟ್ಟೊಂದನ್ನು ಮಾಡಿಕೊಂಡಿದ್ದಾನೆ.

ಸಾಲೂರು ಗ್ರಾಮದಲ್ಲಿ ಹೊಸದಾಗಿ ನಿರ್ಮಾಣಗೊಂಡ ಬನಶಂಕರಿ ದೇವಸ್ಥಾನ ಗುರುಲಿಂಗನ ಗೂಂಡಾಗಿರಿಗೆ ಪ್ರತ್ಯಕ್ಷ ಸಾಕ್ಷಿಯಾಗಿ ನಿಂತಿದೆ. ಹೊಸದಾಗಿ ನಿರ್ಮಾಣಗೊಂಡಿರುವ ಈ ದೇವಾಲಯದ ಪೂಜಾ ಕಾರ್ಯಕ್ರಮಗಳನ್ನು ಮೊನ್ನೆ ಹಮ್ಮಿಕೊಳ್ಳಲಾಗಿತ್ತು. ಗುರುಲಿಂಗನ ಗೂಂಡಾಗಿರಿಗೆ ಬೇಸತ್ತಿದ್ದ ಊರ ಜನ ಆತನ ಕೈಕೆಳಗೆ ಕಲಿತ ಪುರೋಹಿತರಿಂದಲೇ ಪೂಜಾ ಕಾರ್ಯ ನಡೆಸಲು ತೀರ್ಮಾನಿಸಿದರು. ಇದರಿಂದ ಕುದ್ದುಹೋದ ಗುರುಲಿಂಗ ಆಹ್ವಾನ ಪತ್ರಿಕೆ ಕೊಡಲು ಬಂದ ಹಿರೀಕರಿಗೆ ಬಾಯಿಗೆ ಬಂದಂತೆ ಬೈದು ಕಳಿಸಿದ್ದ. ಆತನ ಕೊಳಕು ಜಾಯಮಾನದ ಪರಿಚಯವಿದ್ದ ಅವರೆಲ್ಲ ಮಾತಾಡದೆ ಎದ್ದು ನಡೆದಿದ್ದರು.


ಇದೆಲ್ಲದರ ನಡುವೆಯೇ ಮೊನ್ನೆ ಮಂಗಳವಾರ ಬನಶಂಕರಿ ಗುಡಿಯ ಪ್ರತಿಷ್ಠಾಪನಾ ಕಾರ್ಯ ನೆರವೇರುತ್ತಿತ್ತು. ಈ ಸಂದರ್ಭದಲ್ಲಿ ತನ್ನ ಶಿಷ್ಯರೊಂದಿಗೆ ಕಾರಲ್ಲಿ ಬಂದಿಳಿದ ಗುರುಲಿಂಗ ಪಕ್ಕಾ ಗೂಂಡಾಗಿರಿಗಿಳಿದ. ಹಿರಿಯರು-ಕಿರಿಯರೆನ್ನದೆ ಎಲ್ಲರನ್ನೂ ಏಕವಚನದಲ್ಲೇ ಅಟ್ಟಾಡಿಸಿ 'ದೇವಸ್ಥಾನ ಕಟ್ಟೋಕೆ, ನನ್ನನ್ನು ಬಿಟ್ಟು ಪೂಜೆ ಮಾಡೋಕೆ ಯಾವ ಬೋ...ಮಗ ಹೇಳಿದ' ಅಂತೆಲ್ಲ ಅವಾಜು ಹಾಕಿದ. ತದನಂತರ ಶಿಷ್ಯನಿಗೆ ಸೂಚನೆ ನೀಡಿದ್ದೇ, ಆತ ಕವರಿನಲ್ಲಿ ತಂದಿದ್ದ ಚರ್ಮದ ಚಪ್ಪಲಿ ತೆಗೆದು ಎಸೆದ. ಅದರಲ್ಲೊಂದು ಗಣಪತಿ ವಿಗ್ರಹಕ್ಕೆ ಬಡಿಯಿತು!

ಛೇ, ಸ್ವಾಮೀಜಿಯೊಬ್ಬ ಹೀಗೆಲ್ಲ ನಡೆದುಕೊಳ್ಳಲು ಸಾಧ್ಯವೇ ಅಂತೊಂದು ಗುಮಾನಿ ನಿಮ್ಮನ್ನು ಕಾಡಿದರೆ ಆಶ್ಚರ್ಯವಿಲ್ಲ. ಆದರೆ ಗುರುಲಿಂಗ ಜಂಗಮ ಶಿವಾಚಾರ್ಯ ಸ್ವಾಮೀಜಿಯ ಅಸಲೀ ವೃತ್ತಾಂತ, ದಂಧೆ-ದಗಲ್ಬಾಜಿಗಳು ಭಯಾನಕವಾಗಿವೆ. ಸಾವಿರಾರು ಜನರ ಶ್ರದ್ಧೆಯ ಕೇಂದ್ರವಾದ ಸಾಲೂರು ಹಿರೇಮಠದಲ್ಲಿ ಈತ ನಡೆಸುತ್ತಿರುವ ತರಹೇವಾರಿ ಭಾನಗಡಿಗಳು ನಿಜಕ್ಕೂ ಅಸಹ್ಯ ಹುಟ್ಟಿಸುವಂತಿವೆ.

ಸಾಲೂರು ಮಠಕ್ಕೆ ಹಿಂದೆ ಸ್ವಾಮೀಜಿಯಾಗಿದ್ದವರು ಪಂಚಾಕ್ಷರಿ. ಈತನ ಬಗ್ಗೆ ಇಂದಿಗೂ ಭಕ್ತಗಣದಲ್ಲೊಂದು ಪೂಜ್ಯಭಾವನೆಯಿರುವುದು ಸುಳ್ಳಲ್ಲ. ಪಂಚಾಕ್ಷರಿ ಕಾಲದಲ್ಲಿ ಮಠಕ್ಕೊಂದು ಘನತೆ-ಗೌರವವಿತ್ತು. ಇದೆಲ್ಲ ಮಣ್ಣುಪಾಲಾಗುವ ಮುನ್ಸೂಚನೆಯಂತೆ ಈಗೊಂದು ಇಪ್ಪತ್ತೈದು ವರ್ಷದ ಹಿಂದೆ ವ್ಯಾಸಂಗದ ನೆಪದಲ್ಲಿ ಮಠಕ್ಕೆ ವಕ್ಕರಿಸಿದವನು ಗುರುಲಿಂಗ. ಈತ ಪಂಚಾಕ್ಷರಿಗಳ ದೂರದ ಸಂಬಂಧಿ. ಆ ಸಮಯದಲ್ಲಿ ವಿದ್ಯೆ-ವ್ಯಾಸಂಗದಲ್ಲಿ ಶ್ರದ್ಧೆಯಿದ್ದ ಈತನನ್ನು ಹದಿನೈದು ವರ್ಷಗಳ ಹಿಂದೆ ಸ್ವಾಮೀಜಿಯನ್ನಾಗಿಸಿದ ಪಂಚಾಕ್ಷರಿ ಕಣ್ಮುಚ್ಚಿಕೊಂಡರು.

ನಂತರದ ದಿನಗಳಲ್ಲಿ ಜಂಗಮ ಶಿವಾಚಾರ್ಯನಾಗಿ ಗೆಟಪ್ಪು ಬದಲಿಸಿದ ಗುರುಲಿಂಗ ಮೆಲ್ಲಗೆ ಅಧ್ಯಾತ್ಮದ ಪೊರೆ ಕಳಚಲಾರಂಭಿಸಿದ. ಶರಣು ಬಂದ ಚೆಂದದ ಹೆಣ್ಮಕ್ಕಳನ್ನು ಮಠದೊಳಗೇ ಬೇಟೆಯಾಡಲಾರಂಭಿಸಿದ. ಇದರೊಂದಿಗೆ ವಿಸ್ಕಿ ಹೀರುವ ಚಟ ಹತ್ತಿಸಿಕೊಂಡ ಗುರುಲಿಂಗ ಅಮಾಯಕ ಹೆಣ್ಮಕ್ಕಳ ಮೇಲೆ ಹೋರಿಯಂತೆ ಎರಗಲಾರಂಭಿಸಿದ.

ಇಂಥ ದುರ್ಬುದ್ಧಿಗಳು ಆಡಿಗಡಿಗೆ ಅನಾವರಣಗೊಂಡಾಗಲೂ ತದುಕಬೇಕಿದ್ದ ಹಿರಿಯರು ಸಮುದಾಯದ



ಹಾಳಾದ ಹೋಮಕುಂಡ...

ಮಾನ ಮರ್ಯಾದೆಗಳ ದೃಷ್ಟಿಯಿಂದ ವ್ಯವಸ್ಥಿತವಾಗಿ ಮುಚ್ಚಿಹಾಕಲಾರಂಭಿಸಿದರು. ಕೆಲ ಸಂದರ್ಭಗಳಲ್ಲಿ ಅನ್ಯಾಯಕ್ಕೊಳಗಾದ ಹುಡುಗಿಯ ಕಡೆಯವರು ಗುರುಲಿಂಗನಿಗೆ ತದುಕಲು ನಿಂತದ್ದೂ ಇದೆ. ಈಗ್ಗೆ ಎರಡು ವರ್ಷಗಳ ಹಿಂದೆ ನಡೆದ ಅಂತಹುದೇ ಒಂದು ಘಟನೆ ಕಳ್ಳ ಸ್ವಾಮಿಯ ಕಾಮುಕತನಕ್ಕೆ ಕನ್ನಡಿಯಂತಿದೆ.

ಶಿಕಾರಿಪುರದ ಬಡ ಲಿಂಗಾಯತ ಕುಟುಂಬವೊಂದು ಪಾರಂಪರಿಕ ಆಚರಣೆಗೆ ಕಟ್ಟುಬಿದ್ದು ಗುರುಲಿಂಗನ ಬಳಿ ಬಂದಿತ್ತು. ಇದರಲ್ಲೇ ಚೆಂದದ ಹುಡುಗಿಯೊಬ್ಬಳೆಡೆಗೆ ವಕ್ರದೃಷ್ಟಿ ಬೀರಿದ ಕಾಮುಕ ಸ್ವಾಮಿ ಮೆಲ್ಲಗೆ ಆಕೆಯನ್ನು ಪಳಗಿಸಿಕೊಳ್ಳಲಾರಂಭಿಸಿದ. ಪೂಜೆ ಪುನಸ್ಕಾರಗಳ ನೆಪದಲ್ಲಿ ಅಡಿಗಡಿಗೆ ಆಕೆಯ ಮನೆಗೆ ಹೋಗಿ ಬರಲಾರಂಭಿಸಿದ. ಆಕೆಯ ಪೋಷಕರು ಸ್ವಾಮಿಯೆಂಬ ಭಕ್ತಿಯಿಂದ ಒಂದಷ್ಟು ದಿನ ಸಹಿಸಿ ಕೊಂಡರಾದರೂ ಅದೊಂದು ದಿನ ಅಸಲೀ ವಿಚಾರ ತಿಳಿದುಹೋಯಿತು. ಈ ಸಂಬಂಧ ಆ ಗ್ರಾಮದಲ್ಲೇ ಪಂಚಾಯಿತಿ ನಡೆದು ಗುರಲಿಂಗನನ್ನು ಅಟ್ಟಾಡಿಸಲೂ ನಿರ್ಧರಿಸಲಾಗಿತ್ತು. ಆದರೆ ಕಳ್ಳಸ್ವಾಮಿ ಏನೇನೊ ತಂತ್ರ ಉಪಯೋಗಿಸಿ ಆ ಹುಡುಗಿಗೆ ಬೇರೆ ಹುಡುಗನೊಂದಿಗೆ ಮದುವೆ ಮಾಡಿಸಿ ಕೈತೊಳೆದುಕೊಂಡಿದ್ದ. ಹುಡುಗಿಯರಿಂದ ಮೊದಲ್ಗೊಂಡು ವಿವಾಹಿತ ಹೆಂಗಸರ ವರೆಗೆ ಗುರುಲಿಂಗನಿಗೆ ಬಲಿಯಾದವರ ಪಟ್ಟಿ ದೊಡ್ಡದಿದೆ. ಅವರೆಲ್ಲ ಕೌಟುಂಬಿಕ ಮರ್ಯಾದೆಗಂಜಿದ್ದರಿಂದ ಕಾಮುಕ ಸ್ವಾಮಿ ಬಚಾವಾಗುತ್ತಾ ಬಂದಿದ್ದಾನೆ.

ಗುರುಲಿಂಗನ ಬಗ್ಗೆ ತಲಾಶಿಗೆ ನಿಂತರೆ ಒಂದನ್ನೊಂದು ಮೀರಿಸುವಂತಹ ವಿಚಾರಗಳು ದಂಡಿ ದಂಡಿಯಾಗಿ ಎದುರುಗೊಳ್ಳುತ್ತವೆ. ಅಷ್ಟಕ್ಕೂ ಈಗ ಸಾಲೂರು ಹಿರೇಮಠವೆಂಬುದು ಹಲವಾರು ದಂಧೆಗಳ ಕಾರಸ್ಥಾನವಾಗಿ ಬದಲಾಗಿದೆ. ಸದ್ಯ ಗುರುಲಿಂಗನ ಕಡೆಯಿಂದ ಬಡ್ಡಿ ದಂಧೆ ಜೋರಾಗಿ ನಡೆಯುತ್ತಿರುವ ಬಗ್ಗೆ ಆತನ ಭಕ್ತಗಣವೇ ಬಾಯಿ ಬಿಡಲಾರಂಭಿಸಿದೆ. ಸೂಕ್ಷ್ಮಸಂಗತಿಯೆಂದರೆ ಈ ಬಡ್ಡಿ ದಂಧೆಯ ಹಿಂದೆಯೂ ಗುರುಲಿಂಗನ ಕಾಮುಕತನವೇ ಕೆಲಸ ಮಾಡುತ್ತಿದೆ. ಚೆಂದದ ಹೆಣ್ಮಕ್ಕಳಿರುವ ಕುಟುಂಬವೊಂದು ಮಠ ಹೊಕ್ಕಿತ್ತೆಂದರೆ ಸಹಾಯದ ನೆಪದಲ್ಲಿ ಗುರುಲಿಂಗ ಹಣ ನೀಡುತ್ತಿದ್ದ. ಸ್ವಲ್ಪೇ ದಿನಗಳಲ್ಲಿ ಬಡ್ಡಿಗಾಗಿ ಪೀಡಿಸಲಾರಂಭಿಸಿ ಮನೆಗೇ ನುಗ್ಗಿ ದಾಂಧಲೆಯೆಬ್ಬಿಸುತ್ತಿದ್ದ. ಇದೇ ನೆಪದಲ್ಲಿ ಹೆಣ್ಮಕ್ಕಳ ಬದುಕನ್ನ ಆಪೋಶನ ತೆಗೆದುಕೊಳ್ಳುವುದು ಗುರುಲಿಂಗ ನಡೆಸುವ ಹಡಬೆ ಕೆಲಸಗಳಲ್ಲಿ ಪ್ರಮುಖವಾದದ್ದು.

ಹಾಗಂತ ಈತ ಮಠದೊಳಗಿನ ಬಾಲೆಯರನ್ನು ಕಾಡಿಸಿ ತಣಿಯುವವನಲ್ಲ. ಸದಾಕಾಲ ಗೋವಾ, ಆಂಧ್ರ ಪ್ರದೇಶ ಅಂತೆಲ್ಲ ಕಾರಲ್ಲಿ ಯಾತ್ರೆ ಹೊರಡುವ ಈತ ಒಂದು ಕ್ಷಣವೂ ವಿಸ್ಕಿ ಸಿಗರೇಟುಗಳನ್ನು ಬಿಟ್ಟಿರುವವನಲ್ಲ. ಎಷ್ಟೇ ದೂರವಿದ್ದರೂ ತಾನೇ ಡ್ರೈವ್ ಮಾಡುವ ಈತ ಜೊತೆಯಲ್ಲೊಬ್ಬಳನ್ನು ಕರೆದೊಯ್ಯುವುದನ್ನೂ ಮರೆಯುವುದಿಲ್ಲ. ಹೋದಲೆಲ್ಲಾ ಪಬ್ಬು-ಬಾರು ಅಂತ ಮಜಾ ಉಡಾಯಿಸುವ ಗುರುಲಿಂಗ ಅದ್ಯಾವ ಸೀಮೆ ಸ್ವಾಮಿಯೋ ಪರಮಾತ್ಮನೇ ಬಲ್ಲ. ಈತನ ತೆವಲುಗಳೆಲ್ಲ ತನ್ನ ಜಾತಿ ಪ್ರಾಬಲ್ಯದಿಂದಲೇ ಮುಚ್ಚಿಹೋಗಿದ್ದು ಮಹಾ ದುರಂತ. ಈಗೊಂದೆರಡು ವರ್ಷಗಳ ಹಿಂದೆ ಹೆಂಗಸೊಬ್ಬಳೊಂದಿಗೆ ಕಾರಲ್ಲಿ ತೆರಳುವಾಗ ದಾವಣಗೆರೆ ಬೈಪಾಸ್ ಬಳಿ ಪೊಲೀಸರಿಗೆ ತಗುಲಿಕೊಂಡಿದ್ದ. ಆದರೆ ಈ ಘಟನೆಯನ್ನು ಖುದ್ದು ಪೊಲೀಸರೇ ಈ ಮುಚ್ಚಿ ಹಾಕಿದ್ದರು!

ಇಂಥಾ ಗುರುಲಿಂಗ ನಾಟಾ ಕಳ್ಳ ಸಾಗಾಣಿಕೆ ಮಾಡುತ್ತಿರುವ ಗುಮಾನಿಗಳೂ ಇವೆ. ತನ್ನ ಕಾರಿನಲ್ಲೇ ಸಾಗವಾನಿ ಮತ್ತಿತರ ಮರದ ನಾಟಾ ಸಾಗಾಟ ಮಾಡುತ್ತಾನೆಂಬ ಮಾತುಗಳೂ ಕೇಳಿಬರುತ್ತಿವೆ. ಇಂಥಾ ಹತ್ತು ಹಲವು ಅಡ್ನಾಡಿ ಕೆಲಸಗಳಿಂದಾಗಿ ಕಾಶಿ ಪಂಚಪೀಠಗಳಲ್ಲಿ ಒಂದಾಗಿ ಲಿಂಗಾಯತರೂ ಸೇರಿದಂತೆ ವಿವಿಧ ಕೋಮುಗಳ ಶ್ರದ್ಧಾಕೇಂದ್ರವಾಗಿದ್ದ ಸಾಲೂರು ಪೀಠ ಇಂದು ಅಕ್ಷರಶಃ ಕತ್ತಲ್ಲ ಸಾಮ್ರಾಜ್ಯವಾಗಿದೆ. ಗುರು ಲಿಂಗನೆಂಬ ಗಡವ ಮಠದೊಳಗಿನ ಪುರಾತನ ಗದ್ದಿಗೆಗಳನ್ನೇ ಒಡೆದು ಹಾಕಿ ಅಂಡರ್‌ಗ್ರೌಂಡ್ ತೋಡಿಸಲೆತ್ನಿಸಿದ್ದು ಆತನ ನೈಜ ಉದ್ದೇಶಕ್ಕೆ ಸ್ಪಷ್ಟ ಸಾಕ್ಷಿಯಂತಿದೆ.

ಈತನ ಸಕಲ ಘನಂಧಾರಿ ಬುದ್ಧಿಗಳು ಮಠದ ಭಕ್ತರಿಗೆ, ಹಿರೀಕರಿಗೆ ಗೊತ್ತಿದೆ. ಆದರೂ ಸಹ ಇಂಥ ವಂಚಕನನ್ನು ಅದು ಹೇಗೆ ಸ್ವಾಮಿ ಅಂತ ಒಪ್ಪಿಕೊಂಡಿದ್ದಾರೋ, ಭಯ ಭಕ್ತಿಯಿಂದ ನಡೆದುಕೊಳ್ಳುತ್ತಾರೋ ತಿಳಿಯುತ್ತಿಲ್ಲ. ತೀರಾ ಸಮುದಾಯದ ಮಾನ ಮರ್ಯಾದೆಗಳಿಗಂಜಿ ಗುರುಲಿಂಗನನ್ನು ರಕ್ಷಿಸಲು ನಿಲ್ಲುವ ಇವರು ತಮ್ಮದೇ ಹೆಣ್ಣುಮಕ್ಕಳು ಆತನ ತೆವಲಿಗೆ ಸಿಕ್ಕು ಕಂಗಾಲಾದರೂ ತೆಪ್ಪಗಿರುವುದು ಮತ್ತೊಂದು ದುರಂತ.

ಸದ್ಯ ಮೊನ್ನೆ ನಡೆಸಿದ ದಾಂಧಲೆಯಿಂದಾಗಿ ಗುರುಲಿಂಗ ಸಂಪೂರ್ಣ ಬೆತ್ತಲಾಗಿದ್ದಾನೆ. ಮೊದಲ ಬಾರಿಗೆ ಭಕ್ತ ಸಮುದಾಯ ಆತನ ವಿರುದ್ಧ ಆಕ್ರೋಶಗೊಂಡಿದೆ. ಘಟನೆ ನಡೆದ ಸ್ಥಳದಲ್ಲೇ ಗುರುಲಿಂಗನ ಕಾರಿನಲ್ಲಿ ವಿಸ್ಕಿ ಬಾಟಲ್, ಸಿಗರೇಟು ಪ್ಯಾಕೇಟುಗಳು ಸಿಕ್ಕಿದ್ದು ಅದಕ್ಕೆ ಕಾರಣ. ಇದೆಲ್ಲದರಿಂದಾಗಿ ವಂಚಕ ಗುರು ಲಿಂಗನನ್ನು ಕೆಳಗಿಸುವ ಮಾತುಗಳೂ ಕೇಳಿಬರುತ್ತಿವೆ.

ಕೂಲಿಂಗ್ ಗ್ಲಾಸು ಹಾಕಿಕೊಂಡು, ವಿಸ್ಕಿ ಬಾಟಲ್ಲು-ಸಿಗರೇಟು ಪ್ಯಾಕ್‌ಗಳೊಂದಿಗೆ ಹೆಂಗಸರನ್ನು ಕಾರಲ್ಲಿ ತುಂಬಿಕೊಂಡು ಹೊರಡುವ ಗುರುಲಿಂಗನನ್ನು ಒದ್ದೋಡಿಸದಿದ್ದರೆ ಮಠದ ಜನ ಬೀದಿಪಾಲಾಗುವುದು ಖಚಿತ. ಮಠದ ಹರೀಕರಿಂದ ಇಂತಹುದೊಂದು ಕೆಲಸ ನಡೆಯದಿದ್ದರೆ ಭಕ್ತರೇ ಸೇರಿಕೊಂಡು ಗುರುಲಿಂಗನ ನಡಮುರಿಯುವ ಕಾಲ ದೂರವಿದ್ದಂತಿಲ್ಲ.

ಸದಾ ಕಾಲ ವಿಸ್ಕಿ ಹೀರುತ್ತಾ ಹೋರಿಯಂತೆರಗುವ ಗುರುಲಿಂಗನಂಥವರೂ ಸ್ವಾಮೀಜಿಗಳಾಗಿರುವುದು, ಅವರನ್ನೂ ಜನ ಗೌರವಿಸುವುದು ಅಧ್ಯಾತ್ಮದ ಅಣಕವಲ್ಲದೆ ಮತ್ತಿನ್ನೇನು?

• ಸಂತೋಷ್ ಬಾಗಿಲಗದ್ದೆ

ಲಂಕೇಶ್ ಪ್ರಕಾಶನ

ನಂ.9, ಇ.ಎ.ಟಿ.ರಸ್ತೆ, ಬಸವನಗುಡಿ, ಬೆಂಗಳೂರು-4
ಫೋನ್: 26676427

ಶೀರ್ಷಿಕೆ	ಬೆಲೆ
ನೀಲು ಕಾವ್ಯ -ಸಂಗ್ರಹ 1	150.00
ನೀಲು ಕಾವ್ಯ -ಸಂಗ್ರಹ 2	150.00
ನೀಲು ಕಾವ್ಯ -ಸಂಗ್ರಹ 3	200.00
ಚಿತ್ರ ಸಮೂಹ	90.00
ಮರೆಯುವಮುನ್ನ-ಸಂಗ್ರಹ1	150.00
ಮರೆಯುವಮುನ್ನ-ಸಂಗ್ರಹ2	150.00
ಮನಕೆ ಕಾರಂಜಿಯ ಸ್ಪರ್ಶ	150.00
ಈ ನರಕ ಈ ಪುಲಕ	125.00
ಆಟ-ಜೂಜು-ಮೋಜು!	150.00
ಟೀಕೆ-ಟಿಪ್ಪಣಿ 1	200.00
ಟೀಕೆ-ಟಿಪ್ಪಣಿ 2	200.00
ಟೀಕೆ-ಟಿಪ್ಪಣಿ 3	200.00
ಸಾಹಿತಿ-ಸಾಹಿತ್ಯ	300.00
ರೂಪಕ ಲೇಖಕರು	70.00
ಕಂಡದ್ದು ಕಂಡಹಾಗೆ	125.00
ಪ್ರಸ್ತುತ	80.00
ಹುಳಿಮಾವಿನ ಮರ	200.00
ಮುಸ್ಸಂಜೆಯ ಕಥಾ ಪ್ರಸಂಗ	250.00
ಬಿರುಕು	60.00
ಅಕ್ಕ	80.00
ಮಂಜು ಕವಿದ ಸಂಜೆ	85.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
ಕಲ್ಲು ಕರಗುವ ಸಮಯ	125.00
ನಾನಲ್ಲ	70.00
ಕೆರೆಯ ನೀರನು ಕೆರೆಗೆ ಚೆಲ್ಲಿ	60.00
ಉಲ್ಲಂಘನೆ	80.00
ಪಾಪದ ಹೂಗಳು	60.00
ಬಿರುಕು	40.00
ಸಂಕ್ರಾಂತಿ	45.00
ತೆರೆಗಳು	50.00
ಈಡಿಪಸ್ ಮತ್ತು ಅಂತಿಗೊನೆ	80.00
ಟಿ. ಪ್ರಸನ್ನನ ಗೃಹಸ್ಥಾಶ್ರಮ	35.00
ಗುಣಮುಖ	60.00
ಕ್ರಾಂತಿ ಬಂತು ಕ್ರಾಂತಿ	40.00
ಕಪ್ಪು ಮಲ್ಲಿಗೆ	75.00
ಕಂಡಹಾಗೆ	125.00
ದರವೇಶಿ ಕತೆಗಳು	90.00
ಬಸವರಾಜಮಾರ್ಗ	40.00
ಬೆನಜೀರ್	25.00
ಆವರಣ ಎಂಬ ವಿ-ಕೃತಿ	100.00
ಜೈಲೆಂಬ ಲೋಕದಲ್ಲಿ	75.00
ವೇದಾಂತ ರೆಜಿಮೆಂಟ್	60.00
ಕಳೆದುಕೊಂಡವಳು	45.00
ನೂರುಸ್ವರ	60.00
ಟ್ರೇನ್ ಟು ಪಾಕಿಸ್ತಾನ್	125.00
ಮಿಡತೆಗಳ ಬರವಿಗೆ....	100.00
ಡಿಸೆಂಬರ್ 13	150.00
ಮನುಸ್ಮೃತಿ	20.00
ರೈತರ ಆತ್ಮ-ಹತ್ಯೆ	10.00
ಆರೋಗ್ಯ ಮತ್ತು ಜೀವನ	125.00
ಧನ್ವಂತ್ರಿ ಚಿಕಿತ್ಸೆ	50.00
ಮುತ್ತುರಾಜನ ಮುತ್ತು	150.00
ವಿಷ್ಣು ನೂರೊಂದು ನೆನಪು	150.00
ಓ ಈಳಂ	250.00
ಖೈರ್ಲಾಂಜಿ	200.00
ಕಮಲಾ ದಾಸ್ ಕಥೆಗಳು	60.00
ಮಾಂಟೊ ಕಥೆಗಳು	80.00
ಕೋಮುವಾದ	60.00
ಜಾತಿ ಪದ್ಧತಿ	125.00
ರಾಮಾಯಣ ವಿಷವೃಕ್ಷ	75.00
ಅರೇಬಿಯನ್ ನೈಟ್ಸ್	150.00
ಜಿಮ್‌ಕಾರ್ಬೆಟ್-ಶಿಕಾರಿ ಕತೆಗಳು	80.00
ಚೆಕ್‌ಪೋಸ್ಟ್	100.00
Some-ಪದ	80.00
ಗೋವು ಪವಿತ್ರ ಎಂಬ ಮಿಥ್ಯೆ	80.00
ಕರ್ಕರೆಯನ್ನು ಕೊಂದವರ್ಯಾರು?	200.00
ಅಸ್ಪೃಶ್ಯ ವಸಂತ	200.00
ಜಂಗಲ್ ನಾಮಾ	175.00
ಬದುಕು-ಬಯಲು	200.00
ಚಾರ್ವಾಕ	250.00



ಮಗ ಸೂರ್ಯನ ಜೊತೆ ರಕ್ಷಿತಾ ಮತ್ತು ಪ್ರೇಮ್

ಡೈರೆಕ್ಟರ್ ಪ್ರೇಮ್ ದಿವಾಳಿಯಾಗಿದ್ದಾನೆ. ನಟಿ ರಕ್ಷಿತಾ ಆತನ ವಿರುದ್ಧ ತಿರುಗಿಬಿದ್ದಿದ್ದಾಳೆ. ಮಗ ಸೂರ್ಯನ ಜೊತೆ ಪ್ರತ್ಯೇಕಗೊಂಡು ಪ್ರೇಮ್‌ಗೆ ಸೋಡಚೀಟಿ ಕೊಟ್ಟು ತನ್ನ ದಾರಿ ಕಂಡುಕೊಳ್ಳುವ ಆಕೆಯ ನಿರ್ಧಾರ ಬಹುಶಃ ಎರಡು ತಿಂಗಳ ಹಿಂದೆಯೇ ನಿಶ್ಚಿತಗೊಂಡಿರಬೇಕು. ಅದಕ್ಕೇ ಡೈವೋರ್ಸ್ ನಿಪುಣ ವಕೀಲರೊಬ್ಬರನ್ನು ಕಂಡು ಪ್ರೇಮ್‌ಗೆ ನೋಟಿಸ್ ಕೂಡ ಕೊಟ್ಟಿದ್ದಾಳೆ. ಉಳಿದಿರುವುದು ಶಿವಣ್ಣನ ನೂರನೇ ಚಿತ್ರ 'ಜೋಗಯ್ಯ' ಬಿಡುಗಡೆ ಮತ್ತು ಅದಕ್ಕೆಂದು ರಕ್ಷಿತಾ ಹಾಕಿದ ರೊಕ್ಕದ ಬಾಕಿಯ ಚುಕ್ತಾ ಕುರಿತಾದ ಪ್ರಶ್ನೆಯೊಂದೇ.....!

• ರಾ.ಸೋಮನಾಥ್

ರಕ್ಷಿತಾ-ಪ್ರೇಮ್ ರಹಸ್ಯ ಡೈವೋರ್ಸ್?

ಶಿವಣ್ಣನ ನೂರನೇ ಚಿತ್ರ 'ಜೋಗಯ್ಯ' ರಿಲೀಸಾಗುವುದರ ಆಸುಪಾಸಲ್ಲೇ ಸಿನಿಮಾ ಪ್ರೇಮಿಗಳಿಗೊಂದು ಕಹಿಸುದ್ದಿ ಕಾದಿದೆ. ನಟಿ ರಕ್ಷಿತಾ ಮತ್ತು ಡೈರೆಕ್ಟರ್ ಪ್ರೇಮ್ ದಾಂಪತ್ಯ ಶಿವಣ್ಣನ ನೂರನೇ ಚಿತ್ರದ ಜೊತೆಗೇ ಪರ್ಯಾವಸಾನಗೊಳ್ಳುವುದು ಕೂಡ ಬಹುತೇಕ ನಿಕ್ಕಿಯಾಗಿದೆ!

ಕಳೆದೊಂದು ತಿಂಗಳಿಂದ ತಾಯಿ ಮಮತಾರಾವ್ ಜೊತೆ ಡೈವೋರ್ಸ್ ನಿಪುಣ ವಕೀಲರೊಬ್ಬರ ಜೊತೆ ರಕ್ಷಿತಾ ನಡೆಸುತ್ತಿರುವ ಚೌಕಾಶಿ, ರಮ್ಯ ರಾಜಕೀಯಕ್ಕೆ ಎಂಟ್ರಿ ಕೊಟ್ಟಂತೆ ತಾನೂ ಬಿಜೆಪಿಗೆ ಎಡತಾಕುವ ಆಕೆಯ ತಯಾರಿ, ಬಾಪೂಜಿ ಲೇಔಟಿನಲ್ಲಿ ಪ್ರೇಮ್ ಕಟ್ಟಿಸಿದ ಬಂಗಲೆಗೆ ರೇಟ್ ಕುದುರಿಸುತ್ತಿರುವ ಬ್ರೋಕರ್‌ಗಳ ಗಡಿಬಿಡಿ, ಅತ್ತ ಮೈಸೂರಿನಲ್ಲಿ ಜೋಗಯ್ಯ ಹೀರೋಯಿನ್ ಜೊತೆ ಪ್ರೇಮ್ ಶುರುಹಚ್ಚಿಕೊಂಡಿರುವ ಕೆಮಿಸ್ಟ್ರಿ ಮತ್ತು ಡೈವೋರ್ಸ್ ಕುರಿತಂತೆ ಗಾಂಧಿನಗರದಲ್ಲಿ ಹೊಗೆಯಾಡುವ ಸುದ್ದಿಗಳ ಬಿಸಿಬಿಸಿ; ಎಲ್ಲವೂ ಸಿನಿಮಾ ಸಂಸಾರವೊಂದರ ವಿಧ್ವಂಸಕ ವಿಘಟನೆಯೊಂದರ ಪೂರ್ವ ಅಪಶಕುನಗಳಷ್ಟೆ-

ಡೈರೆಕ್ಟರ್ ಪ್ರೇಮ್ ದಿವಾಳಿಯಾಗಿದ್ದಾನೆ. ನಟಿ ರಕ್ಷಿತಾ ಆತನ ವಿರುದ್ಧ ತಿರುಗಿಬಿದ್ದಿದ್ದಾಳೆ. ಮಗ ಸೂರ್ಯನ ಜೊತೆ ಪ್ರತ್ಯೇಕಗೊಂಡು ಪ್ರೇಮ್‌ಗೆ ಸೋಡಚೀಟಿ ಕೊಟ್ಟು ತನ್ನ ದಾರಿ ಕಂಡುಕೊಳ್ಳುವ ಆಕೆಯ ನಿರ್ಧಾರ ಬಹುಶಃ ಎರಡು ತಿಂಗಳ ಹಿಂದೆಯೇ ನಿಶ್ಚಿತಗೊಂಡಿರಬೇಕು. ಅದಕ್ಕೇ ಡೈವೋರ್ಸ್ ನಿಪುಣ ವಕೀಲರೊಬ್ಬರನ್ನು ಕಂಡು ಪ್ರೇಮ್‌ಗೆ ನೋಟಿಸ್ ಕೂಡ ಕೊಟ್ಟಿದ್ದಾಳೆ. ಉಳಿದಿರುವುದು ಶಿವಣ್ಣನ ನೂರನೇ ಚಿತ್ರ 'ಜೋಗಯ್ಯ' ಬಿಡುಗಡೆ ಮತ್ತು ಅದಕ್ಕೆಂದು ರಕ್ಷಿತಾ ಹಾಕಿದ ರೊಕ್ಕದ ಬಾಕಿಯ ಚುಕ್ತಾ ಕುರಿತಾದ ಪ್ರಶ್ನೆಯೊಂದೇ.....!

ತಾಯಿಯನ್ನೇ ಧಿಕ್ಕರಿಸಿ

ಪ್ರೇಮ್ ಕನ್ನಡ ಚಿತ್ರರಂಗ ಕಂಡ ಅತ್ಯಂತ ವರ್ಣರಂಜಿತ ಮತ್ತು ಚಾಲಾಕಿ ಡೈರೆಕ್ಟರ್ ಎಂಬುದರಲ್ಲಿ ಎರಡು ಮಾತಿಲ್ಲ. ಪ್ರತಿಭೆ ಮತ್ತೆ ತಲೆಗಾರಿಕೆಯೊಂದನ್ನು ಬಿಟ್ಟರೆ ಗಿಮ್ಮಿಕ್, ಪ್ರಚಾರ ಮತ್ತು ಮಹತ್ವಾಕಾಂಕ್ಷೆಯಲ್ಲಿ ಆತ ಉಪೇಂದ್ರನ ತಮ್ಮ. ಮೊದಲ ಚಿತ್ರ ಕರಿಯದಲ್ಲಿ ಉಪ್ಪಿಯಂತೆ ಬೆಂಗಳೂರಿನ ಅಷ್ಟೂ ರೌಡಿಗಳನ್ನು ಕಲೆಹಾಕಿ ಕ್ಯಾಮೆರಾ ಮುಂದೆ ನಿಲ್ಲಿಸಿ ವಿಕೃತ ವಿವಾದವೊಂದಕ್ಕೆ ಕಾರಣನಾದ. ಮುಂದೆ 'ಎಕ್ಸ್‌ಕ್ಯೂಸ್‌ಮಿ' ಹಿಟ್ಟಾಯಿತು. ಬೆನ್ನಲ್ಲೇ ಜೋಗಿ ಸೂಪರ್ ಹಿಟ್ಟಾಯಿತು. ದುಡ್ಡು, ಖ್ಯಾತಿ, ಅವಕಾಶಗಳೆಲ್ಲವೂ ಒಂದರ ಮೇಲೊಂದಾಗಿ ಪ್ರೇಮ್‌ನನ್ನು ಹುಡುಕಿಕೊಂಡು ಬಂದವು. ಹೀಗೇ ಬೇಡಿ ಬಂದ ಅದೃಷ್ಟಗಳ ಸಾಲಲ್ಲಿ ಅತ್ಯಂತ ಆಕರ್ಷಕ ಕಾಣಿಕೆಯಂತಿದ್ದದ್ದು ನಟಿ ರಕ್ಷಿತಾ!

ಸಿನಿಮಾ ನಟಿಯರಿಗೆ ಛಾನ್ಸ್ ಕೊಡಿಸುವ ಪ್ರತಾಪ್ ಎಂಬ ಬ್ರೋಕರ್ ಓರ್ವ ಪ್ರೇಮ್ ಬಗ್ಗೆ ಇಲ್ಲಸಲ್ಲದ ಬಂಡಲ್ ಬಿಟ್ಟು ರಕ್ಷಿತಾ ತಲೆ ಕೆಡಿಸಿದ ಫಲವೇ ಪ್ರೇಮ್-ರಕ್ಷಿತಾ ಸಿನಿಮಾ ದಾಂಪತ್ಯ. ತನ್ನ ಗ್ಲಾಮರ್‌ನ ಉತ್ತುಂಗದಲ್ಲಿರುವಾಗಲೇ ರಕ್ಷಿತಾ ಪ್ರೇಮ್‌ನ ಮೋಹಪಾಶಕ್ಕೆ ಸಿಲುಕಿದ್ದಳು. ಅದೇ ಹೊತ್ತಿಗೆ ಉಪ್ಪಿಯ ಉತ್ತರಾಧಿಕಾರಿಯಂತೆ ಪ್ರೇಮ್ ವಿಜೃಂಭಿಸುತ್ತಿದ್ದ. ತಾಯಿ ಮಮತಾರಾವ್ ಏನೇ ಕಟ್ಟುನಿಟ್ಟು ಮಾಡಿದರೂ ರಕ್ಷಿತಾ ಜಗ್ಗಲಿಲ್ಲ. 'ನೋಡಮ್ಮಾ.... ನಿನ್ನ ಲೈಫ್ ಸ್ಟೈಲೇ ಬೇರೆ, ಆತನ ಕಲ್ಚರ್ರೇ ಬೇರೆ.



ಮದುವೆಯಲ್ಲಿ ರಕ್ಷಿತಾ-ಪ್ರೇಮ್

ನಿಮ್ಮಿಬ್ಬರಿಗೂ ಕೂಡಿ ಬರೋಲ್ಲ. ಸುಮ್ಮನೇ ದುಡುಕಿ ಅನಾಹುತ ಮಾಡ್ಕೋಬೇಡ.....!' ಎಂದೇ ಆವತ್ತು ಅಂಬಿ ಬುದ್ಧಿ ಹೇಳಿದ್ದರು.

ಅಷ್ಟೇ ಅಲ್ಲ, ಸುದೀಪ್, ದರ್ಶನ್ ಥರದ ಸ್ಟಾರ್‌ಗಳು ಕೂಡ 'ಪ್ರೇಮ್ ಎಂಥವನು ಅಂತ ನಿನಗೊತ್ತಿಲ್ಲ, ಯಾವುದಕ್ಕೂ ಇನ್ನೊಂದು ಸಲ ಯೋಚ್ನೆ ಮಾಡು' ಎಂದೇ ಎಚ್ಚರಿಸಿದ್ದರು. ತಾಯಿಯ ಎಚ್ಚರಿಕೆ, ಹಿತೈಷಿಗಳ ಕಾಳಜಿ ಎಲ್ಲವನ್ನೂ ಧಿಕ್ಕರಿಸಿ ಕಿಲಾಡಿ ಪ್ರೇಮ್‌ನ ಕೈಹಿಡಿದವಳು ರಕ್ಷಿತಾ. ಅದೂ ತನ್ನ ಹಿರೋಯಿನ್‌ಗಿರಿಯ ಉಚ್ಛ್ರಾಯ ಸ್ಥಿತಿಯಲ್ಲಿರುವಾಗಲೇ. ಎಲ್ಲವನ್ನೂ ಬದಿಗೊತ್ತಿ ಪ್ರೇಮ್‌ನ ಕೈಹಿಡಿದ ರಕ್ಷಿತಾಗೆ ಮುಂದೊಮ್ಮೆ ತನ್ನ ತಪ್ಪಿಗಾಗಿ ಏನೆಲ್ಲಾ ಪಶ್ಚಾತ್ತಾಪ ಪಡಬೇಕಾದಿತೆಂಬ ನಿರೀಕ್ಷೆಯಾದರೂ ಎಲ್ಲಿತ್ತು?

ರಾಂಪ್ರಸಾದ್‌ಗೆ ಚಿಪ್ಪು

ಅದು 'ಪ್ರೀತಿ ಏಕೆ ಭೂಮಿ ಮೇಲಿದೆ?' ಚಿತ್ರದ ಶೂಟಿಂಗ್ ಸಂದರ್ಭ. ಕತೆಯೇ ಇಲ್ಲದ, ತರ್ಕ, ವಿಷಯ, ಅರ್ಥ ಏನೊಂದೂ ಇಲ್ಲದ ಹುಚ್ಚು ಪ್ರಸಂಗಗಳ ತೇಪೆಯನ್ನೇ ಸಿನಿಮಾ ಮಾಡಲು ಹೋಗಿ ಪ್ರೇಮ್ ಅದಕ್ಕೆ ತಾನೇ ಹೀರೋ ಕೂಡ ಆಗಿಬಿಟ್ಟಿದ್ದ. ಕೇರಳದ ಪೊಲ್ಲಾಚಿಗೆ ಹೀರೋಯಿನ್ ರೋಹಿಣಿಯನ್ನು ಕರೆದೊಯ್ದು 62 ದಿನಗಳ ವ್ಯರ್ಥ ಶೂಟಿಂಗ್ ನಡೆಸಿದ್ದು ನಾನಾ ಗುಮಾನಿಗಳಿಗೆ ಕಾರಣವಾಗಿತ್ತು. ಚಿತ್ರದಲ್ಲಿ ಕೇವಲ 25 ನಿಮಿಷಗಳ ದೃಶ್ಯವೊಂದಕ್ಕೆ ಹೆಚ್ಚೂಕಮ್ಮಿ ಎರಡು ತಿಂಗಳುಗಳ ಕಾಲ ಶೂಟಿಂಗ್ ನಡೆಸಿದ ಹುಚ್ಚಾಟ ಕಂಡೇ ನಿರ್ಮಾಪಕ ಅಶ್ವಿನಿ ರಾಂಪ್ರಸಾದ್ ಕಂಗಾಲಾಗಿ ಹಾಸಿಗೆ ಹಿಡಿದ. ಶುರುವಿನಲ್ಲಿ ಮೂರು ಕೋಟಿಗೆ ಲೆಕ್ಕ ಹಾಕಿದ್ದ ಬಜೆಟ್ಟು ಶೂಟಿಂಗ್ ಮುಗಿಯುವ ಮೊದಲೇ ನಾಲ್ಕೂವರೆ ಕೋಟಿಯನ್ನು ಮುಟ್ಟಿತ್ತು.

ಇನ್ನು ನನ್ನಿಂದ ದುಡ್ಡು ಹಾಕಲು ಶಕ್ತಿಯೇ ಇಲ್ಲ ಎಂದು ರಾಂಪ್ರಸಾದ್ ಕೈಚೆಲ್ಲಿಬಿಟ್ಟಿದ್ದ. ಇಂಥಾ ಅತಂತ್ರ ಸ್ಥಿತಿಯಲ್ಲಿ ಪ್ರೇಮ್ ರಕ್ಷಣೆಗೆ ನಿಂತವಳು ರಕ್ಷಿತಾ. ಮುಂದೊಮ್ಮೆ ತನ್ನ ಕೈಹಿಡಿಯಲಿರುವ ಪ್ರೇಮ್‌ನ ಹೀರೋಗಿರಿಗೆ ಎಲ್ಲಿ ಪ್ರಾರಂಭ ವಿಘ್ನವಾಗುತ್ತೋ ಎಂದು ತಾನು ಕೂಡಿಟ್ಟಿದ್ದ ದುಡ್ಡನ್ನೆಲ್ಲ ತಂದು ಅಶ್ವಿನಿ ರಾಂಪ್ರಸಾದ್ ಕೈಗಿತ್ತಳು. ಅದು ಸಣ್ಣ ಮೊತ್ತವೇನಲ್ಲ, ಸರಿಸುಮಾರು ಎಂಭತ್ತು ಲಕ್ಷ. ದೊಡ್ಡಾಲದ ಮರದ ಬಳಿಯಿದ್ದ ತನ್ನ ತೋಟವನ್ನು ಮಾರಿ ಭಾವೀ ಪತಿಯ ಹೀರೋಗಿರಿಗೆ ನೆರವಾದ ರಕ್ಷಿತಾ ಕೊಟ್ಟ ಸಾಲಕ್ಕೆ ಪ್ರತಿಯಾಗಿ ರಾಂಪ್ರಸಾದ್ ತನ್ನ ತಮ್ಮ ಕೃಷ್ಣಪ್ರಸಾದ್ ವಿಜಯನಗರದ ಬಾಪೂಜಿ ಲೇಔಟಿನಲ್ಲಿ ಖರೀದಿಸಿದ್ದ ಸೈಟನ್ನು ಒತ್ತೆ ಇಟ್ಟ. ಸಿನಿಮಾ ತೋಪಾಯಿತು.

ಹಿಂದಿಯ ಮಲ್ಲಿಕಾ ಶೆರಾವತ್‌ಳನ್ನು ಕರೆತಂದು ಅರೆಬೆತ್ತಲೆ ಕುಣಿಸಿಯೂ 'ಪ್ರೀತಿ ಏಕೆ......' ಬರಕತ್ತಾಗಲಿಲ್ಲ. ಜೋಗಿಯಲ್ಲಿ ರಾಂಪ್ರಾಸದ್ ದುಡಿದ ಅಷ್ಟೂ ಕಾಸನ್ನು ಪ್ರೇಮ್ 'ಪ್ರೀತಿ ಏಕೆ....' ಮೂಲಕ ಮಣ್ಣುಪಾಲು ಮಾಡಿದ್ದ. ಅತ್ತ ರಾಂಪ್ರಸಾದ್ ಕೈಗೆ ಚಿಪ್ಪು ಕೊಟ್ಟು ರಕ್ಷಿತಾಳ ಸಾಲದ ರೂಪದಲ್ಲಿ ಆತನ ಬಾಲಾಜಿ ಲೇಔಟಿನ ಸೈಟನ್ನೂ ಹೊಡೆದ.


ಮದುವೆಯಲ್ಲೂ ಮೋಸ....

ಪ್ರೀತಿ ಏಕೆ... ತೋಪೆದ್ದು ಅತ್ತ ರಾಂಪ್ರಸಾದ್ ಹೆಚ್ಚೂಕಮ್ಮಿ ಐದು ಕೋಟಿ ಕಳಕೊಂಡು ಸಾಲದ ಸುಳಿಗೆ ಸಿಕ್ಕು ಒದ್ದಾಡುತ್ತಿದ್ದರೆ ಪ್ರೇಮ್ ರಕ್ಷಿತಾ ಜೊತೆ ಹಸೆಮಣೆಯಲ್ಲಿ ಮಿಂಚುತ್ತಿದ್ದ. ತನ್ನ ಹಿರೋಗಿರಿ ಮತ್ತು ಪ್ರೀತಿ ಏಕೆ... ಒಟ್ಟೊಟ್ಟಿಗೆ ನೆಲಕಚ್ಚಿದ ಮುಖಭಂಗದಿಂದ ಬಚಾವಾಗಲು ಮದುವೆಯನ್ನೇ ಅಸ್ತ್ರವನ್ನಾಗಿ ಬಳಸಿಕೊಂಡ. ಮದುವೆಯ ಆಮಂತ್ರಣವನ್ನೇ ಐವತ್ತು ಸಾವಿರಕ್ಕೂ ಮೀರಿ ಪ್ರಿಂಟ್ ಹಾಕಿಸಿದ್ದ. ವಿಜಯನಗರದ ಶಾಸಕ ಸೋಮಣ್ಣನ ಮನೆ, ಅಶ್ವಿನಿ ರಾಂಪ್ರಸಾದ್ ಸ್ಟುಡಿಯೋ, ಆದಿಚುಂಚನಗಿರಿ ಮಠ, ಕೊಬ್ರಿ ಮಂಜು ಆಫೀಸು, ತಮ್ಮ ಅರುಣನ ರಿಯಲ್ ಎಸ್ಟೇಟ್ ಅಡ್ಡೆ, ಪುಡಿ ರೌಡಿಗಳ ಕೈಯಲ್ಲಿ; ಹೀಗೆ ಎಲ್ಲೆಂದರಲ್ಲಿ ಸಾವಿರಗಟ್ಟಲೆ ಆಹ್ವಾನ ಪತ್ರಿಕೆಗಳನ್ನು ಇಟ್ಟಾಡಿಸಿದ್ದ.

ರಾಜರಾಜೇಶ್ವರಿನಗರದ ಮೀನಾಕ್ಷಿ ಕಲ್ಯಾಣ ಮಂಟಪದಲ್ಲಿ ನಡೆದ ರಕ್ಷಿತಾ-ಪ್ರೇಮ್ ವಿವಾಹದ ಅವ್ಯವಸ್ಥೆಯನ್ನು ಕಂಡು ಹರಸಲು ಬಂದಿದ್ದ ಗಣ್ಯರೇ ಹೇಸಿಗೆ ಪಟ್ಟರು. ವಿಪರೀತ ನೂಕುನುಗ್ಗಲು, ಊಟಕ್ಕೆ ಪರದಾಟ, ಪಾರ್ಕಿಂಗ್ ಪೇಚಾಟದಿಂದಾಗಿ ರೋಸತ್ತ ಪೊಲೀಸರು ಮ[illegible]ದುವೆಗೆ ಬಂದವರ ಮೇಲೆ ಲಾಠಿ ಚಾರ್ಜ್ ಮಾಡಿಬಿಟ್ಟರು. ಈ ಹೊತ್ತಿಗಾಗಲೇ ಲ್ಯಾಂಡ್ ಡೀಲರ್

ರಜನಿಕಾಂತ್ ಎರಡು ಕೋಟಿಯ ಕಂತೆ ಇಟ್ಟ ಕತೆ

"ಮೊನ್ನೆಯಷ್ಟೆ ಅಣ್ಣ ರಜನಿ ಫೋನ್ ಮಾಡಿದ್ರು. ನಾನು ಚೆನ್ನೈನ ಅವರ ಮನೆಗೆ ಕಾಲಿಟ್ಟದ್ದೇ ತಡ ನನ್ನ ಮುಂದೆ ಎರಡು ಕೋಟಿ ರೂಪಾಯಿಗಳ ಕಂತೆ ಇಟ್ಟು 'ನೋಡಪ್ಪಾ, ಸ್ಟೋರಿಗೀರಿ ಏನೂ ನಾನು ಕೇಳಲ್ಲ. ನಿನ್ನ ಮೇಲೆ ನನಗೆ ವಿಶ್ವಾಸವಿದೆ. ಈ ಎರಡು ಕೋಟಿ ಅಡ್ವಾನ್ಸ್ ತಗೊಂಡು ನನಗೊಂದು ಒಳ್ಳೇ ಪಿಕ್ಚರ್ ಮಾಡಿ ಕೊಡ್ತಿಯಾ?' 'ಅಂಥ ಕೇಳೇಬಿಟ್ರು... ಗೊತ್ತಾ? ನಾನು ಆಸೆಪಟ್ರೆ ಆಗುತ್ತಾ? ಅಣ್ಣಾ ಈಗ ಬೇಡ ಮುಂದೊಮ್ಮೆ ಒಳ್ಳೇ ಕತೆ ಮಾಡ್ಕೊಂಡು ನಾನೇ ಬರ್‍ತೀನಿ. ಆಗ ದುಡ್ಡು ಕೊಡೀವಂತೆ' ಎಂದು ನಾನೇ ವಾಪಸ್ಸು ಮಾಡ್ದೆ.....!



ಇದು ಪ್ರೇಮ್ ರೈಲು ಬಿಡುವ ಒಂದು ಸ್ಯಾಂಪಲ್ಲಷ್ಟೇ. ಜೋಗಿ ಹಿಟ್ಟಾಗಿದ್ದೇ ರಜನಿ ಕಾಲಿಗೆ ಬಿದ್ದು ಕರೆಸಿ ಪೋಕೊಟ್ಟ ಪ್ರೇಮ್ ಈಗ ರಜನಿ ಹೆಸರನ್ನೇ ಬಂಡವಾಳ ಮಾಡಿಕೊಳ್ಳಲು ಹೊರಟಿದ್ದಾನೆ. ಪ್ರೇಮ್‌ನನ್ನು ನಂಬಿ ಎರಡು ಕೋಟಿ ಮುಂದಿಟ್ಟು ಕತೆ ಕೂಡಕೇಳದೇ ಕಾಲ್‌ಶೀಟ್ ಕೊಡಲು ರಜನಿಗೆ ಹುಚ್ಚು ಹಿಡಿದಿಲ್ಲವಷ್ಟೇ.. ಎರಡು ಕೋಟಿಯ ಕಂತೆ ಎಂದರೆ ಅದನ್ನು ಜೋಡಿಸಲು ಎಷ್ಟು ಜಾಗ ಬೇಕು ಎಂಬ ಕಾಮನ್‌ಸೆನ್ಸ್ ಕೂಡ ಇಲ್ಲ.

ಮೊನ್ನೆ ಜೋಗಯ್ಯದ ಪತ್ರಿಕಾಗೋಷ್ಠಿಯಲ್ಲಿ ಶಿವಣ್ಣನ ಎದುರೇ ಪತ್ರಕರ್ತರೊಬ್ಬರು ಸಿನಿಮಾ ಸ್ಟಾರ್ಟ್ ಮಾಡೋದು ಯಾವಾಗ ಎಂದು ಅಚಾನಕ್ಕಾಗಿ ಪ್ರಶ್ನೆಯಿಟ್ಟರೆ; "ಏನ್ ಗುರೂ ಮಾಡೋದು? ಎಲ್ಲೇ ಹೋದ್ರೂ ಅಭಿಮಾನಿಗಳು ಮುತ್ತಿಕೊಂಡು 'ಜೋಗಯ್ಯದ ಟಿಕೆಟ್ ಕೊಡು ಗುರೂ, ಅಣ್ಣಾ ಟಿಕೆಟ್ ಎಲ್ಲೀ.....!' ಅಂತ ಭೋಕಾಟ ಕೊಡ್ತವ್ರೆ. ಅಭಿಮಾನಿಗಳ ಕಾಟಾನೇ ಇಷ್ಟೊಂದಿರೋವಾಗ ಶೂಟಿಂಗ್ ಹೇಗೆ ಸ್ಟಾರ್ಟ್ ಮಾಡೋಕ್ಕೆ ಸಾಧ್ಯ. ನೀವೇ ಹೇಳಿ ಬಾಸ್" ಎಂದು ಬಿಟ್ಟ.

ಸಿನಿಮಾನೇ ಮುಗಿಯದೇ ಯಾರಾದ್ರೂ ಟಿಕೆಟ್ ಕೇಳಲು ಸಾಧ್ಯವೇ? ಪ್ರೇಮ್ ಬಂಡಲ್ ಬಿಟ್ಟ ರೀತಿ ಕಂಡು ಆವತ್ತು ಪತ್ರಕರ್ತರ ಎದುರು ಕೂತಿದ್ದ ಶಿವಣ್ಣನೇ ತಲೆತಲೆ ಚಚ್ಚಿಕೊಂಡರಂತೆ!'

...ಮನೆಗೆ ...ಮಾರಿಯಾದವನು ...ಶಾವರ ಚಂದ್ರು


ದಶಾವತರ ಚಂದ್ರು

...ಪ್ರೇಮ್‌ನ ತಲೆ ಮತ್ತು ಜೇಬು ಎರಡೂ ಒಟ್ಟೊಟ್ಟಿಗೆ ...ಯಾಗಿವೆ. ದಶಾವರ ಚಂದ್ರು ಎಂಬ ಹುಟ್ಟಾ ಸ್ತ್ರೀಪೀಡಕ ಆತನ ಬಲಗೈ ಬಂಟ. ಕ್ಯಾಮರಾಮನ್ ಸೀನು, ...ಾಗ್ ರೈಟರ್ ಮಳವಳ್ಳಿ ಸಾಯಿಕೃಷ್ಣ ಮೆದುಳಿನಂತಿದ್ದ ಅಸೋಸಿ...ಟ್ ವಿಜಯ್ ಇತ್ಯಾದಿ ಅಷ್ಟಿಷ್ಟು ಪ್ರತಿಭೆ-ಪ್ರಾಮಾಣಿಕತೆಯಿದ್ದವರೆಲ್ಲ ... ಸತ್ತು ಪ್ರೇಮ್ ಸಹವಾಸದಿಂದ ದೂರಾಗಿದ್ದಾರೆ. ಜೋಗಿ ಹಿಟ್ಟಾದರೆ ...ಲ್ಲರಿಗೂ ವಿಜಯನಗರದಲ್ಲಿ ಮನೆ ಕಟ್ಟಿಸಿಕೊಡ್ತೀನಿ ಎಂದು ರೈಲು ...ಸಿದ್ದ ಪ್ರೇಮ್ ಅವರೆಲ್ಲರನ್ನೂ ವಂಚಿಸಿದ್ದಾನೆ.

...ದಶಾವರ ಚಂದ್ರು ಎಂಥಾ ಪ್ರಳಯಾಂತಕನೆಂದರೆ ಈ ಹಿಂದೆ 'ಏ ...ರ್ಝುಡ್' ಎಂಬ ಬ್ಲೂಫಿಲ್ಮ್ ಕ್ಯಾಟಗರಿಯ ಚಿತ್ರ ಮಾಡಿ ತಾನೇ ...ಯಾಗಿ ಹೀರೋಯಿನ್ ಜೊತೆ ಪೋಜು ಕೊಟ್ಟಿದ್ದ. ಇಂಥ ದೇವರ ಚಿತ್ರಗಳಿಗೆ ನಟಿಯರನ್ನು ಪೂರೈಸುವ ಜ್ಯೂನಿಯರ್ ಆರ್ಟಿಸ್ಟ್ ಬ್ರೋಕರ್ ಜೈ ಕುಮಾರ್ ಸೆಕ್ಸ್ ಸಿನಿಮಾಗಳನ್ನು ತಯಾರಿಸಿ ಕುಲಗೆಟ್ಟು ಮಧು, ಲೇಡಿ ಮಾಲಾಶ್ರೀ, ಗಂಗಾಧರ ಮುಂತಾದವರೆಲ್ಲ ಯಾವತ್ತಿದ್ದರೂ ಜೈಲು ಸೇರಬಲ್ಲ ಆಸಾಮಿಗಳೇ. ಇಂಥದೊಂದು ಸೆಕ್ಸ್ ಸಿನಿಮಾಗಳ ನಾಯಕನಂತಿರುವ ದಶಾವರ ಚಂದ್ರು ಸದ್ಯ ಪ್ರೇಮ್‌ನ ಬಲಗೈ ಬಂಟ. ಹಿಂದೆ ಆನೇಕಲ್ ಬಾಲರಾಜ್ ಕರಿಯ ನಿರ್ಮಿಸಿದಾಗ ಪ್ರೇಮ್ ಬಾಲರಾಜ್‌ರ ರಾಜಧಾನಿ ಬಾರ್ ನಲ್ಲಿ ಬಿಟ್ಟಿ ಉಂಡು ಮಲಗುತ್ತಿದ್ದ. ಅದೇ ಬಾರ್‌ನಲ್ಲಿ ಸಪ್ಲೈ ಮಾಡಿಕೊಂಡಿದ್ದವನು ದಶಾವರ ಚಂದ್ರು. ಕರಿಯ ಶೂಟಿಂಗ್ ಸಂದರ್ಭದಲ್ಲಿ ಅನುರಾಧ ಮಗಳು ಅಭಿನಯಶ್ರೀ ಜೊತೆ ಕಳ್ಳಾಟ ಆಡಲು ಹೋಗಿ ಚಂದ್ರು ಸಿಕ್ಕಿಬಿದ್ದ. ಈತನ ಜೊತೆ ಪ್ರೇಮ್‌ನನ್ನೂ ಆನೇಕಲ್ಲಿಗೆ ಎತ್ತಾಕಿಕೊಂಡು ಹೋಗಿ ಬಾಲರಾಜ್ ಮತ್ತು ಸೆಲ್ವಂ ರಾಜ್ ಸೇರಿಕೊಂಡು ಸಮಾ ಹೊಡೆದರು. ಇದಕ್ಕೂ ಮುನ್ನ ಬಾಲರಾಜ್ ಹಲೋ ಯಮ ಸಿನಿಮಾ ನಿರ್ಮಿಸುತ್ತಿದ್ದಾಗ ಅದಕ್ಕೆ ಡೈರೆಕ್ಟರಾಗಿದ್ದ ಎ.ಆರ್. ಬಾಬು ಉರ್ಫ್ ರಫೀಕ್ ಬಾಬು ಎಂಬ


ಬಾಬು



ಚಪಲಕೋರನೇ ಪ್ರೇಮ್‌ನ ಗುರುವಾಗಿದ್ದ. ಕರಿಯ ನಂತರ ಆನೇಕಲ್ ಬಾಲರಾಜ್, ಗುರುಬಾಬು; ಇತ್ಯಾದಿ ಎಲ್ಲರನ್ನೂ ಕೈಬಿಟ್ಟನಾದರೂ ಖದೀಮ ದಶಾವರನನ್ನು ಮಾತ್ರ ಪ್ರೇಮ್ ಕೈಬಿಡಲಿಲ್ಲ. ಪ್ರೀತಿ ಏಕೆ ಭೂಮಿ ಮೇಲಿದೆ ಚಿತ್ರಕ್ಕೆಂದು ಮೊದಲು ಆಯ್ಕೆಯಾದವಳು ಮುಂಬಯಿಯ ಮಾಡೆಲ್ ತಮನ್ನಾ ಭಾಟಿಯಾ. ಬಿಟಿಎಂ ಲೇಔಟಿನಲ್ಲಿ ಗಿರಿಧರ್ ಎಂಬ ಬ್ರಾಹ್ಮಣ ಸ್ಟುಡಿಯೋ ನಡೆಸುತ್ತಾನೆ. ತಮನ್ನಾಳನ್ನು ಗಿರಿಧರ್‌ನ ಸ್ಟುಡಿಯೋಕ್ಕೆ ಕರೆದೊಯ್ದು ಚಂದ್ರು ಅಲ್ಲಿ ತನ್ನ ವಿಕೃತ ಚೇಷ್ಟೆ ಆರಂಭಿಸಿದ್ದಾನೆ. ಆದರೆ ತಮನ್ನಾ ಅಂಥ ಹುಡುಗಿಯಲ್ಲ, ಕ್ಯಾಕರಿಸಿ ಉಗಿದಿದ್ದಾಳೆ. ಹೈದ್ರಾಬಾದಿಗೆ ಹೋಗಿ ಪತ್ರಿಕಾಗೋಷ್ಠಿ ಕರೆದು ಕನ್ನಡ ಚಿತ್ರದಲ್ಲಿ ನಟಿಸಲು ಹೋಗಿದ್ದಕ್ಕೆ ತನಗಾದ ಹಿಂಸೆ ಅವಮಾನವನ್ನು ಪತ್ರಕರ್ತರ ಮುಂದೆ ಬಾಯಿಬಿಟ್ಟಿದ್ದಾಳೆ. ಇದು ಪ್ರೇಮ್-ಚಂದ್ರು ಜೋಡಿಯ ಮೊದಲ ಪುಣ್ಯಕಾರ್ಯ. ನಂತರ ಮಲ್ಲಿಕಾ ಶೆರಾವತ್ ಜೊತೆಗೂ ಚಂದ್ರು ವ್ಯವಹಾರ ಕುದುರಿಸಲು ಹೋಗಿ ಭಾವಗಡಿ ಮಾಡಿಕೊಂಡ. ಚಾನ್ಸರಿ ಹೋಟೆಲಿನಲ್ಲಿ ರೂಮು ಹಾಕಿದ್ದ ಮಲ್ಲಿಕಾ ಶೆರಾವತ್ ಜೊತೆ ಪ್ರೇಮ್ ರಿಹರ್ಸಲ್ ನಡೆಸುತ್ತಿದ್ದಾಗಲೇ ರಕ್ಷಿತಾ ಎಂಟ್ರಿ ಕೊಟ್ಟು ಭೂತ ಬಿಡಿಸಿದ್ದಳು. ಪ್ರೇಮ್ ಮದುವೆ ನಂತರವಾದರೂ ಸರಿ ಹೋಗಬಲ್ಲ ಎಂಬ ರಕ್ಷಿತಾಳ ಲೆಕ್ಕಾಚಾರ ಜೋಗಯ್ಯ ಶೂಟಿಂಗ್‌ನ ಮೂಲಕ ಸುಳ್ಳಾಗಿ ಹೋಯಿತು. ●

...ಡ, ಎಕ್ಸ್‌ಕ್ಯೂಸ್ ಮಿ. ಸುರೇಶ್, ಬೆಳಗಾವಿಯ ... ಇತ್ಯಾದಿ ಅರ್ಧ ಡಜನಿಗೂ ಅಧಿಕ ...ಪಕರಿಂದ ಸಿನಿಮಾ ಮಾಡಿಕೊಡುತ್ತೇನೆಂದು ...ಲೇ ಅಡ್ವಾನ್ಸ್ ಪಡೆದಿದ್ದ ಪ್ರೇಮ್ ಅದೇ ... ತನ್ನ ಮದುವೆ ಪೂರೈಸಿಕೊಂಡಿದ್ದ. ಚಿತ್ರರಂಗದ ...ಮಂದಿ ನಟನಟಿಯರಲ್ಲದೆ, ಅನೇಕ ...ಣಿಗಳು ಮಠಾಧೀಶರೆಲ್ಲ ಮದುವೆಗೆ ಬಂದು ... ಕೊಟ್ಟರು. ಸಾಕ್ಷಾತ್ ಆದಿಚುಂಚನಗಿರಿ ...ಂಗಾಧರನಾಥರೇ ವಿಶೇಷ ಪಾದಪೂಜೆ ...ಕೊಂಡು ಆಶೀರ್ವದಿಸಿದ್ದರು. ಟಿವಿ ...ಳಂತೂ ಪೈಪೋಟಿಗೆ ಬಿದ್ದು ಇಡೀ ಮದುವೆಯ ...ಸಾರ ಬಿತ್ತರಿಸಿದವು.


... ರೀತಿ ಯಾರೆಲ್ಲ ಮದುವೆಗೆ ಬಂದು ಅಕ್ಷತೆ ... ಪೋಜು ಕೊಟ್ಟು ಹೋದರೋ ಮುಂದೊಮ್ಮೆ ...ಮಾಡಿದ ಆಶೀರ್ವಾದಕ್ಕೆ ಮದುವೆ ಬರಕತ್ತಾಗದೇ ...ಬೇಕಾದ ಮುಜುಗರಕ್ಕೆ ತಲೆ ಕೊಡಬೇಕಾ...ದು ಹೇಗೆ ತಾನೇ ಗೊತ್ತಿತ್ತು?

...ಪ್ರೇಮ್‌ನ ಕೀಳರಿಮೆ

...ಮದುವೆಯ ಸಿಂಗಾರಕ್ಕೆಂದು ಹೂವಿನ ...ರ ಮಾಡಿದ ಬಿಲ್ಲೇ ಏಳು ಲಕ್ಷದಷ್ಟಾಗಿ ... ನಯಾಪೈಸೆಯನ್ನೂ ಕೊಡದೇ ...ಟ್ಟ. ಬಂದೋಬಸ್ತಿಗೆಂದು ನೂರಾರು ...ವನ್ನು ಕರೆಸಿಕೊಂಡು ಅದರ ಬಾಬತ್ತನ್ನೂ ... ಎತ್ತಿದ್ದ. ಕೊನೆಗೆ ಪೊಲೀಸ್ ಇಲಾಖೆ ...ಕುವ ಧಮಕಿ ಕೊಟ್ಟು ಬಂದೋಬಸ್ತಿನ ... ಕಕ್ಕಿಸಬೇಕಾಯ್ತು. ಇದು ಪ್ರೇಮ್‌ನ ...ಮ ಗಿಮ್ಮಿಕ್ಕಾದರೆ ಮದುವೆಯ ನಂತರ ...ರ್ತನೆಗಳು ಇನ್ನೂ ವಿಚಿತ್ರವಾಗಿದ್ದವು. ...ಕೆ... ಗೆಂದು ರಕ್ಷಿತಾ ಕೊಟ್ಟ ಸಾಲದ ...ಲ್ಲಿ ಬಾಪೂಜಿ ಲೇಔಟಿನ 6 ನೇ ...ದ್ದ 141 ನೇ ನಂಬರಿನ ಸೈಟು ... ಅದೇ ಸೈಟಿನಲ್ಲಿ ರಕ್ಷಿತಾಳ ಮಲತಂದೆ ಅದ್ದೂರಿಯ ಮನೆ ಕಟ್ಟಿಸಿಕೊಟ್ಟರು. ನಾಲ್ಕಂತಸ್ತಿನ ...ಗಲೆಗೆಂದು ಪ್ರೇಮ್ ಲಿಫ್ಟ್ ಹಾಕಿಸಿಕೊಂಡ. ...ಯ ಇಂಟರಿಯರ್ ಕೂಡ ಮಾಡಿಸಿಕೊಂಡ.

...ಕ್ಕೆ ತಕ್ಕಂತೆ ರಕ್ಷಿತಾ ಕೂಡ ಬದಲಾದಳು. ತನ್ನ ...ಇಮೇಜ್ ತೊರೆದು ಪಕ್ಕಾ ಗೃಹಿಣಿಯಂತೆ ...ಗೆ ಅಡುಗೆ ಮಾಡಿ ಕ್ಯಾರಿಯರ್ ತುಂಬಿಸಿ ...ದ್ದಳು. ಪ್ರೇಮ್ ನಡುರಾತ್ರಿ ಹೊತ್ತಿಗೆ ಬಂದರೂ ...ನಕ ಹಸಿದಿರುತ್ತಿದ್ದಳು. ಹೊರಪ್ರಪಂಚಕ್ಕೆ ರಕ್ಷಿತಾ ...ಹೋದಂತೆ ತಾನಾಯಿತು ತನ್ನ ಸಂಸಾರವಾಯಿತು ... ಇದ್ದುಬಿಟ್ಟಳು. ಮದುವೆಯಾದ ಎರಡೇ ವರ್ಷಕ್ಕೆ ಗಂಡು ಮಗುವಾಯ್ತು. ಪ್ರೇಮ್ ಅದಕ್ಕೆ ಭೈರೇಗೌಡ ಎಂದು ಹೆಸರಿಟ್ಟರೆ ರಕ್ಷಿತಾ ಸೂರ್ಯ ಎಂಬ ಮತ್ತೊಂದು ಹೆಸರು ಕೊಟ್ಟಳು. ಬಾಲಾಜಿ ಲೇಔಟಿನ ತಮ್ಮ ಬಂಗಲೆಗೆ ಮಗನ ಹೆಸರನ್ನೇ ಇಟ್ಟರು. ಎಲ್ಲವೂ ಕನಸೋ ಎಂಬಂತೆ ಸುಖಕರವಾಗೇ ಇದ್ದ ಸಂಸಾರದಲ್ಲಿ ಸದ್ದಿಲ್ಲದೇ ಪ್ರೇಮ್‌ನ ಕೀಳರಿಮೆ ಆವರಿಸಲಾರಂಭಿಸಿದ್ದು ಇಲ್ಲಿಗೆ ಒಂದೂವರೆ ವರ್ಷದ ಹಿಂದೆ.

ಆತನಕ ರಕ್ಷಿತಾ ಬಳಸುತ್ತಿದ್ದ ಮೊಬೈಲನ್ನೇ ಪ್ರೇಮ್ ಕಿತ್ತುಕೊಂಡು ಅದೃಶ್ಯ ನಂಬರಿನ ಹೊಸ ಮೊಬೈಲೊಂದನ್ನು ಕೈಗಿತ್ತ. ಬೇರೆ ಯಾರೊಂದಿಗೂ ಮಾತಾಡುವುದನ್ನೇ ನಿಷೇಧಿಸಿಬಿಟ್ಟ. ಶಾಪಿಂಗ್‌ಗೆಂದು ಹೋಗುತ್ತೇನೆಂದರೂ ಆಕೆಯ ಮೇಲೆ ಕಣ್ಣಿಡಲೆಂದು ತನ್ನ ಗ್ಯಾಂಗ್ ಕಳಿಸುತ್ತಿದ್ದ. ಮನೆಯಲ್ಲಿದ್ದರೂ ಟಿವಿ ನೋಡುವಂತಿಲ್ಲ. ಸುದೀಪ್, ದರ್ಶನ್ ಜೊತೆಗಿನ ರಕ್ಷಿತಾ ಡ್ಯುಯೆಟ್ ಹಾಡು ಟಿವಿಯಲ್ಲಿ ಬರುತ್ತಿದ್ದಂತೆ ಟೀವಿಯನ್ನು ಸ್ವಿಚ್ ಆಫ್ ಮಾಡುತ್ತಿದ್ದ. ಯಾವುದೇ ಟಿವಿಯ ಸಿನಿಮಾ ಸಂಬಂಧಿ ಕಾರ್ಯಕ್ರಮಕ್ಕೆಂದು ರಕ್ಷಿತಾ



ಹೋಗುವಂತಿಲ್ಲ. ಟಿವಿಗೆ ಸಂದರ್ಶನ ನೀಡಬೇಕೆಂದರೆ ಅದಕ್ಕೆ ಪ್ರೇಮ್ ಅನುಮತಿ ಬೇಕು. ಪತ್ರಿಕೆಗಳವರು ಫೋನ್ ಮಾಡಿದರೆಂದರೆ ಯಾವುದಕ್ಕೂ ನಮ್ಮೆಜಮಾನ್ರನ್ನ ಒಂದು ಮಾತು ಕೇಳಿ ಎಂದು ಈಕೆಯೇ ಒತ್ತಾಯಿಸಬೇಕು.

ಹೀರೋಯಿನ್ ಸುಮಿತ್ ಜೊತೆ

ಮೊದಮೊದಲು ಇದೆಲ್ಲವೂ ಪ್ರೇಮ್‌ಗೆ ತನ್ನ ಮೇಲಿರುವ ಅತಿಯಾದ ವ್ಯಾಮೋಹವೆಂದೇ ರಕ್ಷಿತಾ ಲೆಕ್ಕ ಹಾಕಿದ್ದಳು. ಪತಿಗೆ ಸಂತೋಷವಾಗುವುದಾದರೆ ಆತನ ಬಯಕೆಯಂತೆ ತಾನಿರುತ್ತೇನೆಂದು ಪ್ರತಿಯೊಂದನ್ನು ಸಹಿಸಿಕೊಂಡಳು. ಪ್ರತಿಷ್ಠಿತ ರಾಜ್ ಬ್ಯಾನರ್‌ನ ಪುನೀತ್‌ನ ಚಿತ್ರಕ್ಕೆ ಪ್ರೇಮ್ ಆಯ್ಕೆಯಾದಾಗಲೂ ಅದು ಯಶಸ್ವಿಯಾಗಲೆಂದು ವರಮಹಾಲಕ್ಷ್ಮಿ ವ್ರತ ಕೈಗೊಂಡಳು. ಒಂದೆಡೆ ಪ್ರೇಮ್‌ನ ಕೀಳರಿಮೆ ಉಲ್ಬಣಿಸುತ್ತಿದ್ದಂತೆ ಆತನ ತಲೆ ಕೂಡ ಖಾಲಿಯಾಗಿತ್ತು, ರಾಜ್ ಚಿತ್ರವೂ ತೋಪಾಯಿತು. ಕತೆಯೇ ಇಲ್ಲದೆ, ಚಿತ್ರಕತೆಯನ್ನೇ ಬರೆಯದೇ ಬೇಕಾಬಿಟ್ಟಿ ಶೂಟಿಂಗ್ ಮಾಡಿ ಸಮಯ-ದುಡ್ಡೂ ಎರಡನ್ನೂ ಪೋಲು ಮಾಡಿದ ಪ್ರೇಮ್ ವಿರುದ್ಧ ಪಾರ್ವತಮ್ಮ ಹಿಡಿಶಾಪ ಹಾಕಿದ್ದೊಂದೇ ಬಂತು.

ರಾಜ್ ತೋಪಾಗಿದ್ದೇ ತಡ, ಇನ್ನೇನು ಅನಾಹುತವಾಗುತ್ತೋ ಎಂದು ರಕ್ಷಿತಾಳೇ ಮೇಲೆ ಬಿದ್ದು 'ಜೋಗಯ್ಯ' ನಿರ್ಮಾಣಕ್ಕೆ ಮುಂದಾದಳು. ಪ್ರೇಮ್ ಜೊತೆ ತಾನೇ ಹೋಗಿ ಶಿವಣ್ಣನಿಗೆ ಅಡ್ವಾನ್ಸ್ ತೆತ್ತು ಬಂದಳು. ಪತಿಪತ್ನಿ ಸೇರಿಕೊಂಡೇ ಜೋಗಯ್ಯ ನಿರ್ಮಿಸುತ್ತಿದ್ದಾರೆಂಬ ಖುಷಿಗೆ ಶಿವಣ್ಣ ಮರುಮಾತಿಲ್ಲದೇ ಕಾಲ್‌ಶೀಟ್ ಕೊಟ್ಟರು. ವೆಸ್ಟೆಂಡ್ ಹೋಟೆಲಿನಲ್ಲಿ ಶಿವಣ್ಣನ ನೂರನೇ ಚಿತ್ರ ಎಂದೇ ಭಯಂಕರ ಮುಹೂರ್ತಕ್ಕೆ ಕೈಯಿಟ್ಟ ಪ್ರೇಮ್ ಆವತ್ತಿನ ಪಾರ್ಟಿಗೆಂದೇ ಸರಿ ಸುಮಾರು ಐವತ್ತು ಲಕ್ಷ ಸುರಿದಿದ್ದ. ಅದೂ ಕೂಡ ರಕ್ಷಿತಾ ದುಡ್ಡಾಗಿತ್ತು!



ಹೀಗೆ ಐವತ್ತು ಲಕ್ಷ ಸುರಿದು ಜೋಗಯ್ಯ ಮುಹೂರ್ತ ನೆರವೇರಿಸಿದ ಪ್ರೇಮ್ ಸುಮ್ಮನೇ ಅಷ್ಟೊಂದು ದುಡ್ಡು ಸುರಿದಿರಲಿಲ್ಲ. ಶಿವಣ್ಣನ ನೂರನೇ ಚಿತ್ರ ಎಂದು ಪಾರ್ಟಿ ಮಾಡಿ ವಿಜೃಂಭಿಸಿ ಮುಂದೆ ಫೈನಾನ್ಸರುಗಳಿಂದ ಸಾಲ ಎತ್ತುವುದು ಆತನ ಹುನ್ನಾರವಾಗಿತ್ತು. ಜೋಗಯ್ಯನ ಹೀರೋಯಿನ್ ಎಂದು ಮುಂಬಯಿ ಹುಡುಗಿ ಸುಮಿತ್ ಕೌರ್ ಅತ್ವಾಲ್ ಎಂಬಾಕೆಯನ್ನು ಕರೆತಂದಿದ್ದ. ಈಕೆ ಪಂಜಾಬಿ. ಆದರೆ ಪ್ರಚಾರದಲ್ಲಾಗಲಿ, ಮುಹೂರ್ತಕ್ಕೆಂದು ಬಂದಿದ್ದ ಪತ್ರಕರ್ತರಿಗಾಗಲಿ, ಪತ್ನಿ ರಕ್ಷಿತಾಗಾಗಲಿ ಹೀರೋಯಿನ್ ಯಾರೆಂಬುದನ್ನೇ ಹೇಳದೆ ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದ.

ಜೋಗಯ್ಯ ಚಿತ್ರಕ್ಕೆಂದು ಈ ಹೊತ್ತಿಗಾಗಲೇ ರಕ್ಷಿತಾ ಹೆಚ್ಚುಕಮ್ಮಿ ಒಂದು ಕೋಟಿಯಷ್ಟು ಸುರಿದಾಗಿತ್ತು. ಪತ್ನಿಯ ದುಡ್ಡಲ್ಲಿ ಅದ್ದೂರಿಯ ಮುಹೂರ್ತ ಮಾಡಿ, ಉಳಿದ ದುಡ್ಡಲ್ಲೇ ಶೂಟಿಂಗ್ ಆರಂಭಿಸಿದ ಪ್ರೇಮ್ ಇದ್ದಕ್ಕಿದ್ದಂತೆ ಶೂಟಿಂಗನ್ನು ಮೈಸೂರಿಗೆ ಸ್ಥಳಾಂತರಿಸಿದ್ದ. ಕ್ರಮೇಣ ಮನೆಗೆ ಬರುವುದನ್ನೇ ನಿಲ್ಲಿಸಿಬಿಟ್ಟ. ಹಿಂದಾದರೆ ಪ್ರತಿನಿತ್ಯ ಮೈಸೂರಿನಿಂದ ಬಂದು ಹೋಗಿ ಮಾಡುತ್ತಿದ್ದವ ಏಕಾಏಕಿ ಮೈಸೂರಲ್ಲಿ ರಾತ್ರಿ ಕಳೆಯುವುದನ್ನು ಆರಂಭಿಸಿದ್ದು ರಕ್ಷಿತಾ ಸೂಕ್ಷ್ಮವಾಗಿ ಗಮನಿಸಿದ್ದಾಳೆ.

ಸಂದೇಶ್ ಪ್ರಿನ್ಸ್‌ನ ರೋಮಾನ್ಸ್

ಅದೇನು ಗುಮಾನಿಯಿತ್ತೋ, ಶೂಟಿಂಗ್ ತಂಡದಲ್ಲೇ ತನಗೆ ನಂಬಿಕಸ್ತರಾಗಿದ್ದ ಒಂದಿಬ್ಬರನ್ನು ನೇಮಿಸಿದ್ದಾಳೆ. ಅನುಮಾನ ನಿಜವಾಗಿದೆ. ಹೀರೋಯಿನ್ ಸುಮಿತ್ ಕೌರ್ ಅತ್ವಾಲ್‌ಗೆಂದು ರೂಮು ಹಾಕಿದ್ದ ಸಂದೇಶ್ ಪ್ರಿನ್ಸ್ ಹೋಟೆಲಿನಲ್ಲೇ ಪ್ರೇಮ್ ಕೂಡ ರೂಮು ಹಾಕಿದ್ದ. ಶೂಟಿಂಗ್ ಮಧ್ಯದಲ್ಲೇ ಸುಮಿತ್ ಜೊತೆ ಯಾವುದೋ ಕಾರ್ ಹತ್ತಿ ನಾಪತ್ತೆಯಾಗುತ್ತಿದ್ದ. ಕಳೆದ ಮಾರ್ಚ್‌ನಲ್ಲಿ ಇದ್ದಕ್ಕಿದ್ದಂತೆ ಶೂಟಿಂಗ್ ಸ್ಥಳಕ್ಕೆ ರಕ್ಷಿತಾ ದಾಳಿಯಿಟ್ಟರೆ ಪ್ರೇಮ್ ಮತ್ತು ಹೀರೋಯಿನ್ ಸುಮಿತ್ ಇಬ್ಬರು ನಾಪತ್ತೆಯಾಗಿದ್ದು ಗೊತ್ತಾಗಿ ರಕ್ಷಿತಾ ಶೂಟಿಂಗ್ ಸ್ಥಳದಲ್ಲೇ ರಣಚಂಡಿಯಾಗಿದ್ದಾಳೆ. ಆವತ್ತು ಯಾವುದೋ ಹರಕೆ ಹೊತ್ತವಳಂತೆ ಚಾಮುಂಡಿ ಬೆಟ್ಟದ ಸಾವಿರ ಮೆಟ್ಟಿಲನ್ನು ಬರಿಗಾಲಲ್ಲೇ ಹತ್ತಿದ ರಕ್ಷಿತಾಳನ್ನು ಅಲ್ಲಿದ್ದ ವರದಿಗಾರ್ತಿಯೊಬ್ಬಳು ಪ್ರಶ್ನಿಸಿದರೆ 'ಅಂಥಾದ್ದೇನೂ ಇಲ್ಲ, ನನ್ನ ಎಲ್ಲಾ ಸ್ನೇಹಿತರಿಗೂ ಒಳ್ಳೇದಾಗಲಿ ಅಂತ ತಾಯಿಗೆ ಹರಕೆ ಹೊತ್ತಿದ್ದೆ' ಎಂದು ಮಾತು ತೇಲಿಸಿದ್ದಾಳೆ.

ಅಲ್ಲಿಗೆ ರಕ್ಷಿತಾಳ ಮನಸ್ಸೇ ಒಡೆದುಹೋಗಿದೆ. ಮುಹೂರ್ತ ದಿನ ಜೋಡಿ ಹಕ್ಕಿಗಳಂತೆ ಓಡಾಡಿಕೊಂಡಿದ್ದ ಗಂಡಹೆಂಡತಿ ಬರುಬರುತ್ತ ಜೋಗಯ್ಯನ ಪಾರ್ಟಿಗಳಲ್ಲಿ ಅಪರಿಚಿತರಂತೆ ವರ್ತಿಸತೊಡಗಿದ್ದಾರೆ. ಎಲ್ಲಾ ಮುಗಿದ ಮೇಲೆ ಕಾಟಾಚಾರಕ್ಕೆಂಬಂತೆ ಬಂದು ಪತ್ರಕರ್ತರನ್ನು ವಿಶ್ ಮಾಡುತ್ತಿದ್ದ ರಕ್ಷಿತಾ ಪ್ರೇಮ್‌ನ ಮುಖವನ್ನೇ ನೋಡುತ್ತಿರಲಿಲ್ಲ. ತೀರ ಇತ್ತೀಚೆಗೆ ಅಂದರೆ ಏಪ್ರಿಲ್ 30 ರಂದು ನಡೆದ ರಕ್ಷಿತಾ ಬರ್ತ್‌ಡೇ ಪಾರ್ಟಿಯಲ್ಲಿ ಪ್ರೇಮ್ ನಾಪತ್ತೆಯಾಗಿದ್ದ.

ಪತ್ನಿಯ ಬರ್ತ್‌ಡೇ ಪಾರ್ಟಿಗೂ ಬಾರದೆ ಮೈಸೂರಿನಲ್ಲಿ ಶೂಟಿಂಗ್ ಮಾಡುವ ಹರಕತ್ತೇನಿತ್ತು? ಹಿಂದಾದರೆ ತಮ್ಮ ಬಾಲಾಜಿ ಲೇಔಟಿನ ಮನೆಯಲ್ಲೇ ಪತಿ ಪತ್ನಿ ಸೇರಿ ಬರ್ತ್‌ಡೇ ಆಚರಿಸುತ್ತಿದ್ದರು. ಪತ್ರಕರ್ತರನ್ನು ಕರೆಯುತ್ತಿದ್ದರು. ಆದರೆ ಮೊನ್ನೆ ನಡೆದ ಪಾರ್ಟಿ ಏಕಾಏಕಿ ಜಯನಗರದ ತಾಯಿ ಮಮತಾರಾವ್ ಮನೆಗೆ ಸ್ಥಳಾಂತರಗೊಂಡಿತ್ತು. ಏನೇ ತಲೆ ಹೋಗುವಂಥ ಕೆಲಸವಿದ್ದರೂ ಗಂಡನಾದವನು ಅದೆಲ್ಲವನ್ನೂ ಬದಿಗೊತ್ತಿ ಪತ್ನಿಯ ಹುಟ್ಟುಹಬ್ಬದಲ್ಲಿ ಪಾಲ್ಗೊಳ್ಳುವುದು ಸರ್ವೇಸಾಮಾನ್ಯ. ಆದರೆ ಪ್ರೇಮ್ ಉದ್ದೇಶಪೂರ್ವಕವಾಗಿ ಚಕ್ಕರ್ ಹಾಕಿದ್ದ. ಅಥವಾ ರಕ್ಷಿತಾ ಆತನನ್ನು ಹೊರಗಿಟ್ಟು ತನ್ನ ಹುಟ್ಟುಹಬ್ಬ ಆಚರಿಸಿಕೊಂಡಿದ್ದಳು!

ಡೈವೋರ್ಸ್ ನೋಟಿಸ್


ಇದು ರಕ್ಷಿತಾ-ಪ್ರೇಮ್ ದಾಂಪತ್ಯದ ಸ್ಪಷ್ಟ ಬಿರುಕಿನ ಸಂಕೇತ. ಸದ್ಯ ಪ್ರೇಮ್ ಬಾಪೂಜಿ ಲೇಔಟಿನ ಮನೆಗೆ ಅಪರೂಪಕ್ಕೊಮ್ಮೆ ಬರುತ್ತಿದ್ದಾನೆ. ಹಿಂದಿನಂತೆ ಗಂಡಹೆಂಡತಿ ಮಧ್ಯೆ ಫೋನ್ ಕುಶಲೋಪರಿ ಕೂಡ ಸ್ಥಗಿತಗೊಂಡಿದೆ. ಬಹುಶಃ ಜೋಗಯ್ಯ ಚಿತ್ರಕ್ಕೆ ರಕ್ಷಿತಾ ಬಂಡವಾಳ ಹಾಕದೇ ಹೋಗಿದ್ದರೆ ಈ ಹೊತ್ತಿಗಾಗಲೇ ಡೈವೋರ್ಸ್ ಮುಗಿದಿರುತ್ತಿತ್ತೇನೊ. ಶಿವಣ್ಣನ ನೂರನೇ ಚಿತ್ರವಾದ್ದರಿಂದ ಅದರ ನಿರ್ಮಾಪಕಿ ತಾನೆಂಬ ಹೆಗ್ಗಳಿಕೆಯ ಒಂದೇ ಕಾರಣಕ್ಕೆ ರಕ್ಷಿತಾ ಎಲ್ಲಾ ನೋವನ್ನೂ ನುಂಗಿಕೊಂಡಿದ್ದಾಳೆ. ಏನೂ ನಡೆದೇ ಇಲ್ಲ ಎಂಬಂತೆ ಎಲ್ಲವನ್ನೂ ಮುಚ್ಚಿಟ್ಟಿದ್ದಾಳೆ. ಆದರೆ ಜೋಗಯ್ಯ ಬಿಡುಗಡೆಯಾಗುತ್ತಿದ್ದಂತೆ ಅದಕ್ಕೆಂದು ತಾನು ಹಾಕಿದ ಬಂಡವಾಳವನ್ನು ವಸೂಲಿ ಮಾಡಿದ್ದೇ ರಕ್ಷಿತಾ ತನ್ನ ಡೈವೋರ್ಸ್ ಘೋಷಿಸಲಿದ್ದಾಳೆ. ಅದಕ್ಕೆಂದು ಈಗಾಗಲೇ ವಕೀಲರೊಬ್ಬರನ್ನು ಕಂಡು ನೋಟಿಸ್ ಕೂಡ ಕೊಟ್ಟಾಗಿದೆ.

ಇನ್ನು ವಿಜಯನಗರದ ರಿಯಲ್ ಎಸ್ಟೇಟ್ ಅಡ್ಡೆಗಳ ವಿಷಯಕ್ಕೆ ಬಂದರೆ ಪ್ರೇಮ್-ರಕ್ಷಿತಾ ಮನೆಯದ್ದೇ ಬಿಸಿ ಸುದ್ದಿ. ಬಾಪೂಜಿ ಲೇಔಟಿನ 6 ನೇ ಕ್ರಾಸಿನಲ್ಲಿರುವ 146 ನೇ ನಂಬರಿನ ಸೂರ್ಯ ಬಂಗಲೆ ಮಾರಾಟಕ್ಕಿದೆಯಂತೆ. ಗಂಡ ಹೆಂಡತಿ ಸೇರಿಕೊಂಡೇ ಅದನ್ನು ಮಾರಿ ಬಂದ ದುಡ್ಡನ್ನು ಹಂಚಿಕೊಳ್ಳುತ್ತಾರಂತೆ. ಮಗ ಸೂರ್ಯನನ್ನು ರಕ್ಷಿತಾ ತನ್ನ ಜೊತೆಗೇ ಇಟ್ಟುಕೊಳ್ಳುತ್ತಾರಂತೆ. ಪ್ರೇಮ್‌ಗೆ ಡೈವೋರ್ಸ್ ಕೊಟ್ಟು ಮತ್ತೆ ಸಿನಿಮಾ ನಿರ್ಮಿಸುವುದು ರಕ್ಷಿತಾ ಉದ್ದೇಶವಂತೆ. ರಮ್ಯಾ ಕಾಂಗ್ರೆಸ್ ಸೇರಿಕೊಂಡಂತೆ ರಕ್ಷಿತಾ ಬಿಜೆಪಿಗೆ ಬರುತ್ತಾರಂತೆ. ತನ್ನೆಲ್ಲಾ ಏಳಿಗೆ, ಸಂತೋಷಕ್ಕೆ ಅಡ್ಡಿಯಾಗಿ ತನ್ನನ್ನು ಮನೆ ಕೆಲಸದವಳಿಗಿಂತ ಕೀಳು ಮಾಡಿ ಕೊನೆಗೆ ತನ್ನನ್ನೇ ವಂಚಿಸಿ ಇನ್ನಾರೋ ಹೀರೋಯಿನ್ ಜೊತೆ ಚಕ್ಕಂದಕ್ಕಿಳಿದ ಪ್ರೇಮ್‌ಗೆ ಡೈವೋರ್ಸ್ ಕೊಡುವುದೇ ರಕ್ಷಿತಾ ಪಾಲಿಗೆ ಇರುವ ಒಂದೇ ದಾರಿ?

ಅವತ್ತು ರಕ್ಷಿತಾ-ಪ್ರೇಮ್ ಮದುವೆಗೆ ಮುಗಿಬಿದ್ದು ಅಕ್ಷತೆಕಾಳು ಹಾಕಿ ಆಶೀರ್ವದಿಸಿದ ಮಠಾಧೀಶರಿಂದ ಹಿಡಿದು ಮುಖ್ಯಮಂತ್ರಿತನಕ ಚಿತ್ರರಂಗದ ಎಲ್ಲಾ ಗಣ್ಯರಿಗೂ ಎಂಥಾ ಮುಜುಗರ ಮತ್ತು ಮುಖಭಂಗವಲ್ಲವೆ? ಸಿನಿಮಾದ ಭ್ರಮೆಯೇ ಬೇರೆ ವಾಸ್ತವವೇ ಬೇರೆ. ಪ್ರೇಮ್ ಗಿಮ್ಮಿಕ್ಕಿಗೆ ಬಲಿಯಾದ ರಕ್ಷಿತಾಗೆ ಜ್ಞಾನೋದಯವಾಗಿದೆ ನಿಜ. ಆದರೆ ಕಾಲ ಮಿಂಚಿದೆ. ●


...ಗಯ್ಯ ...ರೋಯಿನ್ ...ತ್ ಕೌರ್ ಅತ್ವಾಲ್





ರಂಗಾಸಕ್ತಿ ಚಿಗುರಿಸುತ್ತಿರುವ ಝೂನ್ ಟೀಮ್

ಎಲೆಕ್ಟ್ರಾನಿಕ್ ಮಾಧ್ಯಮಗಳ ಅಗ್ಗದ ಮನರಂಜನೆಯ ಕಾರ್ಯಕ್ರಮಗಳ ಪ್ರಭಾವದಿಂದಾಗಿ ಜನರಲ್ಲಿ ರಂಗಾಸಕ್ತಿ ಕ್ಷೀಣಿಸುತ್ತಿದೆ ಎಂಬ ಆತಂಕ ರಂಗಕರ್ಮಿಗಳು - ರಂಗತಜ್ಞರಿಂದ ವ್ಯಕ್ತವಾಗುತ್ತಲೇ ಇದೆ. ವರ್ಷಾನುಗಟ್ಟಲೆ ಸಾಗುವ ಧಾರಾವಾಹಿಗಳ, ದಿನಕ್ಕೊಂದರಂತೆ ರೂಪುಗೊಳ್ಳುತ್ತಿರುವ ತರಹೇವಾರಿ ರಿಯಾಲಿಟಿ ಶೋಗಳ ಅಬ್ಬರ ಮತ್ತು ಜನಪ್ರಿಯತೆ ನೋಡಿದವರಿಗೆ ಹಾಗನ್ನಿಸುವುದು ಸಹಜ. ಈ ಆತಂಕದಲ್ಲಿ ಹುರುಳಿದೆ ಎಂಬುದೂ ಸತ್ಯ ಇದರ ನೇರ ಪರಿಣಾಮ ಕಂಡುಬರುವುದು ಗ್ರಾಮೀಣ ಪ್ರದೇಶದಲ್ಲಿ, ಇತ್ತೀಚಿನ ದಶಕಗಳವರೆಗೂ ನಾಟಕ ಪ್ರದರ್ಶನ ಎಂಬುದು ಗ್ರಾಮೀಣ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಹುಮುಖ್ಯ ಸ್ಥಾನ ಪಡೆದಿತ್ತು. ಈಗ ಪರಿಸ್ಥಿತಿ ಹಾಗಿಲ್ಲ, ಗ್ರಾಮೀಣ ಜನರ ಮೇಲೆ ಆಧುನಿಕ ನಗರ ಸಂಸ್ಕೃತಿಯ ಪ್ರಭಾವ-ರೀತಿ ರಿವಾಜುಗಳ ನೆರಳು ದಟ್ಟವಾಗಿ ಆವರಿಸಿಕೊಂಡಿರುವ ಸಂಕೇತ ಇದು. ಹಳ್ಳಿಗಳಲ್ಲಿ ನಾಟಕ ಪ್ರದರ್ಶನ ಎಂಬುದು ಬಹುತೇಕ ಔಟ್‌ಡೇಟೆಡ್ ಪ್ರವೃತ್ತಿ ಎಂಬಂತಾಗಿದೆ.

ನಗರ ಪ್ರದೇಶಗಳಲ್ಲಿ ರಂಗಾಸಕ್ತಿಯನ್ನು ಜೀವಂತವಾಗಿರಿಸುವ ಪ್ರಯತ್ನಗಳು ವೃತ್ತಿರಂಗ ಕಲಾತಂಡಗಳು, ಹವ್ಯಾಸಿ ರಂಗ ಕಲಾತಂಡಗಳಿಂದ ನಡೆಯುತ್ತಿದ್ದೆಯಾದರೂ ಅವು ನಿಗದಿತ ವಲಯದ ರಂಗಾಸಕ್ತರು, ಪ್ರೇಕ್ಷಕರನ್ನಷ್ಟೇ ಕೇಂದ್ರೀಕರಿಸಿಕೊಂಡಿವೆ.

ರಂಗ ಪ್ರದರ್ಶನಗಳನ್ನು ಒಟ್ಟಾರೆ ನಮ್ಮ ಸಮಾಜದ ಆರ್ಥಿಕ ರಾಜಕೀಯ ಆಗುಹೋಗುಗಳೊಂದಿಗೆ ಬೆಸೆಯುವಂಥ ಮತ್ತವುಗಳಿಗೆ ಸಾಂಸತಿಕವಾಗಿ ಪ್ರತಿಕ್ರಿಯಿಸುವಂಥ ಒಂದು ಪ್ರಭಾವಿ ಮಾಧ್ಯಮವನ್ನಾಗಿ ರೂಪಿಸಬೇಕಾದ ತುರ್ತು ರಂಗಾಸಕ್ತರು ಮತ್ತು ರಂಗತಜ್ಞರ ಮುಂದಿದೆ.

ಪ್ರಸ್ತುತ ಕಳೆದ ಐದು ವರ್ಷಗಳಿಂದ ನಿರಂತರವಾಗಿ ರಂಗಪ್ರದರ್ಶನಗಳನ್ನು ನಡೆಸುತ್ತಾ ಬಂದಿರುವ ತುಮಕೂರಿನ ಝೂನ್ ಟೀಂ ನಗರ ಹಾಗೂ ಗ್ರಾಮೀಣ ಪ್ರದೇಶದ ಜನರನ್ನು ಒಂದೆಡೆ ಸೇರಿಸುವಂತಹ ಒಂದು ವಿಭಿನ್ನ ಪ್ರಯತ್ನದಲ್ಲಿ ಯಶಸ್ವಿ ಹೆಜ್ಜೆಗಳನ್ನಿರಿಸಿದೆ. ನಾಡಿನ ರಂಗ ಪರಂಪರೆಯಲ್ಲಿ ತನ್ನದೇ ವಿಶಿಷ್ಟಸ್ಥಾನ ಪಡೆದಿದ್ದ ತುಮಕೂರಿನಲ್ಲಿ ನಾಟಕ ಪ್ರದರ್ಶನಗಳ ಮಟ್ಟಿಗೆ ಸುಮಾರು ಹತ್ತನ್ನೆರಡು ವರ್ಷಗಳ ಕಾಲ ಸಾಂಸ್ಕೃತಿಕ ನಿರ್ವಾತ ನಿರ್ಮಾಣವಾಗಿತ್ತು.

ಇಂತಹ ಸನ್ನಿವೇಶದಲ್ಲಿ ತುಂಬಾ ರಚನಾತ್ಮಕವಾದ ನೆಲೆಯಲ್ಲಿ ರಂಗಪ್ರದರ್ಶನಗಳಿಗೆ ಚಾಲನೆ ನೀಡಿದ ಝೂನ್ ಟೀಂ ಈ ಸಾಂಸ್ಕೃತಿಕ ಕೊರತೆಯನ್ನು ಸಮರ್ಥವಾಗಿ ಹೋಗಲಾಡಿಸಿದೆ. ವೆಂಕಟರಮಣ ಐತಾಳರ ನಿರ್ದೇಶನದಲ್ಲಿ ತುಮಕೂರಿನ ಇತಿಹಾಸದಲ್ಲೇ ಮೊದಲ ಬಾರಿಗೆ 'ಕನ್ನಡ ರಾಮಾಯಣ' ಎಂಬ ಹಳಗನ್ನಡ ನಾಟಕದ ಪ್ರದರ್ಶನಕ್ಕೆ ಕಿಕ್ಕಿರಿದು ಸೇರಿದ ಜನ ಝೂನ್ ಟೀಂ ರಂಗೋತ್ಸಾಹ ಮುಂದುವರೆಸಿಕೊಂಡು ಹೋಗಲು ಉತ್ತಮ ಪ್ರೇರಣೆಯನ್ನೇ ನೀಡಿತು.

ಐದು ವರ್ಷಗಳ ಅವಧಿಯಲ್ಲಿ ೬೦ ನಾಟಕಗಳ ಪ್ರದರ್ಶನ ನಡೆಸಿ ಹೊಸ ದಾಖಲೆಯನ್ನೇ ನಿರ್ಮಿಸಿರುವ ಝೂನ್ ಟೀಂ ನಾಟಕಗಳನ್ನು ಆಯ್ಕೆ ಮಾಡುವ, ಸಂಘಟಿಸುವ ತನ್ನ ಪ್ರತ್ಯೇಕತೆಯಿಂದಾಗಿಯೇ ತುಮಕೂರು ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ವಿಸ್ತೃತವಾಗಿ ರಂಗಾಸಕ್ತರು ಹುಟ್ಟಿಕೊಂಡಿದ್ದಾರೆ. ತೋವಿನಕೆರೆ, ಹೆಬ್ಬೂರು, ಕ್ಯಾತ್ಸಂದ್ರ, ಹಿರೇಹಳ್ಳಿ ಸೇರಿದಂತೆ ಶಿರಾ ತಾಲ್ಲೂಕು ಕೇಂದ್ರದಿಂದಲೂ ನಾಟಕ ವೀಕ್ಷಣೆಗಾಗಿ ಜನ ಆಗಮಿಸುತ್ತಾರೆ. ಇದುವರೆಗೂ ೪೦ ಸಾವಿರ ಜನ ನಾಟಕ ಪ್ರದರ್ಶನಗಳನ್ನು ವೀಕ್ಷಿಸಿದ್ದಾರೆಂಬುದು ಝೂನ್ ಟೀಂನ ನಾಟಕ ಪ್ರದರ್ಶನಗಳ ಜನಪ್ರಿಯತೆಗೆ ಸಾಕ್ಷಿ.

ಅಲ್ಲಮನ ಬಯಲಾಟ, ಸತ್ಯಹರಿಶ್ಚಂದ್ರ, ಜಿ ಕೆ ಮಾಸ್ತರರ ಪ್ರಣಯ ಪ್ರಸಂಗ, ಜುಗಾರಿ ಕ್ರಾಸ್, ಚಕೋರಿ, ಅಬಚೂರಿನ ಪೋಸ್ಟಾಫೀಸು, ನಟ ನಾರಾಯಣಿ, ಸ್ವಯಂವರ ಲೋಕ, ಲಂಕೇಶರ ಈ ನರಕ- ಈ ಪುಲಕ, ಗುಣಮುಖ, ರಹಸ್ಯ ವಿಶ್ವ, ಪಂಚರಾತ್ರ (ಹಳಗನ್ನಡ), ಕನ್ನಡ ರಾಮಾಯಣ, ಸಂಸಾರದಲ್ಲಿ ಸನಿದಪ, ಶರವಣ ಸರ್ವೀಸಸ್, ಯುಗಾದಿ, ತಬರನ ಕತೆ, ಬಯಲುಸೀಮೆ ಕಟ್ಟೆಪುರಾಣ, ಶೂದ್ರ ತಪಸ್ವಿ, ಒಥೆಲೋ, ಯಹೂದಿ ಹುಡುಗಿ, ಓವರ್ ಕೋಟ್...

ಹೀಗೆ ಅರವತ್ತಕ್ಕೂ ಹೆಚ್ಚು ಸಾಮಾಜಿಕ ಸಂದೇಶ, ಜಾಗೃತಿ ಮೂಡಿಸುವ ನಾಟಕಗಳ ಪ್ರದರ್ಶನಗಳನ್ನು ನಡೆಸಿದ್ದಾರೆ. ಈ ನಾಟಕೋತ್ಸವಗಳ ಭಾಗವಾಗಿಯೇ ವಿಶೇಷವಾಗಿ ಸಮುದಾಯ ನಾಟಕೋತ್ಸವ, ದೇಸಿ ನಾಟಕೋತ್ಸವ, ನಮ್ಮ ನಾಟಕೋತ್ಸವ ಆಯೋಜಿಸಲಾಗಿದೆ.

ಹೆಗ್ಗೋಡಿನ ನೀನಾಸಂ, ಜನಮನದಾಟ, ಧಾರವಾಡದ ಆಟಮಾಟ, ಸಾಣೇಹಳ್ಳಿಯ ಶಿವಸಂಚಾರ, ಶಿವಮೊಗ್ಗದ ನಮ್ ಟೀಂನಂತಹ ಹೆಸರಾಂತ ರಂಗತಂಡಗಳು ಇಲ್ಲಿ ನಾಟಕ ಪ್ರದರ್ಶನ ನೀಡಿವೆ.

ಕಿ. ರಂ. ನಾಗರಾಜ, ಅಗ್ರಹಾರ ಕೃಷ್ಣಮೂರ್ತಿ, ಡಾ. ರಹಮತ್ ತರೀಕೆರೆ, ಕೆ. ಬಿ. ಸಿದ್ಧಯ್ಯ, ನಟರಾಜ ಹಳಿಯಾರು, ಶೂದ್ರ ಶ್ರೀನಿವಾಸ್, ಎಚ್.ಎಸ್. ಶಿವಪ್ರಕಾಶ್, ತುಂಬಾಡಿ ರಾಮಯ್ಯ, ಎಲ್.ಎನ್. ಮುಕುಂದರಾಜ್, ಲಕ್ಷ್ಮಣದಾಸ್, ಬಿ. ಚಂದ್ರೇಗೌಡ, ಜಯಂತ ಕಾಯ್ಕಿಣಿ, ಎಸ್. ಜಿ. ಸಿದ್ಧರಾಮಯ್ಯ ಮುಂತಾದ ಖ್ಯಾತನಾಮರೆಲ್ಲಾ ಝೂನ್ ಟೀಂನ ನಾಟಕ ಪ್ರದರ್ಶನ ಹಾಗೂ ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ.

ನಾಟಕ ಪ್ರದರ್ಶನಗಳ ಜೊತೆಗೆ ಸಮಕಾಲೀನ ವಿಷಯಗಳನ್ನಾಧರಿಸಿ ಸಂವಾದ, ಪುಸ್ತಕ ಬಿಡುಗಡೆ, ಪ್ರತಿ ವರ್ಷ ಬುದ್ಧ ಪೂರ್ಣಿಮೆಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಮುಂದಿನ ದಿನಗಳಲ್ಲಿ ಆಯ್ದ ಹಳ್ಳಿಗಳಲ್ಲಿ ಝೂನ್ ಟೀಂ ಚಿತ್ರಸಮಾಜದಿಂದ ಕಲಾತ್ಮಕ ಚಿತ್ರಪ್ರದರ್ಶನಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದೆ. ತುಮಕೂರು ನಗರದಲ್ಲಿ ಓದಿನ ಆಸಕ್ತಿಯುಳ್ಳವರೆಲ್ಲಾ ಔಪಚಾರಿಕವಾಗಿ ಒಂದೆಡೆ ಸೇರಿ ತಾವು ಓದಿದ ಕೃತಿ-ಬರಹವನ್ನು ಮಂಡಿಸುವ, ಚರ್ಚಿಸುವ 'ಓದಿನಮನೆ' ಎಂಬ ಕಾರ್ಯಕ್ರಮಕ್ಕೂ ಚಾಲನೆ ನೀಡಲು ಝೂನ್ ಟೀಂ ಯೋಜಿಸಿದೆ.

ಸಾಹಿತಿ - ಲೇಖಕರು ಮಾತ್ರವಲ್ಲದೇ ಸಾಮಾನ್ಯ ಓದುಗರೂ ಇಲ್ಲಿ ತಾವು ಓದಿದ ಪುಸ್ತಕದ ಕುರಿತು ಮಾತನಾಡಲು ವೇದಿಕೆ ಕಲ್ಪಿಸುವುದು, ಅಭಿರುಚಿ ಪ್ರಧಾನವಾದ, ಸಾಮಾಜಿಕ ಸಂದೇಶ ನೀಡುವಂತಾ ಓದಿನ ಹವ್ಯಾಸ ಬೆಳೆಸುವುದು ಇದರ ಉದ್ದೇಶ ಹಾಗೂ ವಿಶೇಷವಾಗಿದೆ. ಸಾಂಸ್ಕೃತಿಕ ವಾತಾವರಣವನ್ನು ಜೀವಂತವಾಗಿರಿಸುವ ಝೂನ್ ಟೀಂನ ರಚನಾತ್ಮಕ ಪ್ರಯತ್ನಗಳಿಗೆ ಎಲ್ಲಾ ಪ್ರಜ್ಞಾವಂತರ ಬೆಂಬಲ, ಒತ್ತಾಸೆ ಸಿಗಬೇಕಿದೆ.

● ಎಂ.ಎನ್.ಪಾಂಡು

ಝೂನ್ ಟೀಂನ ಎಲ್ಲಾ ಚಟುವಟಿಕೆಗಳ ಹಿಂದೆ ಚಾಲಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿರುವವರು ಕವಿ-ಪತ್ರಕರ್ತ ಉಗಮ ಶ್ರೀನಿವಾಸ್. ಪ್ರಸ್ತುತ ಕನ್ನಡ ಪ್ರಭದ ಜಿಲ್ಲಾ ವರದಿಗಾರರಾಗಿರುವ ಉಗಮ ಶ್ರೀನಿವಾಸ್ ಕಾಲೇಜು ದಿನಗಳಿಂದಲೂ ನಾಟಕ ಅಧ್ಯಯನ - ಪ್ರದರ್ಶನಗಳನ್ನು ನೋಡುವ ಹವ್ಯಾಸವನ್ನು ಮೈಗೂಡಿಸಿಕೊಂಡವರು.

ತಿಪಟೂರಿನ ಪ್ರೊಫೆಷನಲ್ ಥಿಯೇಟರ್ ಯೂನಿಟ್‌ನಲ್ಲಿ ನಡೆಯುತ್ತಿದ್ದ ನಾಟಕ ಪ್ರದರ್ಶನಗಳು ಹಾಗೂ ಹಳಗನ್ನಡ ನಾಟಕಗಳ ಜೊತೆ ಬ್ರೆಕ್ಟ್, ಸಾಫೋಕ್ಲಿಸ್, ಲಂಕೇಶ್, ಶ್ರೀರಂಗ, ಸಂಸ, ಚಂಪಾ, ಗಿರೀಶ್ ಕಾರ್ನಾಡರ ನಾಟಕಗಳ ಅಧ್ಯಯನ ಉಗಮ ಅವರಲ್ಲಿ ಉತ್ಕಟವಾದ ರಂಗಾಸಕ್ತಿ ಬೆಳೆಸಿಕೊಳ್ಳಲು ಪ್ರೇರಣೆ ನೀಡಿವೆ.

ಶಿವಮೊಗ್ಗದಲ್ಲಿ ಕನ್ನಡಪ್ರಭದಲ್ಲಿ ಕೆಲಸ ಮಾಡುವಾಗ ಅಲ್ಲಿನ ಸಮಾಜವಾದಿ - ಪ್ರಗತಿಪರರ ಜೊತೆಗಿನ ಒಡನಾಟ ತಮ್ಮನ್ನು ಯಾವುದಾದರೊಂದು ಕ್ರಿಯಾಶೀಲವಾದ ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕೆಂಬ ಒತ್ತಾಸೆಯನ್ನು ನೀಡಿತ್ತು ಎನ್ನುತ್ತಾರೆ ಉಗಮ ಶ್ರೀನಿವಾಸ್.

"ಬೆಂಗಳೂರಿಗೆ ವರ್ಗವಾದ ನಂತರ ಸಿಜಿಕೆಯವರ ಜೊತೆ ಒಡನಾಟ ಶುರುವಾಯಿತು. ರಂಗ ಚಟುವಟಿಕೆಗಳ ಬಗ್ಗೆ ನಿರಂತರವಾಗಿ ಧ್ಯಾನಿಸುತ್ತಿದ್ದ ಹೊಸ ಹೊಸ ಸಾಧ್ಯತೆಗಳ ಬಗ್ಗೆ ಯೋಚಿಸುತ್ತಿದ್ದ ಸಿಜಿಕೆಯವರು ನನ್ನಲ್ಲಿದ್ದ ರಂಗಾಸಕ್ತಿಯನ್ನು ಮತ್ತಷ್ಟು ಬೆಳೆಸಿಕೊಳ್ಳಲು ಪ್ರೇರಣೆ ನೀಡಿದರು.



ಸಮಯ ಸಿಕ್ಕಾಗಲೆಲ್ಲಾ ಸಿಜಿಕೆಯವರ ಜೊತೆ ಕಾಲಕಳೆಯಲು ಪ್ರಯತ್ನಿಸುತ್ತಿದ್ದೆ. ಶಿವಮೊಗ್ಗದಲ್ಲಿದ್ದಾಗಲೇ ಅವರ 'ಕತ್ತಲೆ ಬೆಳದಿಂಗಳೊಳಗ' ಕೃತಿಯನ್ನು ಓದಿ ಅದನ್ನೊಂದು ಡಾಕ್ಯೂಮೆಂಟ್ ಮಾಡುವ ಬಯಕೆ ವ್ಯಕ್ತಪಡಿಸಿದ್ದೆ. ನಮ್ಮ ಒಡನಾಡಕ್ಕೆ ಇದೂ ಒಂದು ಕಾರಣವಾಗಿತ್ತು, ಹಾಗಾಗಿ ನಮ್ಮ ಝೂನ್‌ಟೀಂನ ಹುಟ್ಟಿಗೆ ಸಿಜಿಕೆಯವರೇ ಮುಖ್ಯಪ್ರೇರಣೆ.

ಇಷ್ಟೊಂದು ಚಟುವಟಿಕೆಗಳನ್ನು ನಡೆಸುತ್ತಿದ್ದರೂ ಝೂನ್‌ಟೀಂಗೊಂದು ಸಂಘಟನಾತ್ಮಕ ರೂಪ ಕೊಟ್ಟಿಲ್ಲ, ಈಗ ಯಾವ ರಗಳೆಗಳೂ ಇಲ್ಲದೇ ಕಾರ್ಯಕ್ರಮಗಳು ಸುಲಲಿತವಾಗಿ ನಡೆಯುತ್ತಿವೆ. ಅದಕ್ಕೊಂದು ಪದಾಧಿಕಾರಿಗಳ ಪಟ್ಟಿ, ಕಚೇರಿ - ಹೀಗೆ ಸಾಂಸ್ಥಿಕ ರೂಪ ನೀಡಿದರೆ ಇಲ್ಲದ ಸಮಸ್ಯೆಗಳು ಎದುರಾಗುತ್ತವೆ. ಪ್ರಸ್ತುತ ನಾಟಕ ಪ್ರದರ್ಶನಗಳಿಗೆ ಕನ್ನಡ ಸಂಸ್ಕೃತಿ ಇಲಾಖೆ ಪ್ರದರ್ಶನ ವೆಚ್ಚದ ಒಂದಷ್ಟು ಪಾಲನ್ನು ನೀಡುತ್ತದೆ. ಉಳಿದ ಖರ್ಚನ್ನು ನಾವೇ ಗೆಳೆಯರು ಭರಿಸುತ್ತೇವೆ.

ನಾಟಕ ಪ್ರದರ್ಶನಗಳನ್ನು ನೀಡಲು ಬರುವವರಿಗೆ ಅಂತಾ ದೊಡ್ಡ ಸಂಭಾವನೆ ನೀಡದಿದ್ದರೂ ಝೂನ್‌ಟೀಂನ ಪ್ರಯತ್ನಗಳ ಬಗ್ಗೆ ಅಭಿಮಾನವಿರಿಸಿಕೊಂಡು ಬಹಳಷ್ಟು ಕಲಾ ತಂಡಗಳು ಪ್ರದರ್ಶನ ನೀಡಿವೆ" ಎನ್ನುತ್ತಾರೆ ಉಗಮ ಶ್ರೀನಿವಾಸ್.

ಒಟ್ಟಾರೆ ತುಮಕೂರು ನಗರದಲ್ಲಿ ತಮ್ಮ ಪ್ರವೃತ್ತಿಯ ಭಾಗವಾಗಿಯೇ ಅಲ್ಲಿನ ಸಾಂಸ್ಕೃತಿಕ ವಾತಾವರಣವನ್ನು ಕ್ರಿಯಾಶೀಲಗೊಳಿಸುವಂತಾ ಪ್ರಯತ್ನಗಳಲ್ಲಿ ತೊಡಗಿಸಿಕೊಂಡಿರುವ ಕವಿ - ಪತ್ರಕರ್ತ ಉಗಮ ಶ್ರೀನಿವಾಸ್ ಮತ್ತಷ್ಟು ಕಾರ್ಯಸ್ಫೂರ್ತಿಯಿಂದ ಝೂನ್‌ಟೀಂನ ಚಟುವಟಿಕೆಗಳನ್ನು ಮುಂದುವರಿಸಲಿ. ●




ಮೇ 25 ರಿಂದ
ಮಾರುಕಟ್ಟೆಯಲ್ಲಿ
ನಿರೀಕ್ಷಿಸಿ
ಜಾಬ್ ನ್ಯೂಸ್
JOB NEWS
ಕನ್ನಡ ಪಾಕ್ಷಿಕ

ಗೈಡ್ ಪ್ರಕಾಶನದ ಹೊಸ ಕೊಡುಗೆ
" ಕೆಲಸ ಖಾಲಿ ಇದೆ "
ಮಾಹಿತಿ ನಮ್ಮಲ್ಲಿದೆ
ನಿಮ್ಮಿಂದ, ನಿಮಗಾಗಿ, ನಿಮಗೋಸ್ಕರ...........
ಈ ನಿಮ್ಮ ಪತ್ರಿಕೆ

ಅಕಸ್ಮಾತ್ ಇರಾಕಿ ಕಮಾಂಡೋಗಳು ಜಾರ್ಜ್ ಬುಶ್ ಮನೆ ಕಾಂಪೌಂಡಿನ ಒಳಗೆ ನುಗ್ಗಿ, ಅವನನ್ನು ಹತ್ಯೆ ಮಾಡಿ, ಅವನ ದೇಹವನ್ನು ಅಟ್ಲಾಂಟಿಕ್ ಸಾಗರದೊಳಗೆ ಎಸೆದಿದ್ದರೆ ನಾವು ಹೇಗೆ ಪ್ರತಿಕ್ರಿಯಿಸುತ್ತಿದ್ದೆವು ಎಂಬ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಂಡರೆ ಹೇಗನಿಸಬಹುದು?

ಒಸಾಮಾ ಬಿನ್ ಲಾಡೆನ್ ಸಾವಿನ ಬಗ್ಗೆ ನನ್ನ ಪ್ರತಿಕ್ರಿಯೆ



• ನೋಮ್ ಚಾಮ್‌ಸ್ಕಿ

ಲಾಡೆನ್ ಪ್ರಕರಣದ ಇಡೀ ಆಪರೇಶನ್ ನೋಡಿದರೆ, ...ು ಎಲ್ಲ ಅಂತರರಾಷ್ಟ್ರೀಯ ಕಾನೂನುಗಳನ್ನೂ ಗಾಳಿಗೆ ...ರಿ ನಡೆಸಿದ ಒಂದು ವ್ಯವಸ್ಥಿತವಾದ ಹತ್ಯೆ ಎನ್ನುವುದು ...ಗ ನಿಶ್ಚಲವಾಗಿ ಗೋಚರಿಸುತ್ತಿದೆ. ಲಾಡೆನ್‌ನ ಪತ್ನಿ ತಮ್ಮ ... ನುಗ್ಗಿದ್ದನ್ನು ಬಿಟ್ಟರೆ ಇನ್ನಾವ ಪ್ರಬಲ ಪ್ರತಿರೋಧವೂ ...ದಿದ್ದ, ನಿಶ್ಶಸ್ತ್ರನಾಗಿದ್ದ ವ್ಯಕ್ತಿಯೊಬ್ಬನನ್ನು, 80 ಸಂಖ್ಯೆಯ ...ಮಾಂಡೊಗಳು ಜೀವಂತವಾಗಿ ಹಿಡಿಯಲು ಯಾವ ...ಯತ್ನವನ್ನೂ ಮಾಡಲಿಲ್ಲ ಎಂಬುದನ್ನು ನಾವು ...ಬೇಕಾಗಿದೆ. ಕಾನೂನಿನ ಆಡಳಿತದ ಬಗ್ಗೆ ಕನಿಷ್ಠ ...ವ ಇರುವ ಯಾವ ಸಮಾಜದಲ್ಲಾಗಲೀ, ...ಮಾನಿತರನ್ನು ಹಿಡಿದು, ಸೂಕ್ತ ನ್ಯಾಯ ವಿಚಾರಣೆ ...ಸುವ ಪದ್ಧತಿ ಇದೆ. ಇಲ್ಲಿ 'ಅನುಮಾನಿತ' ಎನ್ನುವುದನ್ನು ...ು ಒತ್ತಿಹೇಳಲು ಬಯಸುತ್ತೇನೆ. ಎಫ್‌ಬಿಐನ ಮುಖ್ಯಸ್ಥ ...ರ್ಟ್ ಮ್ಯುಲೆರ್ ಏಪ್ರಿಲ್ 2002ರಲ್ಲಿ ಮಾಧ್ಯಮಗಳಿಗೆ ...ದ ಹೇಳಿಕೆ ಪ್ರಕಾರ, ಇತಿಹಾಸದಲ್ಲೆಂದೂ ನಡೆಯದ ...ತ ತೀವ್ರ ತನಿಖೆಯ ನಂತರ ಕೂಡ, ಅಮೆರಿಕಾ ...ಲಿನ ದಾಳಿಯ ಸಂಚನ್ನು ಆಫಘಾನಿಸ್ತಾನದಲ್ಲಿ ...ಪಿಸಲಾಗಿತ್ತು ಹಾಗೂ ಅರಬ್ ಮತ್ತು ಜರ್ಮನಿ ...ರಗಳಲ್ಲಿ ಅದನ್ನು ಕಾರ್ಯಗತಗೊಳಿಸಲಾಯಿತು ಎಂಬ ...ಬಿಕೆ'ಗಿಂತಲೂ ಹೆಚ್ಚಿನದ್ದೇನೂ ಹೇಳಲು ಎಫ್‌ಬಿಐಗೆ ...ವಿರಲಿಲ್ಲ. ಆದರೆ ಏಪ್ರಿಲ್ 2002ರಲ್ಲಿ ಅವರು ... ನಂಬಿದ್ದರೋ, ಅದರ ಬಗ್ಗೆ 8 ತಿಂಗಳು ಮುಂಚೆ ...ರಿಗೆ ಏನೂ ತಿಳಿದಿರಲಿಲ್ಲ. ಈ 8 ತಿಂಗಳುಗಳ ಹಿಂದೆ ... ಲಾಡೆನ್ ವಿರುದ್ಧ ಏನಾದರೂ ಸಾಕ್ಷ್ಯವಿದ್ದರೆ ತಾವು ...ನನ್ನು ಗಡೀಪಾರು ಮಾಡಲು ಸಿದ್ಧ ಎಂದು ತಾಲಿಬಾನ್ ...ದಾಗ ಅದನ್ನು ವಾಷಿಂಗ್‌ಟನ್ ತಿರಸ್ಕರಿಸಿತ್ತು. (ಈ ಮಾತನ್ನು ತಾಲಿಬಾನ್ ಎಷ್ಟು ಗಂಭೀರವಾಗಿ ಹೇಳಿತ್ತು ಎಂಬುದರ ಬಗ್ಗೆ ನಮಗೇನೂ ತಿಳಿಯದು, ಯಾಕೆಂದರೆ ಈ ಮಾತುಗಳನ್ನು ತಕ್ಷಣವೇ ಅಮೆರಿಕ ತಿರಸ್ಕರಿಸಿತ್ತು) ಆದರೆ ನಮಗೆ ನಂತರ ತಿಳಿದುಬಂದ ವಿಷಯ ಎಂದರೆ, ವಾಷಿಂಗ್‌ಟನ್‌ಗೆ ಯಾವ ಸಾಕ್ಷ್ಯವೂ ಇರಲಿಲ್ಲ ಎಂಬುದು. ಆದ್ದರಿಂದ "9/11ರ ದಾಳಿಗಳನ್ನು ಅಲ್ ಖೈದಾವೇ ನಡೆಸಿದ್ದು ಎಂದು ನಮಗೆ ತಕ್ಷಣ ಗೊತ್ತಾಯಿತು" ಎಂಬ ಒಬಾಮಾ ಅವರ ಶ್ವೇತಭವನದ ಹೇಳಿಕೆ ಬರೀ ಸುಳ್ಳು.

ಆ ನಂತರ ಕೂಡ ಯಾವ ಗಂಭೀರ ಸಾಕ್ಷ್ಯವನ್ನೂ ಅಮೆರಿಕಾಗೆ ನೀಡಲಾಗಿಲ್ಲ. ಲಾಡೆನ್‌ನ 'ತಪ್ಪೊಪ್ಪಿಗೆ' ಬಗ್ಗೆ ತುಂಬ ಹೇಳಲಾಗಿದೆ, ಆದರೆ ಅದು ಬಾಸ್ಟನ್ ಮಾರಥಾನ್ ರೇಸನ್ನು ಗೆದ್ದಿದ್ದೆ ಎಂದು ನಾನು ಹೇಳಿಕೊಂಡ ಹಾಗೆ. ತನ್ನ ಅತಿ ದೊಡ್ಡ ಸಾಧನೆ ಇದು ಎಂದು ಲಾಡೆನ್ ಜಂಬ ಕೊಚ್ಚಿದ್ದು ಬಿಟ್ಟರೆ ಅವನ ವಿರುದ್ಧ ಇನ್ನಾವ ಪುರಾವೆಯನ್ನೂ ಅಮೆರಿಕಾಗೆ ಕೊಡಲಾಗಿಲ್ಲ.

ಲಾಡೆನ್ ಅಬೊಟಾಬಾದ್‌ನಲ್ಲೇ ವಾಸ್ತವ್ಯ ಹೂಡಿದ್ದ ಎಂಬುದು ಮಿಲಿಟರಿ ಮತ್ತು ಸುರಕ್ಷಾದಳಗಳಿಗೆ ಗೊತ್ತಿದ್ದರೂ, ಪಾಕಿಸ್ತಾನ ಅವನನ್ನು ಅಮೆರಿಕಾ ವಶಕ್ಕೆ ಒಪ್ಪಿಸಲಿಲ್ಲ ಎಂಬ ವಿಷಯದಲ್ಲಿ ಅಮೆರಿಕಾಗೆ ಸಾಕಷ್ಟು ಸಿಟ್ಟಿದೆ ಎಂಬುದು ಮಾಧ್ಯಮಗಳಲ್ಲಿ ಬಹಳ ಚರ್ಚೆಗೆ ಗುರಿಯಾಗಿದೆ. ತನ್ನ ಗಡಿಯೊಳಗೆ ನುಗ್ಗಿ, ರಾಜಕೀಯ ಹತ್ಯೆಯೊಂದನ್ನು ಮಾಡಿದ್ದರ ಬಗ್ಗೆ ಪಾಕಿಸ್ತಾನಕ್ಕೆ ಸಿಟ್ಟು ಇದೆ ಎಂಬುದರ ಬಗ್ಗೆ ಯಾರೂ ಚಕಾರವನ್ನೂ ಎತ್ತಿದಹಾಗಿಲ್ಲ. ಪಾಕಿಸ್ತಾನದಲ್ಲಿ ಮುಂಚಿನಿಂದಲೂ ಇದ್ದ ಅಮೆರಿಕಾ ವಿರೋಧಿ ಭಾವನೆ ಈ ಘಟನೆಯಿಂದ ಈಗ ಇನ್ನೂ ಹೆಚ್ಚಾಗಿದೆ. ಮೃತನ ದೇಹವನ್ನು ಸಮುದ್ರದಲ್ಲಿ ಎಸೆದಿದ್ದಕ್ಕಾಗಿ, ಊಹಿಸಬಲ್ಲಂತೆ, ಇಡೀ ಮುಸ್ಲಿಂ ಜಗತ್ತಿನಲ್ಲಿ ಸಿಟ್ಟಿನ ಜತೆ ಸಂದೇಹವೂ ಹೆಚ್ಚಿದೆ.

ಅಕಸ್ಮಾತ್ ಇರಾಕಿ ಕಮಾಂಡೊಗಳು ಜಾರ್ಜ್ ಬುಶ್ ಮನೆ ಕಾಂಪೌಂಡಿನ ಒಳಗೆ ನುಗ್ಗಿ, ಅವನನ್ನು ಹತ್ಯೆ ಮಾಡಿ, ಅವನ ದೇಹವನ್ನು ಅಟ್ಲಾಂಟಿಕ್ ಸಾಗರದೊಳಗೆ ಎಸೆದಿದ್ದರೆ ನಾವು ಹೇಗೆ ಪ್ರತಿಕ್ರಿಯಿಸುತ್ತಿದ್ದೆವು ಎಂಬ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳಬಹುದು. ನಿಸ್ಸಂದೇಹವಾಗಿ ಬುಶ್‌ನ ಅಪರಾಧಗಳು ಲಾಡೆನ್‌ಗಿಂತಲೂ ಹೆಚ್ಚು, ಅಲ್ಲದೆ, ಇದು ಕೇವಲ 'ಅನುಮಾನಾಸ್ಪದ'ವಾದ ಸಂಗತಿಯೇನಲ್ಲ. ಆತ ಯಾವ ಯುದ್ಧ ಅಪರಾಧಗಳಿಗೂ ಕಡಿಮೆ ಇಲ್ಲದ 'ಸುಪ್ರೀಂ ಅಂತರರಾಷ್ಟ್ರೀಯ ಅಪರಾಧಗಳನ್ನು' ಎಸಗಲು ಅನುಮತಿ ನೀಡಿದ ವ್ಯಕ್ತಿ ಎನ್ನುವುದು ಜಗಜ್ಜಾಹೀರಾಗಿರುವ ಸತ್ಯ. ನಾಜಿಗಳು ಎಸಗಿದ ನರಮೇಧ ಕುರಿತಂತೆ ವಿಚಾರಣೆ ನಡೆಸಿದ ನ್ಯುರೆಂಬರ್ಗ್ ನ್ಯಾಯಮಂಡಲಿ ಇವೆರಡು ರೀತಿಯ ಅಪರಾಧಗಳ ನಡುವಿನ ವ್ಯತ್ಯಾಸಗಳನ್ನು ಕುರಿತು ವಿಶ್ಲೇಷಿಸುತ್ತ ಎರಡನೆಯ ಅಪರಾಧವು 'ಎಲ್ಲ ರೀತಿಯ ಕೇಡುಗಳ ಮೊತ್ತ'ವಾದ್ದರಿಂದ ಅದಕ್ಕೆ ಕಾರಣರಾದವರನ್ನು ನೇಣಿಗೆ ಏರಿಸಬೇಕು ಎಂದು ಹೇಳಿತ್ತು. ಲಕ್ಷಾಂತರ ಮಂದಿಯ ಹತ್ಯೆ, ಮಿಲಿಯನ್‌ಗಟ್ಟಲೆ ನಿರಾಶ್ರಿತರು, ದೇಶವನ್ನೇ ದ್ವೇಷದ ದಳ್ಳುರಿಯಲ್ಲಿ ಸಿಲುಕಿಹಾಕಿಸುವ ಹುನ್ನಾರ, ಸಮಾಜವನ್ನು ಜನಾಂಗೀಯ ಆಧಾರದ ಮೇಲೆ ಒಡೆದು ಹಾಕಿ, ಮುರಿದ ಮನಸ್ಸುಗಳಿಗೆ ಕಾರಣವಾದ ಗುರುತರ ಅಪರಾಧ ಇದು.

ಭಯೋತ್ಪಾದಕರನ್ನು ಪೋಷಿಸುವ ಸಮಾಜಗಳೂ ಭಯೋತ್ಪಾದಕರಷ್ಟೇ ಅಪರಾಧಿಗಳಾದ್ದರಿಂದ ಎರಡನ್ನೂ ಒಂದೇ ರೀತಿ ಶಿಕ್ಷಿಸಬೇಕು ಎನ್ನುವುದು 'ಬುಶ್ ಸಿದ್ಧಾಂತ'. ಇದರ ಬಗ್ಗೆ ಹೇಗೋ ಹಾಗೆಯೇ ಇತ್ತೀಚೆಗೆ ಫ್ಲೋರಿಡಾದಲ್ಲಿ ಶಾಂತರೀತಿಯಲ್ಲಿ ಸತ್ತ ಬೋಷ್ (ಕ್ಯೂಬನ್ ವೈಮಾನಿಕ ಬಾಂಬರ್ ಅರ್ಲಾಂಡೊ ಬೋಷ್) ಬಗ್ಗೆ ಕೂಡ ಹೇಳುವುದು ಬೇಕಾದಷ್ಟಿದೆ. ಹೀಗೆ ಹೇಳುವುದರ ಮೂಲಕ ಜಾರ್ಜ್ ಬುಶ್ ಅಮೆರಿಕದ ಮೇಲೆ, ಅದರ ಕ್ರಿಮಿನಲ್ ಅಧ್ಯಕ್ಷನ ಮೇಲಿನ ದಾಳಿಗೆ, ಮತ್ತು ನಿರ್ನಾಮಕ್ಕೆ ಆಹ್ವಾನ ನೀಡುತ್ತಿದ್ದಾನೆ ಎಂಬುದನ್ನು ಯಾರು ಗಮನಿಸಿದ್ದ ಹಾಗಿಲ್ಲ*

ಹಾಗೆಯೇ 'ಆಪರೇಷನ್ ಗೆರೊನಿಮೊ' ಎಂಬ ಹೆಸರಿನ ಬಗ್ಗೆ ಕೂಡ. ಇಡೀ ಪಶ್ಚಿಮ ಸಮಾಜಗಳ ಸಾಮ್ರಾಜ್ಯಶಾಹಿ ಧೋರಣೆ ಹೇಗೆ ಕೆಲಸ ಮಾಡುತ್ತದೆ ಎಂದರೆ, ಜನಾಂಗೀಯ ದಾಳಿಕೋರರ ವಿರುದ್ಧ ವೀರೋಚಿತವಾಗಿ ಹೋರಾಡಿದ ಗೆರೊನಿಮೊ ಎಂಬ ಹೆಸರನ್ನು ಲಾಡೆನ್ ಮೇಲಿನ ದಾಳಿಗೆ ಬಳಸುವುದರ ಮೂಲಕ, ಬಿನ್ ಲಾಡೆನ್‌ನನ್ನು ವೈಭವೀಕರಿಸುತ್ತಿದ್ದೇವೆ ಎಂದು ಅವರಿಗೆ ಅನ್ನಿಸಲೇ ಇಲ್ಲ. ಇದು ಹೇಗಿದೆ ಎಂದರೆ, ನಮ್ಮ ಅಪರಾಧಗಳಿಗೆ ಬಲಿಪಶುಗಳಾದವರ ಹೆಸರುಗಳನ್ನು - ಉದಾಹರಣೆಗೆ ಅಪಾಚೆ, ತೊಮಾಹಾಕ್ ಇತ್ಯಾದಿ - ಅವರ ವಿರುದ್ಧ ಬಳಸುವ ಅಸ್ತ್ರಗಳಿಗೆ ಕೊಟ್ಟಹಾಗೆ. ಅಂದಹಾಗೆ ಲುಫ್ಟ್‌ವಾಫ್ (ಜರ್ಮನಿ ವೈಮಾನಿಕ ಪಡೆಯ ಹೆಸರು) ತಮ್ಮ ಫೈಟರ್ ವಿಮಾನಗಳಿಗೆ 'ಜ್ಯೂ' ಅಥವಾ 'ಜಿಪ್ಸಿ' ಎಂದು ಕರೆದರೆ ಹೇಗಿರುತ್ತದೆ ಊಹಿಸಿ!

ಇದಕ್ಕೂ ಹೆಚ್ಚಿನದು ಹೇಳುವುದಕ್ಕೆ ಬೇಕಾದಷ್ಟು ಇದೆ. ಆದರೆ ತುಂಬ ಪ್ರಾಥಮಿಕ ಮತ್ತು ಸ್ಪಷ್ಟವಾದ ಸಂಗತಿಗಳು ಕೂಡ ನಮ್ಮನ್ನು ಹೆಚ್ಚಿನ ಯೋಚನೆಗೆ ಹಚ್ಚಬೇಕಾಗಿದೆ.

ಅನುವಾದ: ವಿ.ಎಸ್. ಶ್ರೀಧರ

*(*ಅರ್ಲಾಂಡೊ ಬೋಷ್ ಎಂಬ ಭಯೋತ್ಪಾದಕ ಕ್ಯೂಬಾದ ವಿಮಾನದ ಮೇಲೆ ದಾಳಿ ನಡೆಸಿ 73 ಜನರ ಸಾವಿಗೆ ಕಾರಣನಾಗಿದ್ದ ಇಂತಹ ಭಯೋತ್ಪಾದಕನಿಗೆ ಅಮೆರಿಕ ರಕ್ಷಣೆ ನೀಡಿತ್ತು. 'ಭಯೋತ್ಪಾದಕರನ್ನು ಪೋಷಿಸುವ ಸಮಾಜಗಳೂ ಭಯೋತ್ಪಾದಕರಷ್ಟೇ ಅಪರಾಧಿಗಳು' ಎನ್ನುವ ಅಮೆರಿಕದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್ ಮಾನದಂಡದ ಪ್ರಕಾರವೇ ತನ್ನ ದೇಶದ ಮೇಲೆ ಹಾಗೂ ತನ್ನ ಮೇಲೂ ಸಹ ದಾಳಿಯನ್ನು ಆಹ್ವಾನಿಸಿದ್ದರು ಎಂಬುದು ಇದರ ಅರ್ಥ - ಸಂ)*


ಹೋಗಿ ಬನ್ನಿ ಷಡಾಕ್ಷರಪ್ಪನವರೇ, ನಮಸ್ಕಾರ

...ಮಧ್ಯ ಕರ್ನಾಟಕದ ಆರೇಳು ಜಿಲ್ಲೆಗಳಲ್ಲಿ ಅತ್ಯಧಿಕ ...ರದ ದಾವಣಗೆರೆಯ 'ಜನತಾವಾಣಿ' ದೈನಿಕ ಸಂಪಾದಕ ...ಎನ್. ಷಡಾಕ್ಷರಪ್ಪ ಮೊನ್ನೆ ತೀರಿಹೋದರು. ಹತ್ತಿರತ್ತಿರ ...ತ್ತೈದು ವಸಂತಗಳ 'ಎಚ್‌ಎನ್‌ಎಸ್' ಎಂದೇ ಖ್ಯಾತ ...ದ್ದ ಅವರು ದಿವಿನಾದ ಬದುಕು ಬದುಕಿ ನಿಷ್ಕ್ರಿ...ಣ್ಣಿಗಿದ್ದರು. ಹೃದಯಾಘಾತಕ್ಕೊಳಗಾಗಿ ನಾಲ್ಕು ದಿನ ...ರೂ ಸಣ್ಣದೊಂದು ಸುದ್ದಿ ಹಾಕದಂತೆ ತಾಕೀತು ...ಡಿ, ನಿಧನವಾರ್ತೆಯೊಂದಿಗೆ ಅಸಂಖ್ಯಾತ ...ಬಗರನ್ನು ಅಗಲಿದ ಅಪರೂಪದ ಜೀವ. ...ಯೇ ಅವರ ಗುರು ಪಾಟೀಲ ಪುಟ್ಟಪ್ಪ ...ವು ದರ್ಶನದ ಸಂದರ್ಭದಲ್ಲಿ 'ಪತ್ರಿ...ದ್ಯಮದ ಘನತೆ ಹೆಚ್ಚಿಸಿದ ಪತ್ರಕರ್ತ ಈತ' ...ು ಕಣ್ತುಂಬಿ ಹೇಳಿದರು.

...ಪಾಟೀಲ ಪುಟ್ಟಪ್ಪ ಅವರ ಗರಡಿಯಲ್ಲಿ ಸಾಮು ...ು ಸಕ್ಸಸ್ ಆದವರಲ್ಲಿ ಅವರೇ ಮೊದಲಿಗ. ...ಮ ಅಕಾಡೆಮಿ, ರಾಜ್ಯೋತ್ಸವ, ಟೀಯೆಸ್ಸಾರ್ ...ಗೆ ಎಲ್ಲ ಪ್ರತಿಷ್ಠಿತ ಪ್ರಶಸ್ತಿಗಳು ಎಚ್ಚೆನ್ನೆಸ್ ...ರ ಮುಡಿಗೇರಿದ್ದವು. ಅವರೆಂದೂ ಪ್ರಶಸ್ತಿಗಳ ... ಹತ್ತಿ ಓಡಲಿಲ್ಲ ಅಲ್ಲ, ಸಣ್ಣಗೆ ನಡೆಯಲಿಲ್ಲ! ಅದು ...ರ ಬದುಕಿನ ಜಾಯಮಾನ. ತುಂಬಾ ಕಷ್ಟಪಟ್ಟೇ ...ಧೆ ಬಂದವರು.

...ವಿಜ್ಞಾನ, ಪ್ರಗತಿಪರ ಸಾಹಿತ್ಯ, ಕಮ್ಯುನಿಸಂ, ವೈಚಾರಿಕತೆ, ...ಜವಾದ, ಪ್ರಾದೇಶಿಕ ಫೀಲಿಂಗ್ಸ್ ಇವುಗಳೆಲ್ಲದರ ... ಲೋಹಿಯಾ, ಗಾಂಧಿ, ಎಂ.ಎನ್. ರಾಯ್, ಕೆ.ಎ. ...ಸ್ ಈ ಎಲ್ಲರನ್ನೂ ಓದಿಕೊಂಡಿದ್ದ ಸಾಧು ಲಿಂಗವಂತ ...ಕ್ಷರಪ್ಪ ಅವರು, ಬಸವ ಚಳವಳಿಯನ್ನು ಧೇನಿಸಿಕೊಂಡು ...ದುಗಚ್ಛ ನಿಂತಿದ್ದರೆ ಜನತಾವಾಣಿಯ ಅನನ್ಯತನ ...ಮಟ್ಟದ ಪತ್ರಿಕೆಗಳನ್ನು ಹಿಂದಕ್ಕೆ ಸರಿಸಿ ಬೆಳೆಯುವ ...ತಗಳಿದ್ದವು. ಅವರ ಗ್ರಾಮಜನ್ಯ ರೈತಜನ್ಯ ಜೀವಜನ್ಯ ...ಗಳನ್ನು ಹಳದಿಕಣ್ಣುಗಳಿಂದ ನೋಡಲು ಸಾಧ್ಯವೇ ... ಅಷ್ಟಕ್ಕೂ ತೀರ ಇತ್ತೀಚೆಗೆ ಜಿಲ್ಲೆ, ತಾಲ್ಲೂಕು, ಹಳ್ಳಿ, ...ಗೊಂದೊಂದು ಜಾಗತೀಕರಣದ ಆವೃತಿಗಳ ಅವತಾರ ... ಜನತಾವಾಣಿಯೇ ಮಧ್ಯ ಕರ್ನಾಟಕದ ಖರೇಖರೇ ...ಮಾಸ ಪೇಪರ್. ಅದರಲ್ಲಿ ಹಳ್ಳಿ, ಹೋಬಳಿ, ಜಿಲ್ಲೆ, ... ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ಸುದ್ದಿಗಳಿರುತ್ತವೆ. ...[illegible] ಸಾಮಾನ್ಯ [illegible] ನಿಧನದ ಸುದ್ದಿ ...ಸಲ್ಪುದರಿಂದ 'ಜನತಾವಾಣಿ' ನೋಡಹ ಇವತ್ತು ...ಸು ಸತ್ತ ಸುದ್ದಿಗೆ ಹೋಗಬೇಕೆಂದು, ಅಧಿಕಾರಸ್ಥ [illegible] ಕಿಡಿಗೇಡಿ ರಾಜಕಾರಣಿ ಕೆಮ್ಮಿದ, ಕ್ಯಾಕರಿಸಿದ ಸುದ್ದಿ ಇಲ್ಲೇ ಅಪೇಕ್ಷಿಸುವ ತರಕಲಾಂಡಿಗಳಿಗೆ ಸಾಮಾನ್ಯರ ಸಾವಿನ ಸುದ್ದಿ ಪ್ರಕಟಿಸುವ ಬಗ್ಗೆ ಹೊಂಕುತನ. ಈ ಮಾತುಗಳು ಬುದ್ಧಿಜೀವಿ, ಸುದ್ದಿಜೀವಿಗಳಿಗೂ ಅಣಕಕ್ಕೆ ಈಡಾಗುತ್ತಿದ್ದುದು ಸುಳ್ಳಲ್ಲ.

ದಾವಣಗೆರೆ ಹತ್ತಿರದ ಮೆಳ್ಳೇಕಟ್ಟೆ ರೈತಾಪಿ ಕುಟುಂಬದಲ್ಲಿ ಹುಟ್ಟಿದ (01-05-1936) ಎಚ್ಚೆನ್ನೆಸ್‌ಗೆ



ಹಳ್ಳಿಗಳ ಬದುಕು, ಸಮಾಜವಾದ, ಕಾದಂಬರಿ ಜಗತ್ತು ರಂಗಭೂಮಿ... ಹೀಗೆ ಹತ್ತುಹಲವು ಸುಂದರ ಕನಸುಗಳಿದ್ದವು. ಅವುಗಳ ಅನುಷ್ಠಾನಕ್ಕೆ ಅಲವತ್ತುಗೊಳ್ಳುತ್ತಿದ್ದರು.

ನಕಲಿ ಇಸಂಗಳನ್ನು ನೋಡಿಕೊಂಡು ಆತ ನಗಲಿಲ್ಲ. ಅಸಲಿತನದ ಹುಡುಕಾಟದಲ್ಲಿ ಬದುಕು ಸವೆಸಿದರು. ವಾರ್ತಾ ಇಲಾಖೆಯ ಚಿಕ್ಕ ನೌಕರಿಯಿಂದ ಹೊರಬಂದು, 1974ರ ಸುಮಾರಿಗೆ 'ಜನತಾವಾಣಿ' ಆರಂಭಿಸಿದರು. 'ಜನತಾ' ನಡುವೆ ಆನೆಗುರುತು ಇಟ್ಟುಕೊಂಡ ಅವರು ಆಮೇಲೆ 'ವಾಣಿ' ಇದು ಮಾಸ್ಟ್‌ಹೆಡ್. ಹೀಗೆ ಆನೆ ನಡೆದದ್ದೇ ದಾರಿ ಎಂಬುದನ್ನು 'ಜನತಾವಾಣಿ' ಮೂಲಕ ಸಾಬೀತು ಮಾಡಿದರು.

ಸಾಧು ಲಿಂಗಾಯತ ಜಾತಿಗೆ ಸೇರಿದ್ದರಿಂದ ಅವರಿಗೆ ಸಿರಿಗೆರೆ ಸ್ವಾಮೀಜಿ, ಶಾಮನೂರು ಶಿವಶಂಕರಪ್ಪ ಅವರ ಆಶೀರ್ವಾದ ಆಶ್ರಯಗಳಿವೆ ಎಂದು ವಿರೋಧದ ಮಾತಾಡಿಕೊಂಡವರಿಗೂ ಜನತಾವಾಣಿಯಲ್ಲಿ ಸುದ್ದಿ ಪ್ರಕಟಗೊಂಡರೆ ಅದು 'ಗೆಜೆಟ್ ನೋಟಿಫಿಕೇಷನ್' ಎಂಬ ನಂಬುಗೆಗೆ ಪತ್ರಿಕೆ ಪಾತ್ರವಾಯಿತು. ಅದು ಅವರ ಜಾತ್ಯತೀತ ನಿಲುವಿನಿಂದ ದೊರೆತ ಗೆಲುವು.

ಅವರು ರಾತ್ರಿಯಿಡೀ ಎಚ್ಚರವಿದ್ದು, ಹಗಲುಹೊತ್ತು ಮಲಗಿರುತ್ತಿದ್ದರು. ಕಂಪೆನಿ ನಾಟಕದವರಂತೆ ಅವರದು ಹಗಲಿಗೆ ಹೊರತಾದ, ರಾತ್ರಿಗೆ ಬೆಳಕಾದ ಬದುಕು. ಮೊಳೆ ಜೋಡಿಸುವ, ಪ್ರೂಫ್ ನೋಡುವ, ಕತ್ತರಿ ಹಿಡಕೊಂಡು ಲೇಔಟ್ ಮಾಡುವ, ಟ್ರೆಡಲ್ ಪ್ರಿಂಟಿಂಗ್ ಕಾಲದಿಂದ ಇಂದಿನ ಆನ್‌ಲೈನ್‌ಗೂ ಹೊಂದಿಕೊಂಡಿದ್ದರು. ಹಾಗೆಂದು ವ್ಯವಹಾರ ಜ್ಞಾನದಿಂದ ದೂರವಾದವರಲ್ಲ, ಬಲು ಹುಶೇರಿ. ನಿಂತರೂ ಕುಂತರೂ ಅವರಿಗೆ ಪತ್ರಿಕೆಯದೇ ಧ್ಯಾನ ಮತ್ತು ಜ್ಞಾನ. ಅಂತೆಯೇ ಐವತ್ತು ವರುಷಗಳ ಕಾಲ ಬದುಕನ್ನೇ ಪತ್ರಿಕೋದ್ಯಮಕ್ಕೆ ಮೀಸಲಾಗಿಟ್ಟವರು ಅವರು.

ಆರುಮಂದಿ ಮಕ್ಕಳನ್ನು ಸುಶಿಕ್ಷಿತರನ್ನಾಗಿ, ನೀತಿವಂತರನ್ನಾಗಿ ಬೆಳೆಸಿದ ಅವರು, ಹತ್ತುಮೊಮ್ಮಕ್ಕಳ ತಾತ. ಒಂದೂವರೆ ದಶಕದ ಹಿಂದೆಯೇ ಜನತಾವಾಣಿಯ ಹೊಣೆಯನ್ನು ಮಗ ವಿಕಾಸನ ಹೆಗಲಿಗೆ ಹೊರೆಸಿದ್ದರು. ಸ್ನಾತಕೋತ್ತರ ಇಂಗ್ಲಿಷ್ ಓದಿ ಬಂದ ಆತ ಮಿತಭಾಷಿ. ಇವೆಂಟ್ ಮ್ಯಾನೇಜ್‌ಮೆಂಟ್‌ನಲ್ಲಿ ಆತನಿಗೆ ಹತ್ತು ಮಾಸ್ಟರ್ ಡಿಗ್ರಿಗಳ ಜಾಣತನ. ಪತ್ರಿಕೆಯ ಒಟ್ಟು ಚಹರೆ ಬದಲಾಯಿಸಿಬಿಟ್ಟ ಜಾಣ ಹುಡುಗ.

ಅಪ್ಪನಂತೆಯೇ ಭಿಡೆ ಮುಲಾಜು, ಮುರವತ್ತುಗಳಿಗೆ ಒತ್ತೆ ಬೀಳದೇ ಅಪ್ಪನ ಹೆಜ್ಜೆಯಲ್ಲೇ ಹೆಜ್ಜೆ ಇಟ್ಟು ಅಪ್ಪನೆದುರೆ ಗೆದ್ದುಬಿಟ್ಟ. ಹೀಗಾಗಿ, ಜನತಾವಾಣಿ ಎಲ್ಲ ರಾಜಕೀಯ ಪಕ್ಷಗಳನ್ನು ಸಮಾನ ದೂರದಲ್ಲೇ ನಿಂತು ನೋಡುವ ಚಾಕಚಕ್ಯತೆ ಬೆಳೆಸಿಕೊಂಡಿತು. ಈ ಎಲ್ಲ ಸಜೀವ ಬೆಳವಣಿಗೆಗಳೊಂದಿಗೆ ಎಚ್ಚೆನ್ನೆಸ್ ಭಾವಪರವಶರಾಗಿ ಉಳಿಸಿಕೊಂಡಿದ್ದರು. ತಮ್ಮ ವೈಯಕ್ತಿಕ ಬದುಕಿನ ತಹತಹಗಳು, ಶೈಲಿಗಳನ್ನು ಯಾರು ಹೇಳಿದರೂ ಬಿಟ್ಟವರಲ್ಲ.

ಅಷ್ಟೇ ಆಗಿದ್ದರೆ ಜನತಾವಾಣಿ ಇಷ್ಟು ಎತ್ತರಕ್ಕೆ ಏರುತ್ತಿರಲಿಲ್ಲ. ಗೋಕಾಕ ಚಳವಳಿಯ ಮೊದಲ ಸಾಲಲ್ಲಿ ನಿಂತ ಅವರು, ಸ್ಥಳೀಯ ಕನ್ನಡಪರ, ದಲಿತಪರ, ರೈತಪರ, ವಿಚಾರಪರ ಚಳವಳಿಗಳ ಜತೆ ಗುರುತಿಸಿಕೊಂಡರು. ಬಲಿಷ್ಠ ಮಠಮಾನ್ಯಗಳೆದುರು ಯಾವತ್ತೂ ಸೆಡ್ಡು ಹೊಡೆಯುವ ದಡ್ಡತನಕ್ಕೆ ಕೈಹಾಕಲಿಲ್ಲ. ಅದೇ ಗೆಲುವಿನ ಗುಟ್ಟೆಂದು ಕೆಲವರ ಅಂಬೋಣ.

ಈ ಭಾಗದಲ್ಲಿ ಆಗಾಗ ಜರುಗಿದ ಮೂಢನಂಬಿಕೆಯ ರಾಮಘಟ್ಟದ ಭೂತಚೇಷ್ಟೆ, ನಕಲಿ ಪವಾಡ ಪುರುಷ ಕಡಬದಸ್ವಾಮಿ, ಮರವೇರಿದ ಮಲ್ಲೇಶಿ ಹೀಗೆ ಈ ಎಲ್ಲ ಪ್ರಕರಣಗಳನ್ನು ಬಹಳೇ ಆಸಕ್ತಿಯಿಂದ ಸುದ್ದಿ ಮಾಡಿ; ಅಸಲೀತನ ಬಯಲುಮಾಡಿ, ವೈಚಾರಿಕತೆ ಮೆರೆದರು.

ಅವರದು ಅಜಾತಶತ್ರು ವ್ಯಕ್ತಿತ್ವ. ಮೂಗಿಗೆ ನಸ್ಯದ ರುಚಿ ಕಲಿಸಿದ್ದ ಅವರು, ಸೀನುತ್ತಿರಲಿಲ್ಲ, ಸಿಡುಕುತ್ತಿರಲಿಲ್ಲ. ಸೇಡು, ಸಿಟ್ಟು, ಜಗಳ ಗೊತ್ತಿರಲಿಲ್ಲ. ಪತ್ರಿಕೋದ್ಯಮ ಬಿಡಿ, ಸಾರ್ವಜನಿಕ ಬದುಕಿನಲ್ಲಿ ಸಜ್ಜನಿಕೆ, ಸರಳತೆ, ಜವಾಬ್ದಾರಿತನಗಳು ಕಣ್ಮರೆಯಾಗಿರುವ ಇಂದಿನ ದಿನಮಾನಗಳಲ್ಲಿ ಮೂವತ್ತಕ್ಕೂ ಹೆಚ್ಚು ವರ್ಷಕಾಲ ಒಂದು ಸಜ್ಜನ ವ್ಯಕ್ತಿತ್ವದೊಂದಿಗೆ ನಾವೆಲ್ಲಾ ಒಡನಾಡಿದೆವಲ್ಲ ಎಂಬ ಹೆಮ್ಮೆ. ತಿಂಗಳೊಪ್ಪತ್ತಿನ ಹಿಂದೆ ಹಿರೇಮಗ ವಿಕಾಸನೊಂದಿಗೆ ಆಲೂರು ಬಳಿಯ ತಮ್ಮ ಹೊಲದಲ್ಲಿ ತಾಸುಗಟ್ಟಲೇ ಕುಂತು ಅಲ್ಲಿನ ಬನ್ನೀಮರದ ಬಳಿ ಜಾಗ ತೋರಿಸಿ, 'ಮರಣಾನಂತರ ನಾನಿಲ್ಲೇ ಚಿರನಿದ್ರೆಗೆ ಹೋಗಬೇಕೆಂದ ಮೃಣ್ಮಯಿ ಅವರು. ಈ ವರ್ಷದ ಮೊದಲ ದಿನ ನನ್ನನ್ನು ಕಾಡಿಸಿಕಾಡಿಸಿ ಮನೆಗೆ ಕರೆಸಿಕೊಂಡ ಅವರು, ಅಂದು ಡಿಫರೆಂಟಾಗಿ ಮಾತಾಡುತ್ತಿದ್ದರೆ. ಸಾರ್- ಅದನ್ನು ಬೇಗ ನೀವು ನಿಮ್ಮ ಅನುಭವಗಳ 'ಆತ್ಮಕಥೆ' ಬರೆಯಬೇಕೆಂದಾಗ ನಾನು ಹೇಳ್ತೀನಿ ನೀ ಬರಕೋ ಅಂದರು. ಅದೇನು ಅವಸರವಿತ್ತೋ ಆ ಎಲ್ಲ ಕಥೆ ಹೇಳದೇ ಹಾಗೇ ಹೊರಟುಹೋದರು. ಹೃದಯಾಘಾತದಿಂದ [illegible] ಆಸ್ಪತ್ರೆ ಸೇರಿದರೂ ಸುದ್ದಿಯ [illegible] ಒಂದೇ ಬಾರಿಗೆ ಸಾವಿನ ಸುದ್ದಿ ಪ್ರಕಟಿಸಿದರಲ್ಲ ಅದು [illegible] ಅವರ ನಂತರವೂ ನಮ್ಮ 'ಜನತಾವಾಣಿ' [illegible] 'ಜನತಾವಾಣಿ'ಯಾಗಿಯೇ [illegible] ಹೋಗಿ ಬನ್ನಿ ಸಾರ್ [illegible]

• ಮಲ್ಲಿ[illegible]


ಅನೇಕರ ತಿಳುವಳಿಕೆಯನ್ನು ಬೆಳೆಸಿರುವ ಇಲ್ಲಿನ ಬರೆಹಗಳಿಗೆ ಕೃತಜ್ಞತೆ ಹೇಳುತ್ತಾ...

ಶಿವಸುಂದರ್‌ರ 'ಚಾರ್ವಾಕ' ಪುಸ್ತಕಕ್ಕೆ ರಹಮತ್ ತರೀಕೆರೆ ಬರೆದಿರುವ ಮುನ್ನುಡಿ...

ಸಾಮಾನ್ಯವಾಗಿ ನಾವು ಲೋಕವನ್ನು ನಮಗೆ 'ಕಂಡಂತೆ' ಸ್ವತಂತ್ರವಾಗಿ ಗ್ರಹಿಸುವುದಿಲ್ಲ. ಮಾಧ್ಯಮಗಳು, ನಮ್ಮ ಪಠ್ಯಪುಸ್ತಕಗಳು, ನಮ್ಮ ಕುಟುಂಬ ಅಥವಾ ಸಮಾಜದ ಮೌಲ್ಯಗಳು ಲೋಕವನ್ನು ಹೇಗೆ ನೋಡಬೇಕೆಂದು ಒತ್ತಾಯಿಸಿ 'ಕಾಣಿಸು'ತ್ತವೆಯೊ, ಹಾಗೆ ಅದನ್ನು ಗ್ರಹಿಸುತ್ತಿರುತ್ತೇವೆ. ಅದರಲ್ಲೂ ಮಾಧ್ಯಮಗಳನ್ನೇ ನಂಬಿ ತಮ್ಮ ಆಲೋಚನೆ ಮತ್ತು ಕ್ರಿಯೆಗಳನ್ನು ರೂಪಿಸಿಕೊಳ್ಳುವ ಭಾರತದ ಅಕ್ಷರಸ್ಥ ಮಧ್ಯಮವರ್ಗಕ್ಕೆ, ಅವು ಏನನ್ನು ಅಡಗಿಸುತ್ತಿವೆ, ಅದರ ಹಿಂದಿನ ರಾಜಕಾರಣವೇನು ಎಂಬ ಬಗ್ಗೆ ವಿಮರ್ಶಾತ್ಮಕ ಖಬರೇ ಇರುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಭಾರತದಲ್ಲಿ ಕೆಲವಾದರೂ ಚಿಂತಕರು ಹಾಗೂ ಪತ್ರಕರ್ತರು, ಪ್ರಧಾನಧಾರೆಯ ಸಮೂಹ ಮಾಧ್ಯಮಗಳು ಹೇಳುತ್ತಿರುವ ಅರೆಸತ್ಯ ಮತ್ತು ಹುಸಿಸುಳ್ಳುಗಳನ್ನು ಭಂಜನ ಮಾಡಿ, ಅದರಾಚೆ ಇರುವ 'ನಿಜ'ಸಂಗತಿಯನ್ನು ತೋರಿಸುವ ಕೆಲಸ ಮಾಡುತ್ತಿರುವರು. ಮಾರುಕಟ್ಟೆ ಸಂಸ್ಕೃತಿಯ ಈ ದಿನಗಳಲ್ಲಿ ಆಳುವ ವ್ಯವಸ್ಥೆಯ ಪರವಾಗಿರುವ ಮಾಧ್ಯಮಗಳು ಏಕಕಂಠದಿಂದ ಘೋಷಿಸುತ್ತಿರುವ ಸುದ್ದಿಯ ಮುಖಕ್ಕೆ, ಪರ್ಯಾಯವಾದ ಇನ್ನೊಂದು ಮೊಗವಿದೆ ಎಂದು ಸೂಚಿಸುತ್ತಿರುವರು. ಇದನ್ನು ಜನರ ರಾಜಕೀಯ ಪ್ರಜ್ಞೆಯನ್ನು ರೂಪಿಸುವ ಕೆಲಸ ಎಂದು ಕರೆಯಬಹುದು. ಈ ಬಗೆಯ ಪ್ರಜ್ಞೆಯನ್ನು ರೂಪಿಸುವ ಕೆಲಸವನ್ನು ಇಂಗ್ಲಿಷಿನಲ್ಲಿ ಪಿ. ಸಾಯಿನಾಥ್ ಮುಂತಾದವರು, ಕನ್ನಡದಲ್ಲಿ ದಿನೇಶ್ ಅಮೀನಮಟ್ಟು, ನಾಗೇಶ್ ಹೆಗಡೆ ಮೊದಲಾದವರು, ತಮ್ಮ ವ್ಯಂಗ್ಯಚಿತ್ರಗಳ ಮೂಲಕ ಪಿ.ಮಹಮ್ಮದ್ ಮುಂತಾದವರು ಮಾಡುತ್ತಿದ್ದಾರೆ; ಕಡಿಮೆ ಸಂಖ್ಯೆಯಲ್ಲಿರುವ ಈ ಪರ್ಯಾಯ ಚಿಂತನೆಯ ಪತ್ರಕರ್ತರು ಮತ್ತು ಚಿಂತಕರು, ಕಟುವಾದ ಸತ್ಯವನ್ನು ಹೇಳಿ ಜನರಲ್ಲಿರುವ ಜನಪ್ರಿಯ ಗ್ರಹಿಕೆಗಳನ್ನು ಒಡೆಯುತ್ತಿದ್ದಾರೆ. ಇದು ಅರ್ಥಪೂರ್ಣವಾದ ಪ್ರಜಾಪ್ರಭುತ್ವವನ್ನು ಪಡೆದುಕೊಳ್ಳುವುದಕ್ಕೆ ಬೇಕಾದ ಎಚ್ಚರ ಮೂಡಿಸುವ ಕೆಲಸ ಕೂಡ ಆಗಿದೆ. ಈ ಕೆಲಸವನ್ನು ತಮ್ಮ ಸಾರ್ವಜನಿಕ ಭಾಷಣ ಮತ್ತು ಪತ್ರಿಕಾ ಬರೆಹಗಳ ಮೂಲಕ ಮಾಡುತ್ತ ಬಂದಿರುವ ಕನ್ನಡ ಚಿಂತಕರಲ್ಲಿ ಶಿವಸುಂದರ್ ಅವರೂ ಒಬ್ಬರು.

ಶಿವಸುಂದರ್, ನಮಗೆಲ್ಲ ತಿಳಿದಿರುವಂತೆ, ಕನ್ನಡದಲ್ಲಿ ಕಳೆದ ಕೆಲವು ವರ್ಷಗಳಿಂದ 'ಗೌರಿ ಲಂಕೇಶ್' ಪತ್ರಿಕೆಯಲ್ಲಿ 'ಚಾರ್ವಾಕ' ಎಂಬ ಹೆಸರಿನ ಅಂಕಣವನ್ನೂ, 'ವಾರ್ತಾಭಾರತಿ' ಯಲ್ಲಿ 'ನಿಜಾರ್ಥ' ಮತ್ತು 'ಫೋಕಸ್' ಎಂಬ ಅಂಕಣವನ್ನೂ, 'ಸಂವಾದ' 'ಹೊಸತು' ಮುಂತಾದ ಪತ್ರಿಕೆಗಳಲ್ಲಿ ಬಿಡಿಲೇಖನಗಳನ್ನೂ ಬರೆಯುತ್ತ ಬಂದವರು. ಅವರ ಬರೆಹಗಳು ಓದುಗರಲ್ಲಿ ಅಭಿಮಾನಿಗಳಂತೆ ಭಿನ್ನಮತೀಯರನ್ನೂ ಸೃಷ್ಟಿ ಮಾಡಿವೆ. ಕಾವೇರಿದ ಚರ್ಚೆಗಳನ್ನು ಹುಟ್ಟುಹಾಕಿವೆ. ಅಂತಹ ಈ ಬರೆಹಗಳು ಈಗ ಮೊದಲ ಬಾರಿಗೆ ಪುಸ್ತಕ ರೂಪದಲ್ಲಿ ಬರುತ್ತಿವೆ. ಈ ಬರೆಹಗಳನ್ನು ಚಳವಳಿ ಮತ್ತು ಸಮಾಜ, ಕರ್ನಾಟಕ ರಾಜಕೀಯ-ಆರ್ಥಿಕತೆ -ಸಾಮಾಜಿಕ, ಕೋಮುವಾದ, ಭಾರತೀಯ ಪ್ರಜಾತಂತ್ರದ ರಾಜಕೀಯ-ಆರ್ಥಿಕತೆ, ಸಾಮ್ರಾಜ್ಯಶಾಹಿ ಜಾಗತೀಕರಣ, ಪ್ರಭುತ್ವ-ದಮನ-ಮಾನವ ಹಕ್ಕುಗಳು ಎಂಬ 5 ವಿಭಾಗದಲ್ಲಿ, ಇಲ್ಲಿ ವಿಂಗಡಿಸಿ ಕೊಡಲಾಗಿದೆ. ಆದರೆ ಇದು ಓದಿನ ಅನುಕೂಲಕ್ಕೆ ಮಾಡಿರುವ ವಸ್ತು ಮತ್ತು ಆಶಯಗಳ ಸ್ಥೂಲ ವಿಂಗಡಣೆಯೇ ಹೊರತು, ತಾತ್ವಿಕ ಗ್ರಹಿಕೆಗೆ ಸಂಬಂಧಿಸಿದ್ದಲ್ಲ. ಈ ವಿಂಗಡಣೆಯಲ್ಲಿರುವ ಕರ್ನಾಟಕ, ಭಾರತೀಯ, ಜಾಗತಿಕರಣ ಎಂಬ ಮೂರು ಪದಗಳನ್ನು ಗಮನಿಸಬೇಕು. ಇವು ಈ ಬರೆಹಗಳಲ್ಲಿ ನಿಹಿತವಾಗಿರುವ ಮೂರು ಮುಖ್ಯ ಚೌಕಟ್ಟುಗಳನ್ನೂ ಸೂಚಿಸುತ್ತವೆ. ಈ ಚೌಕಟ್ಟುಗಳು ತಮಗೆ ತಾವೇ ಸ್ವತಂತ್ರವಲ್ಲ, ಅವು ಒಂದರೊಳಗೊಂದು ಸೇರಿಕೊಂಡಿವೆ. ಹೀಗಾಗಿಯೇ ಇಲ್ಲಿನ ಬರೆಹಗಳು, ಜಾಗತಿಕ ಮಟ್ಟದಲ್ಲಿರುವ ಬಲಿಷ್ಠ ಆರ್ಥಿಕ ರಾಜಕೀಯ ವ್ಯವಸ್ಥೆಗಳು ತೆಗೆದುಕೊಳ್ಳುವ ನಿರ್ಣಯಗಳು ಭಾರತದ ಆರ್ಥಿಕ ರಾಜಕೀಯ ನೀತಿಗಳನ್ನು ರೂಪಿಸುತ್ತಿರುವುದನ್ನು ಹಾಗೂ ಭಾರತದ ಆರ್ಥಿಕ ರಾಜಕೀಯ ನೀತಿಗಳು ಕರ್ನಾಟಕದ ಹಳ್ಳಿಮೂಲೆಯಲ್ಲಿರುವ ಬದುಕನ್ನು ಪ್ರಭಾವಿಸುತ್ತಿರುವುದನ್ನು ಏಕಕಾಲಕ್ಕೇ ಹಿಡಿಯುತ್ತಿವೆ. ಇಲ್ಲಿನ ಒಟ್ಟು ಬರೆಹವನ್ನು, ಕರ್ನಾಟಕದ ಅತ್ಯುತ್ತಮ ಮನಸ್ಸೊಂದು, ಸಮಕಾಲೀನ ಜಗತ್ತು ಮತ್ತು ಭಾರತಗಳ ಹಿನ್ನೆಲೆಯಲ್ಲಿ ಕರ್ನಾಟಕವನ್ನೂ; ಸಮಕಾಲೀನ ಕರ್ನಾಟಕದ ಮೂಲಕ ಭಾರತ ಮತ್ತು ಜಗತ್ತನ್ನೂ ಏಕಕಾಲಕ್ಕೆ, ಪರಿಭಾವಿಸಿ, ಸೃಷ್ಟಿಸಿರುವ ರಾಜಕೀಯ ಚಿಂತನೆ ಎಂದು ಕರೆಯಬಹುದು.

ಇಲ್ಲಿನ ಅಂಕಣಗಳಲ್ಲಿ ಸಾಮ್ರಾಜ್ಯವಾದ, ಜಾಗತೀಕರಣ, ಖಾಸಗೀಕರಣ, ಬ್ರಾಹ್ಮಣವಾದ, ಕೋಮುವಾದ, ಫ್ಯಾಸಿಸಂ, ಪುರುಷವಾದ, ಅಭಿವೃದ್ಧಿ ಕಲ್ಪನೆ, ಬಹುರಾಷ್ಟ್ರೀಯ ಕಂಪನಿಗಳು, ಎನ್‌ಜಿಓ, ಆಹಾರಸಂಸ್ಕೃತಿ, ಧರ್ಮ-




ಮುಂತಾಗಿ ಅನೇಕ ವಿಷಯಗಳ ಮೇಲೆ ನಡೆಸಿರುವ ಚಿಂತನೆಗಳಿವೆ. 1990ರ ನಂತರ ಯಾವುದೇ ಮನುಷ್ಯಪರವಾಗಿ ಆಲೋಚಿಸುವ ವ್ಯಕ್ತಿಗಳು, ತಮ್ಮ ಚಿಂತನೆಗೆ ತಡವಿಕೊಳ್ಳಲೇಬೇಕಾಗಿದ್ದ ಸಂಗತಿಗಳಿವು. ಮುಖ್ಯವಾಗಿ ರಾಜಕೀಯ ಅರ್ಥಶಾಸ್ತ್ರ (ಪೊಲಿಟಿಕಲ್ ಎಕಾನಮಿ) ಕ್ಷೇತ್ರಕ್ಕೆ ಸಂಬಂಧಿಸಿರುವ ಇಲ್ಲಿನ ಲೇಖನಗಳು ಈ ಹೊತ್ತಿನ ಸಾಮ್ರಾಜ್ಯವಾದದ ಬೇರೆಬೇರೆ ಪರಿಣಾಮಗಳನ್ನು ವಿಶ್ಲೇಷಿಸುತ್ತಿವೆ; ಈ ಸಾಮ್ರಾಜ್ಯವಾದವು, 'ಸ್ವತಂತ್ರ' 'ಸಾರ್ವಭೌಮ' ಎಂದು ಕರೆಯಿಸಿಕೊಳ್ಳುತ್ತಿರುವ ಭಾರತದಂತಹ ದೇಶಗಳ ರಾಜಕೀಯ ಆರ್ಥಿಕ ನೀತಿಗಳಲ್ಲಿ ಮಾತ್ರವಲ್ಲ, ಸಿನಿಮಾದಂತಹ ಕಲೆಯಲ್ಲಿ ಕೂಡ ಹೇಗೆ ತಮ್ಮ ಪ್ರಭಾವವನ್ನು ಬೀರುತ್ತಿದೆ ಎಂಬುದನ್ನು ಅವು ವಿಶ್ಲೇಷಿಸುತ್ತಿವೆ. ಕನ್ನಡದಲ್ಲಿ ಶಿವಸುಂದರ್ ಅವರ ಹಾಗೆ ಅಂತಾರಾಷ್ಟ್ರೀಯ ರಾಜಕೀಯ ಪ್ರಜ್ಞೆಯಲ್ಲಿ ಸ್ಥಳೀಯವಾದ ಸಂಗತಿಗಳನ್ನು ವಿಶ್ಲೇಷಿಸುವವರು ಬಹಳ ಕಡಿಮೆಯೆನ್ನಬಹುದು. ಮೂಲತಃ ಒಬ್ಬ ರಾಜಕೀಯ ತತ್ವಶಾಸ್ತ್ರದ ಚಿಂತಕ, ಮಾನವಹಕ್ಕುಗಳ ಕಾರ್ಯಕರ್ತ ಮತ್ತು ರಾಜಕೀಯ ಸಿದ್ಧಾಂತಿಯಾಗಿರುವ ಶಿವಸುಂದರ್ ಅವರು, ನಾಡಿನ ಅನೇಕ ಜನಪರ ಚಳವಳಿಗಳಲ್ಲಿ ಭಾಗವಹಿಸಿರುವ ಅನುಭವವುಳ್ಳವರೂ ಆಗಿದ್ದಾರೆ. ಅವರ ವಿಶಿಷ್ಟವಾದ ಹಿನ್ನೆಲೆಯು ಅವರ ಅಂಕಣ ಬರೆಹಗಳಿಗೆ ವಿಭಿನ್ನವಾದ ತಾತ್ವಿಕ ಮೊನಚು ಮತ್ತು ಕ್ರಿಯಾಶೀಲತೆಯ ಆಯಾಮವನ್ನು ನೀಡಿದೆ.

ಇಲ್ಲಿನ ಬರೆಹಗಳ ಮಹತ್ವವು, ದುಡಿಯುವ ಜನರನ್ನು ದಮನಿಸುವ ವ್ಯವಸ್ಥೆಗಳ ನಿಷ್ಠುರ ವಿಶ್ಲೇಷಣೆಯಲ್ಲಿ ಮಾತ್ರ ಇಲ್ಲ; ಈ ವಿಶ್ಲೇಷಣೆಯನ್ನು ಅಂತಿಮವಾಗಿ ಬಡವರು, ರೈತರು, ಕಾರ್ಮಿಕರು, ದಲಿತರು, ಮಹಿಳೆಯರು, ಧಾರ್ಮಿಕ ಅಲ್ಪಸಂಖ್ಯಾತರು ಹಾಗೂ ಬಡದೇಶಗಳ ಜನರ ಪರವಾದ ಚಿಂತನೆಯಾಗಿ ರೂಪಾಂತರಗೊಳ್ಳುವುದರಲ್ಲಿಯೂ ಇದೆ. ಕನ್ನಡದಲ್ಲಿ ವಿದ್ವತ್ತು ಸೈದ್ಧಾಂತಿಕ ಖಚಿತತೆ ಮತ್ತು ವಾಗ್ವಾದ ಮಾಡುವ ಹುರುಡುಳ್ಳ ಅನೇಕರ ಬರೆಹಗಳಲ್ಲಿ, ಅವರ ಎದುರಾಳಿಗಳ ವಿರುದ್ಧದ ಸೆಣಸಾಟವೇ ತುಂಬಿಕೊಂಡಿರುವುದುಂಟು; ಆದರೆ ಅಲ್ಲಿ ಅವರು ಯಾರ ಪರವಾಗಿದ್ದಾರೆಂದು ನಂಬಲಾಗಿರುತ್ತದೆಯೊ, ಆ ಜನರ ನಿತ್ಯ ಬದುಕಿನ ಕಷ್ಟಸುಖಗಳ ವಿವರಗಳಾಗಲಿ, ಅವರ ಬಾಳಿನ ಬಗ್ಗೆ ಕಳಕಳಿಯಾಗಲಿ ಕಡಿಮೆ ಇರುತ್ತದೆ. ಈ ಹಿನ್ನೆಲೆಯಲ್ಲಿ, ಇಲ್ಲಿನ ಬರೆಹಗಳಲ್ಲಿ ಜಗತ್ತಿನ ಎಲ್ಲ ಅಸಹಾಯಕ ಜನರ ಬಗೆಗಿನ ತಾಯ್ತನದ ಕಾಳಜಿ ಮತ್ತು ಪ್ರೀತಿ ಎದ್ದುಕಾಣುತ್ತದೆ. ಈ ಕಾರಣದಿಂದ ಇಲ್ಲಿನ ಬರೆಹಗಳು ನಮ್ಮ ಸಮಾಜದ ಅತ್ಯಂತ ಕೊನೆಯ ಮನುಷ್ಯರ ನೋವಿಗೆ ಮಿಡಿಯುವ ಪ್ರಾಣಮಿತ್ರನಂತಿವೆ; ಸವೆದು ಕ್ಲೀಷೆಯಾಗಿ ಹೋಗಿರುವ 'ಜನಪರ' ಎಂಬ ಪದಕ್ಕೆ ನಿಜವಾದ ಅರ್ಥದ ಸಾಕ್ಷ್ಯಗಳಂತಿವೆ. ಒಂದೆಡೆ ಶಿವಸುಂದರ್ ಹೀಗೆ ಬರೆಯುತ್ತಾರೆ: "ಜನರೇಕೆ ಓಟು ಹಾಕುತ್ತಿಲ್ಲ ಎಂದು ಜನರಲ್ಲೇ ತಪ್ಪು ಹುಡುಕುವ ರೀತಿ ಪ್ರಶ್ನೆಯನ್ನು ಕೇಳಲಾಗುತ್ತಿದೆ. ಕೇಳಬೇಕಿರುವ ಪ್ರಶ್ನೆ ಜನರೇಕೆ ಓಟು ಹಾಕುತ್ತಿಲ್ಲ ಎಂಬುದಲ್ಲ- ಜನರೇಕೆ ಓಟು ಹಾಕಬೇಕು ಎಂಬುದು. ಈ ಪ್ರಶ್ನೆಗೆ ಆಳುವವರ ಹತ್ತಿರ ಒಂದು ಉತ್ತರವೂ ಇರುವುದಿಲ್ಲ"- ಇದು ಜನತೆಯ ನೆಲೆಯಿಂದ ವಿದ್ಯಮಾನಗಳನ್ನು ನೋಡುವ ಮತ್ತು ವಿಶ್ಲೇಷಿಸುವ ಇಲ್ಲಿನ ಬರೆಹಗಳ ವಿಧಾನದ ಪರಿ. ಈಚೆಗೆ ನಿಧನರಾದ ಆಂಧ್ರದ ಮಾನವ ಹಕ್ಕುಗಳ ಹೋರಾಟಗಾರರಾದ ಬಾಲಗೋಪಾಲ್ ಬಗ್ಗೆ ಶಿವಸುಂದರ್ ಬರೆದಿರುವ ಲೇಖನವು, ಇಲ್ಲಿನ ಅತ್ಯುತ್ತಮ ಬರೆಹಗಳಲ್ಲಿ ಒಂದಾಗಿದ್ದು ಅದರಲ್ಲಿ "ರಾಜಕೀಯ ತಿಳಿವಳಿಕೆಯ ಬುನಾದಿಯೇ ಅಪಾರ ಜೀವಕಾರುಣ್ಯ" ಎಂಬ ಹೇಳಿಕೆಯಿದೆ. ಈ ಹೇಳಿಕೆಯು ಇಲ್ಲಿನ ಬರೆಹಗಳಿಗೂ ಅನ್ವಯವಾಗುತ್ತದೆ.

ಇಲ್ಲಿನ ಬರೆಹಗಳಲ್ಲಿ ಸೈದ್ಧಾಂತಿಕ ಪ್ರಖರತೆ ಮಾತ್ರವಲ್ಲ, ನೇರವಾಗಿ ಮಾತಾಡುವ ವೈಚಾರಿಕ ಸ್ಪಷ್ಟತೆಯೂ ಇದೆ. ಮುಖ್ಯವಾಗಿ ಪ್ರಭುತ್ವದಿಂದಲೊ ಅದರ ವಕ್ತಾರನಂತಿರುವ ಮಾಧ್ಯಮಗಳಿಂದಲೊ ಮರೆಮಾಚಿರುವ ಸಂಗತಿಗಳ ಮೇಲೆ ಬೆಳಕು ಹಾಯಿಸುತ್ತ ಮೂಲಭೂತ ಪ್ರಶ್ನೆಗಳನ್ನು ಎತ್ತುವ ಗುಣವಿದೆ. ಏಕಮುಖಿಯಾದ ದುಡಿವ ಜನರ ಹಿತಕಾರಿಯಲ್ಲದ ನಿಲುವುಗಳು ಸಾರ್ವಜನಿಕ ತಿಳಿವಳಿಕೆಯನ್ನು ಆವರಿಸಿಕೊಳ್ಳುತ್ತಿರುವ ನಮ್ಮ ಸಂದರ್ಭದಲ್ಲಿ, ಈ ಬರೆಹಗಳು ತಟ್ಟನೆ ಮಧ್ಯಪ್ರವೇಶ ಮಾಡಿ, ನಮ್ಮ ಆಸುಪಾಸಿನ ವಿದ್ಯಮಾನಗಳ ಮರೆಮಾಚಿರುವ ಮುಖಗಳ ಕಡೆ ಗಮನ ಹರಿಸುವಂತೆ ಮಾಡುತ್ತವೆ. ಕರಾವಳಿಯಲ್ಲಿ ನಡೆದ ಪಬ್‌ದಾಳಿ ಕುರಿತ ಲೇಖನದಲ್ಲಿ, ಭಜರಂಗಿಗಳಿಂದ ಪೆಟ್ಟುತಿಂದ ಮಹಿಳೆಯರ ಪರವಾಗಿ ಆಲೋಚಿಸುತ್ತಲೇ, ಆ ವಿದ್ಯಮಾನವು ನಮ್ಮ ಪ್ರಧಾನ ಧಾರೆಯ ಮಾಧ್ಯಮಗಳಿಗೆ ಯಾಕೆ ಬಹಳ ದೊಡ್ಡ ವಿಷಯವಾಯಿತು; ಆದರೆ ಯಾಕೆ ದಲಿತರ ಮತ್ತು ಮಹಿಳೆಯರ ಮೇಲಿನ ಅತ್ಯಾಚಾರ, ದನದ ಮಾರಾಟ ಮಾಡುವ ಜನರನ್ನು ಬೆತ್ತಲೆಗೊಳಿಸಿದ್ದು ಅವಕ್ಕೆ ಮುಖ್ಯವಾಗಲಿಲ್ಲ-ಎಂಬ ಪ್ರಶ್ನೆಗಳನ್ನು ಇಲ್ಲಿ ಎತ್ತುವುದನ್ನು ಗಮನಿಸಬೇಕು. ಇದು ಸರಳವಾಗಿ 'ಸ್ವಾತಂತ್ರ್ಯ' 'ಜನಪರ' ಎಂದು ಮೇಲುನೋಟಕ್ಕೆ ಕಾಣುವ ಸಂಗತಿಗಳಲ್ಲಿಯೂ ಅಡಗಿರುವ ವರ್ಗಹಿತಾಸಕ್ತಿಗಳ ಮಿತಿಯನ್ನು ಅನಾವರಣ ಮಾಡುವ ಬಗೆಯಾಗಿದೆ.

ಇಲ್ಲಿನ ಬರೆಹಗಳ ಮತ್ತೊಂದು ಲಕ್ಷಣವೆಂದರೆ, ಸುಡುವ ವರ್ತಮಾನ ಪ್ರಜ್ಞೆ ಹಾಗೂ ನಮ್ಮ ಸುತ್ತಲೂ ನಡೆಯುತ್ತಿರುವ ವಿದ್ಯಮಾನಗಳನ್ನು ತುರ್ತಾಗಿ ಗ್ರಹಿಸಬೇಕು ಎಂಬ ಒತ್ತಾಸೆ. ಆದರೆ, ಇಲ್ಲಿನ ವರ್ತಮಾನ ಪ್ರಜ್ಞೆಯು ತನ್ನನ್ನು ರೂಪಿಸಿರುವ ಚಾರಿತ್ರಿಕ ಸಂಗತಿಗಳ ಹಿನ್ನೆಲೆಯಲ್ಲಿಯೂ; ಭವಿಷ್ಯದಲ್ಲಿ ಮಾನವೀಯವಾದ ಸಮಾಜವಾದಿ ಸಮಾಜವನ್ನು ನಿರ್ಮಿಸಬೇಕೆಂಬ ಆಶೋತ್ತರದ ಸಮ್ಮುಖದಲ್ಲಿಯೂ ರೂಪುಗೊಳ್ಳುತ್ತದೆ. ಈ ಮೂಲಕ ಅದು ಚರಿತ್ರೆಯ ಹಿನ್ನೆಲೆ ಮತ್ತು ಭವಿಷ್ಯದ ಕಾಣ್ಕೆ ಎರಡನ್ನೂ ಏಕೀಭವಿಸುವ ಕೊಂಡಿಯಾಗುತ್ತದೆ.



ಅಂಕಣ ಬರೆಹಗಳು ಸಾಮಾನ್ಯವಾಗಿ ಆಯಾ ವಾರದ ಹೊತ್ತಿಗೆ ಸಿದ್ಧವಾಗುವಂತಹವು. ಆಳವಾದ ಅಧ್ಯಯನ ಮತ್ತು ತಾಳ್ಮೆಯಿಂದ ಚಿಂತನೆ ಮಾಡಲು ಸಮಯವೇ ಇರದ ಇಕ್ಕಟ್ಟಿನಲ್ಲಿ ಅವು ಹುಟ್ಟುತ್ತವೆ. ಆದರೂ ಇಲ್ಲಿನ ಬರೆಹಗಳ ಹಿಂದೆ ವ್ಯಾಪಕವೂ ಆಳವೂ ಆದ ಅಧ್ಯಯನದ ಬಲವಿರುವುದನ್ನು ಓದುಗರು ಗುರುತಿಸಬಹುದು. ಈ ಅಧ್ಯಯನವು ಜಾರ್ಜ್ ಆರ್ವೆಲ್ಲನ ಕೃತಿಯಿಂದ ಹಿಡಿದು 'ಆವರಣ' 'ಬಂಕಿಮಮಠ' ಕಾದಂಬರಿಗಳ ತನಕ; ದೇವಿಪ್ರಸಾದರ 'ಲೋಕಾಯತ'ದಿಂದ ಹಿಡಿದು ಲೋಹಿಯಾ ಅಂಬೇಡ್ಕರ್ ಮಾರ್ಕ್ಸ್ ಲೆನಿನ್ ಮಾವೊ ಚೋಂಸ್ಕಿ ಅವರ ರಾಜಕೀಯ ತತ್ವಶಾಸ್ತ್ರದ ಕೃತಿಗಳ ತನಕ; ಟಿವಿ ಸೀರಿಯಲ್ಲುಗಳಿಂದ ಹಿಡಿದು ಶಸ್ತ್ರಾಸ್ತ್ರ ಉದ್ಯಮದ ತನಕ, ಆಹಾರ ಸಂಸ್ಕೃತಿಯ ತನಕ ಪಸರಿಸಿಕೊಂಡಿದೆ. ಇಲ್ಲಿನ ಚರ್ಚೆಗಳಲ್ಲಿ ಉಲ್ಲೇಖಗೊಳ್ಳುವ ಕೃತಿಗಳು, ಸಾಹಿತ್ಯ ಸಮಾಜವಿಜ್ಞಾನ ರಾಜಕೀಯ, ಅರ್ಥಶಾಸ್ತ್ರ ತತ್ವಜ್ಞಾನ ಹೀಗೆ ಬೇರೆಬೇರೆ ಜ್ಞಾನದ ವಲಯಗಳಿಗೆ ಸೇರಿದ್ದು, ಇಲ್ಲಿನ ಬರೆಹಗಳ ವಸ್ತು ವೈವಿಧ್ಯ ಸೋಜಿಗ ಹುಟ್ಟಿಸುತ್ತದೆ.

ಈ ಅಂಕಣ ಬರೆಹಗಳಲ್ಲಿ ನಿರ್ದಿಷ್ಟ ರಾಜಕೀಯ ಸಿದ್ಧಾಂತದ ಹಿನ್ನೆಲೆ ಕೆಲಸ ಮಾಡಿರುವುದು ಸ್ಪಷ್ಟವಾಗಿದೆ. ಹೀಗಾಗಿ, ಪರ್ಯಾಯವೆಂದು ಕರೆಯಲಾಗುವ ಇತರ ಜನಪರ ರಾಜಕೀಯ ವಿಚಾರಧಾರೆಗಳ ಮತ್ತು ಪಕ್ಷರಾಜಕಾರಣಗಳ ವಿಮರ್ಶೆಯೂ ಇಲ್ಲಿ ನಡೆದಿದೆ. ಈ ವಿಮರ್ಶೆಯು ಸಹಜವಾಗಿಯೇ ವಾಗ್ವಾದ ಹುಟ್ಟಿಸಬಲ್ಲುದಾಗಿದೆ. ಅದರಲ್ಲೂ ಲೋಹಿಯಾವಾದ ಮತ್ತು ಅಂಬೇಡ್ಕರ್ ಚಿಂತನೆಗಳನ್ನು ಕುರಿತ ಇಲ್ಲಿನ ವಿಶ್ಲೇಷಣೆಗಳಲ್ಲಿ ಆಳವಾದ ಅಧ್ಯಯನವಿದ್ದು, ಅಲ್ಲಿ ಎತ್ತಿರುವ ಪ್ರಶ್ನೆಗಳು ಚರ್ಚೆಗೆ ಆಹ್ವಾನಿಸುವಂತಿವೆ. ಕುತೂಹಲದ ಸಂಗತಿಯೆಂದರೆ ಶಿವಸುಂದರ್ ತಮ್ಮ ಚಿಂತನೆಯ ಮೊದಲ ಘಟ್ಟದಲ್ಲಿ ತಾವು ನಂಬಿದ ರಾಜಕೀಯ ಸಿದ್ಧಾಂತವನ್ನು ಆತ್ಯಂತಿಕವೆಂದು ಭಾವಿಸಿ ಅತೀವ ಆತ್ಮವಿಶ್ವಾಸದಲ್ಲಿ ಮಂಡಿಸುತ್ತಿದ್ದರು. ಈಗ ಆ ಜಾಗದಲ್ಲಿ, ತಾವು ನಂಬಿದ ಸಿದ್ಧಾಂತಗಳನ್ನು ಸ್ವವಿಮರ್ಶೆಗೆ ಒಡ್ಡಿಕೊಳ್ಳುತ್ತಿರುವ ನಿಷ್ಠುರ ಪ್ರಾಮಾಣಿಕತೆ ಯನ್ನು ತೋರುತ್ತಿರುವುದು; ಇದಕ್ಕೆ ಪೂರಕವಾಗಿ, ತಾವು ವೈಯಕ್ತಿಕವಾಗಿ ಒಪ್ಪದೇಯಿಷ್ಟ ಬೇರೆಬೇರೆ ಜನಪರ ರಾಜಕೀಯ ವಿಚಾರಧಾರೆಗಳ ಸಾಧ್ಯತೆಯ ಬಗೆಗಿನ ಪರಿಶೀಲಿಸುವಿಕೆಯ ಮುಕ್ತತೆಯನ್ನು ಕಾಣುತ್ತಿರುವುದು. ಈ ಸೈದ್ಧಾಂತಿಕ ಪಲ್ಲಟ ಇಲ್ಲವೇ ರೂಪಾಂತರದ ಹಿಂದಿರುವ ಒಳಗೊಳ್ಳುವ ರಾಜಕಾರಣವು ಬಹಳ ಇತ್ಯಾತ್ಮಕವಾಗಿದೆ. ಇದು ಕರ್ನಾಟಕದಲ್ಲಿ ಸಮಾನ ಹಗೆಗಳ ಎದುರು ಹಾಗೂ ಸಮಾನ ಆಶಯಕ್ಕಾಗಿ, ಕೂಡುಹೋರಾಟಗಳನ್ನು ರೂಪಿಸುವ ವಿಶಾಲ ರಾಜಕಾರಣದತ್ತ ಚಲಿಸುತ್ತಿರುವಂತೆ ಸಹ ತೋರುತ್ತಿದೆ. ಎಲ್ಲ ಜನಪರ ಚಳವಳಿಗಳು ತಮ್ಮ ಸಿದ್ಧಾಂತ ರಾಜಕೀಯ ಕಾರ್ಯಕ್ರಮಗಳನ್ನು ಫಲಿತಾಂಶದ ಆಧಾರದಲ್ಲಿ ಮರುವಿಮರ್ಶೆಗೆ ಒಳಪಡಿಸಿಕೊಳ್ಳಬೇಕು, ಅಂತಃಸ್ಸಾಕ್ಷಿಯನ್ನು ತೋರಬೇಕು ಎಂದು ಅವರು ಮತ್ತೆಮತ್ತೆ ಹೇಳುತ್ತಿರುವರು. ಈ ನಿಲುವು, ಈ ಹೊತ್ತಿನ ಚಳುವಳಿರಹಿತ ಕರ್ನಾಟಕಕ್ಕೆ ಅತ್ಯಗತ್ಯವಾಗಿದೆ.

ಬೇರೆಬೇರೆ ಜ್ಞಾನಶಿಸ್ತು ಮತ್ತು ಕಾರ್ಯಕ್ಷೇತ್ರಗಳಿಂದ ಬರುವ ಜನರು, ಕನ್ನಡವನ್ನು ಬಳಸುವುದರಿಂದ ಅದರ ಅಭಿವ್ಯಕ್ತಿಯ ಶಕ್ತಿಗೆ ಬೇರೆ ಆಯಾಮ ಲಭಿಸುತ್ತದೆ ಎಂದು ನಂಬಿಕೆ ನನ್ನದು. ಈ ಹಿನ್ನೆಲೆಯಲ್ಲಿ, ವಿಜ್ಞಾನದ ವಿದ್ಯಾರ್ಥಿಯಾಗಿದ್ದು, ಜನಪರ ಚಳವಳಿಗಳಿಗೆ ಬಂದು ಪತ್ರಕರ್ತನಾಗಿ ಬದಲಾಗಿರುವ ಶಿವಸುಂದರ್ ಅವರು, ತಮ್ಮ ಬರೆಹಗಳಲ್ಲಿ ಕನ್ನಡ ಭಾಷೆಯನ್ನು ರಾಜಕೀಯ ಚಿಂತನೆಯ ಅಭಿವ್ಯಕ್ತಿಗೆ ಪಳಗಿಸುತ್ತಿರುವ ಬಗೆಯು ಭಾಷೆಯ ವಿದ್ಯಾರ್ಥಿಯಾದ ನನಗೆ ವಿಶೇಷವೆಂದು ಅನಿಸಿದೆ. ಶಿವಸುಂದರ್ ತಮ್ಮ ಚಿಂತನೆಗಳಲ್ಲಿ ಅನೇಕ ಹೊಸ ಪದ, ಪರಿಭಾಷೆ ಹಾಗೂ ರೂಪಕಗಳನ್ನು ಸೃಷ್ಟಿಸಿಕೊಂಡಿದ್ದಾರೆ; ಹೊಸಹೊಸ ಕಥನಕ್ರಮಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಅವುಗಳಲ್ಲಿ, ತಮ್ಮ ವಿಚಾರವನ್ನು ಓದುಗರ ಮೇಲೆ ಹೇರುವುದಕ್ಕೆ ಬದಲಾಗಿ, ಪ್ರಶ್ನೆಗಳನ್ನು ಮುಂದಿಟ್ಟು ಅವರನ್ನು ಚಿಂತನೆಗೆ ಪ್ರೇರಿಸುವ ಅವರ ಧಾಟಿಯು ನನಗೆ ಪ್ರಿಯವಾಗಿದೆ. ಕನ್ನಡದ ಅನೇಕ ಕವಿಗಳು ಒಬಾಮಾ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿದಾಗ, ದಮನಿತರ ಬಿಡುಗಡೆಯ ಮನ್ವಂತರದ ಆರಂಭ ಎಂದು ಮೈಮರೆತು ಹಾಡಿದರು. ಆಗ ಶಿವಸುಂದರ್ ಅದನ್ನು ಒಪ್ಪದೆ ಬರೆದ ಲೇಖನವೊಂದರಲ್ಲಿ ಒಂದು ಪ್ರಶ್ನೆಯನ್ನು ಹೀಗೆ ಕೇಳುತ್ತಾರೆ: "ಮುಸ್ಲಿಂ ಜಗತ್ತಿನಿಂದ ಚಂದ್ರನನ್ನು ಕದ್ದೊಯ್ದಿರುವ ಅಮೆರಿಕಾ, ತನ್ನ ಕರಿಯ ಅಧ್ಯಕ್ಷ ನನ್ನು ಕೈರೋಗೆ ಕಳಿಸಿ ಅಮಾಸೆಯ ಕತ್ತಲಲ್ಲೂ ಬೆಳದಿಂಗಳನ್ನು ಕಾಣಿರಿ ಎಂದು ಹೇಳುತ್ತಿದೆ! ಆದರೆ ಭ್ರಮೆ ವಾಸ್ತವವನ್ನು ಮರೆಮಾಚುತ್ತದೆ. ಅನ್ಯಾಯವನ್ನು ನ್ಯಾಯದ ಭಾಷೆಯಲ್ಲಿ ಮುಂದಿಡುತ್ತದೆ. ಅನುಕಂಪವೆಂಬ ಇಂಪಾದ ಸಂಗೀತದ ಹಿನ್ನೆಲೆಯಲ್ಲಿ ಆಕ್ರಂದನವನ್ನು ಆನಂದಿಸುವಂತೆ ಮಾಡುತ್ತದೆ. ಇಲ್ಲದಿದ್ದರೆ ಒಬಾಮಾ ಅಧಿಕಾರಕ್ಕೆ ಬಂದ ಕೇವಲ ಆರು ತಿಂಗಳಲ್ಲಿ ಇಪ್ಪತ್ತು ಲಕ್ಷಕ್ಕೂ ಹೆಚ್ಚು ಆಫ್ಘನ್ನರು ಬೀದಿ ಪಾಲಾಗಿದ್ದರೂ, ಮುಸ್ಲಿಂ ಜಗತ್ತು ಒಬಾಮಾನ ಭಾಷಣಕ್ಕೆ ಚಪ್ಪಾಳೆ ತಟ್ಟುತ್ತಿತ್ತೇ'".

ಶಿವಸುಂದರ್ ಅವರ ಈಚಿನ ಬರೆಹಗಳಲ್ಲಿ ಆಳವಾದ ರಾಜಕೀಯ ಪ್ರಜ್ಞೆ ಮತ್ತು ಒಂದು ಬಗೆಯ ಅಸಹಾಯಕತೆಯಿಂದ ಹುಟ್ಟಿರುವ ಈ ದಟ್ಟ ವಿಷಾದದ ಮಾತುಗಳು ತುಂಬ ಕಾಣಿಸಿಕೊಳ್ಳುತ್ತಿವೆ.

ಆದರೆ ಇಲ್ಲಿನ ಈ ಬರೆಹಗಳಲ್ಲಿ ಕೆಲವು ಮಿತಿಗಳಿವೆ. 1. ಇಲ್ಲಿನ ಕರ್ನಾಟಕದ ಚಿತ್ರದಲ್ಲಿ ಪ್ರಭುತ್ವದ ವಿಮರ್ಶೆ ಪಾಲು ಹೆಚ್ಚು, ಕರ್ನಾಟಕದ ಜನಸಮುದಾಯಗಳ ಪಾಲಿನ ಸಾಮಾಜಿಕ ಸಾಂಸ್ಕೃತಿಕ ವಿವರಗಳ ಪಾಲು ಕಡಿಮೆ. ತಿರುಗಾಡಿ ಯಾದ ನನಗೆ, ಶಿವಸುಂದರ್, ಕರ್ನಾಟಕವನ್ನು ಅದರಲ್ಲೂ ಉತ್ತರ ಕರ್ನಾಟಕವನ್ನು ತಿರುಗಾಟ ಮಾಡಿದ್ದರೆ ಇಲ್ಲಿನ ಚಿಂತನೆಗಳಿಗೆ ಬೇರೆಯೇ ಆದ ಆಯಾಮ ಇರುತ್ತಿತ್ತು ಎಂದು ಅನಿಸಿರುವುದುಂಟು. 2. ಇಲ್ಲಿನ ಭಾಷೆಯು ಪತ್ರಿಕೆಯ ಓದುಗರನ್ನು ನೇರವಾಗಿ ಮುಟ್ಟುವ ಉದ್ದೇಶದಲ್ಲಿ ಎಷ್ಟೇ ಸರಳವಾಗಿದ್ದರೂ, ಅನೇಕ ಕಡೆ ಸೈದ್ಧಾಂತಿಕ ಪರಿಭಾಷೆಗಳು ಓದನ್ನು ಜಟಿಲಗೊಳಿಸುವುದನ್ನು ಗಮನಿಸಬಹುದು. 3. ಮುಸ್ಲಿಂ ಮೂಲಭೂತವಾದದ ಬೇರೆಬೇರೆ ರೂಪಾಂತರ

ಸದ್ಯದ ಜಾಗತಿಕ ಸ್ಥಿತಿಯಲ್ಲಿ ಅಮೆರಿಕದಂತಹ ...ಸಾಮ್ರಾಜ್ಯಶಾಹಿಯನ್ನು ಮುಖಾಮುಖಿ ಮಾಡುತ್ತಿದ್ದರೂ, ಹೇಗೆ ಮುಸ್ಲಿಂ ಸಮುದಾಯದ ಒಳಗೆ ಚಲನಶೀಲತೆ ...ಗೆ ತಡೆಗಟ್ಟಿರುವ ಪ್ರತಿಗಾಮಿ ಶಕ್ತಿಯಾಗಿ ಕೂಡ ...ವಾಗಿದೆ ಮತ್ತು ಮುಸ್ಲಿಂ ಸಮಾಜಗಳಲ್ಲಿ ದಮನ ...ರ್ಗಗಳನ್ನು ಹುಟ್ಟಿಸುತ್ತಿದೆ ಎಂಬುದನ್ನು ಕುರಿತು ತೀಕ್ಷ್ಣ ವಿಶ್ಲೇಷಣೆಯ ಅಗತ್ಯವಿದೆ. ಇದರ ಕಡೆ ಇಲ್ಲಿನ ...ಗಳಲ್ಲಿ ಗಮನ ಕಡಿಮೆ ಹರಿದಿದೆ ಅನಿಸುತ್ತದೆ. ...ದ ಕೋಮುವಾದ ಮತ್ತು ಅಮೆರಿಕಾ–ಯೂರೋಪು ...ಸಾಮ್ರಾಜ್ಯಶಾಹಿಗಳು ಇಸ್ಲಾಂ ಮತ್ತು ಮುಸ್ಲಿಮರ ...ಹರಡಿರುವ ಪೂರ್ವಗ್ರಹಿಕೆಗಳ ಒಡೆಯುವುವಷ್ಟೇ ...ವಾಗಿ, ಮುಸ್ಲಿಂ ಸಮುದಾಯಗಳ ಪಾಲಿಗೆ ಒಳಹಗೆ ...ರುವ ಈ ಮೂಲಭೂತವಾದವು ಮುಸ್ಲಿಂ ಸಮಾಜ ಪರಿವರ್ತನೆಯಲ್ಲಿ ಸೃಷ್ಟಿಸಿರುವ ತೊಡಕುಗಳ ಬಗ್ಗೆ ...ಲ್ಲಿ ಜರೂರಾದ ಚರ್ಚೆ ಏರ್ಪಡಬೇಕಿದೆ.

...ವಸುಂದರ್ ನಮ್ಮ ಗಂಭೀರ ಚಿಂತಕರಲ್ಲಿ ಒಬ್ಬರು ...ವಲ್ಲ, ಅವರು ಸಕಾರಾತ್ಮಕ ಅರ್ಥದಲ್ಲಿ ಜನಪ್ರಿಯ ...ರೂ ಆಗಿದ್ದಾರೆ. ನಮ್ಮ ಆಸುಪಾಸಿನ ಜಗತ್ತಿನಲ್ಲಿ ...ದಾದರೂ ವಿದ್ಯಮಾನ ಘಟಿಸಿದರೆ, ಈ ಕುರಿತು ...ಂದರ್ ಏನು ಬರೆಯಬಹುದು ಎಂದು ಆಸಕ್ತಿ ...ರುವ ಓದುಗರನ್ನು ನಾನು ಕಂಡಿದ್ದೇನೆ; 'ಪತ್ರಿಕೆ'ಯನ್ನು ...ಹೊಂಡುಕೊಳ್ಳುತ್ತಿರುವುದೇ ಶಿವಸುಂದರ್ ಅಂಕಣಗಳಿ...ಎಂದು ಹೇಳುವ ಅಭಿಮಾನಿಗಳನ್ನೂ ಭೇಟಿಮಾಡಿ ...ವಿಶ್ವವಿದ್ಯಾಲಯಗಳ ಅರ್ಥಶಾಸ್ತ್ರ ರಾಜ್ಯಶಾಸ್ತ್ರ ಸಮಾಜ ...ಭಾಗಗಳಲ್ಲಿ ಕೆಲಸ ಮಾಡುವ ಅನೇಕ ಪ್ರಾಧ್ಯಾಪಕರು, ...ದರ್ ಅಂಕಣ ಬರೆಹಗಳಿಂದ ನಾವು ಕಲಿಯುವುದು ...ಇದೆ ಎಂದಿರುವುದುಂಟು. ಇವೆಲ್ಲವೂ ಶಿವಸುಂದರ್ ...ಸಾಂಸ್ಕೃತಿಕ ಮತ್ತು ರಾಜಕೀಯ ಮಹತ್ವವನ್ನು ...ಸುವ ಸಂಗತಿಗಳಾಗಿವೆ. ಶಿವಸುಂದರ್ ನಮ್ಮ ...ಪ್ರಭಾವಶಾಲಿ ವಾಗ್ಮಿಗಳಲ್ಲಿ ಒಬ್ಬರು; ಮಾತ್ರವಲ್ಲ, ...ಶಾಲಿ ಬರೆಹಗಾರರಲ್ಲಿ ಒಬ್ಬರು ಕೂಡ. ಅವರು ...ದಷ್ಟೇ ಲೀಲಾಜಾಲವಾಗಿ ಇಂಗ್ಲಿಷಿನಲ್ಲಿಯೂ ...ಬಲ್ಲವರು.

...ಸುಂದರ್ ಅವರ ಅಂಕಣ ಬರೆಹಗಳು ವಾರಕ್ಕೊಮ್ಮೆ ...ವ ಲೋಕಾಭಿರಾಮದ ಲಹರಿಗಳಾಗಿರದೆ, ಜನರ ...ಯ ಪ್ರಜ್ಞೆಯನ್ನು ರೂಪಿಸುವ ಗಾಢ ಬದ್ಧತೆಯಿಂದ ...ಒಬ್ಬ ಚಿಂತಕನ ವಿದ್ವತ್ಪೂರ್ಣ ಬರೆಹಗಳಾಗಿವೆ. ...ಪ್ರಸಾರವುಳ್ಳ ವಾರಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ...ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತ ಇನ್ನೂ ...ಓದುಗರಿಗೆ ಲಭ್ಯವಾಗುತ್ತಿವೆ. ಪತ್ರಿಕೆಯಲ್ಲಿರುವ ...ಗಳಿಗಿಂತ ಪುಸ್ತಕರೂಪದಲ್ಲಿ ಬರೆಹಕ್ಕೆ ಹೆಚ್ಚಿನ ವಾಗ್ವಾದ ...ವ ಗುಣ ಪ್ರಾಪ್ತವಾಗುವುದುಂಟು. ಇಲ್ಲಿನ ಬರೆಹಗಳ ...ಖಚಿತವೂ ತೀವ್ರವೂ ಆದ ಒಂದು ರಾಜಕೀಯ ...ದೆ. ಈ ನಿಲುವನ್ನು ಪೂರ್ತಿಯಾಗಿ ಒಪ್ಪಲು ...ಗೆ ಕಷ್ಟವಾಗಬಹುದು. ಆದರೆ ಅಂತಹವರು ಸಹ ...ಬರೆಹಗಳಲ್ಲಿರುವ ಸೂಕ್ಷ್ಮತೆ, ಗಂಭೀರತೆ, ನಾಡುಕಟ್ಟುವ ಮಾನವೀಯ ಕಳಕಳಿಗಳನ್ನು ನಿರಾಕರಿಸುವುದು ...ಲ್ಲ; ಇಲ್ಲಿರುವ ಪ್ರಭುತ್ವಗಳ ವಿಮರ್ಶೆಯನ್ನಾಗಲಿ ...ದಮನಿತ ಜನರ ಪರವಾಗಿ ಇರುವ ಬದ್ಧತೆಯನ್ನಾಗಲಿ ...ಯುವುದು ಸಾಧ್ಯವಿಲ್ಲ. ಕನ್ನಡದ ಬೌದ್ಧಿಕ ಪರಿಸರದಲ್ಲಿ ...ವಾದರೂ ಒಂದು ಚಿಂತನೆಯನ್ನು ಸುಲಭವಾಗಿ ಇಲ್ಲವೇ ಸಾರಾಸಗಟು ನಿರಾಕರಿಸುವ ಒಂದು ...ಹೆಚ್ಚಾಗುತ್ತ ಒಂದು ಚಿಂತನೆಯ ಜತೆಗೆ ತೀವ್ರವಾದ ...ವಿಟ್ಟುಕೊಂಡು ಅದರ ಜತೆಗೆ ವಾಗ್ವಾದ ಮಾಡುವ ...ಡಿಮೆಯಾಗುತ್ತ ಇರುವಂತೆ ತೋರುತ್ತಿದೆ. ಸಿನಿಕತೆ ...ವಿಮರ್ಶೆ ಮಾಡುವುದು, ಕಠೋರ ಆತ್ಮವಿಮರ್ಶೆಗೆ ಒಡ್ಡಿಕೊಳ್ಳುವುದು ಹಾಗೂ ಹತಾಶೆಗೆ ಹೋಗದೆ ...ಸಾಧ್ಯತೆ ಹುಡುಕುವುದು ಈ ಹೊತ್ತಿನ ಜರೂರಾಗಿದೆ. ...ಜೆಯಲ್ಲಿ ಒಪ್ಪಿಗೆಯಷ್ಟೇ ತೀವ್ರವಾದ ಭಿನ್ನಾಭಿಪ್ರಾಯ ...ವುದಕ್ಕೆ ಬೇಕಾದ ಕಸುವುಳ್ಳ ಇಲ್ಲಿನ ಚಿಂತನೆಗಳನ್ನು ...ಇಂಡು ಕನ್ನಡದಲ್ಲಿ ಹೊಸ ವಾಗ್ವಾದ ಮತ್ತು ...ಗಳು ಏರ್ಪಡಬೇಕಿದೆ. ಅಂತಹ ಅರ್ಥಪೂರ್ಣ ...ವಾಗ್ವಾದವನ್ನು ಶಿವಸುಂದರ್ ಅವರು ಲೋಹಿಯಾ ...ಮತ್ತು ಸಮಾಜವಾದ ಕುರಿತಂತೆ ಆರಂಭಿಸಿಯೂ ...ಇಲ್ಲಿನ ಚಿಂತನೆಗಳು, ಸಮಾನಮನಸ್ಕರು ಕೂಡಿ, ...ಗೆಯ ದಮನಿತ ಜನರ ವಿರುದ್ಧ ಇರುವ ಎಲ್ಲ ...ಯ ದುರುಳ ವ್ಯವಸ್ಥೆಗಳ ವಿರುದ್ಧ ವಿಶಾಲ ...ವನ್ನು ಸಂಘಟಿಸುವುದಕ್ಕೂ, ನಾಳಿನ ದಿನಗಳಲ್ಲಿ ...ವ ಸಮಾಜವನ್ನು ಕಟ್ಟುವುದಕ್ಕೂ, ಬೇಕಾದ ...ಯನ್ನು ಸಿದ್ಧಗೊಳಿಸಲು ನೆರವಾಗಬೇಕು ಎಂದು ...ಸ್ನೂ ನನ್ನಂತಹ ಅನೇಕರ ತಿಳಿವಳಿಕೆಯನ್ನು ಬೆಳೆಸಿರುವ ...ರಹಗಳಿಗೆ ಕೃತಜ್ಞತೆ ಹೇಳುತ್ತಾ ಕನ್ನಡದ ಪ್ರಜ್ಞಾವಂತ ...ಈ ಕೃತಿಯನ್ನು ಬರಮಾಡಿ ಕೊಳ್ಳಬೇಕು ಎಂದು ...ಸೆ.

• ಡಾ. ರಹಮತ್ ತರೀಕೆರೆ

ಮಸಿಬಟ್ಟೆ

ಲೇಖಕರು: ಕಳಿಗಣನಾಥ ಗುಡದೂರ


ಹಿಂದಿನ ಸಂಚಿಕೆಯಿಂದ

ಈಕೆಯ ಚೀರಾಟದ ದನಿ ಕೇಳಿ ಮಲ್ಲಯ್ಯ ಗಲ್ಲಾಪೆಟ್ಟಿಗೆ ಹಿಂದ ಕುಳಿತಾತ ದಿಗ್ಗನೆ ಎದ್ದು ಹೊರಬಂದ. ಮತ್ತೆ ಬಾಯಿಗೆ ಮಸಿಬಟ್ಟೆ ಇಟ್ಟುಕೊಂಡ ಈರಮ್ಮ ಚೀರಿದ್ದು ತಾನಲ್ಲ ಎಂಬಂತೆ ಕುಳಿತುಕೊಂಡಳು. 'ಬೇ ಈರಮ್ಮವ್ವ ಅಲ್ಯಾಕ ಬಿಸಿಲಿಗೆ ಕುಂತಿ. ಎದ್ದು ಇಕ್ಕಡೆ ನೆಳ್ಳಿಗನ ಕೂಡು' ಎಂಬಂತೆ ಹೋಟೆಲ್ ಮುಂಭಾಗದ ಮೊಣಕಾಲು ಮಟ ಇದ್ದ ಕಟ್ಟೆ ತೋರಿಸಿದ. 'ಇರ್ಲಿ ಬುಡ ಹಡದಪ್ಪ ನಿನಗನ. ನನ್ನ ಬಗ್ಗೆ ಕಕ್ಕುಲಾತಿ ಅಂಬದು ಐತಲ್ಲ ಅಷ್ಟ. ಸಾಕು. ಇದ್ದೊಬ್ಬ ಮಗಳು ವರ್ಷ ಎರಡು ವರ್ಷದ ಹಿಂದ ಆವಾಗೊಮ್ಮೆ ಈವಾಗೊಮ್ಮೆ ಬಂದು ಹೋಗ್ತಿದ್ಲು. ಆಕೀನು ಈ ಪರದೇಶಿನ ಮರ್ತು ಬುಟ್ಲು... ಇರ್ಲಿ ಬುಡು ಯಾರ್ ಬುಟ್ರ ಎದಕ್ಕ ಬಂತು. ಈ ಭೂಮ್ತಾಯಿ ತನ್ನ ಹೊಟ್ಯಾಗ ಕರ್ಕೊಳ್ಳೊ ತನಕ ನನ್ನ ಜೀವ ಗಟ್ಟಿ ಇರುತ್ತ, ಮಲ್ಲಯ್ಯ ಹೋಗಪ, ನನ್ನಂಥಾಕಿದು ತಗಂಡು ಏನ್ ಮಾಡ್ತೀ. ದುಡಕಂಡು ತಿನ್ನಾತ ನೀನು, ಹೋಗು' ಅಂತ ಕಳಿಸಿ, ಬಿಸಿಲಿಗೆ ಕುಂತಳು.

'ಹ್ಞೂಂ ಅನ್ನೋರು ಇದ್ರ ಮುಗೀತಿ. ಈ ಊರಾಗ ಎಂತೆಂಥ ಶ್ರೀಮಂತ್ರು ಇದ್ರೂ ಈ ಬಡಪಾಯಿ ಒಂದು ಎಕರೆ ಮ್ಯಾಲ ಕಣ್ಣುಬಿತ್ತು. ಒಂದೆಕರೆ ಹೊಲಾನ ಊರ ಸ್ಮಶಾನಭೂಮಿಗಿ ಬಿಟ್ಟುಕೊಟ್ಯ. ಹದಿನೈದು ವರ್ಷಗಳಿಂದ ನೂರಾರು ಜನರನ್ನು ಅಲ್ಲಿ ಮಣ್ಣು ಮಾಡಿರಬೋದು. ಹೊಲ ಕೊಟ್ಟ ನನಗ ಸಮೇತ ಒಂದು ಗೇಣು ಅಲ್ಲಿ ಜಾಗ ಸಿಗೋದು ಭರವಸಿ ಇಲ್ಲ, ಮೊದ್ಲಿನಗತೆ ಒಂದೂವರೆ ಕಿ.ಮೀ. ದೂರದ ಹಿರೇಕಾಲುವಕ್ಕ ಹೋಗಿ ದಂಡೆಮ್ಯಾಲ ಮಣ್ಣು ಮಾಡಬೇಕಾಗುತ್ತೊ ಏನೊ? ಆ ಸುಡುಗಾಡಿ ಜಾಗ ಸಮೇತ ಅಳತೆ ಮಾಡ್ತಾರ. ಸುಡುಗಾಡಿಗೆ ಸಮೇತ ಜಾಗ ಬುಡಲಾರದವು ಇಡೀ ಊರನ್ನ, ಸುತ್ತಲಿನ ಹೊಲಗಳನ್ನ ಸುಡುಗಾಡು ಮಾಡಾಕ ಹೊಂಟಾರ. ಸುಡುಗಾಡಿಗೆ ಹೊಂದಿಕೊಂಡಿರೊ ಎರಡೆಕರೆ ಜಮೀನು ಆತ ಹೋದಮ್ಯಾಲ ನನ್ನ ಹೆಸರಿಗೆ ಆಯ್ತು. ಈಗ ನೋಡಿದ್ರ ಆ ಹೆಸರು ಸಮೇತ ಇರುತ್ತೊ ಇಲ್ಲೊ? ನಾಳಿಲಿಂದ ಕೊಡ್ಲಿ, ಸಲಿಕಿ ತಗಂಡು ಹೊಲಕ್ಕ ಹೋಗ್ಬಕು. ನಡುಮಟ ಬೆಳೆದ ಬಳ್ಳಾರಿ ಇರಜಾಲಿ ಗಿಡಗಳನ್ನ ಕಡಿದು, ಬಿತ್ತಾಕ ಬರಂಗ ಮಾಡ್ಬಕು. ಗಂಡ ಇದ್ದಾಗನ ನಾನೇನು ಕುಂತು ಉಂಡಾಕಿ ಅಲ್ಲ; ಆತಗ ಸರಿಗಟ್ಟಿ ಹೊಲ, ಮನೆ ಕೆಲಸ ಮಾಡ್ತಿದ್ದೆ. ಈಗೇನು ನನಗ ಹೊತ್ಗಂಡು ಹೋಗೊ ಜಡ್ಡು ಬಂದಿಲ್ಲ, ಎಲ್ಲಾ ಸರೀಗಿ ನಾ ಅನಕಂಡಂಗ ಆದ್ರ ಎರಡೆಕರೆ ಹೊಲದಾಗ ಬೆಳೆದಿದ್ದು ಯಾ ಕೋಡಿ ತಿನ್ಬಕು....

ಹೋಟೆಲ್‌ನಲ್ಲಿ ಜನರ ಗಜಿಬಿಜಿ ಹೆಚ್ಚಾಯಿತು. ಒಬ್ಬರಿಗೊಬ್ಬರು ತಲೆಚಿಟ್ಟು ಹಿಡಿಯುವಂತೆ ಕಬಾಕಬಾ ಮಾಡುತ್ತಿದ್ದರು. 'ಈ ಕೋಡಿ ಒಂದು ಸಹಿಮಾಡಲಾರ್ದಂಗ ಕುಂತೈತಿ... ಇಡೀ ಊರಿನ ಮಂದಿ ಒತ್ತಟ್ಟಿಗಿದ್ರ ಈ ಹುಚ್ಚುದು ತಂದೇತಾನ ನಡೆಸುತ್ತ. ಆಕಿ ಮಕ್ಕಳು ಸಮೇತ ತಮ್ಮ ಪಾಲಿನ ಜಮೀನನ್ನ ಸ್ಟೀಲ್ ಪ್ರಾಜೆಕ್ಟ್‌ಗೆ ಕೊಡ್ತೀವಿ. ಒಬ್ಬರಿಗೆ ನಿಗದಿಮಾಡಿದ ರೊಕ್ಕಕೊಟ್ರ ಸಾಕು ಅಂತ ಬರ್ದುಕೊಟ್ಟಾರ... ಈ ಕೋಡಿಯ ಗಂಡ ಗುರಪ್ಪ ಇದ್ರ ಆತನ್ನ ಹೆಂಗಾದ್ರೂ ಒಪ್ಪಿಸಬೋದಿತ್ತು....' ಒಗ್ಗಣಿ ತಿಂದು ಅದೇ ಕಾಗದಿಂದ ಕೈ ಒರೆಸಿಕೊಳ್ಳುತ್ತಿದ್ದ ಸಣ್ಣಮನಿ ಭೀಮಣ್ಣ ಹೇಳಿದ. 'ಅಯ್ ಭೀಮಣ್ಣ ನೀನು ಬಲು ಬೇಸು ಹೇಳಿದಿ ನೋಡು. ಇದು ಜಾಲಿ ಅಂದ್ರ, ಆತ ಹಿರೇಜಾಲಿ. ಆತ ಎಲ್ಲಿ ಕೊಡುತ್ತಿದ್ದ? ತಾನಷ್ಟ ಅಲ್ಲ, ಇಡೀ ಊರ್ಮಂದಿ ಹೊಲಾನ ಕೊಡಲಾರ್ದಂಗ ಮಾಡ್ತಿದ್ದ. ತನಗೆ ಬೇಕಿದ್ದ ನಾಲ್ಕಾರು ಮಂದೀನ ಕರ್ಕಂಡು ತಹಸೀಲ್ ಆಫೀಸಿನ ಮುಂದ ಧರಣಿ ಕುಂದ್ರುತಿದ್ದ. ಆ ಪುಣ್ಯಾತ್ಮನ ಹೆಸರು ಬೇಸು ಎತ್ತಿದಿ ಹೇಳು...' ನೀರು ತುಂಬಿದ್ದ ಗ್ಲಾಸ್‌ನ್ನು ಬಾಯಿ ಸಮೀಪ ಹಿಡಿದ ಹಾಲಪ್ಪ ಹೇಳಿ ಕೊಕ್ಕಾಸಿ ನಕ್ಕ. ಕುಳಿತೇ ನಕ್ಕ ರಭಸಕ್ಕೆ ನೀರೆಲ್ಲಾ ಮುಖ, ಬಟ್ಟೆ ಮೇಲೆ ಬಿದ್ದವು. ಒಳಗೆ ಇದ್ದವರು ಹೊರಗೆ ಬರಲೆಂದು ಕಾಯುತ್ತಿದ್ದ ನಾಲ್ಕಾರು ಗಿರಾಕಿಗಳು ಹೋಟೆಲ್ ಮುಂದೆ ನಿಂತಿದ್ದನ್ನು ಗಮನಿಸಿದ ಮಲ್ಲಯ್ಯ ಗಲ್ಲಾಪೆಟ್ಟಿಗೆ ಮೇಲಿದ್ದ ಬೆಲ್ ಒತ್ತಿಹಿಡಿದು ಬಾರಿಸಿದ. ಒಳಗಿದ್ದವರಿಗೆ ಎಷ್ಟರಮಟ್ಟಿಗೆ ಅರ್ಥ ಆಯ್ತೊ? ಅಡಸಲ ಬಡಸಲ ಒಳಗೆ ಹೋದ ಮಲ್ಲಯ್ಯ, ಹಾಲಪ್ಪನ ಕೆಳಗೆ ನೀರು ಚೆಲ್ಲಿದ್ದನ್ನು ಕಂಡು, 'ಹೇ ಮಾರಾಯ ಕುಡಿಯಾಕ ನೀರು ತರ್ಬಕು ಅಂದ್ರ ನಮ್ ಕುಂಡ್ಯಾಗ ರಕ್ತ ಸುರಿತೈತಿ. ನಿಮ್ಮಂತೋರು ನೋಡಿದ್ರ ಕುಡಿಯೊ ನೀರು ತಗಂಡು ಮಾರಿ ತೊಕಂಡ್ರ, ಮುಕುಳಿ ತೊಕಂಡ್ರ ಅಂತ ಮಾಡಾಕ ಹತ್ತೀರಿ' ಹೊರಗೆ ನಿಂತ ಗಿರಾಕಿಗಳು ತನ್ನ ಎದೆಯ ಮೇಲೆ ನಿಂತಿದ್ದಾರೆಂದೇ ಭಾವಿಸಿಕೊಂಡ ಮಲ್ಲಯ್ಯ ಪರೋಕ್ಷವಾಗಿ ಹಾಲಪ್ಪ ಮತ್ತಿತರರಿಗೆ ಹೊರಹೋಗುವಂತೆ ಹೇಳಿದ. 'ಐಯ್ನೋರ ಕುಂಡ್ಯಾಗ ಮೂರು ಕೋತಿ ಅಂಬದು ಸುಳ್ಳಲ್ಲ ನೋಡು. ಬಾಯಿ ಬಗಿಹಿಡಿದು ಮಾತಾಡಬಕಪ ಅಯ್ನೋರ. ನಾವೇನು ಇಲ್ಲಿಗೆ ಪುಗಸಟ್ಟೆ ತಿನ್ನಾಕ ಬಂದಿಲ್ಲ... ಸೊಲ್ಪ ಮಂದೀನ ನೋಡಿ ಮಾತಾಡಬಕು... ಇನ್ನ ಮೂರ್ನಾಲ್ಕು ತಿಂಗಳು ತಡಕ್ಕ, ಆ ಪ್ರಾಜೆಕ್ಟ್ ಚಾಲೂ ಆಯ್ತು ಅಂದ್ರ ಸಾಕು. ಬೆಂಗಳೂರು, ಉಡುಪಿ ಕಡೆಲಿಂದನ ಹೋಟೆಲ್ ಮಾಡೋರು ಬರ್ತಾರಂತ. ಆವಾಗ ಗೊತ್ತಾಗುತ್ತ ನಿನಗ. ಬಾಗ್ಲು ಹಾಕ್ಕೊಂಡು ನೊಣ ಹೊಡಕಂತ ಕುಂತಾಗ ಅರುವು ಬರುತ್ತ...' ಒಂದು ಮಾತು ಬಾಯಿತಪ್ಪಿ ಮಾತಾಡಿದ್ದಕ್ಕೆ ಹಾಲಪ್ಪ ಈಟುದ್ದ ಮಾತಾಡಿದ. ಮಲ್ಲಯ್ಯನೇ ದೊಡ್ಡ ಮನ್ಸು ಮಾಡಿಕೊಂಡು 'ಬೊಗಳೊ ನಾಯಿ ಕಚ್ಚಲ್ಲ...' ಅಂತ ತಿಳಿದು ಸುಮ್ಮನಾದ.

ಹಾಲಪ್ಪ ಮತ್ತಿತರ ಮೂರ್ನಾಲ್ಕು ಮಂದಿ ಹೋಟೆಲ್‌ನಿಂದ ಹೊರಬರುತ್ತಿದ್ದಂತೆ, ಹೊರಗಿದ್ದವರು ಒಳನಡೆದರು. ಮಲ್ಲಯ್ಯ ಅಂಗೈಯಷ್ಟು ಅಗಲದ ರದ್ದಿ ಕಾಗದದಲ್ಲಿ ಒಗ್ಗಣಿ ಇಟ್ಟುಕೊಂಡು ಬಂದು ಈರಮ್ಮನ ಮುಂದೆ ಹಿಡಿದ. 'ಯವ್ವಾ ತಿನ್ನಬೇ. ಒಗ್ಗಣಿ ಇನ್ನಾ ಸುಡುತಾವ. ಯಾವಾಗ ಉಂಡಿದ್ಯೊ ಏನೋ?' ಮಾತುಗಳು ಕೇಳಿದವೊ ಇಲ್ಲವೊ?



ಆಕೆ ಬೆನ್ನು ಮುಟ್ಟಿ ಮಾತಾಡಿಸಿದ. ಮಿಟಗಿ ಬಿದ್ದಂಗಾಗಿ ಎರಡ್ಮೂರು ಸಲ ತಲೆಯನ್ನು ಹಿಂದಕ್ಕೂ ಮುಂದಕ್ಕೂ ಮಾಡಿದ ಈರಮ್ಮ, 'ಎಲ್ಲಿ ಹೋದ್ನ ನಮ್ ಮುದೇತ. ನನ್ನ ಕರ್ಕಂಡು ಹೋಗಾಕ ಬಂದಿದ್ದ. ಆತನ ಜೊತಿಗೆ ನಾನು ಹೋಗಿಬುಡ್ತೀನಿ. ಇಲ್ಲಿ ಇದ್ರ ನನ್ನನ್ನ ಕೊಲ್ಲಿಬುಡ್ತಾರ ಎಲ್ಲರೂ ಕಲ್ತು ಇಲ್ಲ ಇಲ್ಲ...' ಒಂದೇಸಮನೆ ತಡವರಿಸಿದಳು. 'ಬೇ ಯವ್ವಾ ನೀನೊಬ್ಬಾಕಿ ವಿಚಿತ್ರನ. ಕುಂತಲ್ಲಿ ನಿಂತಲ್ಲಿ ಏನೇನೊ ಕನಸು ಕಂಡು ನಿನ್ನಷ್ಟಕ್ಕ ನೀನೇ ಮಾತಾಡಿಬುಡ್ತಿ...' 'ಹುಚ್ಚು ಹೆಣಮಗಳವ್ವ' ಎಂಬ ಮಾತು ತುದಿನಾಲಿಗೆ ತನಕ ಬಂದಿದ್ದನ್ನ ಮಲ್ಲಯ್ಯ ನುಂಗಿಕೊಂಡ. ಮಲ್ಲಯ್ಯ ಕೊಟ್ಟ ಒಗ್ಗಾಣಿನ ತಾನೆಂದೂ ತಿಂದಿಲ್ಲ ಅಂಬಂತೆ ಗಬಗಬ ತಿನ್ನತೊಡಗಿದಳು. ಒಮ್ಮಿಂದೊಮ್ಮೆಲೆ ಬಿಕ್ಕಾಕ ಸುರುಮಾಡಿದಳು. ಮಲ್ಲಯ್ಯ ಹೊರಗೆ ನಿಂತು, 'ಲೇ ಮದ್ದಾನಿ ಒಂದು ಗ್ಲಾಸ್ ನೀರು ತಗಂಡ್ಬಾ...' ಅಂತ ಕೂಗಿದ.

ಕತೆ

ಒಳಗೆ ಮಾತುಗಳು ಮತ್ತೆ ಮುಂದುವರೆದವು. ಹಸಿರು ಟವೆಲ್ ಹಾಕಿದ್ದ ರಂಗಪ್ಪ, 'ಈ ಭೀಮಣ್ಣ, ಹಾಲಪ್ಪನಂತೋರಿಗೆ ಆ ಮುದೇತ ಗುರಪ್ಪ ಹೆಂಗ ಬದುಕಿದ್ದ ಎಂಬದು ಗೊತ್ತಿಲ್ಲ. ಇನ್ನಾ ತಲ್ಯಾಗಿನ ಮಾಸು ಆರಿಲ್ಲ, ಆಗ್ಲೇ ದೊಡ್ಡ ದೊಡ್ಡ ಮಾತು ಆಡ್ತಾರ. ಆ ಗುರಪ್ಪ ಇದ್ರ ಊರಿಗೆ ಇಂಥಾ ಸಂಕಷ್ಟ ಬರ್ತಿರ್ಲಿಲ್ಲ, ಆತನ ಕುಡ ಹೋರಾಟ ಮಾಡಿದೋರು ನಾವು. ನಮಗ ಗೊತ್ತಿರ್ಲಾರ್ದು ಇವ್ರಿಗೆ ಗೊತ್ತಿದ್ದೀತೇನು? ಚನ್ನೂರಾಗ ಅವತ್ತು ಬಿತ್ತನೆ ಬೀಜ, ಗೊಬ್ಬರಕ್ಕಾಗಿ ಚಳವಳಿ ನಡೆಸಿದ ಹೋರಾಟಗಾರರ ಮೇಲೆ ಪೊಲೀಸರು ಗುಂಡು ಹಾರಿಸಿದ್ರು. ಮಹಾತ್ಮಗಾಂಧಿ ಸರ್ಕಲ್ ಸಮೀಪ ನಿಂತು ಘೋಷಣೆ ಕೂಗುತ್ತಿದ್ದ ಗುರಪ್ಪನ ಎದಿಗೆ ಗುಂಡು ತಗುಲಿ ಅಲ್ಲೆ ಕುಸಿದುಬಿದ್ದ. ಅಂಥಾ ಹುತಾತ್ಮನ ಹೆಸರನ್ನ ಬಾಯಿಂದ ಅನ್ನಾಕೂ ಇವ್ರು ನಾಲಾಯಕ್ಕು... ಊರಿಗೆ ಕಾಲುವೆ ನೀರು ತರಿಸಬೇಕಂತ ಆತ ಹೋರಾಟ ಮಾಡಿದ್ದು ಪೆಸಿಸಿಗೆಂಡ್ರ ನಾವು ಇಷ್ಟು ಗಟ್ಟಿಮುಟ್ಟದ್ರೂ ಆತನ ಮುಂದ ಏನಲ್ಲ... ಈಗ ನೋಡಿದ್ರ ರಾಜ್ಯ ಸರ್ಕಾರನ ಬರಲಿರೊ ಪ್ರಾಜೆಕ್ಟಿಗೆ ಅನುಕೂಲ ಆಗ್ಲಿ ಅಂತ ಗುಡ್ಡನೇ ಕೊರೆದು ತುಂಗಭದ್ರಾ ನೀರು ಕೊಡಾಕ ಮುಂದ ಆಗ್ಯೆತಿ. ಬಂಡವಾಳ ಹೂಡಿಕೆದಾರರ ಸಮಾವೇಶ ಮಾಡಿ, ಇಡೀ ರಾಜ್ಯದ ಸಂಪತ್ತನ್ನು ಲೂಟಿಕೋರರಿಗೆ ಕೊಡೊ ದಂಧೆ ನಡೆಸೈತಿ ಸರ್ಕಾರ. ರೈತರು ಬಿತ್ತಿ ಬೆಳೆಯಾಕ ನೀರು ಕೊಡಾಕ ಹಿಂದಮುಂದ ನೋಡಿದ ಮುಖ್ಯಮಂತ್ರಿಗಳು ಈಗ ಸ್ಟೀಲ್ ಪ್ರಾಜೆಕ್ಟ್‌ಗೆ ಉದ್ರಿ ನೀರು, ಕರೆಂಟ್ ಕೊಡ್ತಾರಂತ... ಅಷ್ಟು ಸಾಲದೆಂಬಂತೆ ಇಡೀ ಊರಿನ ಒಂಬೈನೂರು ಎಕರೆ ಜಮೀನನ್ನ ಪುಡಿಗಾಸಿಗೆ ಮಾರೈತಿ. ಇನ್ನಾ ಊರು ಸಮೇತ ಬುಟ್ಟು ಹೋಗ್ಬೇಕಂತ. ಬ್ಯಾರೆಕಡೆ ಮನೆ ಕಟ್ಟಿಸಿಕೊಡ್ತಾರಂತ. ಊರಿನ ಹುಡುಗರಿಗೆ ಫ್ಯಾಕ್ಟರಿ ಕಾಯೊ ಕೂಲಿ ಕೆಲಸ ಕೊಡ್ತಾರಂತ...' ಕೈಯಲ್ಲಿದ್ದ ಗ್ಲಾಸ್ ಎತ್ತಿ ಬಾಯಿ ತುಂಬಾ ನೀರು ಹಾಕಿಕೊಂಡು ಮುಕ್ಕಳಿಸಿ, ಹೊರಗೆ ಬಂದು ಉಗುಳಿದ.

ಈರಮ್ಮನ ಕೈಯಲ್ಲಿದ್ದ ರದ್ದಿಕಾಗದದಲ್ಲಿ ಇನ್ನೂ ಎರಡ್ಮೂರು ತುತ್ತುಗಳಿದ್ದವು. ಗ್ರಾಮ ಪಂಚಾಯಿತಿ ಸೆಕ್ರೆಟರಿ ಶಿವಪ್ಪ, ಪ್ಯೂನ್ ದುರುಗ ಓಡೋಡಿ ಬಂದವರೆ, 'ಹೇ ಮುದೇಕಿ, ಪಂಚಾಯ್ತಾಗ ಎಮ್ಮೆಲ್ಲೆ ಸಾಹೇಬ್ರು, ಡಿಸಿ, ಎಸಿ, ತಹಸೀಲ್ದಾರರು, ಶಂಕ್ರಪ್ಪ ಸಾಹುಕಾರ ಬಂದು ನಿನ್ನ ಸಲುವಾಗಿ ಕಾಯಾಕ ಹತ್ಯಾರ... ಜಲ್ದಿ ಬರ ಬೇಕಂತ...' ಅಂತ ಕರೆದಾಗ, ಈರಮ್ಮನ ಮೈಯೆಂಬ ಮೈಯಿಗೆ ಯಾರೋ ಪೆಟ್ರೋಲ್ ಉಗ್ಗಿ ಬೆಂಕಿಹಚ್ಚಿದಂತೆ ಅನ್ನಿಸಿತು. ಕೈಯಲ್ಲಿದ್ದ ರದ್ದಿಕಾಗದವನ್ನು ಆಕಾಶಕ್ಕೆ ತೂರಿ, ಚಿಟಾರನೆ ಚೀರಿದಳು. ಕೈಯಲ್ಲಿದ್ದ ಮಸಿಬಟ್ಟೆಯನ್ನು ತಲೆಯ ಮೇಲೆ ಎತ್ತಿಹಿಡಿದು ಬೀಸುತ್ತಾ, 'ನಡೀರಲೊ, ಯಾವುನ್ಯಾವನು ಬಂದಾನ ನೋಡ್ತೀನಿ. ಇವ್ರಷ್ಟ ಅಲ್ಲ, ಮ್ಯಾಲಿನ ಯಮಧರ್ಮ ಬಂದ್ರೂ ನಾನೇನು ಸಹಿಮಾಡಾಕಿ ಅಲ್ಲ, ಬರ್ತೀನಿ ನಡ್ರೀ... ಅವತ್ತು ನನ್ನ ಗಂಡನ್ನ ಗುಂಡುಹಾಕಿ ಸಾಯಿಸಿದ ಸಿಟ್ಟು ಉರಿಯಾಕ ಹತ್ತೈತಿ. ನಡ್ರೀ... ಇದೇ ಬಂದೂಕಿನಿಂದ ಒಬ್ಬೊಬ್ಬರನ್ನ ಸುಟ್ಟು ಸಾಯಿಸಿಬುಡ್ತೀನಿ. ಕೈಯಲ್ಲಿದ್ದ ಮಸಿಬಟ್ಟೆಯನ್ನೇ ಉದ್ದಕ ಬಂದೂಕಿನಂತೆ ಹಿಡಿದು ಕೂಗಾಡಿದಳು. ಬಸ್‌ಸ್ಟಾಂಡ್ ದಾಟಿ ತನ್ನ ಹೊಲದ ದಾರಿಹಿಡಿದಳು. ಹೆಜ್ಜೆಗೊಮ್ಮೆ ಕೇಕೆ ಹಾಕುತ್ತಾ, ಚೀಟಾರನೆ ಚೀರುತ್ತಾ, ಬೋರಾಡಿ ಅಳುತ್ತಾ ಓಡಿಯೇ ಓಡಿದಳು. ಸುಡುಗಾಡಿ ಯಲ್ಲಿ ಅಲ್ಲೊಂದು ಇಲ್ಲೊಂದು ಇದ್ದ ಮುಚ್ಚಿದ ಕುಣಿಗಳನ್ನು ದಾಟುತ್ತಾ ತನ್ನ ಹೊಲದಲ್ಲಿ ಕಾಲಿಡುತ್ತಿದ್ದಂತೆ, ನಡುಮಟ ಬೆಳೆದ ಹಿರೇಜಾಲಿ ಗಿಡಗಳ ಮುಳ್ಳುಗಳನ್ನು ಲೆಕ್ಕಿಸದೆ ಅತ್ತಿತ್ತ ಓಡಾಡಿದಳು. ಮುಳ್ಳುಗಳಿಗೆ ಸಿಗೆಬಿದ್ದ ಸೀರೆ ಎಲ್ಲೆಂದರಲ್ಲಿ ಹರಿಯಿತು. ಮುಳ್ಳುಕಂಟಿಗಳಲ್ಲಿ ಇಚ್ಛೆ ಬಂದಂತೆ ಓಡಾಡಿದ ಈರಮ್ಮ ಚೀಟಾರನೆ ಚೀರಿ ಹೊಲದ ನಡುವೆ ನಿಂತು, 'ಬರ್ರೆಲೊ ಈ ಹೊಲದ ಮ್ಯಾಲ ಅಷ್ಟ ಅಲ್ಲ, ನಾನು ಉಟ್ಟ ಹರಿದ ಸೀರಿ ಮ್ಯಾಲ, ರಕ್ತ ಸುರಿಯೋ ಈ ಮೈಮ್ಯಾಲ, ಅದೂ ಬ್ಯಾಡಂದ್ರ ನಿಮಗ ಇನ್ನೂ ಬೇಕಂದ್ರ ಈ ಮಸಿಬಟ್ಟೆ ಮ್ಯಾಲ ಸಮೇತ ಅದೇನು ಹೂಡ್ತೀರಿ... ಹೂಡು ಬರ್ರಿ... ಇದರ ಮ್ಯಾಲ ನಿಮ್ಮ ರೊಕ್ಕ ಹೂಡ್ರಿ.... ಕೋಟಿಗಟ್ಟಲೆ ಗಳಿಸ್ಬೋದು... ನೀವು ಸುಖವಾಗಿದ್ರ ಸಾಕು... ನಮ್ಮಂತೋರು ಹೆಂಗಾದ್ರೂ ಸಾಯ್ಲಿ...' ಒಮ್ಮಿಂದೊಮ್ಮೆಲೆ ಕೊಕ್ಕಾಸಿ ನಗಲು ಶುರು ಮಾಡಿದಳು. ಮತ್ತೆ ಅತ್ತಿತ್ತ ಓಡಾಡಿ ಬದುವಿಗೆ ಬಂದು ದೊಪ್ಪನೆ ಬಿದ್ದಳು.

'ಹೆಂಗಾದ್ರೂ ಇವತ್ತು ಡಾಕ್ಟರನ್ನ ಕರ್ಕಂಡು ಬಂದೀವಿ. ಮೊದ್ಲ ಆಕಿ ಹುಚ್ಚಿ, ಆಕಿಗೆ ಮೂರ್ಛೆ ಬರುವ ಇಂಜೆಕ್ಷನ್ ಮಾಡಿ, ಆಕೆ ಹೆಬ್ಬೆಟ್ಟು ಒತ್ತಿಸಿಕೊಂಡ್ರ ಆಯ್ತು. ಮುಂದಿದ್ದು ನಾವು ನೋಡಿಕೊಳ್ಳೋಣ...' ಎಮ್ಮೆಲ್ಲೆ ಮಲ್ಲನಗೌಡ ಡಿಸಿ ಸಾಹೇಬರಿಗೆ ವಿವರಿಸುತ್ತಿದ್ದ. ಅವರೆಲ್ಲರೂ ಈರಮ್ಮನ ಹೊಲದತ್ತ ನಡೆದರು. ಮತ್ತೆ ಮೊಬೈಲನ್ನು ಕಿವಿಗೆ ಇಟ್ಟುಕೊಂಡು 'ಚಿನಂದಿ. ನಡೇ ಸಹಿ ತಿಸ್ಕೊಂಟಾನಂದಿ. ಡಾಕ್ಟ್ರು ವಚ್ಚಾರಂದಿ. ಅಣ್ಣಗಾರು ನುವ್ವು ಏಮಿ ಟೆನ್ಷನ್ ತಿಸ್ಕು ಒದ್ದಂಡಿ...' 'ಇವತ್ತು ಎಲ್ಲಾ ಮುಗಿಸಿಕೊಂಡು ಬರ್ಬೇಕಂತ ಹೇಳ್ಯಾರ ಪ್ರಾಜೆಕ್ಟ್ ಮಾಲೀಕರೂ ಆದ ಮಿನಿಸ್ಟ್ರು ಹನುಮಂತರೆಡ್ಡಿ. ಜಲ್ದಿ ನಡೀರಿ...' ಅವಸರದಲ್ಲಿ ಈರಮ್ಮನ ಹೊಲದತ್ತ ನಡೆಯತೊಡಗಿದರು. ಮೈಮೇಲೆ ರಕ್ತ ಸುರಿಯುತ್ತಿದ್ದು ದನ್ನೂ ಲೆಕ್ಕಿಸದ ಈರಮ್ಮ ಭೂಮಿಯನ್ನೇ ಅಪ್ಪಿಕೊಂಡು ತಣ್ಣಗೆ ಮಲಗಿದ್ದಳು...


(ಮುಗಿಯಿತು)

ಪುಸ್ತಕ ಪರಿಚಯ

ಕೊಡಗಿನ ಶತಮಾನದ ಕಾವ್ಯ

ಕನ್ನಡ ಕಾವ್ಯ ಪರಂಪರೆಯಲ್ಲಿ ಸಾಹಿತ್ಯದ ಯಾವ ವಿಮರ್ಶಾ ಕ್ರಮಕ್ಕೂ ಒಳಪಡದೆ, ಯಾರ ಗಮನಕ್ಕೂ ಬರದೆ ಎಲೆಮರೆ ಕಾಯಿಯಂತಿರುವುದು ಕೊಡಗಿನ ಕಾವ್ಯ. ಡಾ. ಕವಿತಾ ರೈ ಮತ್ತು ಡಾ. ಆನಂದ ಕೋಡಿಂಬಳ ಅವರ ಶ್ರದ್ಧೆ ಮತ್ತು ಶ್ರಮದಿಂದಾಗಿ ಕೊಡಗಿನ 108 ಕವಿಗಳ 242 ಪದ್ಯಗಳ ಪ್ರಾತಿನಿಧಿಕ ಕಾವ್ಯ ಸಂಪುಟ 'ಕೊಡಗಿನ ಶತಮಾನದ ಕಾವ್ಯ' ಹೊರಬಂದಿದೆ.


ಹಿಂದೊಮ್ಮೆ ಲಂಕೇಶರು 'ಅಕ್ಷರ ಹೊಸ ಕಾವ್ಯ' ಸಂಪಾದಿಸಿ ಪ್ರಕಟಿಸಿದಾಗ, ಅದರಲ್ಲಿ ಹೈದರಾಬಾದ್ ಕರ್ನಾಟಕದ ಕವಿಗಳನ್ನು ನಿರ್ಲಕ್ಷಿಸಲಾಗಿದೆಯೆಂದು ಕವಿ ಶಾಂತರಸ ಆ ಭಾಗದ ಕವಿಗಳನ್ನು ಪ್ರತಿನಿಧಿಸುವ 'ಬೆನ್ನ ಹಿಂದಿನ ಬೆಳಕು' ಎಂಬ ಕಾವ್ಯ ಸಂಕಲನವನ್ನು ಪ್ರಕಟಿಸಿದ್ದರು. 'ಕೊಡಗಿನ ಶತಮಾನದ ಕಾವ್ಯ' ಕೂಡ ಇಂಥದ್ದೇ ಪ್ರಯತ್ನ. ಒಂದರ್ಥದಲ್ಲಿ ಅಸ್ಮಿತೆಯ ಹುಡುಕಾಟದ ಫಲ. ಇನ್ನೂ ಈ ಕೃತಿಯ ಸಂಪಾದಕರು ಹೇಳಿರುವಂತೆ ಕೊಡಗಿನ ಕವಿಗಳು ಅಭಿವ್ಯಕ್ತಗೊಳಿಸಿರುವ ಸಾಮಾಜಿಕ ಸಂವೇದನೆಗಳನ್ನು ಉದಾರವಾದಿ ಸಂವೇದನೆ, ಸ್ಥಿತ್ಯಂತರ ಸಂವೇದನೆ ಮತ್ತು ಅನ್ಯ ಸಂವೇದನೆಗಳೆಂದು ಪರಿಕಲ್ಪಿಸಿಕೊಂಡು ಅಧ್ಯಯನ ನಡೆಸಲು ಸಾಧ್ಯವಿದೆ. ಆದರೂ ಇಲ್ಲಿನ ಈ ತಲೆಮಾರಿನ ಬಹುಪಾಲು ಕವಿಗಳ ರಾಷ್ಟ್ರೀಯತೆ ಮತ್ತು ನಾಡಪ್ರೇಮದ ಪರಿಕಲ್ಪನೆಯು ಮೇಲ್ಪದರದ ತೆಳುರಚನೆಯ ಮಾದರಿಯಲ್ಲೇ ಕಾವ್ಯವಾಗಲು ಹಟ ತೊಟ್ಟು ನಿಂತಂತಿದೆ.



ಸಂಪಾದಕರು
ಡಾ. ಕವಿತಾ ರೈ
ಡಾ. ಆನಂದ ಕೋಡಿಂಬಳ
ಪ್ರಕಾಶಕರು
ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ
ಹೊಸೂರು ರಸ್ತೆ
ಬೆಂಗಳೂರು -560 029
ಪುಟ: 470, ಬೆಲೆ: 260,
ಪ್ರಕಟಣೆ: 2011

ಪರಿಧಿ


ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಸಾಹಿತ್ಯದ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗಲೇ 'ಸಂವಾದ' ಎಂಬ ವಿಮರ್ಶಾ ಕೃತಿಯ ಮೂಲಕ ವಿಮರ್ಶಾ ಮಾರ್ಗ ಪ್ರವೇಶಿಸಿದ ಪ್ರದೀಪ್ ಮಾಲ್ಗುಡಿಯವರ ಎರಡನೇ ಕೃತಿ 'ಪರಿಧಿ'. ಈ ಹೊಸ ತಲೆಮಾರಿನ ಯುವ ಲೇಖಕರು ಸಾಹಿತ್ಯದ ಕತೆ, ಕಾವ್ಯದ ಪ್ರಕಾರಗಳಿಗೆ ತೆತ್ತುಕೊಂಡಂತೆ ವಿಮರ್ಶೆಗೆ ನಿಂತದ್ದು ತೀರಾ ಕಮ್ಮಿಯೇ. ಆ ಕೊರತೆ ನೀಗಿಸುವ ಪ್ರಾಮಾಣಿಕ ಪ್ರಯತ್ನವನ್ನು ಪ್ರದೀಪರ ವಿಮರ್ಶಾ ಕೃತಿ 'ಪರಿಧಿ' ಮಾಡಿದೆ. ಇಂದು ಸಂಸ್ಕೃತಿ ಚರ್ಚೆಯಲ್ಲಿ ಅಸ್ಪೃಶ್ಯತೆ, ಜಾತೀಯತೆ, ತಾರತಮ್ಯ ಮೊದಲಾದವುಗಳನ್ನು ಬಿಟ್ಟು 'ಉದಾತ್ತೀಕರಿಸುವ' ನೆಲೆಯನ್ನು ಪ್ರಶ್ನಿಸಬೇಕಿದೆ. ಸಂಸ್ಕೃತಿಯೊಳಗೆ, ಅದರ ಹೆಸರಿನಲ್ಲಿ ಆಚರಿಸಲ್ಪಡುತ್ತಿರುವ ಈ ಬಗೆಯ ವೈರುಧ್ಯಗಳತ್ತ ಉದಾತ್ತೀಕರಿಸುವವರು ದಿವ್ಯ ನಿರ್ಲಕ್ಷ್ಯವನ್ನು ತೋರುತ್ತಾರೆ ಎಂದು ಹೇಳುವ ಪ್ರದೀಪ್ ಈ ಕೃತಿಯಲ್ಲಿ ಶೂದ್ರತಪಸ್ವಿ, ಚಿದಂಬರ ರಹಸ್ಯ, ದಾರಾಶಿಖೋ, ಜೋಕುಮಾರಸ್ವಾಮಿ, ರಾಜಪ್ಪ ದಳವಾಯಿಯವರ ಡಜನ್ ನಾಟಕಗಳ ವಿಮರ್ಶೆಯ ಜೊತೆಗೆ ಭಾರತದ ಮಹಿಳಾ ಚಳವಳಿಗಳ ಸ್ವರೂಪ, ಪಾಹಕುಶಾಹಿ ಕಾಲದ ಸಂಶೋಧನೆ, ಪರಂಪರೆಯೊಡನೆ ಕುವೆಂಪು ಮುಖಾಮುಖಿ, ಭಾಷೆ ಮತ್ತು ಪ್ರಭುತ್ವದ ರಾಜಕಾರಣ, ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂಬಂಧ ಇವೇ ಮೊದಲಾದ ಸಾಹಿತ್ಯಿಕ ನೆಲೆಗಳನ್ನು ಸಾಮಾಜಿಕ ಒಳಗಣ್ಣಿನ ಮೌಲ್ಯಗಳಿಂದ ವಿಭಿನ್ನವಾಗಿ ಗ್ರಹಿಸಲು ಯತ್ನಿಸಿದ್ದಾರೆ.



ಲೇಖಕರು
ಪ್ರದೀಪ್ ಮಾಲ್ಗುಡಿ
ಪ್ರಕಾಶಕರು
ಮಂದಣ್ಣ ಪ್ರಕಾಶನ
ನಂ. 1, 7ನೇ ಮುಖ್ಯರಸ್ತೆ, ಸಾರಕ್ಕಿ ರಸ್ತೆ
ಜೆ.ಪಿ.ನಗರ ಮೊದಲ ಹಂತ,
ಬೆಂಗಳೂರು -560 078
ಪುಟ:87, ಬೆಲೆ:45, ಪ್ರಕಟಣೆ: 2010

ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನುಭಂಗ ಚಳವಳಿ

1930ರ ದಶಕದ ಭಾರತದ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಉತ್ತರ ಕನ್ನಡ, ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗ[ಳ] ಸಾಮಾನ್ಯ ಕನ್ನಡಿಗರು ಭಾಗವಹಿಸಿದ ಸವಿನಯ ಕಾನೂನುಭಂಗ ಹೋರಾಟದ ಚಾರಿತ್ರಿಕ ವಿವರಗಳನ್ನು ಸಮರ್ಥವಾಗಿ ದಾಖಲಿಸಿರುವ ಕೃತಿಯಿದು. ಈ ಹೋರಾಟದ ಪೂರ್ವಸಿದ್ಧತೆ, ಗಾಂಧಿ ಜತೆಗೂಡಿದ ಉಪ್ಪಿನ ಸತ್ಯಾಗ್ರಹ, ಚಳವಳಿಯ ಭಾಗವಾಗಿದ್ದ ಕಾನನ ಸತ್ಯಾಗ್ರಹ, ಈಚಲ ಗಿಡಗಳ ಸಂಹಾರ, ಪಿಕೆಟಿಂಗ್, ಕರನಿರಾಕರಣ ಸಮರ, ಚುನಾವಣೆ ಬಹಿಷ್ಕಾರ ಮತ್ತು ಈ ಹೋರಾಟಗಳಲ್ಲಿ ಪಾಲ್ಗೊಂಡು ಅನಾಮಧೇಯರಾಗಿ ಉಳಿದುಹೋದ ಮುಂಬಯಿ ಕರ್ನಾಟಕ ಪ್ರಾಂತ್ಯದ ಅನೇಕ ಗಟ್ಟಿಗಿತ್ತಿ ಮಹಿಳೆಯರ ಸಂಘರ್ಷದ ಚಿತ್ರಣಗಳಿವೆ. ಭಾರತದ ಸ್ವಾತಂತ್ರ್ಯ ಹೋರಾಟದ ಕುರಿತು ಕುತೂಹಲ, ಪ್ರೀತಿ ಇಟ್ಟುಕೊಂಡಿರುವ ಸಾಮಾನ್ಯ ಓದುಗರೂ ಮತ್ತ ಇತಿಹಾಸದ ವಿದ್ಯಾರ್ಥಿಗಳೂ ಓದಲೇಬೇಕಾದ ಕೃತಿಯಿದು.




ಲೇಖಕರು
ಡಾ. ಜೆ.ಎ.ಬಿರಾದಾರ
ಪ್ರಕಾಶಕರು
ಅಭಿರುಚಿ ಪ್ರಕಾಶನ
ನಂ.386, 14ನೇ ಮುಖ್ಯರಸ್ತೆ,
3ನೇ ಅಡ್ಡರಸ್ತೆ
ಸರಸ್ವತೀಪುರ, ಮೈಸೂರು -09.
ಪುಟ:360, ಬೆಲೆ:260,
ಪ್ರಕಟಣೆ: 2010

-ಕೆ.ಎಲ್.ಚಂದ್ರಶೇಖರ್ ಐಜೂರ್

ಡಾ. ಬೂಕನಕೆರೆ ಯಡ್ಡಿ ಊರಿಗೇ ದೊಡ್ಡವನಾದ ಕತೆ

ಪತ್ರಕರ್ತೆ ನಾಗಲಕ್ಷ್ಮಿಬಾಯಿ 'ಊರಿಗೇ ದೊಡ್ಡವರು' ಎನ್ನುವ ಪುಸ್ತಕ ಪ್ರಕಟಿಸಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪನ ಲೀಲೆಗಳ ಕುರಿತಾದ ಈ ಪುಸ್ತಕ ಓದಲು ಕೈಗೆತ್ತಿಕೊಂಡರೆ ಕೆಳಗಿಡಲು ಮನಸ್ಸಾಗುವುದಿಲ್ಲ. ಅಷ್ಟು whittyಯಾಗಿ ಹರಿತ ಮಾತು ಮತ್ತು ವ್ಯಂಗ್ಯ ಗೇಲಿಯೊಂದಿಗೆ ಕೂಡಿದೆ.



ಯಡ್ಡಿಯ ಡಾಕ್ಟರೇಟ್ ಬಗ್ಗೆ ನಾಗಲಕ್ಷ್ಮಿ ಹೇಗೆ ಬರೆಯುತ್ತಾರೆ ನೋಡಿ.

"....ಇನ್ನೊಂದು ವಿಚಾರ, ಈ ಡಿಗ್ರಿ ಪಡೆಯುವಾಗ ಸಾಕಷ್ಟು ದುಡ್ಡು ನೀಡಲಾಯಿತು ಎಂದು ಇದೇ ಜನ ಸುದ್ದಿ ಹಬ್ಬಿಸುತ್ತಾರೆ. ಹಾಗೆ ನೋಡಿದರೆ ಇವತ್ತು ಯಾವ ಡಿಗ್ರಿ ತಾನೆ ಸುಮ್ಮನೆ ಕೊಡುತ್ತಾರೆ. ಇಂಜಿನಿಯರ್, ಡಾಕ್ಟರ್ ಅಂತ ಆಗಬೇಕಾದರೆ ಸುಮ್ಮನೇನಾ? ಅದು ಸರಿ ಇದು ಸರಿ ಇಲ್ಲ ಅಂತ ಅದು ಹೇಗೆ ಹೇಳ್ತಾರೋ? ಈ ಜನ.

ಅಷ್ಟಕ್ಕೂ ಯಡಿಯೂರಪ್ಪ ಏನಾದರೂ ಸುಮ್ಮನೆ, ಬುದ್ಧಿ ಇಲ್ಲದೆ ಇಂಥ ಒಂದು ಡಿಗ್ರೀನ ಅಷ್ಟು ದೂರದ ಅಮೆರಿಕಾಕ್ಕೆ ಹೋಗಿ ತಗೊಂಡು ಬರ್ತಾರಾ? ಅದೇನು ಇಲ್ಲೇ ಇದೆಯಾ? ಅಮೆರಿಕಾ ಅಂದ್ರೆ! ಅದರಲ್ಲೂ ಮಿಚಿಗನ್ ರಾಜ್ಯದ ಸ್ಯಾಂಗಿನಾ ವ್ಯಾಲಿ ನ್ಯೂ ಯೂನಿವರ್ಸಿಟಿ ಅನ್ನೋ ಹೆಸರಾದರೂ ಕೇಳಿದ್ದರಾ ಇಲ್ಲಿ ಜನ. ನೋಡಿ ಅದನ್ನ ಪತ್ತೆ ಮಾಡಿ ಹುಡುಕಿ ಡಿಗ್ರಿ ತಗೊಂಡು ಬಂದರಲ್ಲ, ಅದೇನೂ ಸಾಮಾನ್ಯ ಕೆಲಸಾನಾ?

ಅಷ್ಟಕ್ಕೂ ಅವರಿಗೆ ಇಂಥ ಡಿಗ್ರಿ-ಪಗ್ರಿ ಎಲ್ಲ ಹಿಡಿಸೋದಿಲ್ಲ. ಎಷ್ಟೆಂದರೂ ರೈತರ ಪರ ಹೋರಾಡ್ತಾ ಬಂದಿರೋರು. ಸಿಂಪಲ್ ಆಗಿ ಇರಬೇಕು ಅನ್ನೋದು ಅವರ ಗುರಿ. ಆದರೆ ಒಂದು ರಾಜ್ಯದ ಬಹು ದೊಡ್ಡ ಹುದ್ದೇಲಿರೋವಾಗ, ಆ ರಾಜ್ಯದ ಮರ್ಯಾದೇನೂ ಮುಖ್ಯ ನೋಡಿ. ಪಕ್ಕದ ತಮಿಳುನಾಡಲ್ಲಿ. ಇರೋಬರೋ ಮುಖ್ಯಮಂತ್ರಿಗಳೆಲ್ಲ ಡಾಕ್ಟರೇಟು. ಮಾಜಿ ಆಗಿರೋ ಜಯಲಲಿತಾಗೆ ಒಂದಲ್ಲ ಅಂತ ಎರಡು ಡಾಕ್ಟರೇಟು. ಇನ್ನು ಈ ಕಡೆ ಆಂಧ್ರದಲ್ಲಿ ರಾಜಶೇಖರ ರೆಡ್ಡಿ ಅಂತ ಇದ್ರಲ್ಲ, ಅವರೂ ಡಾಕ್ಟರು. ಹಾಗಿರೋವಾಗ ಕರ್ನಾಟಕದ ಮುಖ್ಯಮಂತ್ರಿ ಆಗಿ ಒಂದು ಡಾಕ್ಟರೇಟು ಇಲ್ಲ ಅಂದರೆ ರಾಜ್ಯಕ್ಕೇ ಅವಮಾನ ಅಲ್ಲವಾ? ಅಕ್ಕಪಕ್ಕದ ರಾಜ್ಯದೋರೆಲ್ಲ ಲೋಕಲ್ ಡಾಕ್ಟರೇಟು ತಗೊಂಡಿರಬಹುದು, ಇವರು ಅವರಿಗಿಂತ ಒಂದು ಕೈ ಮೇಲು. ಯಾಕೆ ಗೊತ್ತಾ? ಇವರು ತಗೊಂಡಿರೋದು ಫಾರಿನ್ ಡಾಕ್ಟರೇಟು!

ಇನ್ನು ಯಡ್ಡಿಯ ಸಖಿಯ ಬಗ್ಗೆ ನಾಗಲಕ್ಷ್ಮಿ ಬಾಯಿ ಬರೆದಿರುವುದು ಹೀಗಿದೆ:

ಈ ಪ್ರಭಾವಿ ಮಹಿಳೆ ಎಷ್ಟು ಪ್ರಭಾವಿ ಎಂದರೆ ಆಕೆ ಲೋಕಾಯುಕ್ತರಿಗೆ ನೀಡಿರುವ ವಿವರಣೆಯಲ್ಲಿ ತನ್ನ ಯಾವುದೇ ಆಸ್ತಿಯ ವಿವರ ತಿಳಿಸಿಯೇ ಇಲ್ಲ. ಬದಲಿಗೆ ತಾನು ಆದರ್ಶ ಡೆವಲಪರ್ಸ್ ಎಂಬ ಸಂಸ್ಥೆಯಿಂದ ಮೂರೂವರೆ ಕೋಟಿ ಸಾಲ ಪಡೆದಿರುವುದಾಗಿ ಪುಂಗಿ ಊದಿದ್ದಾಳೆ. ಇನ್ನೊಂದು ಆಶ್ಚರ್ಯಕರ ಸಂಗತಿ ಎಂದರೆ ಈಕೆ ಕಪಿಲ ಮಂಜುಶ್ರೀ ಅಪರಲ್ಸ್ ಎಂಬ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕಿ ಎಂದು ಬೊಂಕಿರುವ ಈ ಮಹಾನ್ ಮಹಿಳೆ, ಸಚಿವೆ ಆದನಂತರ ಆ ಸಂಸ್ಥೆಯ ಸಲಹೆಗಾರಳಾಗಿ ದುಡ್ಡು ಪಡೆಯುತ್ತಿರುವುದಾಗಿ ಮತ್ತೊಂದು ರೀಲು ಉರುಳಿಸಿದ್ದಾಳೆ. ಈ ಮಹಾನ್ ಸಂಸ್ಥೆ ಎಲ್ಲಿದೆ ಎಂದು ಹುಡುಕಹೋದರೆ, ಅಸಲಿಗೆ ಅಲ್ಲಿ ಸಂಸ್ಥೆಯೇ ಇಲ್ಲ. ಅಲ್ಲಿ ಕಳೆದ 45 ವರ್ಷಗಳಿಂದ ವಾಸಿಸುತ್ತಾ ಬಂದಿರುವ ನಿವಾಸಿಗಳ ಮೂರ[ು] ಮನೆ ಇದೆ. ಅಲ್ಲಿ ಭೂತಗನ್ನಡಿ ಹಾಕಿ ಹುಡುಕಿದರ[ೂ] ಕಾರ್ಖಾನೆಯ ಸುಳಿವಿಲ್ಲ.

ಇನ್ನು ಆದರ್ಶ ಎಂಬ ಸಂಸ್ಥೆಯ ಪತಿಯಿಂದ ಸಾಲವಾ[ಗಿ] ಅದೂ ಬಡ್ಡಿ ಇಲ್ಲದೆ, ಬಂದಿರುವ ಮೂರೂವರೆ ಕೋ[ಟಿ] ರೂಪಾಯಿ ಹಣವನ್ನು ಈಕೆ ಕೊಡಗು ಜಿಲ್ಲೆಯ[ಲ್ಲಿ] ಬರೋಬ್ಬರಿ 166 ಎಕರೆ ಕಾಫಿ ತೋಟ ಖರೀದಿಸಲ[ು] ವಿನಿಯೋಗಿಸಿದ್ದಾಳಂತೆ.

ಇಷ್ಟು ಅಗ್ಗವಾಗಿ ಕಾಫಿ ತೋಟಗಳು ಸಿಗುವುದಾದ[ರೆ] ಇಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಏಕೆ ಮಾಡಬೇಕು[?] ನಾವೂ ಹೋಗಿ ಜುಂ ಅಂತ ಕಾಫೀ ತೋಟ ಖರೀದಿ[ಸಿ] ಹಾಯಾಗಿ ಇದ್ದುಬಿಡೋಣ ಎಂದು ಕೆಲವರು ಸು[ದ್ದಿ] ತಿಳಿದು ಧಾವಿಸಿದರೆ, ಕೊಡಗಿನಲ್ಲಿ ಕೋಟಿ ರೂಪಾಯಿ[ಗೆ] ಒಂದು ಎಕರೆ ಭೂಮಿ ಕೂಡ ಸಿಗುವುದಿಲ್ಲ, ಸುಮ್ಮ[ನೆ] ವಾಪಸು ಹೋಗಿ ಎಂದು ಕಳುಹಿಸಿದರಂತೆ.

ಈ ಯಡ್ಡಿ ಎನ್ನುವ ಅವಿವೇಕಿ ಹಾಗೂ ಮಹಾಭ್ರಷ್ಟನ ಕುರಿತು ಬರೆದೂ ಬರೆದೂ ಎಲ್ಲರಿಗೂ ಸಾಕಾಗಿರುವಾಗ ಅದೇ ಯಡ್ಡಿ ಬಗ್ಗೆ ನಾಗಲಕ್ಷ್ಮಿಬಾಯಿ ವಿಭಿನ್ನವಾದ ಶೈಲಿಯಲ್ಲಿ ಬರೆದಿದ್ದಾರೆ.

ನೀವೂ ಒಮ್ಮೆ ಓದಬಹುದಾದ ರಾಜಕೀಯ ವಿಡಂಬನೆಯಿದು.

-ಸಂಘಮಿತ್ರ

ಒಡಲ ಪದ್ಯ

(ಅಮ್ಮನ ದಿನದ ನೆನಪಿಗೆ)



ನಿನ್ನ ಚೆಲುವ ಚಿತ್ತಾರಗಳ
ಹಿಂದೆ ಅದೆಷ್ಟೋ...
ಚಿತ್ತಾರಗಳು
ಚಿತ್ರ ಬಿಡಿಸಿಕೊಂಡಿವೆ
ನಿಂತು ನೋಡುತ್ತೇನೆ ದೃಷ್ಟಿ ಕದಲದಂತೆ
ಮತ್ತೆ...... ಮತ್ತೆ...
ಕಣ್ಣ ದಡಗಳ ಮೇಲೆ
ನೀರು ಹೆಪ್ಪುಗಟ್ಟುವಂತೆ

ಮನೆ, ಚೌಕ, ನಕ್ಷತ್ರ
ರೇಖೆ-ರಂಕುಗಳಲ್ಲಿ ಅವಳ ಜಡ್ಡುಗಟ್ಟಿದ
ಕೈಗಳೆ ಕಾಣುತ್ತಿವೆ
ಗುಂಡಿಯಿಂದ ಮೇಲೆದ್ದ ಮೆತ್ತನೆ ಕಲ್ಲುಗಳನೆಲ್ಲಾ
ರಣಬಿಸಿಲಲ್ಲಿ ಕುಟ್ಟಿ ಪುಡಿ ಮಾಡಿ
ಸವೆದ ಸೀರೆಯ ಸಿಂಬೆ ಮೇಲಿಟ್ಟುಕೊಂಡು
ಕೇರಿ ಕೇರಿ ತಿರುಗಿದಳು

ಧುಮ್ಮಿಕ್ಕುವ ಬೆವರಿನ ಅವಳ ಮುಖದ
ಮೇಲೆ
ಅದೆಷ್ಟೋ ನೋವಿನ ಗೆರೆಗಳು....

ಬೆಳಗಿನಿಂದ ಬೈಗಾನದವರೆಗೂ
ಅವಳ ಬರಿಗಾಲ ಬಿರಿಸು ನಡೆಗೆ
ಜೋತು ಬಿದ್ದ ನನ್ನ ರಗಳೆ
ಮಂಡಕ್ಕಿ-ಬತ್ತಾಸು
ಬಾಯಿಗೆ ತುರುಕಿ
ಅದ್ಯಾರದೊ............ಮನೆಯ
ಜಗಲಿಯ ಮೇಲೆ ಗಟಗಟನೆ
ನೀರು ಕುಡಿದವಳ ಒಡಲ ಒಲವು
ಕುಣಿಯುತ್ತಿದೆ

ಒಂದು...ಮೂರು...ಒಂಭತ್ತು...

ಲೆಕ್ಕವಿರದ ಚುಕ್ಕಿಗಳ ಚಕ್ಕಂದದಲಿ
ಅವಳ ಬೆವರು ಬಸಿದು ಹೋಗಿದೆ
ಬೇಸಿಗೆಯ ಜೋಗದಂತೆ
ತಿರುತಿರುಗಿ ನೋಡುತಲೆ ನಡೆಯುತ್ತೇನೆ
ಅಂಗಳದಲ್ಲಿ ಅಂಗಾತ ಮೈ ಚೆಲ್ಲಿಕೊಂಡ
ಅವ್ವನ ಬೆವರಿನ ರಂಗೋಲಿಯ
ಕಣ್ಣ ದಡದಲ್ಲಿ ಹೆಪ್ಪು ಗಟ್ಟದೆ ನೀರು
ಮಳೆ ಮೋಡದಂತೆ ಒಡೆದು
ಧುಮ್ಮಿಕ್ಕುವವರೆಗೂ...

ಹಾಡು ಕಟ್ಟುತ್ತಲೇ ಇದ್ದೇನೆ
ತುತ್ತು ಉಣಿಸಿದವಳ
ಕನಸು ಕಡೆದವಳ
ಬದುಕು ಕೊಟ್ಟವಳ.....

- ಎನ್. ರವಿಕುಮಾರ್
ಶಿವಮೊಗ್ಗ

...ವಲಸೆ ಬಂದ ಜನ ಶಿವಮೊಗ್ಗವ ಹೊಲಸು ಮಾಡಿದ್ದರಂತೆ!

...ಜುಮ್ಮಿ ಗಹನವಾದ ವಿಷಯ ತೆಗೆದು ...ಮಾವನನ್ನು ಗಾಢವಾದ ಯೋಚನೆಗೆ ತಳ್ಳಿದಳು.

"ಅಲ್ಲಾ ಕಣೊ ಮಾವ, ಪಂಚಾತಿಗೆ ಕೊಟ್ಯಾಂತ್ರಪಾಯಿ ...ತಂತೆ. ಅದ ಯಂಗೆ ಕರಚು ಮಾಡಬೇಕು, ಯಂಗೆ ... ಮಾಡಬೇಕು ಅಂತ ಒಂಚೂರೂ ಗೊತ್ತಿಲ್ಲದವು

ಯ ಉ ಸೀ ಮ

...ಪ್ಪೆಪುರಾಣ

▶ಬಿ. ಚಂದ್ರೇಗೌಡ

...ತಿ ಅಧ್ಯಕ್ಷರಾಗ್ಯವುರಲ್ಲಾ ಯಂಗೇ ಅಂತ?" ಎಂದಳು.

...ಕೋಟ್ಯಂತ್ರಪಾಯಿ ಯಾಕ್ ಬಂದತ್ಲೆ?"

...ಹಳ್ಳಿ ಅಭಿರುದ್ಧಿ ಮಾಡಬೇಕು ಅಂತ ಬಂದತಂತೆ, ...ೂ ನಮ್ಮ ಅದ್ಯಕ್ಸೆಗೆ ಉಪ್ಪೆಸುರು ಮಾಡಿ, ಮುದ್ದೆ ...ು ಬುಟ್ರೆ ಇನ್ನೇನು ಬರದಿಲ್ಲ, ಅದ್ಯಂಗೆ ಮಾಡ್ತಳೊ ..."

...ಕ್ಯಕೆಟ್ರಿ ಅವುನೆ, ಮಾಡ್ತನೆ ತಗೊ."

...ಸೆಕೆಟ್ರಿ ಮಾಡದಾದ್ರೆ, ಮೆಂಬ್ರು ಅಂತ ...ಕ್ಯಾಕಿರಬೇಕು?"

...ಸರಕಾರ ಇರದೆ ಅಂಗಲವೇನೆ" ಎಂದ ಉಗ್ರಿ.

...ಅಂಗರೆ ಸರಕಾರ ಪಂಚಾತಿ ಇದ್ದಂಗದೇನ್ಲ"

...ಗೂ ಕಣೆ. ಆ ಎಡೂರಪ್ಪ, ಈಶ್ವರಪ್ಪ ಅಶೋಕ ...ಗ್ಯಲ್ಲ ಏನು ಗೊತ್ತದೆ ಅಂತ ತಿಳಕಂಡಿದ್ದೀ. ಅವುರು ... ಮಂಡ್ಯು ಪಂಚಾತಿಯವುರಲ್ಲಾ ಆ ಮೆಂಬ್ರುಗಳ ...ಇರದು. ಅವುರತ್ರನೂ ಸೆಕ್ರೆಟ್ರಿಗಳಿರತರೆ. ಯಲ್ಲಾನು ...ದು ಬಂದು ಸಯಿನು ಮಾಡಿಸಿಗಂಡೋಯ್ತರೆ." ...ಉಗ್ರಿ.

...ನೇ ಅಗ್ಲಿ, ತಿಳಿವಳಕೆ ಇರೋರು, ಕಾನೂನು ...ೋರು ಪಂಚಾತಿ ಮೆಂಬರಾಗಬೇಕು ಕಂಡ್ಯ" ಎಂದ ...ಾವ.

...ಅಂಥೋರಿಗೆ ಯಮ್ಮೆಲ್ಲೆಗಳ ಟಿಕೆಟ್ ಕೊಡದಿಲ್ಲವಲ್ಲ ... ನಮ್ಮೂರಲೇ ಪಿಯೂಸಿಗಂಟ ಓದಿರೊ ...ದಿಲವೆ. ಆದ್ರು ಯಾಕೆ ಯಬ್ಬೆಟ್ಟಿನ ಜನಕೆ ಟಿಕೆಟ್ ... ಗೊತ್ತೆ? ಅವು ಹೇಳಿದಂಗೆ ಕೇಳ್ತವೆ. ಕರೆದ ... ಬತ್ತವೆ. ತೋರಿದ ಜಾಗಕೆ ಸಯಿನು ಮಾಡ್ತವೆ. ... ನಮ್ಮ ದೇಶದ ಲೀಡ್ರುಗಳು ಬುದ್ದಿವಂತ್ರ ...ಲ್ಲ, ಅದರಲ್ಲಲ್ಲ ರಾಮಕಿಷ್ಣ ಹ್ಯಗಡೆ ಮಾತ್ರ ...ಂತ್ರ ಬ್ಯಳಿಸಿ ಮಂತ್ರಿ ಮಾಡಿಕಂಡಿದ್ದ, ಅದ್ಕೆ ಅವುನ ...ಚನ್ನಾಗಿತ್ತು."

...ದ್ಯಾವೇಗೌಡನತ್ರನೂ ಬುದ್ಧಿವಂತ್ರ ಇದ್ದರಲವೆ."

...ಅವುನತ್ರ ದತ್ತನುಬುಟ್ರೆ ಇನ್ಯಾರು ಬುದ್ದಿವಂತ್ರಿಲ್ಲ ಕಣಮಾವ. ಅವನೂ ಅಷ್ಟೆಯ, ತನ್ನ ಮಕ್ಕಳಿಗಿಂತ ಬುದ್ಧಿವಂತ್ರ ಪಾರ್ಟಿಲಿರದ ಸಯಿಸದಿಲ್ಲ, ಅವುರಿಗಿಂತ ಚನ್ನಾಗಿರದ್ನೊ ಸಯಿಸದಿಲ್ಲ. ಅದ್ಕೆ ಅಲವೆ ಅವುನು ಸುರು ಮಾಡಿರೊ ಹೋರಾಟಕೆ ಬುದ್ಧಿಜೀವಿಗಳು, ಕಲಾವಿದರು, ಮೇಧಾವಿಗಳು ಬನ್ನಿ ಅಂತ ಕರೆಕೊಟ್ಟವುನೆ."

"ಅದ್ಯಾಕ್ ಕರೆ ಕೊಟ್ಟವುನೆ?"

"ಇಡೀ ಕರ್ನಾಟಕದ ತುಂಬ ಭ್ರಷ್ಟಾಚಾರ ತುಂಬಿ ತುಳುಕ್ತ ಅದಂತೆ. ಅದರ ವಿರುದ್ಧ ಹೋರಾಡನ ಬನ್ನಿ, ನಮ್ಮ ಪಾರ್ಟಿ ಹೆಸರಲ್ಲಿ ಹೋರಾಡದು ಬ್ಯಾಡಿ, ಜಯಪ್ರಕಾಶ್ ನಾರಾಯಣ್ ಹೆಸರಲ್ಲಿ ಸುರುಮಾಡನ ಅಂತವಂಟವುನೆ.

"ಇದೊಂತರ ರೇಣುಕಾಚಾರಿ ಯಬಿಚಾರ ಮಾಡಬ್ಯಾಡಿ ಅಂತ ಹೇಳಿಕೊಂಡು ಪಾದಯಾತ್ರೆ ಶುರು ಮಾಡದಂಗಾಯ್ತು ಕಂಡ್ಯ" ಎಂದ ಸೀರ.

"ಅವುನುಧಾರಣೆ ಅಷ್ಟು ಸರಬರದಿಲ್ಲ ಕಣೊ ಸೀರಮಾವ. ಅವುನು ತನ್ನ ಅನುಭವ ಹೇಳಿಕೊಂಡು, ಯಾರು ತೊಂದ್ರಿಗೆ ಸಿಗಾಯ್ಕಬ್ಯಾಡಿ ಅಂತ ಹೇಳಿದಂಗಾಯ್ತದೆ. ಆದ್ರೆ ಇದಂಗಲ್ಲ, ಕಂಠಪೂರ್ತಿ ತಿಂದು ಕುಂತೋರು ಯಾರು ತಿನ್ನಬ್ಯಾಡಿ ವಳ್ದಿದಲ್ಲ ಅನ್ನಂಗಾಯ್ತಾ ಅದೆ."

"ದ್ಯಾವೇಗೌಡನಾಟ ಕಂಡೋರೆಯಿಲ್ಲಾ ಬುಡು."

"ಅದು ನಿಜ. ಅವುನೀಗ ಸುರು ಮಾಡಿರೊ ಆಟದ ಮರ್ಮ ತಿಳಿಬೇಕಾದ್ರೆ ಯಲಕ್ಷನ್ ಮುಗಿಬೇಕು. ಆಗ್ಲೆ ಗೊತ್ತಾಗದು."

"ಕಾಂಗ್ರೆಸ್‌ನವು ಚಳವಳಿ ಮಾಡಿ ಸರಕಾರ ವಜಾ ಮಾಡಿ ಅಂದ್ರಂತೆ."

"ಊ ಅಂಗಂದವುರೆ. ಜೆಡಿಎಸ್‌ನೋರು ಜನ ಸೇರಿಸಿ ಸಭೆ ಮಾಡ್ತರೆ, ಅವುರತ್ರ ದುಡ್ಡದೆ ಮಾಡ್ತರೆ. ಆದ್ರೆ ಈ ಕಾಂಗ್ರೆಸ್ಸಿನವು ಮಾಡಬೇಕಲ್ಲಾ, ಅವುರತ್ರ ಯಾವನು ದುಡ್ಡು ಬಿಚ್ಚೋನಿದ್ದನೂ, ಅಲ್ಯಾರು ಬಿಚ್ಚಲ್ಲ, ಅದ್ಕೆ ಬೆಂಗಳೂರಲ್ಲಿ ಯಲ್ಲ ಸೇರಿಕಂಡು ರಾಜ್ಯಪಾಲತ್ರಕೋಗಿ ಈ ಸರಕಾರ ಈಗ್ಲೆ ವಜಾ ಮಾಡಿ ಅಂತ ಅರ್ಜಿ ಕೊಟ್ಟವಂತೆ."

"ರಾಜ್ಯಪಾಲ್ಯಾಕೆ ಸುಮ್ಮನಾದನಲ್ಲಾ."

"ಅವುರು ಸುಮ್ಮನಿಲ್ಲ ದ್ವಡಪ್ಪ, ಈಗಾಗ್ಲೆ ಎಡೂರಪ್ಪನ ಪರ ನಿಂತಗಂಡು ಈಶ್ವರಪ್ಪನ್ನ ಉಗದವುರೆ ಗೊತ್ತಾ?" ಎಂದುಕೊಂಡು ವಾಟಿಸ್ಸೆ ಬಂದ.

"ನಾಕೈದ್ದಿನದಿಂದ ಕಾಣ್ತಾಯಿರಲಿಲ್ಲವಲ್ಲ, ಎಲ್ಲಿಗೋಗಿದ್ದ?" ಎಂದಳು ಜುಮ್ಮಿ.

"ಇದೇನಕ್ಕ ಹಿಂಕೇಳ್ತಿ, ಇಡೀ ಕರ್ನಾಟಕ ಇವತ್ತು ಭ್ರಷ್ಟಾಚಾರದ ವಿರುದ್ಧ ಎದ್ದು ನಿಂತದೆ. ಅದೂ ದೇವೇಗೌಡ್ರ ಒಂದೇ ಕರಿಗೆ. ಅದ್ಕೆ ನಾನು ಸೇರಿಕಂಡಿದ್ದೆ. ಶಿವಮೊಗ್ಗದಲ್ಲಿ ಸಭೆಯಿತ್ತು, ಹೋಗಿದ್ದೆ ಕಣಕ್ಕ."

"ಅಂಗರೆ ಜೆಡಿಎಸ್ ಸೇರಿಕಂಡೇನ್ಲ ನೀನು?"

"ನಾನ್ಯಾಕಕ್ಕ ಜೆಡಿಎಸ್ ಸೇರ್ಲಿ? ಅದು ಪಕ್ಷಾತೀತವಾದ ಸಭೆ. ಯಲ್ಲಾರೂ ಬನ್ನಿ ಅಂದ್ರು. ಅದರಲ್ಲು ಮುಖ್ಯವಾಗಿ ಬುದ್ಧಿಜೀವಿಗಳು, ಕಲಾವಿದರು, ಲಾಯರ್‌ಗಳು ಬಂದು ಸೇರಿಕಳಿ ಅಂದ್ರು. ಅಲ್ಲೋಗಿ ನೋಡಿದ್ರೆ ಫ್ರೀಡಂ ಫೈಟರ್ ದೊರೆಸ್ವಾಮಿ ಬುಟ್ರೆ ನಾನೆ ಪಕ್ಷಾತೀತವಾಗಿದ್ದೊನು. ಇನ್ಯಲ್ಲ ದಳದೋರೆಯ."

"ಅಂಗರೆ ಬ್ಯಾರೆ ಜನ ಬರಲಿಲ್ಲವೇನ್ಲ?" ಎಂದ ಕಾಳಮಾವ.

"ಬ್ಯಾರೆ ಜನ ಬಂದು ಸೇರಬೇಕಾಗಿತ್ತು ಅನ್ನದು ನಿನ್ನ ಅಪೇಕ್ಷೆ ದೊಡ್ಡಪ್ಪ, ಯಂಗೆ ಬತ್ತರೇಳು? ದ್ಯಾವೇಗೌಡ್ರು 1983 ನೇ ಇಸವಿಲಿದ್ರಲ್ಲ ಅಂಗಿದ್ರೆ ಬತ್ತಿದ್ರು. ಅದೂ ಬ್ಯಾಡ, ಇವತ್ತು ಗೋವಿಂದೇಗೌಡ್ರು ಅವುರೆ ನೋಡು ಅವುರ ತರ ಇದ್ದಿದ್ರೂ ಬತ್ತಿದ್ರು."

"ಗೋವಿಂದಗೌಡರಂಗೆ ಇದ್ರೆ ಇವತ್ತು ರಾಜಕಾರಣ ಮಾಡಕ್ಯಾದತೇನೊ."

"ಅದ್ಕೆ ಅಲವೇನೊ ಗೋವಿಂದೇಗೌಡ್ರು ಗೋ ಹಿಂದೆ ಗೌಡ ಅನ್ನದಕ್ಕಿಂತ ಹೋಗಿ ಮನೆ ಸೇರಿಕಂಡ್ರು ಕಣೊ ಉಗ್ರಿ. ಗೋವಿಂದೇಗೌಡ್ರು ಮನೆ ಸೇರಿಕಳದಕೂ, ಎಂ.ಪಿ. ಪ್ರಕಾಶ್ ಕಾಂಗ್ರೆಸ್ ಸೇರಿಕಂಡು ಕ್ಯಾನ್ಸರಿಗೆ ತುತ್ತಾಗಿದ್ದಕೂ ಯಾರು ಕಾರಣ ಅಂತ ಗೊತ್ತೇನೊ?"

"ಅದು ಊರಿಗ್ಯಲ್ಲ ಗೊತ್ತಿರದೆ. ಬ್ಯಾರೆ ಸುದ್ದಿ ಮಾತಾಡೊ. ಆ ಶಿವಮೊಗ್ಗಕ್ಕೆ ಹೋಗಿಬಂದಲ್ಲ ಅದ್ನಾರ ಹೇಳು."

"ಇಲ್ಲಿಂದ ನೈಟ್ ಜರ್ನಿ ಮಾಡಿರೊ ಕಣೊ ಉಗ್ರಿ, ಯಲ್ಲಾ ಜೆಡಿಎಸ್ ಕಂಟ್ರಾಕ್ಟರ್‌ಗಳೇ ಬಂದಿದ್ರು. ಉದ್ದಕೂ ಕುಡಕಂಡೇ ಹೋದೊ. ಶಿವಮೊಗ್ಗದಲ್ಲಿ ನಮ್ಮ ಕಡೆ ಜೆಡಿಎಸ್‌ನೋರೆ ಕಂಟ್ರಾಕ್ಟ್ ಮಾಡ್ತರೆ. ಅವುರು ಅಲ್ಲಿ ಭರ್ಜರಿ ಪಾರ್ಟಿ ಅರೇಂಜ್ ಮಾಡಿದ್ರು. ನಾವಂತೂ ಅದ್ಯಂತದೊ ಸರಕೀಟ್ ಹೌಸಿಂದ ಈಚೆಗೇ ಬರಲಿಲ್ಲ, ಮಾಮಾರಿ ಬಿಸಿಲು ಕಣೊ ಉಗ್ರಿ. ಶಿವಮೊಗ್ಗ ಮಲೆನಾಡು ಜನ್ಯಲ್ಲ ತಂಪಾಗವರೆ ಅಂತ ಹೋಗಿದ್ದೆ ಏನದಲ್ಲಿ? ಜನಗ್ಯಲ್ಲ ಮುಸುಕಿನ ಜ್ವಾಳ ಬ್ಯಳಿಯಕ್ಕೆ ಅಂತ ಕಾಡನ್ಯಲ್ಲ ಬೋಳಿಸಿ ಮಡಗ್ಯವುರೆ. ಅಂಗಾಗಿ ಮರಗಿಡ ನಮ್ಮ ಕಡೆಲೆ ತರವಾಗಿಲ್ಲ ಕಣೊ."

"ಅಂಗರೆ ಸಭೆ ನೋಡ್ಲಿಲ್ಲ ನೀನು?"

"ಕಂಟ್ರಾಕ್ಟರ್ ಸಫಾರಿ ವಳಗಡೆ ಕುತಗಂಡು ಯಲ್ಲಾರು ಬಾಸಣನೂ ಕೇಳಿದೆ ಕಣೊ ಉಗ್ರಿ. ಇನ್ನೊಂದು ವಿಶೇಷ ಅಂದ್ರೆ ಈ ಜೆಡಿಎಸ್‌ನೋರು ಚನ್ನಾಗ್ಯವುರೆ ಕಣೊ. ದುಡ್ಡು ಕಾಸು ಮಾಡಿಕಂಡು ವೆಯಿಕಲ್ ತಗಂಡು ಟೂರು ಮಾಡಿಕೊಂಡು ಸುಖವಾಗ್ಯವುರೆ. ಆ ಪಾರ್ಟಿಲಿ ಬಡಸ್ತನ ಅನ್ನದೆ ಇಲ್ಲ. ಅವುರು ಬುಟ್ರೆ ಬಿಜೆಪಿಗಳು ಬ್ರಹ್ಮಾಂಡನೇ ನುಂಗಿ ನೀರುಕುಡದಂಗೆ ಕಾಣ್ತರೆ."



"ಸಭೆಲಿ ಮಾತಾಡಿದೋರ ಭಾಸಣದ ಬಗ್ಗೆ ಹೇಳೊ ಅಂದ್ರೆ ಏನೇನೊ ಹೇಳ್ತಿ."


"ಜೆಡಿಎಸ್ ಭಾಷಣ ವಿವರಿಸಿ ಹೇಳಬೇಕೇನೊ. ಅದ್ರಲ್ಲೂ ನಿಮ್ಮ ಕುಮಾರಣ್ಣ ಮಾತಾಡಿದಾ ಅಂದ್ರೆ ಅದು ರಾಧಿಕಾಗೇ ಪ್ರಿಯವಾಗಬೇಕು ಅಂಗಿರತದೆ. ಇದ್ದದ್ರಲ್ಲಿ ದೊರೆಸ್ವಾಮಿಗಳು ಎಡೂರಪ್ಪನಿಗೆ ಸರಿಯಾಗಿ ಉಗುದ್ರು. ಅವುನ್ಯಾರೊ ಶ್ರೀಕಂಠ ಕೂಡಿಗೆ ಅಂತ ಭಾಷಣ ಮಾಡ್ತ ಈ ಶಿವಮೊಗ್ಗ ಜಿಲ್ಲೆಲಿ ಗೋಪಾಲಗೌಡ್ರು, ಕಡಿದಾಳು ಮಂಜಪ್ಪ ಸಮಾಜವಾದಿಗಳು ಯಲ್ರೂ ಒಳ್ಳೆ ಜನಗಳಾಗಿದ್ರು. ಒಳ್ಳೆ ರಾಜಕಾರಣ ಮಾಡಿ ಇಡೀ ಕರ್ನಾಟಕಕ್ಕೆ ಶಿವಮೊಗ್ಗ ಅಂದ್ರೇನು ಅನ್ನದ ತೋರಿಸಿಕೊಟ್ರು. ಆದ್ರೆ ಬಳ್ಳಾರಿ ಜಾಲಿಸಂದಿಯಿಂದ ಈಶ್ವರಪ್ಪ ಬಂದ. ಕೆ.ಆರ್. ಪೇಟೆ ಇರೊ ಹತ್ತು ಗುಪ್ಪೆ ಅನ್ನೊ ಕಳ್ಳ ಕೊರಮರ ಏರಿಯಾದಿಂದ ಎಡೂರಪ್ಪ ಬಂದ. ಈ ತರ ವಲಸೆ ಬಂದ ಜನ ಶಿವಮೊಗ್ಗವ ಹೊಲಸು ಮಾಡಿಬುಟ್ಟವುರೆ, ಆದ್ರಿಂದ ವಲಸೆ ಜನ ಮಾಡಿರೊ ಹೊಲಸು ತೊಳಿಯಕ್ಕೆ ಯಲ್ಲಾರು ತಯಾರಾಗಿ ಅಂದ್ರು."

"ಚನ್ನಾಗೇ ಹೇಳ್ಯವುನೆ ಬುಡತ್ತಗೆ." ●

...ಎರಡು ಪಕ್ಷಗಳು... ಮೂರನೆಯ ಮುಗ್ಧತೆ

...ಮೊನ್ನೆ ಕಮ್ಯುನಿಸ್ಟ್ ಪಾರ್ಟಿಯ ಬುದ್ಧಿಜೀವಿಗಳ ಶಾಖೆ ಒಂದು ...ರ ಸಂಕಿರಣ ಏರ್ಪಡಿಸಿತ್ತು. 'ಸಾಹಿತ್ಯದಲ್ಲಿ ಸರ್ಕಾರದ ಹಸ್ತಕ್ಷೇಪ' ... ವಿಷಯವನ್ನು ಕುರಿತ ಈ ವಿಚಾರಸಂಕಿರಣ ತುಂಬ ಚೆನ್ನಾಗಿತ್ತು. ಈ ...ಾದಲ್ಲಿ ಮಾತಾಡಿದ ಬಹುಪಾಲು ಜನ ಎಡಪಂಥೀಯ 'ಕ್ರಾಂತಿಕಾರರು', ...ದ ದಿನನಿತ್ಯದ ಬದುಕಿನಲ್ಲಿ ಸರ್ಕಾರ ಮತ್ತು ಧಾರ್ಮಿಕ ವ್ಯಕ್ತಿಗಳು ...ಾಕ ಗಬ್ಬೆಬ್ಬಿಸಿದಾಗ ಪ್ರತಿಭಟಿಸಿದವರು. ಈಗ ಕಮ್ಯುನಿಸ್ಟ್ ಸಿದ್ಧಾಂತಿಗಳ ... ಅಷ್ಟಾಗಿ ಇಲ್ಲ; ತಾವು ಸ್ಟಾಲಿನ್, ಲೆನಿನ್‌ನ ರಾಜ್ಯ ತರುತ್ತೇವೆ ಎಂದು ...ವುದು ಕ್ಲಿಕ್ಯಾಟಿಕ್, ಹಾಸ್ಯಾಸ್ಪದ ಎನ್ನುವಷ್ಟಾದರೂ ನಮ್ಮ ಕಮ್ಯುನಿಸ್ಟರಿಗೆ ...ೆ. ಅಥವಾ ಇದನ್ನೇ ನಾವು ಸ್ವಲ್ಪ ವಿವರವಾಗಿ ನೋಡಿದರೆ ಕಾಣುವಂತೆ, ...ನ ಯಾವ ಭಾರತೀಯ ಕಮ್ಯುನಿಸ್ಟನೂ ಸಾರ್ವಜನಿಕವಾಗಿ ಸ್ಟಾಲಿನ್, ...ರ ಸುಖೀರಾಜ್ಯದ ಬಗ್ಗೆ ಮಾತಾಡುವುದಿಲ್ಲ; ಖಾಸಗಿಯಾಗಿ ಕೆಲವರು ...ೋವ್ ಕಮ್ಯುನಿಸ್ಟ್ ವ್ಯವಸ್ಥೆಗೆ ಮಾಡಿದ 'ಅನ್ಯಾಯ'ವನ್ನು ವರ್ಣಿಸಿಕೊಂಡು ...ಡಿಯುತ್ತಾರೆ. ಅಮೆರಿಕಾ ಎಂಬ ರಾಕ್ಷಸನಿಗೆ ಸವಾಲೆಸೆಯುತ್ತಿದ್ದ ... ಎಲ್ಲಿ, ಅಮೆರಿಕಾ ಎದುರು ನಡುಬಗ್ಗಿ ನಿಲ್ಲುವ ಎಲ್ಸಿನ್‌ನ ರಷ್ಯಾ ... ಇದೇ ಪ್ರಶ್ನೆಯನ್ನು ಮುಸ್ಲಿಂ ಮೂಲಭೂತವಾದಿಗಳು ಕೇಳುತ್ತಾರೆ– ...ಕಾದೆದುರು ಸೆಡ್ಡು ಹೊಡೆಯುತ್ತಿದ್ದ ಕೊಮೇನಿ ಎಲ್ಲಿ, ಅಮೆರಿಕಾದ ...ನಕ್ಕಾಗಿ ಹಸ್ತ ಹೊಸೆಯುವ ಅರಾಫತ್ ಎಲ್ಲಿ? ಹೀಗೇ ಪ್ರಶ್ನೆ ಕೇಳುತ್ತ ...ರಿ ನಾವು ಅಮೆರಿಕಾ ಎಂಬ ಕೇಡಿರಾಜ್ಯದ ತಪ್ಪುಗಳನ್ನೆಲ್ಲ ಮರೆತು ...ತ್ತ ವಿಷಯಗಳಲ್ಲಿ ಮುಳುಗುತ್ತೇವೆ. ಅಥವಾ ನಾವು ಎಲ್ಲ ...ೀಶ್ವರರೂ, ಸಂಪ್ರದಾಯವಾದಿಗಳೂ, ಬಾಳ್ ಠಾಕ್ರೆ, ಅಡ್ವಾಣಿಗಳೂ ...ಶಾದ ಮೌಲ್ಯವನ್ನು ಪ್ರತಿನಿಧಿಸುವಂತೆ, ಎಲ್ಲ ನಂಬೂದರಿಪಾದ್‌ಗಳೂ ... ಬಸುಗಳೂ ಮಾನವೀಯ ಜನಪರ ಮೌಲ್ಯಗಳನ್ನು ಪ್ರತಿನಿಧಿಸುವಂತೆ ಮಾತಾಡಬೇಕಾಗುತ್ತದೆ. ಮೇಲುನೋಟಕ್ಕೆ ಇದು ತುಂಬ ಅನುಕೂಲಕರ ಸರಳೀಕರಣ; ಆದರೆ ಸತ್ಯ ಹಾಗಿರುವುದಿಲ್ಲ.

'ಯಾರೋ ಕೆಲವರು ವಿಭೂತಿಪುರುಷರು ಇಷ್ಟಪಡಲಿಲ್ಲ ಅಂತ ಪುಸ್ತಕಗಳನ್ನು ಸರ್ಕಾರ ನಿಷೇಧಿಸಕೂಡದು' ಎಂದು ಗಿರೀಶ್ ಕಾರ್ನಾಡ್ ಹೇಳಿರುವುದು ಸರಿಯಾಗಿದೆ. ಪುಸ್ತಕ ಬರೆಯುವ ಸ್ವಾತಂತ್ರ್ಯ ಓದುವ ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಜೀವಾಳ; ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಮಿಲ್ಟನ್ ಮುನ್ನೂರು ವರ್ಷದ ಹಿಂದೆಯೇ ಹೋರಾಡಿದ. ರಾಜರು ಮತ್ತು ಮಠಗಳ ದಬ್ಬಾಳಿಕೆಯ ವಿರುದ್ಧ ಪ್ರತಿಭಟಿಸಿ ಜನಸಾಮಾನ್ಯರ ಸ್ವಾತಂತ್ರ್ಯವನ್ನು ಬೆಂಬಲಿಸಿದ. ಆ ಸ್ವಾತಂತ್ರ್ಯವನ್ನು ಕಾಪಾಡುವುದು ಕಳೆದ ಮುನ್ನೂರು ವರ್ಷದ ಪ್ರಗತಿಪರ ಶಕ್ತಿಗಳ ಹೊಣೆಯಾಗಿದೆ. ಕಾರ್ಲ್ ಮಾರ್ಕ್ಸ್ ಕೂಡ ಲೆನಿನ್, ಸ್ಟಾಲಿನ್‌ನಗಳನ್ನು ಪರೋಕ್ಷವಾಗಿ ಹುಟ್ಟುಹಾಕಿದ್ದು ಮಿಲ್ಟನ್ನನ ಲಂಡನ್‌ನಲ್ಲಿ. ರಾಜರ ಗುಂಪು ಮತ್ತು ಕ್ರಾಂತಿಕಾರಕ ಗುಂಪು ಕೊಂದುಹಾಕಿದವರ ಲೆಕ್ಕ ಅಷ್ಟು ನಿಖರವಾಗಿ ಗೊತ್ತಾಗುತ್ತಿಲ್ಲವಾದರೂ ಅವರ ಘಾತಕ ಸಮಾನವೆನ್ನಬಹುದು. ಕಮ್ಯುನಿಸ್ಟರಿಂದಾಗಿ ಎಲ್ಲ ಕಂದಾಚಾರ, ಜಾತೀಯತೆ, ಅನ್ಯಾಯ ಹೊರಟುಹೋಗಬಹುದೆಂದು ತಿಳಿದವರು ನಿರಾಶೆಗೊಳ್ಳಬೇಕಾಯಿತು. ಜಗದ್ಗುರುಗಳು ಮತ್ತು ರಾಜಮಹಾರಾಜರಿಂದ ಕೂಡ ಇದೆಲ್ಲ ಆಗುವುದಿಲ್ಲವೆಂದು ಎಲ್ಲರೂ ಕಂಡುಕೊಂಡರು. ಆದ್ದರಿಂದ ಎರಡೂ ಬಣದಿಂದ ಭಿನ್ನವಾದ ಕೆಲವರು ಬಂದರು. ಅವರಲ್ಲಿ ಬುದ್ಧ ಮತ್ತು ಗಾಂಧಿ ತರಹದವರು ತುಂಬ ಅರ್ಥಪೂರ್ಣವೆಂದು ಹೇಳಲು ಆಸೆಯಾದರೂ ಇವರು ಮಹಾಮುಗ್ಧರು ಮತ್ತು ಮನುಕುಲದ ಗೊಂದಲದಿಂದಾಗಿ ಹುಟ್ಟಿದ ಸರಳರು. ಅವರು ಕೂಡ ನಮ್ಮಂಥ ಸರಳರ ವಾಕ್ ಸ್ವಾತಂತ್ರ್ಯ, ಸಮತಾವಾದ, ಜಗದ್ಗುರುಗಳು, ಫ್ಯಾಸಿಸ್ಟರು–ಇವರು ಹುಟ್ಟಿಸುವ ದುರಂತಕ್ಕೆ ಸರಿಯಾಗಿ ಉತ್ತರ ಹೇಳುವುದಿಲ್ಲ.



ಕೊಮೇನಿಯ ನಂಬಿಕೆ, ಸಲ್ಮಾನ್ ರಶ್ದಿಯ ಸಿನಿಕತನ, ಸಹಸ್ರಾರು ಮುಸ್ಲಿಮರ ಶ್ರದ್ಧೆ, ಅಷ್ಟೇ ಜನರ ಮೂಢನಂಬಿಕೆ–ಇವುಗಳೆಲ್ಲದರ ನಡುವೆ ಸರಳ ವಾಕ್ ಸ್ವಾತಂತ್ರ್ಯದ ಪ್ರಶ್ನೆಗಳಿಗೆ ಉತ್ತರ ಹೇಳಲಾರದ ಸ್ಥಿತಿಯನ್ನು ನಾವು ತಲುಪುತ್ತಿದ್ದೇವೆ. ಮಠಾಧೀಶ್ವರರು ಕೆಟ್ಟವರು, ಧಾರ್ಮಿಕ ಸಂಸ್ಥೆಗಳು ಸಣ್ಣತನದ ಕೇಂದ್ರಗಳು, ಆದರೆ ನಮ್ಮ ಕ್ರಾಂತಿಕಾರರುಗಳೆಲ್ಲ ಒಳ್ಳೆಯವರು, ಲೆನಿನ್ ಅನುಯಾಯಿಗಳು ಮಾನವೀಯರು–ಎಂದು ಹೇಳಲಾಗುತ್ತಿಲ್ಲ. ಈ ಕಡೆಯವರನ್ನು ಆ ಕಡೆ ಇಟ್ಟರೆ ವ್ಯತ್ಯಾಸವೇ ತಿಳಿಯುವುದಿಲ್ಲ. ಯಾಕೆಂದರೆ ಕಳೆದ ಐವತ್ತು ವರ್ಷದಿಂದ ಆಗುತ್ತಿರುವುದನ್ನು ನೋಡಿದರೆ, ಸಮತಾವಾದದ ಕ್ರಾಂತಿಕಾರರು ಮತ್ತು ಅವರ ಅನುಯಾಯಿಗಳೇ ಜಾತ್ಯತೀತತೆಯ ಹೆಸರಲ್ಲಿ ವಂಚಿಸಿರುವುದು, ಪ್ರಗತಿಶೀಲತೆಯ ಹೆಸರಲ್ಲಿ ಬಡವರನ್ನು ಬಡವರಾಗಿಯೇ ಇಟ್ಟಿರುವುದು ಗೊತ್ತಾಗುತ್ತದೆ. ಭಾರತದಲ್ಲಿ ಧರ್ಮದ ಕಾವಲಿಲ್ಲದೆ ಬೆಳೆದ ಸಂಸ್ಥೆಗಳು ಕಮ್ಮಿ. ಜಾತ್ಯತೀತ ಶಕ್ತಿಗಳು ಕಟ್ಟಿದ ಸಹಕಾರಿಗಳು, ಹಾಸ್ಟೆಲ್‌ಗಳು, ಆಸ್ಪತ್ರೆಗಳು, ಶಾಲೆಗಳು ಭ್ರಷ್ಟತೆಯಿಂದ ವಿನಾಶದ ಹಂತ ತಲುಪಿವೆ. ಧಾರ್ಮಿಕ ವ್ಯಕ್ತಿಗಳು ಸಾವಿರಾರು ಮಕ್ಕಳಿಗೆ ಅನ್ನ ಹಾಕಿ ವಿದ್ಯೆ ನೀಡುವುದನ್ನು ನೋಡಿದ್ದೇವೆ; ಇವರ ವಿರುದ್ಧದ ಕ್ರಾಂತಿಕಾರರು ದಲಿತರು ಮತ್ತು ಹಿಂದುಳಿದವರ ಹಾಸ್ಟೆಲುಗಳನ್ನು ಕೂಡ ನುಂಗಿ ಹಾಕಿದ್ದನ್ನು ನೋಡಿದ್ದೇವೆ. ಈ ಪ್ರಗತಿಪರರು ಹಣ ಮತ್ತು ಖ್ಯಾತಿಗಾಗಿ ಮಾಡುವ ಕೆಲಸಗಳು ವಿಚಿತ್ರವಿಚಿತ್ರವಾಗಿವೆ.

ಇಲ್ಲಿ ಯಾರ ಕಡೆ ನಾವು ಸ್ವಾಪ್ರಕಟ್ಟ ಸಮಸ್ಯೆಗಳನ್ನು ತೆಗೆದುಕೊಂಡು ಹೋಗುವುದು? ಇಲ್ಲಿ ನಮಗೆ ನಮ್ಮ ಒಳ್ಳೆಯತನ ಮತ್ತು ಕ್ರಿಯಾಶೀಲತೆಯನ್ನು ಕಾಪಾಡಿಕೊಳ್ಳುವ ಅವಕಾಶವಾದರೂ ಇದೆಯೆ?

–ಏಪ್ರಿಲ್ 26, 1995

ಇವನೇ ಆಧುನಿಕ ಬಸವಣ್ಣ!

ಥೂತ್ ಹಾಳಾದ ಜನ. ಬರೀ ಅನ್ಯಾಯದ ಮಾತೇ ಆಡ್ತಾರೆ. ಯಡ್ಯೂರಪ್ಪನೋರು ದೇವರಂತಹ ಮನುಷ್ಯ. ಅಷ್ಟಿಲ್ಲದೆ ರೇಣುಕಾಚಾರ್ಯ ಅವರನ್ನ ಆಧುನಿಕ ಬಸವಣ್ಣ ಅಂತ ಹಾಡಿ ಹೊಗಳುತ್ತಿರಲಿಲ್ಲ; 12 ನೇ ಶತಮಾನದ ಬಸವಣ್ಣನೂ ಇವರಂತೆ ಜನರ ದುಡ್ಡ ಬೊಗಸೆ ಬೊಗಸೆ ಮಠಗಳಿಗೆ ಸುರೀತಿದ್ನಾ.... ನೋಡಿ ಇದನ್ನೇ ಅನ್ಯಾಯದ ಮಾತು ಅನ್ನೋದು. ರಾಜರ ಕಾಲದಲ್ಲಿ ರಾಜಗುರು ಅಂತ ಇರಲಿಲ್ಲವಾ. ಅವರಿಗೆ ರಾಜರುಗಳೇನು ಕಡಿಮೆ ಮಾಡಿದ್ದರು ಅಂತೀನಿ. ವೈಭವದಿಂದ ಮೆರೀತಿರಲಿಲ್ಲವಾ. ಹಂಗೇ ಈಗ ಮಠಾಧೀಶರುಗಳು ಇದ್ದಾರೆ.

ಮಠದ ಘನತೆ ಎತ್ತಿ ಹಿಡಿಯಬೇಕಾದರೆ ಥಿಕಾವಾಗಿ ಕಾಣೋದು ಅನಿವಾರ್ಯ ಆಗಿರ್ತದೆ. ರಾಜಕಾರಣಿಗಳ ಸಂಪರ್ಕ ಇದ್ದರೆ ಅನುಕೂಲ. ಭಕ್ತರಿಗೆ ಸಮಯದಲ್ಲಿ ಸಹಾಯ ಮಾಡಬಹುದು ಅಂತ ಅದನ್ನೂ ಇಟ್ಟುಕೊಂಡಿರುತ್ತಾರೆ. ಯಡ್ಯೂರಪ್ಪನವರು ಮುಖ್ಯಮಂತ್ರಿ ಅಲ್ಲವಾ. ಅವರನ್ನೂ ಕರೆದು ಸನ್ಮಾನಿಸುತ್ತಾರೆ. ಹಂಗಂತ ಅವರೇನು ಖಜಾನೆ ದುಡ್ಡ ತಗೊಂಡೋಗಿ ಅವರ ಪಾದಕ್ಕೆ ಸುರೀತಿಲ್ಲ ಕಣ್ರೀ. ಏನೋ ಮಠಗಳಿಗೆ ಕರೆಸಿ ಸನ್ಮಾನಿಸಿದಾಗ ಇಷ್ಟೊಂದು ಮುತುವರ್ಜಿಯಿಂದ ಗೌರವಿಸುತ್ತಾ ಅವರಲ್ಲ ಇವರ ಮನಸ ನೋಯಿಸಬಾರದು ಅಂತಾವ ಕೇಳಿದ್ದಕ್ಕೆಲ್ಲ 'ಹೂಂ' ಅಂತಾರೆ. ಕೋಟಿ ಕೋಟಿ ಹಣ ಕೊಡ್ತೀನಿ ಅಂತಾರೆ. ಇದು ಬರೀ ಮಾತು ಕಣ್ರೀ. ವಾಗ್ದಾನ. ಅಷ್ಟೇಯ. ಹಾಳಾದ ಜನ ಹಿಂಗದ್ದನ್ನೇ ಹಿಡ್ಕಂತಾರೆ. ಮಠಗಳಿಗೆ ಬಡವರ ಹಣ ಸುರೀತಾವ್ರೆ ಅಂತ ಕೂಗಾಡ್ತಾರೆ. ಇದು ವಾಗ್ದಾನ ಅಷ್ಟೇಯ. ಇದು ವಾಗ್ದನವಾಗೇ ಉಳೀತದೆ ಅನ್ನೋದು ಅವರ ತಲೆಗೇ ಹೋಗವಲ್ದು. ಇದು ಯಾವತ್ತೂ ಕಾರ್ಯರೂಪಕ್ಕೆ ಬರಲ್ದು ಕಣ್ರಿ.

ಅನುಮಾನ ಇದ್ರೆ ಸಾವಲಗಿ ಮಠಕ್ಕೆ ಹೋಗಿ ಕೇಳಿ. ಬ್ಯಾಡಸಿಮಿ ಮಠಕ್ಕೇ ಹೋಗಿ ನೋಡಿ, ಮಠದವರು ಕೇಳದಿದ್ದರೂ ಸನ್ಮಾನ್ಯ ಯಡ್ಯೂರಪ್ಪನವರು ಸನ್ಮಾನಿಸಿಕೊಂಡ ಖುಷೀಲಿ ಕೋಟಿ ರೂಪಾಯಿ ಕೊಡ್ತೀನಿ ಅಂದಿದ್ರು. ಆದರೆ ಒಂದು ನಯಾಪೈಸೇನೂ ಕೊಟ್ಟಿಲ್ಲ ಅಂತ ಮಠದೋರು ಬಾಯಿಬಾಯಿಬಡ್ಕೊಳ್ತಾ ಬಿದ್ದವ್ರೆ. ಹಣ ಕೊಡದೆ ಇದ್ದರೆ ಮಠಾಧೀಶರು ಯಾಕೆ ಅಲುಮೋರೆ ಹಾಕಿಕೋಬೇಕು, ಅದು ಅನ್ಯಾಯದ ಹಣ ಅಲ್ವಾ ಅಂದ್ರೆ, ಅದು ಹಂಗಲ್ಲವಂತೆ. ಮುಖ್ಯಮಂತ್ರಿಗಳ ಮಾತು ಅಂದ್ರೆ ಸಾಮಾನ್ಯವಾ. ಕೊಡ್ತೀನಿ ಅಂದಮೇಲೆ ಕೊಟ್ಟೇ ಕೊಟ್ಟಿರ್ತಾರೆ. ಈ ಸ್ವಾಮಿಗೋಳು ಅದನ್ನ ಗುಳುಂ ಅನ್ನಿ ಬಂದೇ ಇಲ್ಲ ಅಂತ ನಾಟಕ ಆಡ್ತಾ ಅವ್ರೆ ಅಂತ ಮಠದ ಭಕ್ತರು ಸ್ವಾಮಿಗಳನ್ನು ಅನುಮಾನದ ದೃಷ್ಟೀಲಿ ನೋಡೋಕೆ ಶುರು ಮಾಡಿದಾರಂತೆ! ಅಷ್ಟು ಮಾತ್ರ ಅಲ್ಲ, ಕಾಣಿಕೆ ನೀಡಲೂ ಹಿಂದೆ ಮುಂದೆ ನೋಡ್ತಾ ಅವ್ರಂತೆ!

ಲಿಂಗಾಯತ ಗುರುಗಳನ್ನೇ ಭಕ್ತರು ಅನುಮಾನದಿಂದ ನೋಡುವಂತೆ ಮಾಡಿದರು ಅನ್ನೋದಕ್ಕೆ ಇದು ಒಂದು ಉದಾಹರಣೆ ಸಾಕಲ್ವ. ಹಿಂಗಿದ್ರೂ ಜನ ಯಡ್ಯೂರಪ್ಪೋರನ್ನ ಲಿಂಗಾಯತರ ಮನುಷ್ಯ, ಮಠಗಳಿಗೆ ಹಣ ಸುರಿಯೋನು ಅಂದ್ರೆ ಏನು ಹೇಳಾನ. ಇದು ಬಿಡಿ. ಸುತ್ತೂರು ಮಠದಲ್ಲಿ ನಡೀತಲ್ಲ ಅಖಿಲ ಭಾರತ ವೀರಶೈವ ಸಮ್ಮೇಳನ ಅದನ್ನೇ ತಗೊಳ್ಳಿ. ಅದಕ್ಕೆ ಮೂವತ್ತೊ, ಐವತ್ತೋ ಕೋಟಿ ಖರ್ಚಾಗದಂತೆ. ಅದನ್ನ ಯಡ್ಯೂರಪ್ಪನೋರೆ ಕೊಟ್ಟವ್ರೆ ಅಂತಾರೆ. ಕೊಟ್ರು ಅಂತಾನೆ ನಂಬಿಕೊಳ್ಳಾನಂತೆ. ಇವರು ಯಾಕೆ ಕೊಟ್ರು ಅಂದ್ರೆ ವೀರಶೈವರ ಏಕಮಾತ್ರ ನಾಯಕ ನಾನು ಅಂತ ತೋರಿಸ್ಕೊಳಾಕೆ ಅಂತಾನು ಅಂತಾರೆ. ಹಂಗನ್ನೋವ್ರ ತಲೆ ಒಳಗೆ ಲದ್ದಿ ತುಂಬೈತೆ ಅನ್ಸುತ್ತೆ. ಸ್ವಲ್ಪ ಒಳನೋಟ ಬೀರ್ರಿ ಮಾರಾಯ್ರೆ. ಅಲ್ಲ ಅಲ್ಲಿ ಏನು ನಡೀತು. ಉದ್ಘಾಟನೆಗೂ ಯಡ್ಯೂರಪ್ಪ ಮುಕ್ತಾಯಕ್ಕೂ ಯಡ್ಯೂರಪ್ಪ ಇರಲಿಲ್ಲವಾ. ಯಾವುದನ್ನ ಮುಕ್ತಾಯ ಮಾಡಿದರು ಅಂತೀರಿ. ಅದನ್ನ ಕೊಂಚ ಒಳಹೊಕ್ಕು ನೋಡಿ. ಮೂರೂ ದಿನ ಅವರನ್ನ ಹಾಡಿಹೊಗಳಿದ್ರು ಸರಿ. ನೀವು ಹೆದರಬೇಡಿ. ನಿಮ್ಮ ಕುಲಕಸುಬು ಮುಂದುವರಿಸಿ. ನಿಮ್ಮ ವಿರುದ್ಧ ದನಿ ಎತ್ತಿದರೆ ನಾವು ಲಿಂಗಾಯತರು




ಸದೆಬಡೀತೀವಿ ಅನ್ನೋ ಅರ್ಥದ ಆಶೀರ್ವಚನವನ್ನ ಮಠಾಧಿಪತಿಗಳಿಂದ ಪಡೆದರು ಅದೂ ನಿಜವೆ. ಆಮೇಲೆ ಇದಕ್ಕೆ ಪೂರಕವಾಗಿ ನಿರ್ಣಯವೂ ಆಯ್ತು ಅದೂ ಖರೆ. ಆಮೇಲೆ ಏನಾಯಿತು ನೋಡಿ ಸ್ವಾಮಿ. ಯಡ್ಯೂರಪ್ಪನೋರು ಆಧುನಿಕ ಬಸವಣ್ಣ ಅನ್ನೋದಕ್ಕೆ ಸಾಕ್ಷಿಯಾಯಿತು ಅಂದ್ರೆ ನಂಬ್ತೀರಾ. ಅದು ಹೇಗೆಂದರೆ.....

ರಾಜ್ಯಾಂಗವನ್ನು ಮಠಕ್ಕೊಪ್ಪಿಸಲಿ ಈ ಯಡ್ಯೂರಪ್ಪ ಅಂತ ಕಾವಿ ಕಂಡರೆ ಸಾಕು ಕಾಲಿಗೆ ಬೀಳೋ ದೇವೇಗೌಡರ ಮಾತ ಒಂದು ಕಡೆ ಬಿಸಾಕಿ. ಕೈಗೆ ಕಾಲಿಗೆ ಎಟುಕುದೋವೆಲ್ಲ ಮಠಾಧೀಶರ ಮೇಲೆ ತಿರುಗಿಬಿದ್ದೊ. ಮಾತಿನಲ್ಲಿ ಅವರ ಕೊಚ್ಚಿದೊ. ಖದ್ಗವಾಯಿತು ವಾಚಕರ ಪತ್ರ. ತಮ್ಮ ಬಾಯಿ ಇರುವುದೇ ಆಶೀರ್ವಚನ ನೀಡಲು, ಕಾಲಿರುವುದೇ ನಮಸ್ಕಾರ ಪಡಿಯೋಕೆ ಎಂಬ ಧಿಮಾಕಿನಲ್ಲಿದ್ದ ಮಠಾಧಿಪತಿಗಳು ಏಕ್‌ದಂ ಪಾತಾಳಕ್ಕೆ ಬಿದ್ದರು. ನಾವು ಹಂಗೇಳೇ ಇಲ್ಲ ಅಂತ ಶರಣಾಗತಿ ಆದ್ರು. ಸುತ್ತೂರು ಶ್ರೀಗಳಂತಹ ಸುತ್ತೂರು ಶ್ರೀಗಳೇ 'ನಾವು ಅಂತಹ ನಿರ್ಣಯವನ್ನೇ ಮಾಡಿಲ್ಲ, ಬೇಕಾದರೆ ಅದನ್ನು ಪರಾಂಬರಿಸಿ' ಅಂತ ಹೇಳುವ ದೈನೇಸಿ ಸ್ಥಿತಿಗೆ ತಳ್ಳಲ್ಪಟ್ಟರು!

ಮಠಾಧೀಶರನ್ನು ಹಿಂಗೆ ಮಕಾಡೆ ಮಲಗಿಸಿದವರು ಯಾರು? ಅದೇ ಯಡ್ಯೂರಪ್ಪನೋರು! ಸ್ಥಾವರಕ್ಕಳಿವುಂಟು ಎಂಬುದರಲ್ಲಿ ಅವರಿಗೆ ನಂಬಿಕೆ. ಆದರೆ ಮಠಾಧೀಶರು ಸಾಮ್ರಾಜ್ಯ ಸ್ಥಾಪಿಸಿ ವಿಜೃಂಭಿಸುತ್ತಿದ್ದರು. ಅದರ ನಿರ್ಮೂಲನಕ್ಕೆ ಯಡ್ಯೂರಪ್ಪನೋರು ಹೂಡಿದ್ದ ವಿಶೇಷ ತಂತ್ರ ಇದು!

ಎಚ್.ಎಲ್. ಕೇಶವಮೂರ್ತಿ



ಅಣಕ

ಕಾಯಿಸುವುದರಲ್ಲಿನ ಸುಖ

ನಮ್ಮ ಊರಿನಲ್ಲಿ ಒಂದು ಅಲಿಖಿತ ನಿಯಮ ಇದೆ. ಯಾವುದೇ ಕಾರ್ಯಕ್ರಮ ನಿಗದಿತ ವೇಳೆಗೆ ಪ್ರಾರಂಭ ಆಗುವುದಿಲ್ಲ. ಕನಿಷ್ಠ ಅರ್ಧಗಂಟೆ ತಡವಾಗಿ ಆಗುತ್ತವೆ. ಅದು ಸಂಘಟಕರಿಗೂ ಗೊತ್ತು, ಅತಿಥಿಗಳಿಗೂ ಗೊತ್ತು, ಶ್ರೋತೃವೃಂದಕ್ಕೂ ತಿಳಿದಿರುತ್ತೆ. ಕೆಲವು ಪೆದ್ದು ಮುಂಡೇವು ಇರುತ್ತವೆ. ಇದನ್ನು ಅರಿಯದೆ ವೇಳೆಗೆ ಸರಿಯಾಗಿ ಹಾಜರಾಗುತ್ತವೆ. ಪದೇಪದೇ ಗಡಿಯಾರದ ಕಡೆ ನೋಡುತ್ತಾ 'ಸಮಯ ಆಯ್ತು', 'ಲೇಟಾಯ್ತು' ಎಂದೆಲ್ಲ ಗೊಣಗುತ್ತವೆ. ಕಿರಿಕ್ ಪಾರ್ಟಿಗಳಾದರೆ 'ಯಾಕ್ರಿ ಶುರುಮಾಡಿಲ್ಲ ಆಗ್ಲೆ ಅರ್ಧ ಗಂಟೆ ಲೇಟಾಯ್ತು' ಅಂತ ಸಂಘಟಕರನ್ನ ಅಟಕಾಯಿಸುತ್ತಾರೆ. 'ಜನ ಸೇರಬೇಕಲ್ಲ ಸಾರ್, ಹತ್ತೂವರೆ ಅಂದ್ರೆ ಹನ್ನೊಂದಕ್ಕೇನೆ ಬರೋದು' ಅಂತ ಕೈ ಹೊಸೆಯುತ್ತಾರೆ. 'ಮತ್ಯಾಕೆ ಹತ್ತೂವರೆಗೆ ಅಂತ ಹಾಕಿದ್ರಿ ಹನ್ನೊಂದು ಅಂತಾನೆ ಹಾಕಬೇಕಿತ್ತು' ಅಂತ ಕೊಸರಾಡಿದರೆ 'ಹಂಗ್ಮಾಡಿದ್ರೆ ಹನ್ನೊಂದೂವರೆಗೆ ಬರ್ತಾರೆ ಸಾರ್' ಅಂತ ಹಲ್ಕಿರೀತಾರೆ ಅವ್ರು.

ಒಮ್ಮೊಮ್ಮೆ ಅತಿಥಿಗಳು ಮುದ್ರಿತ ವೇಳೆಗೆ ಮುಂಚೆಯೇ ಬಂದು ಇಳಿಯುವುದುಂಟು. ಆದರೆ ಶ್ರೋತೃ ಮಹಾಶಯರ ಸುಳಿವೇ ಇರುವುದಿಲ್ಲ. ಸಂಘಟಕರಿಗೆ ಪ್ರಾಣಸಂಕಟ. ಇನ್ನೂ ಜನ ಸೇರಿಲ್ಲ ಅಂದರೆ ಅತಿಥಿಗಳ ಜನಪ್ರಿಯತೆಯ ಒರೆಗಲ್ಲು ಅದಾಗಬಹುದು. ಅದನ್ನು ಅವರು ತನಗಾದ ಅವಮಾನ ಎಂದು ಭಾವಿಸಬಹುದು ಅಥವಾ ಸಂಘಟಕರ ಸಂಘಟನಾ ಶಕ್ತಿಯನ್ನೇ ಅನುಮಾನಿಸಬಹುದು. ಅತಿಥಿ ಮಹಾಶಯರಿಗೆ ಸಭಾಂಗಣದ ನಿಜಸ್ಥಿತಿಯ ಸುಳಿವು ಬಾರದಂತೆ ಬೇರೆಡೆ ಇಡುವ ವ್ಯವಸ್ಥೆ ಮಾಡಿ, 'ಇನ್ನೇನು ಪ್ರಾರಂಭ ಮಾಡ್ತೀವಿ ಸಾರ್. ನೀವು ರೆಸ್ಟ್ ತೆಗೊಳ್ತಾ ಇರಿ' ಎಂದು ಹಲ್ಕಿರಿದು ಶ್ರೋತೃಗಳ ಬೇಟೆಗೆ ಹೊರಡುತ್ತಾರೆ. 'ಗೆಸ್ಟ್ ಬಂದವ್ರೆ ಬನ್ರಪ್ಪ' ಅಂತ ಗೋಗರೆದರೆ 'ಕಾಯ್ಲಿ ಸುಮ್ನಿರಯ್ಯ ಒಂದು ರೀತೀಲಿ ಮಜ ಇರುತ್ತೆ' ಅನ್ನುವ ಮಹಾಶಯರೂ ಇರುತ್ತಾರೆ!

ಇಂತಹ ಪ್ರಸಂಗಗಳು ಅಪರೂಪ ಅನ್ನಿ. ಶ್ರೋತೃವೃಂದವೇ ಅತಿಥಿಗಳ ಪಾದ ಧೂಳಿಯಿಂದ ವೇದಿಕೆ ಪವಿತ್ರಗೊಳ್ಳುವ ಸುಮುಹೂರ್ತಕ್ಕಾಗಿ ಕಾಯುವುದು ಸಾಮಾನ್ಯ. ಶ್ರೋತೃಗಳನ್ನು ಹೆಚ್ಚು ಕಾಯಿಸಿದಷ್ಟು ಅವರಿ[ಗೆ] ಖುಷಿ. ವೇಳೆಗೆ ಸರಿಯಾಗಿ ಬಂದವರತ್ತ ಸಭಿಕರ ಗಮ[ನ] ಅಷ್ಟಾಗಿ ಹರಿಯುವುದಿಲ್ಲ ಎಂಬುದು ಅವರಿ[ಗೆ] ತಿಳಿದಿರುತ್ತೆ. ಅತಿಥಿಯಾದವನು ಉನ್ನತ ರಾಜ[ಕಾ]ರಣಿಯೋ, ಸಿನಿಮಾ ಮಂದಿಯೋ ಆದರಂತೂ ಆದಷ್ಟು ತಡವಾಗಿಯೇ ಬರುತ್ತಾರೆ. ಜನರನ್ನು ಕಾಯಿಸುವುದ[ರ]ಲ್ಲಿಯೇ ಅವರಿಗೊಂದು ರೀತಿಯ ಖುಷಿ ಇರುತ್ತ[ದೆ]. ಕೆಲವರಂತೂ ವೇದಿಕೆ ಕಾರ್ಯಕ್ರಮ ಆರಂಭ ಆದನಂ[ತ]ರವೇ ಸಭಾಭವನಕ್ಕೆ ದಯಮಾಡಿಸುವುದು. ಅವ[ರ] ಆಗಮನದಿಂದ ಕಾರ್ಯಕ್ರಮ ತುಸು ಹೊತ್ತು ಗೊಂದ[ಲ]ಮಯವಾಗಿ, ಚೇಲಾಗಳ ಶೀಟಿ, ಚಪ್ಪಾಳೆಗಳ ನಡುವೆಯೇ ವೇದಿಕೆ ಪೀಠವನ್ನಲಂಕರಿಸುವುದು ಅವರಿ[ಗೆ] ತೃಪ್ತಿ ನೀಡುವ ಸಂಗತಿ.

ಸಭೆಗೆ ತಡವಾಗಿ ಬಂದುದಕ್ಕೆ ಸಾಮಾನ್ಯವಾಗಿ ಕ್ಷಮೆ ಕೋರುವ ಸೌಜನ್ಯ ಇರುವುದಿಲ್ಲ. ತಮ್ಮಂತಹವರಿಗಾ[ಗಿ] ಕಾಯುವುದೇ ಈ ಕ್ಷುದ್ರ ಜೀವಿಗಳ ಕಾಯಕ ಎಂಬುದೆ ಅವರ ಭಾವನೆ. ಕೆಲವರು ಪಾಪ ಕೇಳ್ತಾರೆ. ತಡವಾಗಲು ಕಾರಣವನ್ನೂ ಹೇಳ್ತಾರೆ. ಸಾಮಾನ್ಯವಾಗಿ ಕಾರಣ ಏನಿರುತ್ತದೆ ಎಂದರೆ 'ಕೆಲಸದ ಒತ್ತಡದ ನಡುವೆ ಬಿಡುವೆ ಆಗಲಿಲ್ಲ!' ಎಂದು. ಅಂದರೆ 'ಪೆದ್ದ ನನ್ನ ಮಕ್ಕ ನಿಮ[ಗೆ] ಮಾಡಾಕೆ ಕೇಮಿಲ್ಲ, ಟೈಂಗೆ ಸರಿಯಾಗಿ ಬಂದು ಕುಂತಿರ್ತಿರಿ. ನಮ್ಗೂ ನಿಮ್ಮಂಗೆ ಅಂತ ತಿಳ್ಕಂಡ್ರಾ' ಎಂದು ಶಾಲು ಮುಚ್ಚಿ ಹೊಡೀತಾರೆ. ಆದರೂ ಸಮಯಕ್ಕೆ ಸರಿಯಾಗಿ ಹೋದವರು ಇರ್ತಾರಲ್ಲ 'ಅಷ್ಟು ಕೆಲ್ಸ ಇದ್ದೂ ಬಿಟ್ಟು ಬಂದವ್ರಲ್ಲಾ ದೊಡ್ಡ ಮನ್ಸ ಕಣಯ್ಯ ದೊಡ್ಡ ಮನ್ಸಾ' ಅಂತ ಕೊಂಡಾಡ್ತಾರೆಯೇ ಪರಂತು 'ನಿನಗೊಬ್ಬ[ನಿ]ಗೇಯ ಕೆಲ್ಸ ಇರೋದು ನಮಗೇನೂ ಇಲ್ಲ ಅನ್ಕಂಡಿದ್ದ್ಯೇನೋ ಮುಚೇಡಿ' ಅಂತ ಎಲ್ಲೂ ಕೇಳಿದ್ದ ನಾ ಕಾಣೆ.

ಕೆಲವೊಮ್ಮೆ ಹೀಗೂ ಆಗಬಹುದು. ಅತಿಥಿ ಮಹಾಶಯರು ಸಭೆಗೆ ಹೋಗಲು ಹೊರಟಿರುತ್ತಾರೆ. ಸಭಾಂಗಣಕ್ಕೆ ಹೋಗಿರುವುದಿಲ್ಲ. ಸಂಘಟಕರು ಮೊಬೈಲಾನಿಸುತ್ತಾರೆ. 'ಬರ್ತೀನಿ, ಇನ್ನೇನು ಬಂದೆ. ಸ್ವಲ್ಪ ಅರ್ಜೆಂಟ್ ಕೆಲ್ಸ ಇದೆ. ಮುಗಿಸಿಬಂದುಬಿಡ್ತೀನಿ' ಅಂತಾರೆ ಇವ್ರು. ಸ್ವಲ್ಪ ಸಮಯದ ನಂತರ ಸಂಘಟಕರ ಮೊಬೈಲು. ಇವರ ಅದೇ ಉತ್ತರ. ಇದು ಮುಂದುವರೆಯುತ್ತಲೇ ಇರುತ್ತೆ, ಪಾಪ ಇವರ ಸಂಕಟ ಅವರಿಗೆ ಅರ್ಥ ಆಗಿರಲ್ಲ. ಇವರಿಗೋ ಜನ ಸೇರಿದ್ದಾರೋ ಇಲ್ವೋ ಅನ್ನುವ ಅನುಮಾನ. ಅದಕ್ಕೇ ತಮ್ಮ ಚೇಲಾಗಳನ್ನು ಬಿಟ್ಟಿರ್ತಾರೆ. ಅವರು 'ಜನ ಸೇರವ್ರೆ ಸಾ[ರ್]' ಅನ್ನಬೇಕು. ಅಲ್ಲಿಯವರೆವಿಗೂ 'ಅರ್ಜೆಂಟ್ ಕೆಲ್ಸ ಇದೆ ಇನ್ನೇನು ಬಂದ್ಬಿಟ್ಟೆ' ಮುಂದುವರೆಯುತ್ತಲೇ ಇರುತ್ತೆ ಅದು ಬಂದನಂತರವೇ ಅದಕ್ಕೆ ಮೋಕ್ಷ!

ಒಸಾಮಾ-ಒಬಾಮರ ಇನ್ನೊಂದು ಮುಖ

ಒಸಾಮಾ ಬಿನ್ ಲಾಡೆನ್‌ನ ಹತ್ಯೆ ಕುರಿತಂತೆ 'ಗೌರಿ ಲಂಕೇಶ್' ವಾರ ಪತ್ರಿಕೆಯಲ್ಲಿ ಪ್ರಕಟಗೊಂಡ ಎಲ್ಲಾ ಬರಹಗಳು ಚೆನ್ನಾಗಿದ್ದವು. ಶಿವಸುಂದರ್ ಅವರ 'ಚಾರ್ವಾಕ' ಅಂಕಣವು ಅಮೆರಿಕ ತನ್ನ ಹಿತಾಸಕ್ತಿಗಳಿಗಾಗಿ ಹೇಗೆ ಒಸಾಮಾ ಎಂಬ 'ಭಯೋತ್ಪಾದಕ'ನನ್ನು ಸೃಷ್ಟಿಸಿತು ಎಂಬುದನ್ನು ವಿವರಿಸಿದರೆ, ಗೌರಿ ಲಂಕೇಶರ 'ಕಂಡಹಾಗೆ' ಕಾಲಂ ಪ್ರಸ್ತುತ ಜಾಗತಿಕ ರಾಜಕೀಯವನ್ನು ಕಟ್ಟಿಕೊಟ್ಟಿತು. ಒಸಾಮಾನ ಬದುಕು ಮತ್ತು ಸಾವಿನ ಬಗ್ಗೆ ಸಂತೋಷ್ ಬಾಗಿಲಗದ್ದೆ ಅವರು ಸಂಗ್ರಹಿಸಿ ನೀಡಿದ ಬರಹಗಳು ಕುತೂಹಲವನ್ನು ಹೆಚ್ಚಿಸಿದವು. ಹಾಗೆಯೇ ಪಾರ್ವತೀಶ ಅವರು ಒಸಾಮಾನಿಗಾಗಿ ಅಮೆರಿಕ ನಡೆಸಿದ ಹುಡುಕಾಟವನ್ನಲ್ಲದೆ ಶಾಂತಿಯನ್ನು ಸ್ಥಾಪಿಸುವ ನೆಪದಲ್ಲಿ ಆ ದೇಶ ಜಗತ್ತಿನಾದ್ಯಂತ ನಡೆಸಿರುವ ಭಯೋತ್ಪಾದಕ ಕೃತ್ಯಗಳನ್ನು ತೆರೆದಿಟ್ಟಿತು.

ಇತರೆ ಪತ್ರಿಕೆಗಳು ಅಮೆರಿಕದ ತುತ್ತೂರಿಗಳಂತೆ ವರ್ತಿಸುತ್ತಿರುವಾಗ ನಿಮ್ಮ ಪತ್ರಿಕೆ ಹೀಗೆ ಅಮೆರಿಕದ ದುಷ್ಟತನವನ್ನು ಕನ್ನಡಿಗರಿಗೆ ತೋರಿಸಿತು. ಅದಕ್ಕೆ ಧನ್ಯವಾದಗಳು.

- ನಿರಂಜನ್ ಪಾಟೀಲ್, ಹುಣಸಿನಹಳ್ಳಿ



ಮೈಸೂರು ಒಂದು ರೀತಿ ಕಳ್ಳರ ಸಂತೆ!

ವೈದ್ಯಕೀಯ ಶಿಕ್ಷಣ ಸಚಿವ ರಾಮದಾಸನ ಭೂಸ್ವಾಹಾ ಪುರಾಣ 'ಗೌರಿ ಲಂಕೇಶ್'ನಲ್ಲಿ ಬಹಳ ಸೊಗಸಾಗಿ ಮೂಡಿಬಂದಿದೆ ಪತ್ರಿಕೆಯ ನಾಲ್ಕನೆಯ ಪುಟವನ್ನು ಕರಪತ್ರ ಮಾಡಿ ಹಂಚಬೇಕು. ಅಂಥ ತೀರ್ಮಾನ ಮಾಡಿದ್ದೇವೆ. ಸಾಂಸ್ಕೃತಿಕ ನಗರಿಯಲ್ಲಿ ಈ ಗಂಧದ ಕಟ್ಟಿ ಗಿರಾಕಿ ರಾಮದಾಸ್ ಅಲ್ಲದೆ ಇನ್ನು ಅನೇಕ ಮಂದಿ ಖದೀಮರು ರಾಜಾರೋಷವಾಗಿ ಐಷಾರಾಮಿ ಜೀವನ ಸಾಗಿಸುತ್ತಿದ್ದಾರೆ. ರಾಮದಾಸ್, ಸಾರಾ ಮಹೇಶ್, ಸಂದೇಶ್ ನಾಗರಾಜ್, ಜಿ.ಟಿ.ದೇವೇಗೌಡ, ಸಿ.ಎನ್. ಮಂಜೇಗೌಡ, ಆಟೋ ವಾಸು ಇವರೆಲ್ಲ ಒಬ್ಬರನ್ನೊಬ್ಬರು ಮೀರಿಸುವ ಕಳ್ಳರು.

ಬೂಟಾಟಿಕೆ ದಾಸನಿಗೆ ಮೈಯಿಲ್ಲ ನಾಮ ಎಂಬಂತೆ ಮುಂದಿನ ದಿನಗಳಲ್ಲಿ ಈ ಜಿ.ಟಿ.ದೇವೇಗೌಡ ಪುನಃ ಜೆಡಿಎಸ್‌ಗೆ ಹಾಗೂ ಸಂದೇಶ್ ನಾಗರಾಜ್ ಪುನಃ ಕಾಂಗ್ರೆಸ್‌ಗೆ ಸೇರಿಕೊಳ್ಳುವುದಂತೂ ಖಂಡಿತ ಸತ್ಯ. ಇಂತಹ ಭಂಡರಿಂದ ಮೈಸೂರಿಗೆ ಯಾವಾಗ ಮುಕ್ತಿ ಸಿಗುವುದೋ ಆ ತಾಯಿ ಚಾಮುಂಡೇಶ್ವರಿಗೇ ಗೊತ್ತು.

-ಅಭಿಷೇಕ್, ಹುಣಸೂರು

ಕಟೇ ಕಲ್ಯಾಣವೆಂದು ಕರೆಸಿಕೊಳ್ಳುವ ಕೊಡೇಕಲ್ಲು; ಆ ಕೊಡೇಕಲ್ಲಿ ಬಸವಣ್ಣ ಪರಂಪರೆಯೊಳಗಿನ ವಿಶಿಷ್ಟ 'ನಡೆ'ಯ ಕುರಿತು ಕೆ.ಆರ್.ವಿದ್ಯಾಧರ ಬರೆದ ಲೇಖನ ಸಕಾಲಿಕವಾಗಿದೆ. ಜಾತ್ಯತೀತ ಸೊಲ್ಲನ್ನು ಹೊಂದಿರುವ ನಾಥ ಸಿದ್ಧ, ಸೂಫಿ ಪಂಥ, ಇಸ್ಲಾಂ ಸಂಪರ್ಕದಿಂದ ರೂಪಗೊಂಡಿರುವ ಈ ಪರಂಪರೆಯ ಚೆಲುವು ವಿಶಿಷ್ಟವಾಗಿದೆ.

ಇಷ್ಟ ಲಿಂಗದ ನಿರಾಕರಣೆ, ಪ್ರಾಣಲಿಂಗದ ಸ್ವೀಕಾರವು ಮತೀಯ ಮನಸ್ಸಿನ ವೀರಶೈವ ಮತಕ್ಕೆ ಕೊಟ್ಟ ಉತ್ತರದಂತಿದೆ ಕೂಡ. ವರ್ಷಕ್ಕೆರಡು ಬಾರಿ ನಡೆಯುವ ಜಾತ್ರೆಯಲ್ಲಿ ಇಷ್ಟೊಂದು ಶ್ರಮಿಕವರ್ಗದ ಜಾತಿಗಳೂ, ಮುಸ್ಲಿಮರೂ ಒಳಗೊಳ್ಳುವುದು ನಿಜಕ್ಕೂ ಕುತೂಹಲಕಾರಿ.

ಸ್ಥಾವರ ಆರಾಧನೆ ನಿರಾಕರಿಸಿ, ಬದಲಿಗೆ ವಚನ ಓದುವ ಆರಾಧನೆ, ಆ ಪೊತ್ತಿಗೆಯನ್ನು ಪಲ್ಲಕ್ಕಿಯಲ್ಲಿ ಹೊತ್ತು ಗೌರವಿಸುವ ಪರಂಪರೆ ಮಂಟೇಸ್ವಾಮಿ ಪರಂಪರೆಯಲ್ಲೂ ಇದೆ. ಈ ಪರಂಪರೆಯಲ್ಲಿ ಓದು; ಹಾಡಾಗುತ್ತದೆ.

ದಲಿತ ಜಾತಿಗೆ ಸೇರಿದ ಮಲೆಮಾದೇಶ್ವರ ಹಾಗೂ ಮಂಟೇಸ್ವಾಮಿ ಪರಂಪರೆಯ ದೇವರಗುಡ್ಡರು ಹಾಗೂ ನೀಲಾಗಾರರು ತಮ್ಮ ಸಾಂಸ್ಕೃತಿಕ ನಾಯಕರ ಸಾಧನೆಯನ್ನು ಹಾಡಿನ ವೈಭವದಲ್ಲಿ ಸ್ಮರಿಸಿಕೊಳ್ಳುತ್ತಾರೆ.

ಕೊಡೇಕಲ್ ಜಾತ್ರೆಯಲ್ಲಿ ಪ್ರಥಮವಾಗಿ ನದಿಯಿಂದ ದಲಿತರು ತಂದ ನೀರಿನಿಂದ ಗಂಧ ತೇಯುವ ಆಚರಣೆ ಈಗಲೂ ಇದೆ ಎನ್ನುತ್ತದೆ ಲೇಖನ. ಆದರೆ ರಹಮತ್ ತರೀಕೆರೆಯವರ 'ಕರ್ನಾಟಕ ಸೂಫಿಗಳು' ಈ ಕೃತಿಯಲ್ಲಿ 'ಅದರಲ್ಲೂ ಕೃಷ್ಣಾ ಹೊಳೆಯಿಂದ ದಲಿತರು ತಂದ ನೀರಿನಲ್ಲೇ ಅವನಿಗೆ ಗಂಧ ತೇಯುವ ಆಚರಣೆಯಿತ್ತಂತೆ. ಈ ಸಲ (1996) ಇದು ಇದ್ದಂತೆ ತೋರಲಿಲ್ಲ.' ಎಂದು ದಾಖಲಿಸುತ್ತಾರೆ. ಕೊಡೇಕಲ್ ಪರಂಪರೆಯನ್ನು ಲಿಂಗಾಯತ ವಿದ್ವಾಂಸರು 'ವೀರಶೈವ ಕ್ಷೇತ್ರ' ಪಡೆಯುವ 'ಜಾತಿ' ಹಿನ್ನೆಲೆಯಲ್ಲಿ ದಲಿತರನ್ನು ದೂರ ಮಾಡಿರಲೂಬಹುದು. ಒಟ್ಟಾರೆ ಇದೊಂದು ಉತ್ತಮ ಲೇಖನ.

-ಸಿ.ರಾಮ್‌ಸ್ವಾಮಿ, ಮಡಿಕೇರಿ

ಮೇ 11, 2011ರ ಸಂಚಿಕೆಯಲ್ಲಿ ಅರುಣ್.ಜಿ ಬರೆದ 'ರಾಧಿಕಾ: ನಾನು ಓರ್ವ ಮಹಿಳೆ ಬಗ್ಗೆ ಬರೆಯುವಾಗ ಇರಬೇಕಾದ ಎಚ್ಚರಿಕೆ ಅದರಲ್ಲಿ ಮೂಡಿಬಂದಿತ್ತು.

- ಸಂತೋಷ್, ಅಜ್ಜಂಪುರ

ಕಳೆದ ವಾರದ ಪತ್ರಿಕೆಯ ಪ್ರತಿಗಾಗಿ ಮೈಸೂರೆಲ್ಲ ಸುತ್ತಿದೆ. ಎಲ್ಲೆಡೆ ಪತ್ರಿಕೆ ಖಾಲಿ.

ವಿಚಾರಿಸಿದಾಗ ಸಚಿವ ರಾಮದಾಸ್ ಬಗ್ಗೆ ವರದಿ ಬಂದಿದೆ ಅಂತ ಆತನ ಚೇಲಾಗಳು ಎಲ್ಲ ಪ್ರತಿಗಳನ್ನು ಕೊಂಡುಕೊಂಡು ಹೋಗಿದ್ದಾರೆ ಅಂತ ತಿಳಿಯಿತು.

ಮುಂದಿನ ಸಂಚಿಕೆಯಲ್ಲಿ ಆ ವರದಿಯ ಮುಖ್ಯ ಅಂಶಗಳನ್ನು ಮತ್ತೆ ಪ್ರಕಟಿಸಿ.

- ರಂಗಸ್ವಾಮಿ, ಮೈಸೂರು



ಅಂಬಿ ಗಿನ್ನಿಸ್ ದಾಖಲೆ?

ಗ ಮಂಡ್ಯದ ಗಂಡು ಅಂಬರೀಶ್ ಇತ್ತ ರಾಜಕೀಯದಲ್ಲಿ ಅಷ್ಟೊಂದು ಾಗಿಲ್ಲ, ಹಾಗೆಯೇ ಅತ್ತ ತನ್ನ ಮೂಲ ಉದ್ಯೋಗವಾದ ನಟನೆಯಲ್ಲೂ ಯಲ್ಲಿಲ್ಲ. ಆದರೂ ಅಂಬರೀಶ್ ವರ್ಚಸ್ಸು, ತಾರಾಮೌಲ್ಯಕ್ಕಿನ್ನೂ ಧಕ್ಕೆಯಾಗಿಲ್ಲ. ಯಶ್ ನಟಿಸಿರುವ 'ಕಿರಾತಕ' ಚಿತ್ರದ ಕ್ಯಾಸೆಟ್ ಬಿಡುಗಡೆ ಮಾಡಲು ದಾವಣಗೆರೆಯಿಂದ ನೇರವಾಗಿ ಪಂಚತಾರಾ ಹೋಟೆಲ್‌ಗೆ ಬಂದಿದ್ದರು. ಯ ಶಾಮನೂರ್ ಶಿವಶಂಕರಪ್ಪನವರ ಮಗ ಮಲ್ಲಿಕಾರ್ಜುನ್ ಅವರ ು 70 ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಿಸಿರುವ ಮನೆಗೆ ಅತಿಥಿಯಾಗಿ ದಾವಣಗೆರೆಗೆ ಹೋಗಿದ್ದರು.

ು ಸುರುಳಿ ಬಿಡುಗಡೆ ಮಾಡಿದ ನಂತರ ಅಲ್ಲೇ ಪತ್ರಕರ್ತರ ಮುಂದೆ ವನದ ಸಿಹಿ-ಕಹಿ ನೆನಪುಗಳ ಸುರುಳಿ ಬಿಚ್ಚಿಟ್ಟರು. ಅಂಬಿ ಜೊತೆಯಲ್ಲಿನ ಮಾತುಕತೆ ಒಂದು ಪಕ್ಕಾ ಕಮರ್ಷಿಯಲ್ ಚಿತ್ರದ ತರಹವೇ ಇತ್ತು, ಂಟ್ಸ್, ತಮಾಷೆ, ಜೂಜು, ಪ್ರೇಮಪ್ರಕರಣ, ರಾಜಕೀಯ, ತಾಯಿ ಹೀಗೆ ಅಂಬಿ ಎಲ್ಲಾ ವಿಷಯಗಳ ಬಗ್ಗೆ ಮನಬಿಚ್ಚಿ ಮಾತನಾಡಿದ್ದರು. ಮ್ಮ ಸಂಪಾದಕರು ಸೆನ್ಸಾರ್ ಮಾಡುವುದರಿಂದ ಅಂಬಿ ಮಾತನಾಡಿದ್ದನ್ನ ಗೆ ನಿಮಗೆ ಹೇಳಲು ಸಾಧ್ಯವಾಗುತ್ತಿಲ್ಲವೆಂಬುದಕ್ಕೆ ವಿಷಾದವಿದೆ.

ಕ್ಕೆ ಹನ್ನೆರಡು ಕೋಟಿ ರೂ. ವೆಚ್ಚದಲ್ಲಿ ತಲೆಯೆತ್ತಲಿರುವ ಕಲಾವಿದರ ಕಾರ್ಯದ ಬಗ್ಗೆ ಅಂಬಿ ಹೆಚ್ಚು ತಲೆಕೆಡಿಸಿಕೊಂಡಿದ್ದಾರೆ. "ಮೊನ್ನೆ ಗೃಹ ಅಶೋಕ್ ಒಂದು ಕೋಟಿ ಕೊಟ್ಟರು, ಮಾಜಿ ಮೇಯರ್ ನಟರಾಜ್ ಕೋಟಿ ಅನೌನ್ಸ್ ಮಾಡಿದ್ದಾರೆ, ಹೊಸ ಮೇಯರ್ ಶಾರದಮ್ಮ ಒಂದು ಕೋಟಿ ನೀಡಲು ಒಪ್ಪಿದ್ದಾರೆ, ಅಶೋಕ್ ಖೇಣಿ ಮೂರು ನೀಡಲಿದ್ದಾರೆ. ಕ್ರಿಕೆಟ್ ಟೂರ್ನಮೆಂಟ್‌ನಿಂದ ವರ್ಷಕ್ಕೆ ಒಂದು ಕೋಟಿ ...." ಹೀಗೆ ಅಂಬಿ ಕಲಾವಿದರ ಭವನದ ನಿರ್ಮಾಣದ ಬಗ್ಗೆ ಚಿತ್ರಣ ು. "ಈ ನನ್ಮಕ್ಕಳು..... (ಉದ್ಯಮದವರನ್ನು ಉದ್ದೇಶಿಸಿ) ತಿಂಗಳಿಗೆ ದಿನ ರಜಾ ಹಾಕಿ ನನ್ನ ಜೊತೆ ಬಂದರೆ ಎರಡೇ ದಿನದಲ್ಲಿ ಹನ್ನೆರಡು ಕಲೆಕ್ಷನ್ ಮಾಡಿಬಿಡುತ್ತೀನಿ... ಆದರೆ ಈ ನನ್ಮಕ್ಕಳಿಗೆ ಪುರುಸೊತ್ತೆ !" ಎಂದು ಮಂಡ್ಯದ ಗಂಡು ಶೈಲಿಯಲ್ಲಿ ಅಬ್ಬರಿಸಿದರು.

ವು ಸಿನಿಮಾದಲ್ಲಿ ಅಷ್ಟೊಂದು ಬಿಜಿಯಾಗಿಲ್ಲ, ಅದರರ್ಥ ಚಿತ್ರರಂಗಕ್ಕೆ ಹೇಳಿದಂತೆಯೇ?" ಎಂದು ಪ್ರಶ್ನಿಸಿದರೆ ಅಂಬಿ ಕಣ್ಣಲ್ಲೇ ಗುರಾಯಿಸಿದರು. ಬಿಡುಗಡೆ, ಮುಹೂರ್ತಗಳಿಗೆಲ್ಲ ಬರುತ್ತಿಲ್ಲವೇ" ಎಂದು ಅವರು ಟಾಕಿ ಹಾರಿಸಿದರು. ಆ ನಂತರ ಒಂದುಕ್ಷಣ ಆಕಾಶದತ್ತ ನೋಡಿ ಮತ್ತೆ ಯುತ್ತಾ "ಒಂದೇ ಒಂದು ಪಾತ್ರ ಮಾಡಲು ಬಾಕಿ ಇದೆ. ಅದನ್ನು ನೆ. ಅದ್ಯಾವುದೆಂದು ಮಾತ್ರ ಕೇಳ್ಬೇಡಿ" ಎಂದು ಫತ್ವಾ ಹೊರಡಿಸಿದರು.

ಸಹಜವಾಗಿ ಮಾತು ಅವರ ಮಗ ಅಭಿಷೇಕ್ ಗೌಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುವತ್ತ ಹೊರಳಿತು. "ಹನ್ನೆರಡರಿಂದ ಹದಿನೈದು ಕೋಟಿ ರೂಪಾಯಿ ಬಂಡವಾಳ ಹೂಡಿ ಆತನನ್ನು ಹೀರೋ ಮಾಡಲು ದೊಡ್ಡ ಸಂಸ್ಥೆ ದೊಡ್ಡ ವ್ಯಕ್ತಿ ಮುಂದೆ ಬಂದಿರುವುದು ನಿಜ. ಆದರೆ ಆತ ಮೊದಲಿಗೆ ವಿದ್ಯಾಭ್ಯಾಸ ಮುಗಿಸಲಿ ಎಂಬುದು ನಮ್ಮ ಮತ್ತು ಆತನ ಆಸೆ. ವಿದ್ಯಾಭ್ಯಾಸದ ನಂತರ ಆತನಿಗೆ ಇಷ್ಟವಿದ್ದ ಚಿತ್ರವನ್ನು ಆಯ್ಕೆ ಮಾಡಲಿ. ಸದ್ಯಕ್ಕೆ ಆತ ಮೊದಲ ವರ್ಷದ ಡಿಗ್ರಿ ಓದುತ್ತಿರುವುದರಿಂದ ನಾವು ಆತನಿಗೆ ತೊಂದರೆ ನೀಡುವುದಿಲ್ಲ" ಎಂದು ಸ್ಪಷ್ಟ ನಿಲುವನ್ನು ಮಂಡಿಸಿದರು.

"ನಿಮ್ಮ ಉತ್ತರಾಧಿಕಾರಿಯಾಗಿ ಆತ ಚಿತ್ರರಂಗಕ್ಕೆ ಕಾಲಿಡುವ ಸುದ್ದಿ ಕೇಳಿ ಬರುತ್ತಿದೆಯಲ್ಲವೇ?" ಅಂದಾಗ ಅಂಬಿ ವ್ಯಘ್ರರಾದರು. "ಆತ ನನ್ನ ಮಗ, ಆತನಿಗೆ ಆಸಕ್ತಿ ಇದ್ದರೆ ಉದ್ಯಮದಲ್ಲಿ ಸ್ವಲ್ಪ ಸುಲಭವಾಗಬಹುದು. ಇಲ್ಲಿ ಉತ್ತರಾಧಿಕಾರಿಯ ಪ್ರಶ್ನೆ ಇಲ್ಲ. ಅದು ಸಿನಿಮಾ ಮಾತ್ರವಲ್ಲ, ರಾಜಕೀಯಕ್ಕೂ ಅನ್ವಯಿಸುತ್ತದೆ. ನಾನು ಸತ್ತ ನಂತರ ನನ್ನ ಹೆಂಡತಿಯನ್ನು ಅನುಕಂಪದ ಆಧಾರದ ಮೇಲೆ ಚುನಾವಣೆಗೆ ನಿಲ್ಲಿಸುವುದಕ್ಕೂ ನನ್ನ ಮನಸ್ಸು ಒಪ್ಪುವುದಿಲ್ಲ, ಹಾಗಂತ ನಾನು ವಿಲ್ ಬರೆದಿಡುತ್ತೇನೆ...." ಎಂದು ಗಂಭೀರವಾಗಿ ನುಡಿದರು.

"ಈ ಜನಪ್ರಿಯತೆ ಇದೆಲ್ಲವೂ ಯಾರಿಗೂ ಸಹಕಾರಿಯಾಗುವುದಿಲ್ಲ, ಉದಾಹರಣೆಗೆ ಇಂಡಿಯಾ ಟುಡೇ ಪತ್ರಿಕೆಯಲ್ಲಿ ಒಮ್ಮೆ ಲೋಕಸಭಾ ಸದಸ್ಯರ ಹಣವನ್ನು ಸಮರ್ಪಕವಾಗಿ ವಿನಿಯೋಗಿಸಿದವರಲ್ಲಿ ನನ್ನ ಹೆಸರು ಮೊದಲ ಸ್ಥಾನದಲ್ಲಿತ್ತು, ಎರಡನೇ ಸ್ಥಾನದಲ್ಲಿ ನನ್ನ ನಾಯಕಿ ಸೋನಿಯಾ ಗಾಂಧಿ ಹೆಸರಿತ್ತು, ಹಾಗಂತ ನಾನು ಅವರಿಗಿಂತ ಪಾಪ್ಯುಲರ್ ಎಂದು ಹೇಳಿಕೊಂಡು ಓಡಾಡಲು ಸಾಧ್ಯವೇ?" ಎಂದು ಪ್ರಶ್ನಿಸಿದರು.

"ಲೋಕಸಭೆಗೆ ಚಕ್ಕರ್ ಹೊಡೆದವರಲ್ಲಿ ಕೂಡಾ ನೀವೇ ಮೊದಲ ಸ್ಥಾನದಲ್ಲಿದ್ದೀರಿ" ಎಂದು ವರದಿಯಾಗಿದ್ದನ್ನು ಅಂಬಿಗೆ ನೆನಪಿಸಿದೆವು. ಆಗ ಅಂಬಿ ಎಂದಿನಂತೆ ಆರ್ಭಟಿಸುತ್ತಾ "ಅದು ನಿಜ, ಮತ್ತು ಸುಳ್ಳು. ನನಗೆ ಮಂಡಿನೋವಿದೆ. ಹೀಗಾಗಿ ಮೂರ್‍ನಾಲ್ಕು ಗಂಟೆ ಅಲ್ಲಿ ಹವಾನಿಯಂತ್ರಿತ ಕೊಠಡಿಯಲ್ಲಿ ಕಾಲುಮಡಚಿಕೊಂಡು ಕುಳಿತುಕೊಳ್ಳಲು ಆಗುತ್ತಿರಲಿಲ್ಲ. ಲೋಕಸಭೆ ಉಪಾಧ್ಯಕ್ಷರ ಕಾರ್ಯದರ್ಶಿಯೊಬ್ಬರು ಕನ್ನಡದವರಾಗಿದ್ದರು. ಅವರ ರೂಮಿನಲ್ಲಿ ಕುಳಿತು ಟಿವಿ ಹಾಕಿಕೊಂಡು ಸಭಾಕಲಾಪವನ್ನು ನೋಡುತ್ತಿದ್ದೆ. ಅಲ್ಲಿ ಒಳಗೆ ಹೋದರೂ ಇದೇ ತಾನೇ ಮಾಡಬೇಕಿತ್ತಲ್ಲವೇ?" ಎಂದು ಗಹಗಹಿಸಿ ನಗುತ್ತಾ ಹೇಳಿದರು.

"ನನ್ಮಕ್ಳಾ... ನನಗೆ ಈ ತರ ಇರಿಸುಮುರಿಸಾಗುವ ಪ್ರಶ್ನೆ ಕೇಳ್ತಾ ಇದ್ದೀರಲ್ವೇ? ನೀವು ಯಾವತ್ತಾದರೂ ನಾನು ಮಾಡಿದ ಗಿನ್ನಿಸ್ ದಾಖಲೆಯನ್ನು ನಿಮ್ಮ ಪತ್ರಿಕೆಗಳಲ್ಲಿ ಬರೆದಿದ್ದೀರಾ?" ಎಂದು ಪ್ರೆಸ್‌ನವರಿಗೇ ಪ್ರೀತಿಯಿಂದ ರೋಫ್ ಹಾಕಿದರು. ಅದೇನೆಂದು ಒತ್ತಾಯಿಸಿದಾಗ ಅಂಬಿ ಹೇಳಿದ ಗಿನ್ನಿಸ್ ದಾಖಲೆಯ ಕಥೆ ಹೀಗಿದೆ:

"ನಾನು ನನ್ನ ರಾಜೀನಾಮೆಯನ್ನು ಲೋಕಸಭಾ ಸ್ಪೀಕರ್ ಸೋಮನಾಥ ಚಟರ್ಜಿಯವರಿಗೆ ನೀಡಿದೆ. ಅದರ ಪ್ರತಿಯನ್ನು ಪ್ರಧಾನ ಮಂತ್ರಿಗೂ ಕಳುಹಿಸಿಕೊಟ್ಟೆ. ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿಗೂ ಕಳುಹಿಸಿಕೊಟ್ಟೆ. ಆದರೂ ಎರಡು ವರ್ಷಗಳ ಕಾಲ ನನ್ನ ರಾಜೀನಾಮೆ ಅಂಗೀಕಾರವಾಗಲೇ ಇಲ್ಲ! ಕೊನೆಗೆ 'ಅಣು ಸ್ಥಾವರಗಳ ಕುರಿತ ಚರ್ಚೆ'ಯಲ್ಲಿ ಭಾಗವಹಿಸಿ ಮತವನ್ನೂ ಹಾಕಿದೆ. ಕಾಂಗ್ರೆಸ್ ಪಕ್ಷದಲ್ಲಿ ರಾಜೀನಾಮೆ ಸಲ್ಲಿಸಿದ ಅರ್ಧಗಂಟೆಯಲ್ಲಿ ಅದನ್ನು ಸ್ವೀಕರಿಸಿಬಿಡುತ್ತಾರೆ ಅಂತ ನಿಮಗೆ ಗೊತ್ತಿದೆ. ಆದರೆ ಇಷ್ಟೊಂದು ಸುದೀರ್ಘ ಕಾಲ ನನ್ನ ರಾಜೀನಾಮೆ ಅಂಗೀಕಾರವಾಗದೇ ಇದ್ದಿದ್ದು ಒಂದು ರೀತಿಯಲ್ಲಿ ಗಿನ್ನಿಸ್ ದಾಖಲೆಯೇ. ಇದು ನನ್ನ ಮೇಲೆ ಪಕ್ಷದ ಹೈಕಮಾಂಡ್‌ಗೆ ಇರುವ ವಿಶ್ವಾಸ ಮತ್ತು ಪ್ರೀತಿಯನ್ನು ತೋರಿಸುತ್ತದೆ..." ಎಂದರು.

ಉಳಿದಂತೆ ಅಂಬರೀಶ್ ಯಾವುದೇ ಮುಲಾಜಿಲ್ಲದೆ ಎಂದಿನಂತೆ ತನ್ನ ಸಹನಟಿಯರೊಂದಿಗೆ ನಡೆಸಿದ ಪ್ರೇಮಸಲ್ಲಾಪಗಳನ್ನು ರಂಗುರಂಗಾಗಿ ಹೇಳುತ್ತಾ ಹೋದರು. ಅವರ ಗುರು ಪುಟ್ಟಣ್ಣ ಕಣಗಾಲ್ ಜೊತೆ ವಿಸ್ಕಿ ಹಾಕಿದ ಆ ಕ್ಷಣಗಳನ್ನು ನೆನೆಸಿಕೊಂಡರು. ತನ್ನ ಸ್ನೇಹದ ಅಪ್ಪುಗೆಯಲ್ಲಿ ಬಂದು ಹೋಗಿರುವ ಸುಮಾರು ಹದಿನೈದು ಮುಖ್ಯಮಂತ್ರಿಗಳ ಜೊತೆಗಿನ ಒಡನಾಟವನ್ನು ನೆನೆಸಿಕೊಂಡರು. ವೇಗವಾಗಿ ಕಾರು ಓಡಿಸುವುದು, ಕುದುರೆ ಜೂಜು, ಇಸ್ಪೀಟು, ಕ್ರಿಕೆಟು.... ಹೀಗೆ ಎಲ್ಲದರ ಬಗ್ಗೆಯೂ ಲೋಕಾಭಿರಾಮವಾಗಿ ಮಾತಾಡುತ್ತಾ ಹೋದರು.

ಅವರ ತಂದೆ ತೀರಿಹೋದಾಗ ಸ್ವತಃ ತಾಯಿಯೇ ನಿರ್ಮಾಪಕರಿಗೆ ತೊಂದರೆಯಾಗಬಾರದೆಂಬ ಕಾರಣಕ್ಕಾಗಿ ಒಂದೇ ದಿನಕ್ಕೆ ಶೂಟಿಂಗ್‌ಗೆ ವಾಪಸ್ ಕಳುಹಿಸಿದ ಕ್ಷಣಗಳನ್ನು ನೆನೆಸಿಕೊಂಡು ಭಾವುಕರಾದರು. ಈಗ ಅಂತಹ ಕುಟುಂಬದ ವಾತಾವರಣ ಚಿತ್ರರಂಗದಲ್ಲಿ ಕಾಣಸಿಗುತ್ತಿಲ್ಲ ಎಂಬುದರ ಬಗ್ಗೆಯೂ ವಿಷಾದ ವ್ಯಕ್ತಪಡಿಸಿದರು.

"ದಾನಶೂರ ಕರ್ಣ ಎಂಬ ಬಿರುದಿನಿಂದ ನನಗೆ ತೊಂದರೆಯಾಗಿದ್ದೇ ಹೆಚ್ಚು, ನನ್ನನ್ನು ದುರುಪಯೋಗ ಮಾಡಬಾರದೆಂಬ ಕಾರಣಕ್ಕೆ ಈಗ ದಾನ ಮಾಡುವಾಗ ಹಿಂದುಮುಂದು ನೋಡುತ್ತೇನೆ. ಉದಾಹರಣೆಗೆ ಮಂಡ್ಯಕ್ಕೆ ಹೋಗಲು ಹಣ ಕೇಳಿದವನಿಗೆ ಬಸ್ ಟಿಕೆಟ್ ಕೊಡಿಸುತ್ತೇನೆ, ಆಸ್ಪತ್ರೆಗೆ ಹಣ ಬೇಕು ಎಂದು ಕೇಳಿದವರಿಗೆ ಔಷಧಿಗಳನ್ನು ಕೊಡಿಸುತ್ತೇನೆ. ಇದನ್ನೆಲ್ಲ ನೋಡಿದ ನಂತರ ಈಗ ಸಹಾಯಕ್ಕಾಗಿ ಅಭಿಮಾನಿಗಳು ಬರುವುದು ಕಡಿಮೆಯಾಗಿದೆ" ಎಂದು ಹೇಳುತ್ತಾ ಗಟ್ಟಿಯಾಗಿ ನಗಲಾರಂಭಿಸಿದರು.

ಕೊನೆಯಲ್ಲಿ ಚಿತ್ರರಂಗದ ಈಗಿನ ಪರಿಸ್ಥಿತಿ ಬಗ್ಗೆ ಜೋಕ್ ಕಟ್ ಮಾಡಿದರು. ಆ ಜೋಕ್ ಹೀಗಿದೆ: ಸಿನಿಮಾ ಮುಹೂರ್ತಕ್ಕೆ ಇವರನ್ನು ಮುಖ್ಯ ಅತಿಥಿಯಾಗಿ ಕರೆಯಲು ಅನೇಕರು ಬರುತ್ತಾರಂತೆ. ಆಗ ಇವರು ಒಂದಿಷ್ಟು ಪ್ರಶ್ನೆ ಕೇಳುವ ಹವ್ಯಾಸವಿಟ್ಟುಕೊಂಡಿದ್ದಾರೆ.

"ನಿರ್ಮಾಪಕ ಯಾರಪ್ಪ?"
"ಸಾರ್ ನಾನೇ."
"ಹೀರೋ ಯಾರಪ್ಪ?"
"ಸಾರ್ ನನ್ನ ಮಗ."
"ನಿರ್ದೇಶಕ ಯಾರಪ್ಪ?"
"ಸಾರ್ ನನ್ನ ತಮ್ಮ."

ನಿಮ್ಮ ಮನೆಯಲ್ಲಿ ಮುಹೂರ್ತದ ಕ್ಲಾಪ್ ಮಾಡಲು ಯಾರು ಇರಲಿಲ್ವೇ? ಎಂದು ಅಂಬಿ ಮನಸ್ಸಿನಲ್ಲೇ ಪ್ರಶ್ನೆ ಹಾಕುತ್ತಾರಂತೆ... ಹೀಗಿದ್ದರೆ ಕನ್ನಡ ಚಿತ್ರೋದ್ಯಮ ಹೇಗೆ ತಾನೇ ಉದ್ಧಾರವಾಗುತ್ತದೆ ಎಂದು ಹೇಳುತ್ತಾ ಕೈಯಲ್ಲಿದ್ದ ವಿಸ್ಕಿಯನ್ನು ಗುಟುಕರಿಸಿ, ಖಾಲಿ ಗ್ಲಾಸನ್ನು ಟೇಬಲ್‌ಗೆ ಕುಕ್ಕಿ ಎದ್ದು ಹೋದರು...

• ಶೆಣೈ

...ಯಕನಟನಾಗಿ ಜೇಡರಹಳ್ಳಿ

...ಂಗಳೂರು ಭೂಗತ ಜಗತ್ತಿನ ಜೇಡರಹಳ್ಳಿ ಕೃಷ್ಣ ಎಂಬ ಹೆಸರು ...ಗೆ ತಾನೇ ಗೊತ್ತಿಲ್ಲ? ಈ ಜೇಡರಹಳ್ಳಿ ಭೂಗತ ಲೋಕದಿಂದ ...ಯದ ಕಡೆಗೆ ಒಂದಷ್ಟು ದಿನ ಸರಿದಿದ್ದರು. ಈಗ



ರಾಜಕೀಯದಿಂದ ನೇರವಾಗಿ ಬಣ್ಣದ ಲೋಕಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ.

ಈ ತಿಂಗಳ ಹದಿನೈದರಂದು ಇವರು ನಾಯಕನಟನಾಗಿ ನಟಿಸಲಿರುವ ಚಿತ್ರ ಸೆಟ್ಟೇರಲಿದೆ. ಚಿತ್ರದ ಹೆಸರು 'ಜೇಡರಹಳ್ಳಿ'. ಹೊಡಿ-ಬಡಿ-ಕಡಿ ಚಿತ್ರಗಳನ್ನು ಲೀಲಾಜಾಲವಾಗಿ ನಿರ್ದೇಶಿಸುವ ಪಿ.ಎನ್.ಸತ್ಯ ಈ ಚಿತ್ರದ ನಿರ್ದೇಶಕರು. ಈ ಹಿಂದೆ ಜೇಡರಹಳ್ಳಿ ಕೆಲವು ಚಿತ್ರಗಳಿಗೆ ಫೈನಾನ್ಸ್ ಮಾಡುವ ಮುಖಾಂತರ ಈ ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅದಷ್ಟೇ ಅಲ್ಲ ಸಿನಿಮಾರಂಗದ ಅನೇಕಾನೇಕ ವಿವಾದಗಳನ್ನು ಇವರು ಬಗೆಹರಿಸಿದ್ದೂ ಉಂಟು. ಈ ರೀತಿ ಉದ್ಯಮದ ಜೊತೆ ಪರೋಕ್ಷ ಸಂಬಂಧವಿಟ್ಟುಕೊಂಡಿದ್ದ ಜೇಡರಹಳ್ಳಿ ...ೇರವಾಗಿ ಕಲಾವಿದರಾಗಲು ಹೊರಟಿದ್ದಾರೆ. ಇವರ ಈ ಹೊಸ ... ಗಾಂಧಿನಗರದ ಮತ್ತು ಭೂಗತ ಲೋಕ ಜನ ಹೇಗೆ ...ತ್ತಾರೋ ನೋಡೋಣ....

ತದಿಗೆಯ ಅಕ್ಷಯ!


ಮೊನ್ನೆ ಅಕ್ಷಯ ತದಿಗೆ ದಿನದಂದು ಗಾಂಧಿನಗರದಲ್ಲಿ ಒಂದು ಪವಾಡವೇ ನಡೆಯಿತು. ಆ ದಿನ ಒಟ್ಟು ಎಂಟು ಹೊಸ ಚಿತ್ರಗಳು ಸೆಟ್ಟೇರಿದವು. ಈ ಹಿಂದೆ ವರಮಹಾಲಕ್ಷ್ಮಿ ಹಬ್ಬದಂದು ಸಿನಿಮಾದವರು ತಮ್ಮ ಹೊಸ ಚಿತ್ರವನ್ನು ಆರಂಭಿಸಲು ಹಾತೊರೆಯುತ್ತಿದ್ದರು. ಅದಕ್ಕೆ ಕಾರಣ ವರಮಹಾಲಕ್ಷ್ಮಿ ಹಬ್ಬದಂದು ಸಿನಿಮಾ ಆರಂಭಿಸಿದರೆ ನಿರ್ಮಾಪಕರ ಜೋಳಿಗೆ ಭರ್ತಿಯಾಗುತ್ತದೆ ಎಂಬ ಮೂಢನಂಬಿಕೆ. ಆದರೆ ಕಳೆದ ಮೂರ್‍ನಾಲ್ಕು ವರ್ಷಗಳಲ್ಲಿ ವರಮಹಾಲಕ್ಷ್ಮಿ ಹಬ್ಬದಂದು ಆರಂಭವಾದ ಯಾವ ಚಿತ್ರವೂ ಬಾಕ್ಸಾಫೀಸ್‌ನಲ್ಲಿ ಹಣವನ್ನು ಕೊಳ್ಳೆ ಹೊಡೆಯಲಿಲ್ಲ, ಬದಲಾಗಿ ಕೋಟ್ಯಂತರ ರೂಪಾಯಿಯ ಬಂಡವಾಳ ಹೂಡಿದ ನಿರ್ಮಾಪಕ ನಷ್ಟ ಮಾಡಿಕೊಂಡಿದ್ದೇ ಹೆಚ್ಚು.

ಬಹುಶಃ ಈ ಕಾರಣಕ್ಕೇ ಸಿನಿಮಾದವರು ಈಗ ತಮ್ಮ ನಿಷ್ಠೆಯನ್ನು ವರಮಹಾಲಕ್ಷ್ಮಿಯಿಂದ ಅಕ್ಷಯ ತದಿಗೆಗೆ ಬದಲಾಯಿಸಿದ್ದಾರೆ. ಅದರೊಂದಿಗೆ ಇವರ ಅದೃಷ್ಟ ಬದಲಾಗುತ್ತದೆಯೇ ಎಂಬುದನ್ನು ತಿಳಿಯಬೇಕಾದರೆ ಕನಿಷ್ಠ ಆರು ತಿಂಗಳು ಕಾಯಬೇಕು. ಅಲ್ಲಿಯವರೆಗೆ ಒಂದು ಸ್ಮಾಲ್ ಬ್ರೇಕ್....

ವಿಷ್ಣು ಜಾಗಕ್ಕೆ ಉಪ್ಪಿ!

'ಆಪ್ತರಕ್ಷಕ' ಮತ್ತು 'ಆಪ್ತಮಿತ್ರ' ಚಿತ್ರಗಳನ್ನು ಕನ್ನಡದಲ್ಲಿ ತೆರೆಗೆ ನೀಡಿದ ನಿರ್ಮಾಪಕ ಕೃಷ್ಣ ಪ್ರಜ್ವಲ್ ಮತ್ತು ನಿರ್ದೇಶಕ ಪಿ.ವಾಸು ಜೋಡಿ ಈಗ ಮತ್ತೊಂದು ಹೊಸ ಸಿನಿಮಾವನ್ನು ಕನ್ನಡ ಪ್ರೇಕ್ಷಕರಿಗೆ ನೀಡಲು ಸಜ್ಜಾಗಿದೆ. ಒಂದು ತಂಡವನ್ನು ರಚಿಸಿ ಅದರ ಸದಸ್ಯರನ್ನೇ ನೆಚ್ಚುವ ನಿರ್ದೇಶಕ ವಾಸು ಈ ಬಾರಿಯೂ ಛಾಯಾಗ್ರಾಹಕರಾಗಿ ದಾಸ್, ಸಂಗೀತ ನಿರ್ದೇಶಕರಾಗಿ ಗುರುಕಿರಣ್, ಸಂಕಲನಕಾರರಾಗಿ ಸುರೇಶ್ ಅರಸ್ ಅವರುಗಳನ್ನೇ ತಮ್ಮ ಈ ಚಿತ್ರಕ್ಕೂ ಉಳಿಸಿಕೊಂಡಿದ್ದಾರೆ. ಬಹುಶಃ ವಾಸು ಅವರ ನೆಚ್ಚಿನ ನಟ ವಿಷ್ಣು ಬದುಕಿದ್ದಿದ್ದರೆ ಈ ಚಿತ್ರಕ್ಕೂ ಅವರೇ ನಾಯಕರಾಗಿರುತ್ತಿದ್ದರೇನೋ. ಈಗ ವಿಷ್ಣು ಸ್ಥಾನಕ್ಕೆ ರಿಯಲ್‌ಸ್ಟಾರ್ ಉಪೇಂದ್ರ ಅವರನ್ನು ವಾಸು ಆಯ್ಕೆ ಮಾಡಿದ್ದಾರೆ. ನಾಯಕಿಯರಾಗಿ ಸದಾ ಮತ್ತು ರಾಗಿಣಿ ಜೊತೆಗಿರುತ್ತಾರೆ.

ಈ ಹೊಸ ಚಿತ್ರದ ಕಥಾವಸ್ತುವೂ 'ಆಪ್ತರಕ್ಷಕ' ಚಿತ್ರದ ಮುಂದುವರೆದ ಭಾಗವಾಗಿರುತ್ತದೆಯೇ ಎಂಬುದು ಮಾತ್ರ ಇನ್ನೂ ಗೊತ್ತಿಲ್ಲ. ಆದರೆ ವಾಸು ಅವರನ್ನು ಹತ್ತಿರದಿಂದ ಬಲ್ಲವರ ಪ್ರಕಾರ ಈ ಚಿತ್ರವೂ 'ಆಪ್ತಮಿತ್ರ' ಮತ್ತು 'ಆಪ್ತರಕ್ಷಕ' ಚಿತ್ರಗಳ ಮಾದರಿಯಲ್ಲೇ ಇರಬಹುದು. ಎಲ್ಲಿಯವರೆಗೆ ಕನ್ನಡದ ಪ್ರೇಕ್ಷಕರು ನಂಬಿಕೆ ಮತ್ತು ಮೂಢನಂಬಿಕೆಗಳ ಕಥೆಗಳನ್ನು ಇಷ್ಟಪಡುತ್ತಾರೋ ಅಲ್ಲಿಯವರೆಗೆ ಬೇರೆ ಕಥಾವಸ್ತುವಿನ ಚಿತ್ರವನ್ನಾದರೂ ನಿರ್ದೇಶಕ ವಾಸು ಯಾಕೆ ಮಾಡುತ್ತಾರೆ, ಅಲ್ವೇ?




Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 12/- 25-5-2011

ಗೆದ್ದು ಬಂದ ಗೀತಾ ಮತ್ತು ನೋವುಂಡ ನಾಗ

'ಜಂಗಮ'ನ 'ಬೀರಾ'ವೇಷ!



ಹ್ಯಾಟ್ರಿಕ್ ಹೀರೋ ಶಿವಣ್ಣನ 'ಜೋಗಿ' ಸೇರಿದಂತೆ ಸುಮಾರು ಐವತ್ತು ಚಿತ್ರಗಳಿಗೆ ಸಂಭಾಷಣೆ ಬರೆದಿರುವ ಮಳವಳ್ಳಿ ಸಾಯಿಕೃಷ್ಣ ಈಗ ನಿರ್ದೇಶನಕ್ಕೆ ಇಳಿದಿದ್ದಾರೆ. ಅವರ ಚೊಚ್ಚಲ ನಿರ್ದೇಶನದ ಚಿತ್ರದ ಹೆಸರು 'ಜಂಗಮ'. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಈ ಹೆಸರು ಇನ್ನೂ ದೃಢೀಕರಣವಾಗದ ಕಾರಣ ಇದು ಬದಲಾಗುವ ಸಾಧ್ಯತೆಯೂ ಇದೆ. ಒಂದು ವೇಳೆ ಚಿತ್ರಕ್ಕೆ 'ಜಂಗಮ' ಎಂಬ ಹೆಸರಿಡುವುದರಿಂದ ಯಾವುದೇ ಒಂದು ಸಮುದಾಯವನ್ನು ಅವಮಾನಿಸಿದಂತಾಗುತ್ತದೆ ಎಂದಾದರೆ ಅದಕ್ಕೆ ಬದಲಾಗಿ 'ಬೀರಾ' ಎಂಬ ಪರ್ಯಾಯ ಹೆಸರನ್ನು ಸಿದ್ಧಪಡಿಸಿಕೊಂಡಿದ್ದಾರೆ ಸಾಯಿಕೃಷ್ಣ. ತನ್ನ ಮೊದಲ ಚಿತ್ರವನ್ನು ಶಿವಣ್ಣನಿಗಾಗೇ ನಿರ್ದೇಶಿಸಬೇಕು ಎಂಬುದು ಸಾಯಿ ಬಯಕೆ. ಹೀಗಾಗಿ ಶಿವಣ್ಣ 'ಓಕೆ' ಎಂದ ತಕ್ಷಣ ಸಿನಿಮಾ ಸೆಟ್ಟೇರಲಿದೆ.




ಡಾ. ರಾಜ್‌ಕುಮಾರ್ ಅವರ 'ಬಂಗಾರದ ಪಂಜರ' ಚಿತ್ರದಲ್ಲಿದ್ದ ಕುರಿಯ ಹೆಸರು 'ಬೀರಾ'. 'ಮೈಲಾರಿ' ಸೂಪರ್ ಹಿಟ್ ಆಗುತ್ತಿದ್ದಂತೇ 'ಬಂಗಾರದ ಪಂಜರ'ದ ಒಂದೊಂದೇ ಪಾತ್ರಗಳು ಈಗ ಸಿನಿಮಾ ಶೀರ್ಷಿಕೆಯಾಗಿ ನಾಮಕರಣಗೊಳ್ಳುತ್ತಿವೆ.



ಇದು ಕೇವಲ ಒಂದು ತಿಂಗಳ ಹಿಂದಿನ ಮಾತು.

ಸಿಕ್ಕಸಿಕ್ಕಲ್ಲೆಲ್ಲಾ ಸಾಲ ಎತ್ತಿ 'ಸಂಜು ವೆಡ್ಸ್ ಗೀತಾ' ಎಂಬ ಸಿನಿಮಾ ಮುಗಿಸಿದ್ದ ನಿರ್ಮಾಪಕ ನಾಗಶೇಖರ್ ಕೈಲಿ ಅವತ್ತು ಬಿಡಿಗಾಸೂ ಇರಲಿಲ್ಲ. ಬಿಡುಗಡೆಯ ಹಿಂದಿನ ದಿನ ಕೂಡಾ ಆ ಚಿತ್ರವನ್ನು ಖರೀದಿಸಲು ಯಾರೂ ಮುಂದೆ ಬಂದಿರಲಿಲ್ಲ. ಇನ್ನೇನು ಬೆಳಗ್ಗೆ ಸಿನಿಮಾ ರಿಲೀಸಾಗುತ್ತಿದೆ ಎನ್ನುವಾಗ ಸಾಲ ಕೊಟ್ಟಿದ್ದ ಫೈನಾನ್ಸಿಯರ್ ಒಬ್ಬರು ಬಂದು ನಾಗಶೇಖರ್ ಬಳಿಯಿದ್ದ ಕಾರನ್ನು ಸಹ ಕಿತ್ತೊಯ್ದಿದ್ದರು.



ಆ ಸಂಕಷ್ಟದ ಸಂದರ್ಭದಲ್ಲಿ ನಾಗಶೇಖರ್ ಈಗ ಸ್ಟಾರ್‌ಗಳಾಗಿರುವ ತನ್ನ ಸ್ನೇಹಿತರಿಗೆ ಫೋನ್ ಮಾಡಿ ಒಂದೇ ಒಂದು ಲಕ್ಷ ರುಪಾಯಿ ಕೊಡಿ ಎಂದು ಗೋಗರೆದರೂ ಆ 'ಸ್ಟಾರ್'ಗಳು ಕ್ಯಾರೇ ಅನ್ನಲಿಲ್ಲವಂತೆ. ಆದರೆ ನಟಿ ರಮ್ಯಾ ಹತ್ತು ಲಕ್ಷ ರೂಪಾಯಿ ನೀಡಿ ಸಹಾಯ ಮಾಡಿದರಂತೆ. ಕ್ಯಾಮೆರಾಮನ್ ಸತ್ಯಾ ಹೆಗಡೆ ಎರಡು ಲಕ್ಷ ರುಪಾಯಿಗಳನ್ನು ಹೊಂಚಿಕೊಟ್ಟರಂತೆ. ನಾಯಕ ಶ್ರೀನಗರ ಕಿಟ್ಟಿ ಕೂಡಾ ತಮ್ಮಿಂದಾದಷ್ಟು ಕೈ ಹಿಡಿದರಂತೆ.

ಈಗ 'ಸಂಜು ವೆಡ್ಸ್ ಗೀತಾ' ಚಿತ್ರ ನಿರೀಕ್ಷೆಗೆ ಮೀರಿ ಗೆಲುವು ಸಾಧಿಸಿದೆ. ಚಿತ್ರ ನೋಡಿದವರೆಲ್ಲಾ ಸಂಜು-ಗೀತಾ ಪ್ರೀತಿಗೆ ತಲೆದೂಗಿದ್ದಾರೆ. ಪರಿಣಾಮವಾಗಿ ಚಿತ್ರ ಐವತ್ತು ದಿನಗಳನ್ನು ದಾಟಿ ಮುನ್ನುಗ್ಗುತ್ತಿದೆ. ಕಳೆದ ನಾಲ್ಕು ವಾರಗಳಲ್ಲಿ ಈ ಚಿತ್ರ ಬರೋಬ್ಬರಿ ನಾಲ್ಕು ಕೋಟಿ ಅರುವತ್ತು ಲಕ್ಷ ರೂಪಾಯಿ ಸಂಪಾದಿಸಿದೆ. ನಾಗಶೇಖರ್ ಶ್ರಮಕ್ಕೆ ಭಾರೀ ಪ್ರತಿಫಲವೇ ದಕ್ಕಿದೆ.

ಮತ್ತೆ ಬಂದು ಪ್ರೀತಿಸಲಿ!



ಅದೇನು ಹಣೆಬರಹವೋ, ವಿವಾದಗಳು 'ನೆನಪಿರಲಿ' ಪ್ರೇಮ್‌ನನ್ನು ಬಿಟ್ಟೂ ಬಿಡದೆ ಕಾಡುತ್ತಿವೆ.

ಒಂದು ವಾರಕ್ಕೆ ಮುಂಚೆಯಷ್ಟೇ 'ಮತ್ತೆ ಬನ್ನಿ ಪ್ರೀತ್ಸೋಣ' ಚಿತ್ರದಲ್ಲಿ ಪ್ರೇಮ್ ಅರೆನಗ್ನರಾಗಿ ನಟಿಸಿದ ವಿಚಾರವನ್ನು ಓದಿದ್ದೀರಿ. ಪ್ರೇಮ್ ಆ ಚಿತ್ರದಲ್ಲಿ ಹಾಗೆ ನಟಿಸಿದ್ದರಿಂದ ಮತ್ತು ಚಿತ್ರದ ನಾಯಕಿ ಕರೀಷ್ಮಾ ತನ್ನ ಜೊತೆ ಲಿಪ್ ಲಾಕ್ ದೃಶ್ಯದಲ್ಲಿ ಪಾಲ್ಗೊಂಡಿದ್ದರಿಂದ ಪ್ರೇಮ್ ಅವರ ಪತ್ನಿ ಜ್ಯೋತಿ ಭಯಾನಕವಾಗಿ ಸಿಟ್ಟುಗೊಂಡು ಆತನನ್ನು ತರಾಟೆಗೆ ತೆಗೆದುಕೊಂಡಿದ್ದಾರಂತೆ.

ಇಷ್ಟು ದಿನ ಸಾಂಸಾರಿಕ ಚಿತ್ರಗಳಲ್ಲಿ ಲವ್ಲೀಬಾಯ್ ಆಗಿ ಕಾಣಿಸಿಕೊಳ್ಳುತ್ತಿದ್ದುದರ ಬಗ್ಗೆ ಪ್ರೇಮ್ ಮನೆಯಲ್ಲಿ ಯಾವುದೇ ತಕರಾರಿರಲಿಲ್ಲ. ಆದರೆ ಈಗ ಯದ್ವಾತದ್ವಾ ಬಟ್ಟೆಬಿಚ್ಚಿಕೊಂಡು ಕಾಣಿಸಿಕೊಂಡಿರುವ ಪ್ರೇಮ್ ಬಗ್ಗೆ ಅವರ ಮನೆಯವರಿಗೇ ಗಾಬರಿಯಾಗಿದೆ. "ಈ ಚಿತ್ರದಲ್ಲಿನ ಹಸಿಬಿಸಿ ದೃಶ್ಯಗಳನ್ನು ಕತ್ತರಿಸಿ" ಎಂದು ಜ್ಯೋತಿ ಈಗ ಹಠ ಹಿಡಿದು ಕುಳಿತಿದ್ದರಂತೆ. ಆದರೆ ಸಿನಿಮಾವೊಂದರ ದೃಶ್ಯವನ್ನು ಕಿತ್ತೆಸೆಯುವುದು ಮತ್ತು ಸೇರಿಸುವುದು ನಿರ್ದೇಶಕರಿಗೆ ಬಿಟ್ಟ ವಿಚಾರವಾದ್ದರಿಂದ ಪ್ರೇಮ್ ತನ್ನ ಪತ್ನಿಗೆ 'ಐ ಯಾಮ್ ಸಾರಿ' ಎಂದು ಹೇಳಿ ಆಕೆಯನ್ನು ಕನ್ವಿನ್ಸ್ ಮಾಡಲು ಯತ್ನಿಸಿದರಂತೆ. ಆದರೆ ಪ್ರೇಮ್‌ರ ಮಾತಿಗೆ ಸ್ಪಂದಿಸದ ಜ್ಯೋತಿ ಈಗ ತಮ್ಮ ಮಕ್ಕಳ ಸಮೇತ ತವರುಮನೆ ಕಡೆಗೆ ಮುಖ ಮಾಡಿದ್ದಾರಂತೆ.

ಚಿತ್ರರಂಗಕ್ಕೆ ಬರುವ ಮುನ್ನವೇ ಪ್ರೇಮ್ ಜ್ಯೋತಿಯನ್ನು ಪ್ರೀತಿಸಿ ಮದುವೆಯಾಗಿದ್ದರು. ತನ್ನ ಗಂಡ ಸಿನಿಮಾ ನಟನಾಗಲಿ ಎಂದು ಪ್ರತಿ ದಿನ ಇಪ್ಪತ್ತೈದು ರೂಪಾಯಿಯ ಬಸ್ ಪಾಸ್ ಕೊಡಿಸಿ ಗಾಂಧಿನಗರಕ್ಕೆ ಕಳಿಸುತ್ತಿದ್ದ ಜ್ಯೋತಿ ಇಂದು ಅದೇ ಬಣ್ಣದಲೋಕದಿಂದ ಬೇಸತ್ತಿದ್ದಾರೆ. ನೆಚ್ಚಿನ ಪತಿ ಎಲ್ಲಿ ಈ ತಳುಕುಬಳುಕುಗಳಿಗೆ ಮನಸೋತು ಬದಲಾಗಿಬಿಡುತ್ತಾರೋ ಎಂಬ ಭಯ ಜ್ಯೋತಿಯನ್ನು ಕಾಡಿದ್ದರೆ ಯಾವ ಅನುಮಾನವೂ ಇಲ್ಲ.

ಇಷ್ಟೆಲ್ಲಾ ಏಡವಟ್ಟುಗಳ ನಡುವೆ 'ಐ ಯಾಮ್ ಸಾರಿ ಮತ್ತೆ ಬನ್ನಿ ಪ್ರೀತ್ಸೋಣ' ಚಿತ್ರ ಮುಂದಿನ ವಾರ ತೆರೆ ಕಾಣುತ್ತಿದೆ. ಎಲ್ಲರ ಅನುಮಾನದಂತೆ ಈ ಚಿತ್ರದಲ್ಲಿ ಪ್ರೇಮ್ ವಿಪರೀತ ಬಟ್ಟೆ ಬಿಚ್ಚಿದ್ದರೆ ವಿವಾದ ಮತ್ತಷ್ಟು ಉಲ್ಬಣಗೊಳ್ಳುತ್ತದೆ. ಬಟ್ಟೆ ವಿಚಾರ ಏನಾದರೂ ಆಗಲಿ ಸಿನಿಮಾ ಜನರನ್ನು ಆಕರ್ಷಿಸಿ ಹಿಟ್ ಆದರೆ ಪ್ರೇಮ್‌ಗೆ ಮರುಜನ್ಮ ಸಿಕ್ಕಂತೆ. ಒಂದು ವೇಳೆ ಸಿನಿಮಾ ಹಿಟ್ ಆದರೆ ಮನೆಯೊಡತಿಯ ಮುನಿಸಾದರೂ ಶಮನಗೊಳ್ಳುತ್ತದೆ.

ಯಾವುದಕ್ಕೂ ಪ್ರೇಮ್ ಪಾಲಿಗೆ ಗೊಮ್ಮಟೇಶ್ವರನ ಕೃಪಾಕಟಾಕ್ಷ ದೊರೆಯಲಿ...



FDA-SDA
ನೇಮಕಾತಿ ಪರೀಕ್ಷಾ ಪುಸ್ತಕ
ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕ
ರೂ.250/-

ಪ್ರತಿಗಳಿಗಾಗಿ ಸಂಪರ್ಕಿಸಿ
ಗೈಡ್ ಪ್ರಕಾಶನ
ನಂ. 9, ಇ.ಎ.ಟಿ. ರಸ್ತೆ,
ಬಸವನಗುಡಿ, ಬೆಂಗಳೂರು-4
080-26676427
9880302817

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44